# ಅವಸ್ಥೆ

ಯು ಆರ್ ಅನಂತಮೂರ್ತಿ

ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ)

ಆಕರ: ಕಣಜ



ಈ ಹೊತ್ತಗೆಯನ್ನು ಅಧ್ಯಯನ-ಪರಾಮರ್ಶೆಗಳಿಗಾಗಿ ಮಾತ್ರ ನೀಡಲಾಗಿದೆ. ಪುಸ್ತಕವನ್ನು ಕೊಂಡು ಓದಿ.

**ಕನ್ನಡ ಪುಸ್ತಕಗಳನ್ನು ಮುಕ್ತವಾಗಿ ಪಡೆದುಕೊಳ್ಳಲು ಭೇಟಿ ಕೊಡಿ:**

http://kannadanudi.wikidot.com

## ಅವಸ್ಥೆ : ಓದುಗರಿಗೆ (ಪ್ರಥಮ ಮುದ್ರಣ)

ಸುಮಾರು ಮೂವತ್ತು ದಿನಗಳ ಕಾಲ ಈ ಕಾದಂಬರಿ ನನ್ನಿಂದ ಬರೆಸಿಕೊಂಡಿದೆ. ಪ್ರತಿ ದಿನದ ಕಂತನ್ನೂ ದಾನವೆಂಬಂತೆ ಪಡೆಯುತ್ತ ನಾನು ಬರೆದ ಕ್ರಿಯೆ ನನಗೆ ಕೊಟ್ಟ ಸುಖದಲ್ಲಿ ಸ್ವಲ್ಪವಾದರೂ ನಿಮಗೆ ಸಿಕ್ಕರೆ ನಾನು ಕೃತಾರ್ಥನಾದಂತೆ. ನನ್ನ ಪ್ರಿಯ ಮಿತ್ರ ಕೆ. ವಿ. ಸುಬ್ಬಣ್ಣ ಈ ಕೃತಿಯನ್ನು ತಮ್ಮ ಅಕ್ಷರ ಮಾಲೆಯಲ್ಲಿ ಪ್ರಕಟಿಸುತ್ತಿದ್ದಾರೆ. ಅವರಿಗೆ ನಾನು ಕೃತಜ್ಞ.

*ಯು. ಆರ್. ಅನಂತಮೂರ್ತಿ*

---

ಇನ್ನೂ ಐವತ್ತು ತುಂಬುವುದಕ್ಕೆ ಮುಂಚೆಯೇ ಅವನು ಸಾಯುತ್ತಾ ಮಲಗಿದ್ದಾನೆ. ಸಾವಿನ ಜತೆ ಹೋರಾಡುತ್ತ ಅವನು ನೆನಪು ಮಾಡಿಕೊಂಡು ಹೇಳುವ ಕೆಲವು ಘಟನೆಗಳಿಂದ ಅವನ ಮನಸ್ಥಿತಿ ಊಹಿಸಬಹುದು. ಹುಡುಗಾಟಿಕೇಲಿ ಕೃಷ್ಣಪ್ಪಗೌಡ ಬಹಳ ಒಳ್ಳೆ ಈಜುಗಾರ. ನದಿ ತುಂಬಿ ಹರೀತಿದ್ದಾಗ ಒಂದು ದಂಡೆಯಿಂದ ಧುಮುಕಿ ಇನ್ನೊಂದು ದಂಡೆ ಸೇರತ ಇದ್ದ. ಅವನು ಒಮ್ಮೆ ಹೀಗೆ ಈಜು ಬಿದ್ದಾಗ – ಇನ್ನೇನು ಅರ್ಧ ಹೊಳೆ ದಾಟಿಯಾಗಿದೆ, ಅವನ ಜತೆ ಈಜು ಬಿದ್ದ ಗೆಳೆಯ ಒಂದು ಮಾರಿ ಹಿಂದಿದಾನೆ – ಕೃಷ್ಣಪ್ಪನ ಕೈ ಬತ್ತಿ ಬಂತಂತೆ. ಮುಂದೆ ಹೋಗಲಿಕ್ಕೆ ಆಗ್ಲಿಲ್ಲಂತೆ. 'ಮಾರಾಯ ನಾನು ಮುಳುಗ್ತಿದೀನಿ. ನೀನು ಹೋಗಯ್ಯ' ಅಂತ ಅವಸರ ಅವಸರವಾಗಿ ಕೂಗಿ ಮುಳುಗೇ ಬಿಟ್ಟನಂತೆ. ಅವನ ಗೆಳೆಯ – ಹನುಮನಾಯ್ಕನೆಂದು ಅವನ ಹೆಸರು – ಸಾಹಸ ಮಾಡಿ ಉಳಿಸಿದನಂತೆ. ಆದರೆ ಒಂದು ಕ್ಷಣ ತಾನು ಸತ್ತೇ ಸಾಯ್ತೀನಿ ಅನ್ನಿಸಿದಾಗ ತನ್ನ ಮನಸ್ಸು ನಿರ್ವಿಕಾರವಾಗಿತ್ತಲ್ಲ ಅದನ್ನು ಕೃಷ್ಣಪ್ಪ ನೆನೆಸಿಕೊಳ್ಳುವಾಗು ಪಾರ್ಶ್ವವಾಯು ಬಡಿದು ಮಲಗಿದವನ ಎರಡು ದೊಡ್ಡ ಕಣ್ಣುಗಳಲ್ಲೂ ನೀರು ತುಂಬುವುದುಂಟು.

ಕೃಷ್ಣಪ್ಪ ಕಡುಕೋಪಿ ಬೇರೆ. ಹೈಸ್ಕೂಲು ಓದುತ್ತ ಇದ್ದಾಗ ತನ್ನ ಸ್ನೇಹಿತನೊಬ್ಬನ ರಿಪೇರಿಗೆ ಕೊಟ್ಟ ವಾಚು ತರೋಕ್ಕೆ ಅಂತ ಅಂಗಡಿಗೆ ಹೋದ. ಅಂಗಡಿಯವನಿಗೂ ಈತ ಗೊತ್ತು. ಚೆನ್ನಾಗಿಯೇ ಗೊತ್ತು. ಆದರೆ ಬಡವನಾಗಿದ್ದ ಈ ಕೃಷ್ಣಪ್ಪನ ಓಡಾಟದ ಗತ್ತು ಕಂಡರೆ ಈ ಅಂಗಡಿಯವನಿಗೆ ಅಸೂಯೆ 'ನಿಮ್ಮನ್ನು ನಂಬಿ ಹೇಗೆ ಕೊಡೋಕೆ ಸಾಧ್ಯರೀ ಈ ವಾಚನ್ನು?' ಎಂದನಂತೆ ಒಂದು ಕಣ್ಣಿಗೆ ಭೂತ ಕನ್ನಡಿಯ ಗಾಜು ಸಿಕ್ಕಿಸಿಕೊಂಡು – ವಕ್ರವಾಗಿ ನೋಡುತ್ತ. 'ರೀ ನಿಮ್ಮ ಈ ಗಾಜಿನ ಗೂಡನ್ನು ಪುಡಿ ಪುಡಿ ಮಾಡಿಬಿಡ್ತೀನೆ ಇನ್ನೊಂದು ಸಾರಿ ನೀವು ಹಾಗೆ ಅಂದರೆ' ಅಂದನಂತೆ ಕೃಷ್ಣಪ್ಪ. ' ಬಡವನ ಸಿಟ್ಟು ದವಡೆಗೆ ಮೂಲ' ಅಂದನಂತೆ ಅಂಗಡಿಯವನು – ಚಿಮಟದಿಂದ ಏನೋ ಕೆದಕುತ್ತ. ಹಾಗಂದಿದ್ದೇ ರಿಪೇರಿ ಸಲಕರಣೆಗಳನ್ನೂ ಬಿಚ್ಚಿದ ವಾಚುಗಳನ್ನೂ ಇಟ್ಟಿದ್ದ ಗಾಜಿನ ಗೂಡನ್ನು ಎತ್ತಿ ಕೃಷ್ಣಪ್ಪ ಫಳ್ಅಂತ ನೆಲಕ್ಕೆ ಒಗೆದು ನಡೆದು ಬಿಟ್ಟನಂತೆ. ಅವನ ಕೋಪ ಕಂಡಾಗ ಎಂಥವರಾದರೂ ನಡುಗಿಬಿಡ್ತ ಇದ್ದರು.

ಇಂಥ ದೂರ್ವಾಸ ಮುನಿ ಕೈಕಾಲು ಎತ್ತಲಿಕ್ಕೆ ಆಗದೇ ಮಲಗಿರೋದನ್ನು ನೋಡೋಕೆ ಕಷ್ಟ ಆಗಿತ್ತು. ಈಗ ಕೋಪ ಬಂದರೆ ಅವನ ತುಟಿಗಳು ನಡುಗಿ, ಮೂಗಿನ ಸೊಳ್ಳೆ ಹಿಗ್ಗಿ, ಕಣ್ಣುಗಳಲ್ಲಿ ನೀರು ತುಂಬುವುದು ಅಷ್ಟೆ.

ಅಥವಾ ಮಲಗಿದಲ್ಲಿಂದಲೇ ಕೋಲನ್ನೆತ್ತಿ ಹೆಂಡತಿಯನ್ನು ಜಪ್ಪಲು ಪ್ರಯತ್ನಿಸುತ್ತಾನೆ. ಖಾಹಿಲೆ ಹಿಡಿದ ಗಂಡನ ಶುಶ್ರೂಷೆ ಇತ್ತ, ಅತ್ತ ಬ್ಯಾಂಕಿನಲ್ಲಿ ಗುಮಾಸ್ತೆ ಕೆಲಸ, ಈ ನಡುವೆ ವರಾತ ಹಿಡಿದು ಮೂಲೆಯಲ್ಲಿ ಸಿಂಬಳ ಸುರಿಸುತ್ತ ಕೂತ ಐದು ವರ್ಷದ ಮಗಳು – ಇವೆಲ್ಲ ಕೂಡಿಕೊಂಡು ಹೆಂಡತಿ ಹುಚ್ಚಾಗುವಳು. ಅವಳ ಕೂದಲು ಯಾವಾಗಲೂ ಕೆದರಿರುವುದು 'ನಿಮ್ಮ ಒಣಗರ್ವಕಷ್ಟು ಬೆಂಕಿ ಹಾಕ' ಎಂದು ಗಂಡನ ಮೇಲೆ ಗೊಣಗುತ್ತ ಅವಳು ಒಮ್ಮೆ ತನ್ನ ಮಗಳ ತುಟಿ ಹರಿದು ರಕ್ತ ಸೋರುವಷ್ಟು ಬಿರುಸಾಗಿ ಅವಳ ಮೂತಿಯನ್ನು ಹಿಂಡಿದ್ದುಂಟು. ಇಷ್ಟೊಂದು ರಂಪದಲ್ಲೂ ಕೃಷ್ಣಪ್ಪನ ಮನಸ್ಸು ನಿರ್ವಿಕಾರವಾಗಿ ಬಿಡುವುದೂ ಇಲ್ಲವೆಂದಲ್ಲ. ಅವನ ಜೀವನ ಚರಿತ್ರೆ ಬರೆಯಲೆಂದು ನಿತ್ಯ ಬರುತ್ತಿದ್ದ ಭೋಳೆ ಸ್ವಭಾವದ ನಾಗೇಶನಿಗೆ ಕೃಷ್ಣಪ್ಪ ತನ್ನ ಹಿಂದಿನ ಕಥೆ ಹೇಳಲು ಶುರು ಮಾಡುವ. ತನ್ನ ಸದ್ಯದ ಸ್ಥಿತಿಯನ್ನು ಅರಿಯುವುದಕ್ಕಾಗಿ ಅವನು ಹೇಳಿಕೊಳ್ಳುತ್ತಿದ್ದುದರ ಆಳ ಅಗಲ ಎಳೆಯನಾದ ನಾಗೇಶನಿಗೆ ತಿಳಿಯುತ್ತಿತ್ತೊ ಇಲ್ಲವೊ ಎಂಬುದು ಕೃಷ್ಣಪ್ಪನ್ನೇನೂ ಬಾಧಿಸಿದಂತೆ ಕಾಣುವುದಿಲ್ಲ.

ಬಾಲಕನಾಗಿದ್ದಾಗ ಕೃಷ್ಣಪ್ಪನಿಗೆ ದನ ಕಾಯುವ ಕೆಲಸ. ಕಂಬಳಿಕೊಪ್ಪೆ ಹಾಕಿಕೊಂಡು ಕೈಯಲ್ಲೊಂದು ಕತ್ತಿ ಕೊಳಲು ಹಿಡಿದು ತನ್ನ ಹಳ್ಳಿಯ ದನಗಳನ್ನೆಲ್ಲ ಮೇಯಿಸಿಕೊಂಡು ಬರುತ್ತಿದ್ದ ಕಥೆಯನ್ನವನು ಅದರಲ್ಲೇನೋ ತನಗೆ ಮಾತ್ರ ತಿಳಿಯುವ ಅರ್ಥಗಳು ತುಂಬಿವೆ ಎನ್ನುವಂತೆ ಹೇಳುವುದು. ಸಾಯುತ್ತಿರುವ ಅವನಿಗೆ ತನ್ನ ಹಿಂದಿನ ಬದುಕಿನಲ್ಲಿ ಆಗೀಗ ದಿವ್ಯವಾದದ್ದು ಪ್ರವೇಶಿಸಿದ್ದಿದೆ ಎಂದು ಈಗ ಅನ್ನಿಸುವುದು ವಸ್ತು ನಿಷ್ಠ ಸತ್ಯವೋ, ಅಥವಾ ಅಂಥ ನಂಬಿಕೆ ಸದ್ಯದ ಕ್ಷುದ್ರ ದೆಸೆಯನ್ನು ಗೆಲ್ಲಲು ಅಗತ್ಯವೋ ಹೇಗೆ ಹೇಳುವುದು ? ವೈಚಾರಿಕವಾಗಿ ಕೃಷ್ಣಪ್ಪ ನಿರೀಶ್ವರವಾದಿ; ಜೊತೆಗೇ, ಕಬೀರ, ಅಲ್ಲಮ, ನಾನಕ, ಮೀರ, ಪರಮಹಂಸ ಇತ್ಯಾದಿ ದೈವಿಕ ತಲೆ ತಿರುಕರನ್ನು ಮೆಚ್ಚುಗೆ ಹಾಸ್ಯ ಅನುಮಾನಗಳಿಂದ ಅವರೆಲ್ಲ ತನಗೆ ಪರಮ ಆಪ್ತರೆಂಬಂತೆ ಕಿಚಾಯಿಸುವವನು. ಆದ್ದರಿಂದ ಅವನ ಒಟ್ಟು ನಿಲುವೇನು ಎಂದು ಹೇಳುವುದು ಕಷ್ಟದ ವಿಷಯವೇ. ಹುಡುಗಾಟಿಕೆಯಲ್ಲಿ ಬೆಳಗಿನ ಜಾವ ಮನೆಯ ಎದುರು ನಿಂತು ದನಕರುಗಳನ್ನು ಬಿಡಿಸಿಕೊಂಡು, ಗುಡ್ಡ ಹೊಳೆ ಬಯಲುಗಳಲ್ಲಿ ಅವುಗಳನ್ನು ಮೇಯಿಸುತ್ತ ಓಡಾಡಿಸಿಕೊಂಡಿದ್ದು, ಸಂಜೆ ಹಿಂದಕ್ಕೆ ಓಡಿಸಿಕೊಂಡು ಬರುವುದು. ಮರದ ಕೆಳಗೆ ಕೂತು ಆಲಸ್ಯದ ಕಣ್ಣುಗಳಲ್ಲಿ ಮೇಯುವ ದನಕರಗಳನ್ನು ಗಮನಿಸುತ್ತ, ಕೊಳಲಿನಲ್ಲಿ ತನ್ನ ಮನಸ್ಸಿನ ಲಹರಿಯನ್ನು ನುಡಿಸುತ್ತ ತಾನೇನು ಯೋಚಿಸುತ್ತಿದ್ದೆ ಆಗ ಎಂಬುದನ್ನವನು ನೆನಪು ಮಾಡಿಕೊಳ್ಳಲು ಪ್ರಯತ್ನಿಸುವಾಗ ಒಂದು ಮುಖ್ಯ ಘಟನೆ ಅವನ ಕಣ್ಣೆದುರು ನಿಲ್ಲುತ್ತದೆ. ಅದನ್ನು ಹೇಳುವ ಮುಂಚೆ ಇದ್ದಕ್ಕಿದ್ದಂತೆ ಅವನು 'ಮಾರಾಯರೆ – ಆಗ ನಾನೇನು ಸುಖವಾಗಿದ್ದೇಂತ ತಿಳೀಬೇಡಿ – ಗದ್ದೇಲಿ ಹಸಿರು ಕಾಣಿಸ್ತು ಅಂದರೆ ನನ್ನ ಕಥೆ ಮುಗಿತು ಅಂತ ತಿಳಿಕೊಳ್ಳಿ. ದನಕರಗಳು ಹುಚ್ಚೆದ್ದು, ಬೇಲಿ ಗೀಲಿ ಕಿತ್ತು ನುಗ್ಗಿ ಬಿಡ್ತಿದ್ದುವು ಗದ್ದಗೆ. ನಾನೊಬ್ಬನೆ ತಲೆ ಕೆಟ್ಟವನ ಹಾಗೆ ಅವುಗಳನ್ನು ಅಟ್ಟುತ್ತ ಕೊನೆಗೆ ಕೈಸಾಗದೆ ಕೂತುಬಿಡ್ತಿದ್ದೆ – 'ಧೂ' ಎಂಬ ಎಂಬ ಮಳೆಯಲ್ಲಿ ಮಂಕು ಬಡಿದವನ ಹಾಗೆ. ಬೀಳ್ತಿತ್ತು ನೋಡಿ ಆಗ ಬೆನ್ನ ಮೇಲೆ' – ಹೇಳುತ್ತ ಕೃಷ್ಣಪ್ಪ ನಗುತ್ತಾನೆ ಈಗ. ಕಣ್ಣುಗಳಲ್ಲಿ ಆಗಿನ ದಿಗಿಲನ್ನೂ ಬೀಳುತ್ತಿದ್ದ ಪೆಟ್ಟುಗಳ ನೋವನ್ನೂ ನಟಿಸಿ ತೋರಿಸುತ್ತಾನೆ. ಇದನ್ನು ನೆನಪಿಸುತ್ತಿದಂತೆ ದನ ಕಾಯುವದನ್ನು ತನ್ನಿಂದ ಪಾರು ಮಾಡಿದ ಮಹೇಶ್ವರಯ್ಯ ಅವನಿಗೆ ನೆನಪಾಗುತ್ತಾರೆ.

ಮಹೇಶ್ವರಯ್ಯ ಯಾರೋ ಎತ್ತ ಕಡೆಯವರೋ ತಿಳಿಯದು. ಯಾವುದೋ ಊರಿಗೆ ಬರುತ್ತಾರೆ ಅನ್ನಿ. ಮನೆ ಗಿನೆ ಓರಣ

ಮಾಡಿಕೋತಾರೆ. ಇರುವುದು ಒಬ್ಬರೆ ಆದರೂ ಅಡಿಗೆಯವನನ್ನು ಇಟ್ಟುಕೊಳ್ಳುತ್ತಾರೆ. ತನ್ನ ಬಟ್ಟೆ ಮಾತ್ರ ತಾನೇ ಒಗೆದುಕೊಳ್ಳುತ್ತಾರೆ. ಅವರ ಬಾಯಿಂದ ಕಾಳಿದಾಸನ ಸಂಸ್ಕೃತಿ ಕೇಳಬೇಕು, ಹಿಂದೂಸ್ತಾನಿ ಗಾಯನ ಕೇಳಬೇಕು – ದೊಡ್ಡ ರಸಿಕ. ತಾಂಬೂಲದಿಂದ ಕೆಂಪಾದ ಅವರ ತುಟಿಗಳ ಮೇಲಿನ ಗಿರಿಜಾ ಮೀಸೆ, ಅವರ ಕಿವಿಯಲ್ಲಿನ ಹೊಳೆಯುವ ವಜ್ರದ ಒಂಟಿಗಳು, ಅವರ ಮುಚ್ಚುಕೊಟು, ಶುಭ್ರವಾದ ಕಚ್ಚೆ ಹಾಕಿದ ಪಂಚೆ, ಅವರು ಹಿಡಿದ ಬೆಳ್ಳಿ ಕಟ್ಟಿದ ಬೆತ್ತ, ಅವರ ಕಣ್ಣಿನ ಪ್ರಶಾಂತ ಭಾವ – ಇತ್ಯಾದಿಗಳನ್ನು ವಿವರಿಸುತ್ತಿದ್ದಂತೆಯೇ ಅವರು ದೊಡ್ಡ ವಿರಾಗಿಗಳು ಎಂದೂ ಕೃಷ್ಣಪ್ಪ ಹೇಳುತ್ತಾನೆ. ಅವರು ಸ್ಪಷ್ಟ ಹೇಳಿಕೊಂಡಿರದಿದ್ದರೂ ಕೃಷ್ಣಪ್ಪನ ಊಹೆ ಅವರ ಹೆಂಡತಿ ಯಾರನ್ನೋ ಇಟ್ಟುಕೊಂಡಿದ್ದು ತಿಳಿದು ಮಹೇಶ್ವರಯ್ಯ ಮನೆ ಬಿಟ್ಟಿದ್ದು ಎಂದು. ಲಕ್ಷಾಧೀಶ ಮನುಷ್ಯ ಹೆಂಡತಿಗಷ್ಟು, ಆಸ್ತಿ ಬಿಟ್ಟು, ಉಳಿದ ಹಣ ಬ್ಯಾಂಕಲ್ಲಿಟ್ಟು, ಹೀಗೆ ನಿವೃತ್ತರಾಗಿ ಊರೂರು ಅಲಿಯುತ್ತಿದ್ದರು. ಯಾವಾಗಲೂ ಓದುತ್ತಿರುತ್ತಿದ್ದರು. ಆತ ತ್ರಿಕಾಲ ಜ್ಞಾನಿಯೆಂದು ಕೃಷ್ಣಪ್ಪನ ನಂಬಿಕೆ. ಮಹೇಶ್ವರಯ್ಯ ಎಲ್ಲಾದರೂ ಬಂದರು ಎನ್ನಿ. ಬಂದು ಕೂತವರು ಇದ್ದಕಿದ್ದಂತೆ 'ಭೋ' ಎನ್ನುವುದುಂಟು. ಆಗ ಅವರ ಮುಖದಲ್ಲಿ ಕಳವಳ ಕಾಣಿಸಿಕೊಳ್ಳುತ್ತದೆ. ಅವರನ್ನು ಕಂಡರೆ ಎಲ್ಲಿ ಅವರು 'ಭೋ' ಎಂದು ಬಿಡುವರೋ ಎಂದು ಜನ ಹೆದರುತ್ತಿದ್ದರು. ಹಾಗೆ ಅನ್ನದೆ ಕೂಡ ಅವರು ಇರಲಾರರು. ಆದ್ದರಿಂದಲೇ ಬನ್ನಿ ಎಂದರೆ ಮಹೇಶ್ವರಯ್ಯ 'ಆ ಗ್ರಹಸ್ಥನಿಗೆ ಏನು ಅನಿಷ್ಟ ಕಾದಿದೆಯೋ ಗೊತ್ತಿಲ್ಲಯ್ಯ – ಆದ್ದರಿಂದ ನಾನು ಅವನ ಮನೆಗೆ ಬರಲ್ಲ' ಎಂದು ಬಿಡುತ್ತಿದ್ದರು.

ಮುಂದಿನ ಅನಿಷ್ಟ ಕಂಡು 'ಭೋ' ಅನ್ನುತ್ತಿದ್ದ ಮಹೇಶ್ವರಯ್ಯನ ದುರಂತವೆಂದರೆ ಅವರಿಗೆ ಭವಿಷ್ಯದಲ್ಲಿ ಒಳ್ಳೆಯದು ಕಾಣಿಸುತ್ತಿದ್ದುದೇ ತೀರ ಅಪರೂಪ. ಕೃಷ್ಣಪ್ಪನ ಬಗ್ಗೆ ಮಾತ್ರ ಅವರು ಒಮ್ಮೆ ಒಳ್ಳೆಯದನ್ನು ಕಂಡದ್ದುಂಟು. ಅದು ನಡೆದದ್ದು ಹೀಗೆ:

ಕೊಳಕು ಚಡ್ಡಿ ಬನೀನು ಹಾಕಿಕೊಂಡು ಹೊಳೆದಂಡೆಯ ಅಶ್ವತ್ಥ ಮರದ ಕೆಳಗೆ ಕೃಷ್ಣಪ್ಪ ಕೂತಿದ್ದ. ಕೊಯಿಲು ಮುಗಿದಿದ್ದರಿಂದ ಅವನಿಗೆ ದನಗಳು ಗದ್ದೆ ನುಗ್ಗುವ ಭಯವಿರಲಿಲ್ಲ. ನದಿಯ ಝುಳಝುಳ ಶಬ್ದ, ದನಗಳ ಕೊರಳಿನ ಗಂಟೆ ಇವುಗಳು ಕಿವಿಗಳ ಮೇಲೆ ಬೀಳುತ್ತಲಿದ್ದಾಗ ಕೃಷ್ಣಪ್ಪನಿಗೆ ಖುಷಿಯಾಗಿರಬೇಕು. ಎಂದಿಗಿಂತ ಹೆಚ್ಚು ಖುಷಿಯಾಗಿರಬೇಕು. ಕೊಳಲನ್ನೂದುವ ಬದಲು ಕುಮಾರವ್ಯಾಸ ಭಾರತ ಹಾಡಬೇಕೆನ್ನಿಸಿತ್ತು. ನಾಲ್ಕು ವರ್ಷ ಸ್ಕೂಲ್‌ಗೆ ಹೋಗಿದ್ದ ಕೃಷ್ಣಪ್ಪ ಭಾರತವನ್ನು ಓದಿ ಕಲಿತದ್ದಲ್ಲ; ಅವನ ಮಾಸ್ತರರಾಗಿದ್ದ ಜೋಯಿಸರು ಓದುವುದನ್ನು ಆಗೀಗ ಕೇಳಿ ಕಲಿತಿದ್ದು. ಭಾವವಶವಾಗಿ ಹಾಡಿಕೊಳ್ಳಲು ಪ್ರಾರಂಭಿಸಿದ. ಅವನ ಹಳ್ಳಿಯ ಹತ್ತಿರದ ಪೇಟೆಯೊಂದರಲ್ಲಿ ಆಗ ಬೀಡುಬಿಟ್ಟಿದ್ದ ಮಹೇಶ್ವರಯ್ಯ ತಮ್ಮ ಕೋಟನ್ನು ಒಗೆಯುತ್ತ ನದಿಯಲ್ಲಿ ಇದ್ದರು. ಅವರು ಅಲ್ಲಿಗೇ ಯಾಕೆ ಒಗೆಯಲು ಬಂದಿದ್ದರೆಂಬುದೂ ಆಶ್ಚರ್ಯ. ಅವತ್ತು ಬೆಳಿಗ್ಗೆ ಅವರು ಪೇಟೆಯಲ್ಲಿ ನಡೆಯುತ್ತಿದ್ದಾಗ ಅರೆ ಹುಚ್ಚನಾಗಿಬಿಟ್ಟಿದ್ದ ನಿವೃತ್ತ ಶಾಲಾ ಮಾಸ್ತರನೊಬ್ಬ ಅವರನ್ನು ನಿಲ್ಲಿಸಿದನಂತೆ. ಕೋಟನ್ನು ಬೇಡಿದನಂತೆ 'ಕೊಡ್ತೀನಿ ಮಾರಾಯರೆ. ಆದರೆ ತೊಟ್ಟಿದ್ದಲ್ಲವೆ? ಒಗೀಬೇಕು' ಎಂದು ಸೋಪುಕೊಂಡು ಹಾಗೇ ನಡೆಯುತ್ತ ಈ ಹೊಳೆಯ ಈ ದಂಡೆಗೆ ಬಂದಿದ್ದರಂತೆ. ಎರಡು ಮೈಲಿಯಾದರೂ ಆಗತ್ತೆ, ಪೇಟೆಗೂ, ಈ ನದಿಗೂ.

ಮಹೇಶ್ವರಯ್ಯ ಹಾಡುತ್ತಿದ್ದ ಹುಡುಗನ ಎದುರು ನಿಂತು 'ಭೋ' ಎಂದರು. ಕೃಷ್ಣಪ್ಪ ನಾಚಿಕೆಯಿಂದ ಹಾಡು ನಿಲ್ಲಿಸಿದ. ಎತ್ತಲೋ ದೂರ ನೋಡುತ್ತ, ಕೈಯಲ್ಲಿ ನೀರು ಸೋರುತ್ತಿದ್ದ ಕೋಟು ಹಿಡಿದ ಮಹೇಶ್ವರಯ್ಯ 'ಏ ಹುಡುಗ ದನಗಳನ್ನು

ಕಟ್ಟಿ ಹಾಕಿದ ಮೇಲೆ ಸಾಯಂಕಾಲ ಇಲ್ಲಿ ಬಂದು ನನಗೆ ಕಾದಿರು' ಎಂದು ಕೋಟನ್ನು ಹಿಂಡಿ ಅಲ್ಲಿಂದ ಹೊರಟು ಹೋದರು. ತಾನು ಕೂತಿದ್ದು ಅಶ್ವತ್ಥ ಮರದ ಬುಡದಲ್ಲಿ; ಎದುರಿಗಿದ್ದ ಪೇರಳೆ ಮರದಲ್ಲಿ ಎರಡು ಪಂಚವರ್ಣದ ಗಿಳಿಗಳಿದ್ದವು ಎಂದು ಕೃಷ್ಣಪ್ಪ ನೆನಪು ಮಾಡಿಕೊಳ್ಳುತ್ತಾನೆ. ಆ ಮರದ ಮೇಲೆ ಅಪರೂಪದ ಬಣ್ಣದ ಹಕ್ಕಿಯೊಂದನ್ನು ತಾನು ಕಂಡದ್ದುಂಟು ಎಂದು ಹೇಳುತ್ತಾನೆ.

ಸಾಯಂಕಾಲ ಕೃಷ್ಣಪ್ಪ ಕಾದ. ಕೋಲು ಬೀಸಿಕೊಂಡು ಬಂದ ಮಹೇಶ್ವರಯ್ಯ 'ಅಯ್ಯೋ ಪೆದ್ದು ಹುಡುಗ, ನೀನು ಯಾರೆಂದು ನಿನಗೆ ಇಷ್ಟು ದಿನವೂ ತಿಳಿಯದೇ ಹೋಯಿತೆ? ಬಾ ನನ್ನ ಹಿಂದೆ' ಎಂದು ಸೀದ ಕೃಷ್ಣಪ್ಪನ ಮನೆಗೆ ಹೋದರು. ಕೃಷ್ಣಪ್ಪನಿಗೆ ತಂದೆ ಇಲ್ಲ. ತಾಯಿ ಅವಳ ಅಣ್ಣನ ಮನೆಯಲ್ಲಿ ಅಣ್ಣನ ಹೆಂಡತಿಯಿಂದ ಮೂದಲಿಸಿಕೊಳ್ಳುತ್ತ, ಪ್ರತಿನಿತ್ಯ ಕಡುಬಿಗೆ ತಿರುವುತ್ತ, ದನ ಕರುವಿಗೆ ಮುರ ಬೇಯಿಸುತ್ತ, ಗೊಬ್ಬರಕ್ಕೆ ಸೊಪ್ಪು ಹೊತ್ತು ತಂದು ಹಾಕುತ್ತ ಬದುಕುವುದು. ಕೈಯಲ್ಲಿ ಉಂಗುರ, ಹರಳಿನ ಒಂಟಿ, ಬೆಳ್ಳಿ ಕಟ್ಟಿದ ಬೆತ್ತ – ಇವುಗಳನ್ನು ಕಂಡೇ ಕೃಷ್ಣಪ್ಪನ ಮಾವ ದಂಗುಬಡಿದು ನಿಂತ. ಮಹೇಶ್ವರಯ್ಯ ಬೈದರು. 'ಎಂಥ ಮುಟ್ಠಾಳ ಜನ ನೀವು. ಮನೆಯಲ್ಲಿರುವ ಮಾಣಿಕ್ಯ ನಿಮ್ಮ ಕಣ್ಣಿಗೆ ಬೀಳದೇ ಹೋಯಿತಲ್ಲ' ಎಂದು ಅವರಿಗೆ ದುಡ್ಡು ಕೊಟ್ಟು, ಗದರಿಸಿದ. ಕೃಷ್ಣಪ್ಪನನ್ನು ಹತ್ತು ಮೈಲಿಯಾಚೆಯ ಊರಲ್ಲಿದ್ದ ಹಾಸ್ಟೆಲಲ್ಲಿ ಬಿಟ್ಟು ಸ್ಕೂಲ್‌ಸೇರಿದರು. ಹಣದ ವ್ಯವಸ್ಥೆ ಮಾಡಿ ಕಣ್ಮರೆಯಾದರು. ವರ್ಷಕ್ಕೊಮ್ಮೆ ಬಂದು ನೋಡುತ್ತಿದ್ದರು. ಕೃಷ್ಣಪ್ಪ ಹೀಗೆ ಬಿ.ಎ. ತನಕ ಓದಿದ್ದು. ತನಿಗೆ ಸಲಿಗೆ ಬೆಳೆದ ಮೇಲೂ ಮಹೇಶ್ವರಯ್ಯ ಆಶ್ಚರ್ಯಕರ ವ್ಯಕ್ತಿಯಾಗಿ ಉಳಿದಿದ್ದರು ಎಂದು ಹಿಂದಿನಿದನ್ನು ನೆನಸಿಕೊಳ್ಳುತ್ತಿದ್ದ ಕೃಷ್ಣಪ್ಪ. 'ನನಗೆ ಕಷ್ಟ ಬಂದಾಗಲೆಲ್ಲ ಅವರು ಪ್ರತ್ಯಕ್ಷವಾಗಿ ಬಿಡುತ್ತಾರೆ. ನಾನು ಜೈಲಿಗೆ ಹೋದಾಗ ಅವರು ಹಾಜರು. ಹಾಗೆಯೇ ಜ್ವರಗಿರ ಬಂದು ಮಲಗಿದಾಗ. ಮೊದಲನೇ ಚುನಾವಣೆಗೆ ನಿಂತಾಗ ಖರ್ಚಿಗೆಂದು ಸಾವಿರ ರೂಪಾಯಿ ಕೊಟ್ಟುಹೋದರು. ಅವರು ಹೇಗೆ ಬಂದು ಯಾವುದಾದರೂ ಊರಲ್ಲಿ ನೆಲೆಸುತ್ತಿದ್ದರೋ ಹಾಗೇ ಊರನ್ನು ಬಿಟ್ಟೂ ಹೋಗುತ್ತಿದ್ದರು. – ಮನೆಯಲ್ಲಿದ್ದ ಪಾತ್ರೆ, ಪರಟೆ, ಫರ್ನಿಚರು ಎಲ್ಲವನ್ನೂ ಕಂಡಕಂಡವರಿಗೆ ಕೊಟ್ಟು. ವಿಚಿತ್ರ ಮನುಷ್ಯ. ಅವರು ಯಾವ ಜಾತಿ, ಯಾವ ಪಂಗಡ ನನಗೆ ಈಗಲೂ ತಿಳಿಯದು. ಬ್ರಾಹ್ಮಣರೋ ಲಿಂಗಾಯತರೋ ಇದ್ದಿರಬಹುದು – ನಾನು ಮಾಂಸ ತಿನ್ನುವುದು ಬಿಟ್ಟಿದ್ದರಿಂದ ಅವರಿಗೆ ಸಂತೋಷವಾಯಿತೆಂದು ಈ ನನ್ನ ಊಹೆ. ಅವರಿಗೆ ಕುಲೀನ ಹೆಣ್ಣುಗಳೆಂದರೆ ಕಣ್ಣೆತ್ತಿ ನೋಡಲಾರದ ಮರ್ಯಾದೆ. ಆದರೆ ಸೂಳೆಯರೆಂದರೆ ಬಲು ಚಪಲ. ಸಂಸ್ಕೃತದಲ್ಲಿ ಅವರಿಗೆ ಗೊತ್ತಿಲ್ಲದ ಪೋಲಿ ಪದ್ಯವೇ ಇರಲಿಲ್ಲ. ಮಹಾನುಭವ. ಅವರಿಗೆ ರಾಜಕೀಯ ಅಂದರೆ ಚೂರೂ ಆಸಕ್ತಿಯಿರಲಿಲ್ಲ.'

'ನೀನು ಎಲ್ಲ ಕಷ್ಟ ಎಲ್ಲ ಬವಣೆ ಪಟ್ಟು ನಿನ್ನ ಊರಲ್ಲೇ ಬೆಳೆಯಬೇಕು' ಎಂದು ಅವರು ಹೇಳಿದ್ದರಂತೆ. ಕೃಷ್ಣಪ್ಪ ತನ್ನ ಹಳ್ಳಿಯ ಹತ್ತಿರದ ನಗರದಲ್ಲೇ ಬೆಳೆದ. ಅವನಿಗಾಗುತ್ತಿದ್ದ ಅವಮಾನಗಳೇನೂ ಮಹೇಶ್ವರಯ್ಯ ಕಳಿಸುತ್ತಿದ್ದ ಹಣದಿಂದ ನಿಲ್ಲಲಿಲ್ಲ. ಬಡವರ ಮನೆ ಹುಡುಗನಲ್ಲವೇ? ಅವನು ಹೈಸ್ಕೂಲು ಓದುವಾಗ ಹಾಸ್ಟೆಲಿನ ವಾರ್ಡನ್‌ಒಬ್ಬ – ತುಂಬ ಶ್ರೀಮಂತ ಜಮೀಂದಾರ – ಕೃಷ್ಣಪ್ಪನನ್ನು ಅತ್ಯಂತ ತಾತ್ಸಾರದಿಂದ ಕಾಣುತ್ತಿದ್ದ. ಕೃಷ್ಣಪ್ಪನ ಠೀವಿ ಎಲ್ಲರಿಗೂ ಕಣ್ಣು ಕುಕ್ಕುವಂಥದ್ದು. ನಾವು ಇರುವ ಸ್ಥಿತಿಗೂ ಆಗಬೇಕೆಂದು ಹಂಬಲಿಸುವ ಸ್ಥಿತಿಗೂ ಅಂತರವಿದ್ದಾಗ, ಮುಖವಾಡ ನಿಜವಾದ ಮುಖ ಆಗುವ ಮುನ್ನ ಏನೇನು ಸಂಕಟ ಪಡಬೇಕಾಗುತದೆ ಎಂಬುದನ್ನು ಕೃಷ್ಣಪ್ಪ ಹಲವು ಘಟನೆಗಳಿಂದ ವಿವರಿಸುತ್ತಿದ್ದ. ಈಗ ಸಾಯುತ್ತಿರುವಾಗಲೂ ಅಂಥ ಸಂಕಟದಿಂದ ಅವನಿಗೆ ಬಿಡುಗಡೆಯಿರಲಿಲ್ಲ. ಅವನ ಬಡಪಾಯಿ ಹೆಂಡತಿ ಅವನಿಂದ

ಪೆಟ್ಟು ತಿಂದು ಅಡಿಗೆ ಮನೆಯಲ್ಲಿ ತೆಲೆ ಕೆದರಿ ನಿಂತು, 'ಇವರೊಬ್ಬ ಮಹಾನಾಯಕರಂತೆ, ಕ್ರಾಂತಿ ಮಾಡ್ತಾರಂತೆ. ಹೆಂಡಿತೀನ್ನ ಹೊಡೆಯೋದು ಮೊದಲು ನಿಲ್ಲಿಸಲಿ ನೋಡುವ' ಎಂದು ಗೊಣಗುವಾಗ ಕೃಷ್ಣಪ್ಪ ಖಿನ್ನನಾಗುತ್ತಾನೆ. ತನ್ನ ದುರಹಂಕಾರವನ್ನು ಹದ್ದಿನಲ್ಲಿಡಲು ಮಹೇಶ್ವರಯ್ಯ ಕಲಿಸಿದ್ದ ಹಾಸ್ಯಪ್ರವೃತ್ತಿ, ಈ ತನ್ನ ತೇಜಸ್ಸುಕಳೆದುಕೊಂಡ ದೇಹದಿಂದ ಬಿಟ್ಟೇ ಹೋಯಿತೆ ಎಂದು ತಬ್ಬಿಬ್ಬಾಗುತ್ತಾನೆ.

ಯಾವುದೋ ಸಣ್ಣ ತಪ್ಪಿಗಾಗಿ ಹಾಸ್ಟೆಲ್‌ವಾರ್ಡನ್‌ಒಮ್ಮೆ ಕೃಷ್ಣಪ್ಪನಿಗೆ ಹೊಡೆಯುವ ಧೈರ್ಯ ಮಾಡಿದನಂತೆ. ಕೊಂದು ಬಿಡುವಂತೆ ಅವಡುಗಚ್ಚಿ ಬೆತ್ತ ತೆಗೆದುಕೊಂಡು ಉಳಿದ ಎಲ್ಲ ಹುಡುಗರ ಎದುರು ಅವನು ರೌದ್ರಾವತಾರ ತಾಳಿ ನಿಂತ. ಚಾಚಿದ ಗಲ್ಲ, ಗುಳಿಬಿದ್ದ ಕಣ್ಣುಗಳು, ಮೈಲೆ ಕಜ್ಜಿಯಿಂದ ತೂತಾದ ಮುಖದ ಈ ಕುಳ್ಳ ವಾರ್ಡ್‌ನ್‌ಸ್ವಭಾವತಃ ಪುಕ್ಕ. ಅವನ ಕೀರಲು ದನಿಯ ಆರ್ಭಟ ಕೇಳಿ ಕೃಷ್ಣಪ್ಪನಿಗೆ ಹೇಸಿಗೆ ಉಂಟಾಯಿತು. ತನ್ನ ನಾಯಕತ್ವ ಒಪ್ಪಿಕೊಂಡಿದ್ದ ಹುಡುಗರೆಲ್ಲ ಬೆರಗಾಗಿ ಮುಂದೇನು ತಿಳಿಯದೆ ನಿಂತಿದ್ದರು. ಕೃಷ್ಣಪ್ಪ ವಾರ್ಡನ್‌ಗೆ ಬೆನ್ನು ತಿರುಗಿಸಿದ. ಚಡ್ಡಿಯನ್ನು ಬಿಚ್ಚಿದ. ಅಂಡಿನ ಮೇಲೆ ಹಣ್ಣಾಗಿ ಕೆಂಪಗೆ ಗುಂಡಗೆ ಇದ್ದ ಕುರ ಒಂದನ್ನು ಬೆರಳಿನಿಂದ ತೋರಿಸುತ್ತ, ಕತ್ತು ತಿರುಗಿಸಿ, 'ಸ್ವಾಮಿ ಈ ಕುರ ಇರೋ ಜಾಗ ಬಿಟ್ಟು ಇನ್ನೆಲ್ಲಾದರೂ ಹೊಡೀರಿ' ಎಂದು ಪೃಷ್ಠವನ್ನೊಡ್ಡಿ ಬಾಗಿದ. ಹುಡುಗರೆಲ್ಲ ಗೊಳ್‌ಎಂದು ನಕ್ಕರು. ವಾರ್ಡನ್‌ಅವಮಾನ, ಸಿಟ್ಟುಗಳಲ್ಲಿ ನಡುಗುತ್ತ ತನ್ನನ್ನು ಸುತ್ತುವರಿದ ತಿರಸ್ಕಾರ ಕಂಡು ಹೆದರಿ ಹೊರಟು ಹೋದ. ಸ್ಥಾನ ಶ್ರೀಮಂತಿಕೆಗಳ ದವಲತ್ತನ್ನು ಹೀಗೇ ಕೃಷ್ಣಪ್ಪ ಬಹಳ ಸಾರಿ ಗೆದ್ದಿದ್ದಾನೆ.

'ನಿನ್ನೊಳಗೊಂದು ಹುಲಿಯಿದೆಯೊ' ಎಂದು ಮಹೇಶ್ವರಯ್ಯ ಹೇಳುತ್ತಿದ್ದರಂತೆ. ಮಹೇಶ್ವರಯ್ಯ ದುರ್ಗಿ ಗುಪ್ತ ಭಕ್ತರು. ಯಾವಾಗಾದರೊಮ್ಮೆ ಇದ್ದಕಿದ್ದಂತೆ ಯಾರೂ ತನ್ನನ್ನು ತಿಳಿಯದ ಜಾಗ ಹುಡುಕಿ ದುರ್ಗಿಯ ಆರಾಧನೆಗೆ ತೊಡಗಿ ಬಿಡುವರು. ಹಗಲು ರಾತ್ರೆ ನಡೆಯುವ ಈ ಆರಾಧನೆ ತಿಂಗಳುಗಟ್ಟಲೆ ಅವರನ್ನು ಒಂದೇ ಜಾಗಕ್ಕೆ ಕಟ್ಟಿಹಾಕಿದ್ದುಂಟು. ಇಂಥ ಒಂದು ಆರಾಧನೆ ಕೃಷ್ಣಪ್ಪನ ಸಮ್ಮುಖದಲ್ಲಿ ನಡೆದಿದೆ. 'ಹುಲಿಯನ್ನು ಸವಾರಿ ಮಾಡಬೇಕೊ' – ಎಂದು ಮಹೇಶ್ವರಯ್ಯ ಕೃಷ್ಣಪ್ಪನಿಗೆ ಆಪ್ತವಾಗಿ ಹೇಳಿದ್ದಾರೆ. ಕೆಂಪು ಪಟ್ಟೆ ಮಡಿಯುಟ್ಟು, ಹಣೆಯ ಮೇಲೆ ದೊಡ್ಡ ಕುಂಕುಮವಿಟ್ಟು, ಒದ್ದೆಯಾದ ಬೆಳೆಸಿದ ತಲೆಗೂದಲನ್ನು ಭುಜದ ಮೇಲೆ ಚೆಲ್ಲಿದ ಈ ದೇವಿಯ ಆರಾಧಕನ ಹೊಳೆಯುವ ಕಣ್ಣುಗಳನ್ನು ಕೃಷ್ಣಪ್ಪ ಸಂಶಯದಿಂದ ನೋಡಲು ಪ್ರಯತ್ನಪಟ್ಟಿದ್ದ. ಅವನಿಗೆ ಯಾವ ದೇವರ ಪೂಜೆಯೂ ಸಾಧ್ಯವಿರಲಿಲ್ಲ. ತನ್ನ ಮುಖವಾಡವನ್ನು ಮುಖವೇ ಮಾಡಬಲ್ಲ ಮಹೇಶ್ವರಯ್ಯನ ನೆಚ್ಚುಗೆಯೂ ಕೃಷ್ಣಪ್ಪನಿಗೆ ಬೇಕಿತ್ತಲ್ಲವೇ ? ಆದ್ದರಿಂದ ದಿವ್ಯವಾದದ್ದೊಂದು ತನ್ನನ್ನು ಹೊಗುವುದಕ್ಕಾಗಿ ಸಂಶಯವನ್ನೂ ಮೀರಿ ಏಕಾಗ್ರನಾಗಿ ಕೂತು ಅವರ ಮಾತು ಕೇಳಿಸಿಕೊಳ್ಳುತ್ತಿದ್ದ. ಕೃಷ್ಣಪ್ಪನನ್ನು ಬದಲಿಸುತ್ತ ಬೆಳೆಸಲು ಮಹೇಶ್ವರಯ್ಯ ಅವನನ್ನು ಹೀಯಾಳಿಸಿದ್ದೂ ಇಲ್ಲವೆಂದಲ್ಲ. ಸದಾ ಕನ್ನಡಿಯ ಎದುರು ನಿಂತು ತಲೆ ಬಾಚುತ್ತಲೋ ಮುಖ ಹಿಂಡಿಕೊಳ್ಳುತ್ತಲೋ ಇರುತ್ತಿದ್ದ ಕೃಷ್ಣಪ್ಪನ ಆತ್ಮ ರತಿಯನ್ನು ಹೀಗೆ ಜರಿದು ಅವರು ಬಿಡಿಸಿದ್ದು.

ನಗುತ್ತಲೋ, ಘರ್ಜಿಸುತ್ತಲೋ ಕೃಷ್ಣಪ್ಪನ ಒಳಹುಲಿ ನೆಗೆಯುತ್ತಿತ್ತು. ದುಷ್ಕರ್ಮಿಗಳಿಗೆ ತಾವು ಹುಳ ಎನ್ನಿಸುವ ಹಾಗೆ ಮಾಡಬಲ್ಲ ಶಕ್ತಿಯನ್ನು ಕ್ರಮೇಣ ಕೃಷ್ಣಪ್ಪ ಗಳಿಸಿಕೊಂಡಿದ್ದ. ಅವನು ರಾಜ್ಯದಲ್ಲಿ ದೊಡ್ಡ ಹೆಸರು ಮಾಡಿದ್ದ ವಿರೋಧ ಪಕ್ಷದ ನಾಯಕನಲ್ಲವೇ ? ಆದ್ದರಿಂದ ಆತನಬಾಯಿ ಕಟ್ಟಿಸಲು ಕೊಳಕರು, ಖದೀಮರು ಏನೇನೋ ಪ್ರಯತ್ನ ಮಾಡುವರು. ಇದರಿಂದ ಕೃಷ್ಣಪ್ಪನಿಗೆ ಸದಾ ಅವಡುಕಚ್ಚಿಕೊಂಡೇ ಬದುಕಬೇಕಾಗಿ ಬಂದುದು.

ಆದ್ದರಿಂದಲೇ ಏನೋ ಸಮಾಜಕ್ಕೆ ತನ್ನನ್ನು ಒಡ್ಡಿಕೊಳ್ಳದ ಮಹೇಶ್ವರಯ್ಯನಂಥ ಆತ್ಮಾರಾಮರು ಕೃಷ್ಣಪ್ಪನಿಗೆ ಅಚ್ಚುಮೆಚ್ಚಾಗಿ ಉಳಿದಿದ್ದು. ಕೊಳೆಯುವುದೇ ಜಾಯಮಾನವಾದ ನಿತ್ಯ ಜೀವನದ ಕ್ಷೇತ್ರದಲ್ಲಿ ಪೂರ್ಣ ಶುದ್ಧಿ ಹುಡುಕೋದೇ ಅಸಂಬದ್ಧವಿರಬಹುದೆ ಎಂಬ ಪ್ರಶ್ನೆ ಅವನನ್ನು ಬಾಧಿಸಿದ್ದಿದೆ. ಬಜೆಟ್ಟು, ಕಾಮಗಾರಿ, ಲಂಚ, ಭಡ್ತಿ, ವರ್ಗ, ನೌಕರಿ ಇತ್ಯಾದಿಗಳಲ್ಲಿ ಮುಳಗಿಸುವ ರಾಜಕೀಯದಿಂದ ಮೇಲೇಳಲು ಕೃಷ್ಣಪ್ಪ ಸದಾ ಪ್ರಯತ್ನಿಸುತ್ತಾನೆ. ಕ್ರಾಂತಿಯ ಕನಸು ಕಾಣುತ್ತಾನೆ. ಆದರೆ ತನ್ನ ಕ್ರಾಂತಿಕಾರಕತೆ ಕ್ರಮೇಣ ತೇಪೆ ಕೆಲಸವಾಗಿಬಿಟ್ಟಿದೆ. ತನ್ನನ್ನು ತೇಲಿಸುವ ಮಹೇಶ್ವರಯ್ಯನೂ ಈಚೆಗೆ ಬರುವುದಿಲ್ಲ. ಒಂದೋ ಭಯಂಕರ ಜಗಳಗಂಟನೂ ಅಹಂಕಾರಿಯೂ ಆಗಬೇಕು; ಅಥವಾ ಸಮಾಜದಿಂದ ಮುಖ ತಿರುಗಿಸಿದ ಆತ್ಮಾರಾಮ ನಾಗಬೇಕು. ಲೋಭಿಗಳನ್ನು ಕಸವಾಗಿ ಕಾಣುವಂಥ ಮಾತಾಡಿ ಕೃಷ್ಣಪ್ಪ ಹಿಗ್ಗುತ್ತಾನೆ. ಹೀಗೆ ಹಿಗ್ಗುವುದು ತನಗೆ ಚಾಳಿಯಾಗಿಬಿಟ್ಟಿತಲ್ಲ ಎಂದು ಹೆದರುತ್ತಾನೆ. ತನ್ನ ಕೋಪದಿಂದ ಸುತ್ತಲಿನ ವಾತಾವರಣದಲ್ಲಿ ಚೂರೂ ಬದಲಾವಣೆಯಾಗದಿದ್ದಾಗ ಕೋಪ ತೀಟೆಯಾಗದೆ ಬೇರೆ ಮಾರ್ಗವಿದೆಯೆ ಎಂದು ಸಮಾಧಾನಪಡುತ್ತಾನೆ. ಇಂಥ ಕೋಪ, ತಾಪ, ಪ್ರೇಮಗಳ ತೀವ್ರತಗೆ ಕಬೀರ ಅಲ್ಲಮರಂಥ ಅರೆಹುಚ್ಚರ ಕವಿತೆಯೇ ರಾಜಕೀಯಕ್ಕಿಂತ ಉತ್ತಮ ಮಾಧ್ಯಮ ಎಂದುಕೊಳ್ಳುತ್ತಾನೆ.

ಆದರೆ ಕೃಷ್ಣಪ್ಪ ಸಾಹಿತಿಯಾಗಲು ಪ್ರಯತ್ನಿಸಿ ಸೋತವ. ಒಮ್ಮೆ ಬೀಳಿ ಕಾಗದದ ಮೇಲೆ ದುಂಡನೆಯ ಅಕ್ಷರದಲ್ಲಿ ಅರ್ಧವಾಕ್ಯವೊಂದನ್ನು ಬರೆದು ಅದನ್ನು ಮುಗಿಸಲಾರದೇ ಹೋಗಿದ್ದ. ‘ಸುಗ್ಗಿಯ ಕಾಲದಲ್ಲಿ ಬೆಳಗಿನ ಹೊತ್ತು ಕರಿಯ ಎನ್ನುವ ಹೊಲೆಯನ್ನೊಬ್ಬ ತನ್ನ ತಲೆಯ ಮೇಲೆ ಹೇಲಿನ ಕುಕ್ಕೆ ಇಟ್ಟುಕೊಂಡು ಹೋಗುತ್ತಿದ್ದಾಗ’ ಎಂದು ವಾಕ್ಯ ಕೊನೆಯಾಗದೆ ನಿಂತಿತ್ತು. ಹೀಗೆ ಹೋಗುತ್ತಿದ್ದಾಗ ಅವನಲ್ಲಿ ಲೋಕದ ಕೊಳಕನ್ನು ಸುಡಬಲ್ಲ ಬೆಂಕಿಯಂಥ ಸಿಟ್ಟು ಹುಟ್ಟಿತೆಂದು ಬರೆಯುವುದು ಸಾಧ್ಯವೇ ? ಸಾಧ್ಯವಾಗಲು ಒಂದೋ ನಿಜಜೀವನದಲ್ಲಿ ಅಂಥ ಸಿಟ್ಟು ಹುಟ್ಟಿದ್ದರ ದಾಖಲೆ ಇರಬೇಕು; ಅಥವಾ ಅಂಥದು ಹುಟ್ಟುವುದು ನಿಜವೆಂದು ಅನ್ನಿಸುವಂತೆ ಮಾಡಬಲ್ಲ ವಾಕ್ಸಿದ್ಧಿ ತನಗೆ ಬೇಕು. ಕೈಸಾಗದೇ ಇರೋವರು ಮಾತಲ್ಲಿ ತೀಟೆ ತೀರಿಸ್ಕೋತಾರೆ ಎಂದು ಕವಿಗಳನ್ನು ಅವನು ಜರೆಯುತ್ತಿದ್ದ. ಇದರಲ್ಲಿ ಅಸೂಹೆ ಕಂಡ ಮಹೇಶ್ವರಯ್ಯ, ‘ಸುಡುವ ತಾಕತ್ತಿದ್ದರೆ ಸುಡಯ್ಯ, ವಾಗ್ದೇವಿಯನ್ನು ಜರಿಯಬೇಡ’ ಎಂದಿದ್ದರು. ಎಲ್ಲೆಲ್ಲೋ ಕೋಪವನ್ನು ಚೆಲ್ಲುವುದರ ಬದಲು ಅದನ್ನು ಮಾತಿನಲ್ಲೆ ಒಳಚಾಚಿದ ಬೆಂಕಿಯ ನಾಲಗೆ ಮಾಡಿ ಉರಿಸುವುದೇ ಶ್ರೇಷ್ಠವೆಂದು ಮಹೇಶ್ವರಯ್ಯನ ಅಭಿಪ್ರಾಯ. ಆದರೆ ಕೃಷ್ಣಪ್ಪನಿಗೆ ಗೊತ್ತು: ತನ್ನ ಮಾತುಗಳು ತನ್ನ ಗರ್ವಕ್ಕೇ ಅಂಟಿಕೊಂಡು ಬಿಡುತ್ತಿದ್ದವು; ಮೈತುಂಬ ಏಳುವ ಪಿತ್ಥಗಂಧೆಯಂತೆ ತನ್ನಿಂದ ಹೊರ ಬೀಳುತ್ತಿದ್ದವು.

* * *

ಪೊರೆ ಬಿಡುವಾಗಿನ ಸಂಕಟಗಳಿಂದ ಕೃಷ್ಣಪ್ಪನಿಗೊಮ್ಮೆ ಹುಚ್ಚು ಹಿಡಿದದ್ದೂ ಇದೆ. ಇಂಟರ್ ಮೀಡಿಯಟ್‌ಕಾಲೇಜ್‌ನಲ್ಲಿ ಆಗ ಕೃಷ್ಣಪ್ಪ ಓದುತ್ತಿದ್ದ. ಅವನ ಜಾತಿಯ ಹಾಸ್ಟೆಲಲ್ಲಿ ಆಗ ಅವನಿಗೆ ಬಿಟ್ಟಿ ಊಟ, ವಸತಿ. ವಯಸ್ಸು ಇಪ್ಪತ್ತೈದು ಇದ್ದರೂ ಇರಬಹುದು. ಅವನು ಹುಟ್ಟಿದ ತಾರೀಖು ಯಾರಿಗೆ ಸರಿಯಾಗಿ ಗೊತ್ತು ? ಅನಕ್ಷರಸ್ಥಳಾಗಿದ್ದ ತಾಯಿಯನ್ನು ಕೇಳಿದರೆ ನೆರೆ ಬಂದ ವರ್ಷ ಎನ್ನುತ್ತಾಳೆ. ಕೃಷ್ಣಪ್ಪ ಫ್ರೀ ಬೋರ್ಡರಾಗಿದ್ದರೂ ಆ ಹಾಸ್ಟೆಲಿನಲ್ಲಿ ಇದ್ದ ಶ್ರೀಮಂತ ಹುಡುಗರಿಗೆಲ್ಲ ನಾಯಕ.

ಯಾರಿಗಿಲ್ಲದಿದ್ದರೂ ಅವನಿಗೆ ಮಾತ್ರ ಸ್ವತಂತ್ರವಾದ ರೂಮು – ಹುಡುಗರೆಲ್ಲ ಕೂಡಿ ಬಿಟ್ಟುಕೊಟ್ಟಿದ್ದು. ಒಮ್ಮೆ ಕೃಷ್ಣಪ್ಪನಿಗೆ ತುಂಬ ಜ್ವರ ಬಂತು. ಅವನಿಗೆ ಗುರಪ್ಪ ಎಂಬ ಶ್ರೀಮಂತ ಅನುಯಾಯಿ ಇದ್ದ. ಅವನು ಕೃಷ್ಣಪ್ಪನ ಶುಶ್ರೂಷೆ ಮಾಡುತ್ತಿದ್ದಾಗ, ತುಂಬ ಜ್ವರದಲ್ಲಿ ಕೃಷ್ಣಪ್ಪ 'ನನಗೊಂದು ಹೊಸ ಹಾಸಿಗೆ ಮಾಡಿಸಿಕೊಡು' ಎಂದ. ಗುರಪ್ಪ ಸ್ವಲ್ಪ ಜುಗ್ಗು ಸ್ವಭಾವದವನೆಂದು ಕೃಷ್ಣಪ್ಪನಿಗೆ ಗೊತ್ತು. ಹಾಸಿಗೆ ಹೇಗಿರಬೇಕೆಂದು ವಿವರಿಸಿದ: 'ಏಯ್‌ಗುರಪ್ಪ – ಜುಗ್ಗುತನ ಮಾಡಬೇಡ. ಹಾಸಿಗೆ ಸುತ್ತ ಬೇರೆ ಬಟ್ಟೇನೇ ಉಪಯೋಗಿಸಿ ಅಂಚು ಕಟ್ಟಿಸಬೇಕು. ಹಾಸಿಗೆ ಬಾಕ್ಸ್‌ತರ ಇರಬೇಕು. ಗೊತ್ತಾಯ್ತೇನೋ?' ಅಂದ. ಗುರಪ್ಪ 'ಹೂ' ಎಂದು ಹಾಸಿಗೆ ಹೊಲಿಸಿ ತಂದ. ಕೃಷ್ಣಪ್ಪನಿಗೆ ಜ್ವರ ಏರಿತ್ತು. ಏನೇನೋ ಬಡಬಡಿಸುತ್ತಿದ್ದವ ಹೊಸ ಹಾಸಿಗೆಯ ಅಂಚುಗಳನ್ನು ಮುಟ್ಟಿ ನೋಡಿದ. 'ಹಾವಿನ ಮೋತಿ ಥರ ಚೂಪಾಗಿದೆಯಲ್ಲೋ? ಬಾಕ್ಸ್‌ಹಾಗೆ ಇರಬೇಕು – ಬಾಕ್ಸ್‌ಹಾಗೆ' ಎಂದು ಕಣ್ಣುಗಳನ್ನು ತೆಗೆಯಲಾಗದಿದ್ದರೂ ಗುರುಪ್ಪನ ಮುಖ ಹುಡುಕುತ್ತ ಏಳಲು ಪ್ರಯತ್ನಿಸಿದ. ಅವನು ಹೇಳಿದಂಥ ಹಾಸಿಗೆಯನ್ನೇ ಹೊಲಿಸಿದ್ದೇನೆ ಎಂಬ ಗುರುಪ್ಪನ ವಿವರಣೆಯಿಂದ ಅವನಿಗೆ ಸಿಟ್ಟು ಬಂತು. ಹಾಸಿಗೆಯೇ ಬೇಡವೆಂದು ನೆಲದ ಮೇಲೆ ಮಲಗಿದ. ಥಂಡಿಯಾಗುತ್ತದೆಂದು ಗುರಪ್ಪ ಬೇಡಿಕೊಂಡರೂ ಏಳಲಿಲ್ಲ. ಕೆಲವು ತಿಂಗಳುಗಳ ಹಿಂದೆ ಹೀಗೇ ಗುರುಪ್ಪನಿಗೆ ಜ್ವರ ಬಂದಿತ್ತು. ಆಗ ಕೃಷ್ಣಪ್ಪ ಅವನ ಪಕ್ಕದಲ್ಲಿ ಸದಾ ಕೂತಿದ್ದು ಹಣೆಗೆ ಒದ್ದೆ ಬಟ್ಟೆ ಹಾಕಿದ್ದ; ಅವನು ಮಾಡಿಕೊಂಡ ವಾಂತಿಯನ್ನು ಬಾಚಿದ್ದ. ಇದರಿಂದ ಗುರಪ್ಪನಿಗೆ ಕೃಷ್ಣಪ್ಪನನ್ನು ಪೂಜಿಸುವಂಥ ಭಕ್ತಿ ಹುಟ್ಟಿತು. ಆದರೂ ಜಿಪುಣನಾದ ಗುರಪ್ಪನಿಗೆ ಒಳ್ಳೆಯ ಹಾಸಿಗೆ ಹೊಲಿಸುವುದು ಅನಗತ್ಯ ದುಂದು ಎನ್ನಿಸಿರಬಹುದು. ಸನ್ನಿಯಲ್ಲಿದ್ದವನ ಮಾತಿಗೇಕೆ ಬೆಲೆ ಕೊಡಬೇಕು ಎಂದು ವಂಚನೆ ಮಾಡುವ ಧೈರ್ಯವೂ ಇದ್ದಿರಬಹುದು. ಈ ಸಣ್ಣತನ ಕೃಷ್ಣಪ್ಪನನ್ನು ಅತೀವವಾಗಿ ಬಾಧಿಸಿರಬೇಕು. ಗುರಪ್ಪ ಅನಂತರ ಅತ್ಯಂತ ದೈನ್ಯದಿಂದ ಬೇರೆ ಹಾಸಿಗೆ ಹೊಲಿಸಿಕೊಂಡು ಬಂದು ಬೇಡಿಕೊಂಡರೂ ಅದರ ಮೇಲೆ ಕೃಷ್ಣಪ್ಪ ಮಲಗಲಿಲ್ಲ. ತನ್ನ ಹಳೆ ಹಾಸಿಗೆ ಮೇಲೂ ಮಲಗಲಿಲ್ಲ. ಈಚಲು ಚಾಪೆಯ ಮೇಲೆ ಮಲಗಿದ. ಗುರಪ್ಪ ಜೋಲು ಮೋರೆ ಹಾಕಿಕೊಂಡು ಪಕ್ಕದಲ್ಲಿ ಸದಾ ಕೂತಿರುತ್ತಿದ್ದರೂ ಅವನನ್ನು ಮಾತನಾಡಿಸುತ್ತಿರಲಿಲ್ಲ.

ಜ್ವರ ಸ್ವಲ್ಪ ಇಳಿದ ಮೇಲೆ ತನ್ನ ಮಾವನ ಹಿರಿಯ ಮಗನಿದ್ದ ಊರಲ್ಲಿ ಶುಶ್ರೂಷೆ ಪಡೆಯಲೆಂದು ಹೊರಟ. ಆ ಊರಿಗೆ ಹೋಗಲು ಟ್ರೈನ್‌ಹಿಡಿಯಬೇಕು. ಮುವ್ವತ್ತು ಮೈಲಿಯ ನಂತರ ಟ್ರೈನ್‌ಇಳಿದು ಬಸ್‌ಹಿಡಿಯಬೇಕು. ಇರುವ ಒಂದೇ ಬಸ್ಸಿಗೆ ನಿಗದಿಯಾದ ಕಾಲವಿಲ್ಲ. ಸ್ಟೇಶನ್ನಿನಲ್ಲಿ ಇಳಿದ ಕೃಷ್ಣಪ್ಪ ಬಸ್ಸಿಗೆ ಕಾಯುತ್ತ ಒಂದು ಹೋಟೆಲಿನ ಬೆಂಚಿನ ಮೇಲೆ ಮಲಗಿದ.

ಇನ್ನೂ ಸಣ್ಣಗೆ ಜ್ವರವಿತ್ತು. ಬೆಂಚಿನ ಮೇಲೆ ಮಲಗಿದ ಕೃಷ್ಣಪ್ಪನನ್ನು ಹೋಟೆಲು ಯಜಮಾನ ನೋಡಿ, ಹೊಗೆಸೊಪ್ಪಿನ ರಸ ತುಂಬಿದ ತನ್ನ ಬಾಯನ್ನು ಮೇಲಕ್ಕೆತ್ತಿ, ಗಡ್ಡ ಕೆರೆದುಕೊಳ್ಳುತ್ತ ಏಳುವಂತೆ ಸನ್ನೆ ಮಾಡಿದ. ಕೃಷ್ಣಪ್ಪ ದುರುಗುಟ್ಟಿ ನೋಡಿದ. ಯಜಮಾನನಿಗೆ ಕೋಪ ಬಂತು. ಹೊಗೆಸಪ್ಪು ಉಗುಳಿ ಬಂದು 'ಏಳಯ್ಯ, ಇಲ್ದಿದ್ರೆ ಎಳೆಸಿಹಾಕ್ತೀನಿ' ಎಂದ. ಕೃಷ್ಣಪ್ಪ ಹಿಂದಿನಂತೆ ದುರುಗುಟ್ಟಿ ನೋಡುತ್ತಲೇ ಪ್ರಶಾಂತವಾದ ಧ್ವನಿಯಲ್ಲಿ ಹೇಳಿದ: 'ನನಗೆ ಜ್ವರ. ಹೊರಗೆ ಬಿಸಿಲಲ್ಲಿ ಮಲಗಲಾರೆ. ಬಸ್ಸು ತರುವ ತನಕ ಇಲ್ಲಿ ಮಲಗಿರಲು ತಾವು ಅನುಮತಿ ಕೊಡಬೇಕು.' ಮಾತಿನಲ್ಲಿದ್ದ ಸೌಜನ್ಯ ಅವನ ಕಣ್ಣುಗಳಲ್ಲಿರಲಿಲ್ಲ. 'ಇವನನ್ನು ಎಳೆದು ಹಾಕ್ರೋ, ದಿಕ್ಕಿಲ್ಲದ ಸೂಳೇ ಮಕ್ಕಳಿಗೆ ಮಲಗಕ್ಕಲ್ಲ ಈ ಹೋಟೆಲಿರೋದು' ಎಂದ. ಮಾಣಿಯೊಬ್ಬ ಬಂದು ಕೃಷ್ಣಪ್ಪನ ತಲೆಯಿಂದ ಟ್ರಂಕನ್ನೆಳೆದ. ಯಜಮಾನ ಅದನ್ನು ಇಸಕೊಂಡು ಹೊರಗೆಸದಾಗ ಟ್ರಂಕಿನಲ್ಲಿದ್ದದ್ದೆಲ್ಲ ಮಧ್ಯಾಹ್ನದ ಬಿಸಿಲಲ್ಲಿ ಚೆಲ್ಲಿತ್ತು. ಕೃಷ್ಣಪ್ಪನನ್ನು ಎಳೆಯಲು ಹೋದಾಗ 'ನನ್ನ ಮೈ ಮುಟ್ಟೀರಿ – ಜೋಕೆ'

ಎಂದು ತೂರಾಡುತ್ತ ಹೊರಗೆ ಹೋದ. ಗಂಭೀರವಾಗಿ ತನ್ನ ಜುಬ್ಬದ ತೋಳನ್ನು ಸರಿಸಿಕೊಂಡು ಟ್ರಂಕಿಗೆ ಚೆಲ್ಲಾಪಿಲ್ಲಿಯಾದ್ದನ್ನು ತುಂಬಿದ, ಉರಿಯುವ ಬಿಸಿಲಿನಲ್ಲಿ ಟ್ರಂಕಿನ ಮೇಲೆ ಕೂತು, ಪೂರ್ವ ಕಾಲದ ಉಗ್ರಮುನಿಕುಮಾರನಂತೆ ಹೋಟೆಲಿನ ಕಟ್ಟಡವನ್ನು ದಿಟ್ಟಿಸುತ್ತ 'ಇದಕ್ಕೆ ಬೆಂಕಿ ಬಿದ್ದು ಎಲ್ಲ ಸುಟ್ಟು ಹೋಗುತ್ತೆ – ತಿಂಗಳ ಒಳಗ' ಎಂದ ಪ್ರಶಾಂತವಾಗಿ. ಯಜಮಾನ ಥೂ ಎಂದು ಉಗುಳಿದಾಗ ಕೃಷ್ಣಪ್ಪ ಕರುಣೆಯಿಂದ ನಕ್ಕ. . . . . . . . .

ಇಂಥ ಮಾತನ್ನಾಡಬಲ್ಲ ಶಕ್ತಿ ಈಗಲೂ ಅವನಿಗೆ ಇದೆ. ಓಡಾಡಲಾಗದಿದ್ದರೂ, ಕುರ್ಚಿಯಲ್ಲಿ ಎತ್ತಿಸಿಕೊಂಡು ಹೋಗಿ ಅಸೆಂಬ್ಲಿಯಲ್ಲಿ ಹೇಳಿದ್ದಾನೆ: ಯಾರ ಕಡೆಯೂ ನೋಡದೆ, ಕಣ್ಣೆತ್ತಿ: 'ನಾನೀಗ ಪ್ರವಾದಿಯಂತೆ ಹೇಳುತ್ತಿರುವೆ – ಕೇಳಿ – ಬಿಡಿ – ನನಗದು ಅಲ್ಪ ವಿಷಯ. ಬಡವರು ಸಿಟ್ಟಿಗೇಳುತ್ತಾರೆ. ನಿಮ್ಮ ಮನೆಗಳಿಗೆ ಬೆಂಕಿ ಹಚ್ಚುತ್ತಾರೆ' ದೈನಿಕ ಪತ್ರಿಕೆಗಳಲ್ಲಿ ಇದನ್ನು ಹಾಸ್ಯಪ್ರಿಯ ಸಂಪಾದಕರು ಬಾಕ್ಸ್‌ಮಾಡಿ ಆಶ್ಚರ್ಯ ಸೂಚಕ ಚಿಹ್ನೆಯಿಂದ ಕೊನೆ ಮಾಡಿ ಪ್ರಕಟಿಸಿದರು. ಅವನ ಮುಖ, ಅವನ ದನಿ, ಅವನ ಗಂಭೀರ ಧಾಟಿಗಳ ಜೊತೆ ಈ ಮಾತುಗಳನ್ನು ಖುದ್ದು ಕೇಳಿದವರಿಗೆ ಅದೇನೂ ಹಾಸ್ಯವೆನಿಸುವುದಿಲ್ಲ. ಆದರೆ ನಿತ್ಯ ಜೀವನದ ತರಲೆ ತಾಪತ್ರಯಗಳ ಸುದ್ದಿಗಳ ಆಶಾದಾಯಕವೆನ್ನಿಸುವ ಯಥಾಸ್ಥಿತಿಯ ಆವರಣದಲ್ಲಿ ಮಾತ್ರ ಕೃಷ್ಣಪ್ಪನ ಮಾತುಗಳನ್ನು ಅಚ್ಚಿನಲ್ಲಿ ಕಂಡಾಗ ಅಭಾಸವೆನಿಸುತ್ತದೆ. ಅಹಂಕಾರಿಯೊಬ್ಬನ ಗೊಣಗಾಟವೆನಿಸುತ್ತದೆ. ಅದು ಕೃಷ್ಣಪ್ಪನಿಗೆ ಗೊತ್ತಿರುವುದರಿಂದ ಬಡವರು ಸಿಟ್ಟಿಗೇಳುವ ತನಕ ತನ್ನ ತಿರಾಸ್ಕಾರ ದ್ವೇಷಗಳನ್ನು ಮೊನಚಾಗಿ ಉಳಿಸಿಕೊಳ್ಳಬೇಕೆಂದು ಸೊರಗುತ್ತಿರುವ ದೇಹದಲ್ಲಿ ಹೆಣಗುತ್ತಾನೆ. . . . . . .

ಕೃಷ್ಣಪ್ಪನ ಮಾವನ ಮಗ ರಂಗಪ್ಪ ಸಣ್ಣಪುಟ್ಟ ಲಂಚಗಳಿಗೆ ಕೈಯೊಡ್ಡಿ ಬದುಕುತ್ತಿದ್ದ ಒಬ್ಬ ಬಡಪಾಯಿ ಗುಮಾಸ್ತ. ಮನೆಯಲ್ಲಿ ಎಂಟು ಸಣ್ಣ ಮಕ್ಕಳು. ಕೇವಲ ಎರಡು ರೂಮುಗಳಿದ್ದ ನಾಡಹೆಂಚಿನ ಸೋರುವ ಈ ಮನೆಯ ಒಡತಿ ಸಾವಿತ್ರಮ್ಮ. ತನ್ನ ಸೀತಬುರಕ ಮೂಗನ್ನು ಕೈಯಿಂದ ಸೀನಿ ಗೋಡೆಗೆ ಒರೆಸುತ್ತ ಯಾವಾಗಲೂ ಗೊಣಗುವ, ತನ್ನ ಗಂಡನಿಗೂ ಕೃಷ್ಣಪ್ಪನಿಗೂ ಊಟ ಬಡಿಸುವಾಗ ಗಂಡನಿಗೆ ಗಟ್ಟಿ ಮಜ್ಜಿಗೆಯನ್ನೂ ಕೃಷ್ಣಪ್ಪನಿಗೆ ನೀರ ಮಜ್ಜಿಗೆಯನ್ನೂ ಯಾವ ನಾಚಿಕೆಯಿಲ್ಲದೆ ಸುರಿಯುವ ಹೆಂಗಸು – ಅವಳು. ಈ ಹೆಂಗಸನ್ನು ತನ್ನ ದುರುಗುಟ್ಟುವ ಕೋಪದ ಕಣ್ಣುಗಳಿಂದ ಕೃಷ್ಣಪ್ಪ ಗೆಲ್ಲಲಾರದೆ ಹೋದ. ಈ ಪೇಟೆಗೆ ಅವನು ಚಿಕಿತ್ಸೆಗೆಂದು ಬಂದದ್ದು. ಇಲ್ಲವಾದಲ್ಲಿ ತಾಯಿ ಊರಿಗೆ ಹೋಗಬಹುದಿತ್ತು. ಮಕ್ಕಳು ಮಲಗುವ ರೂಮಿನಲ್ಲಿ ಸದಾ ತನ್ನ ಕಣ್ಣಿಗೆ ಕಾಣುವ ಹಾಗೆ ಮಲಗಿರುತ್ತಿದ್ದ ಕೃಷ್ಣಪ್ಪನ ನಿರುಪಯೋಗತನವನ್ನೂ, ಎಲ್ಲರಂತೆ ಹಿಟ್ಟು ತಿನ್ನದೆ ಅನ್ನ ಬಯಸುತ್ತಿದ್ದ ಅವನ ರೋಗವನ್ನೂ ತಮ್ಮ ಬಡತನವನ್ನೂ ರಾಗವಾಗಿ ತನ್ನ ಪಾಡಿಗೆ ತಾನು ಆಡಿಕೊಳ್ಳುತ್ತ ಅಡಿಗೆ ಮನೆಯ ಹಿತ್ತಾಳೆ ಪಾತ್ರೆಗಳನ್ನು ಕುಕ್ಕುತ್ತ ಕೃಷ್ಣಪ್ಪನ ಗರ್ವ ಇನ್ನೂ ಹೆಚ್ಚು ಬೆಳೆಯುವಂತೆ ಮಾಡಿದಳು.

ತನ್ನ ಸುತ್ತಲಿನ ಕ್ಷುದ್ರತೆ ಗೆಲ್ಲಲು ಅನ್ಯ ಮಾರ್ಗವಿರದೆ ಕೃಷ್ಣಪ್ಪ ಗಾಢವಾದ ಮೌನ ತಾಳಿದ. ಮಕ್ಕಳ ಉಚ್ಚೆ, ಹೇಲು, ಗಂಡನ ಹೊಟ್ಟೆಬಾಕತನ, ಸದಾ ಬೀಳುವ ಕಸ ಇವುಗಳ ಜೊತೆ ದಿನನಿತ್ಯ ಹೋರಾಡುವ ಎಲ್ಲ ಸಾಮಾನ್ಯ ಕ್ಷುದ್ರ ಹೆಣ್ಣುಗಳಂತೆ ಇವಳು ಒಬ್ಬಳು ಎಂದು ಆಕೆಯನ್ನು ಮೊದಲಿನಂತೆ ದುರುಗುಟ್ಟಿ ನೋಡುವುದನ್ನೂ, ಅವಳಿಗೆ ಪ್ರತ್ಯುತ್ತರ ಕೊಡುವುದನ್ನು ನಿಲ್ಲಿಸಿದ. ಅವಳ ಕ್ಷುದ್ರತೆ ತನ್ನ ಶಕ್ತಿ ಹೀನ ದೇಹವನ್ನೂ ಮನಸ್ಸನ್ನೂ ಆಕ್ರಮಿಸದಿರಲೆಂದು ದಯಾವಂತನಾದ. ಹೀಗಿರುವಾಗ ಎರಡು ಘಟನೆಗಳು ಒಂದೇ ದಿನ ನಡೆದು ಕೃಷ್ಣಪ್ಪನಲ್ಲಿ ಒಂದು ವಿಸ್ಮಯಕಾರಿಯಾದ ಪರಿವರ್ತನೆಯಾಯಿತು.

ಕೃಷ್ಣಪ್ಪ ತನ್ನ ದಿನಚರಿ ಬರೆದಿಡುತ್ತಿದ್ದ ಒಂದು ಕಡತವಿತ್ತು. ತಾನು ಗೊಣಗುವಾಗಲೆಲ್ಲ ಈ ಪುಸ್ತಕ ಹಿಡಿದು ಗುಂಡನೆಯ ಅಕ್ಷರದಲ್ಲಿ ಏನೇನೋ ಬರೆಯುತ್ತ ಪ್ರಸನ್ನ ಮುಖದಿಂದ ಇರುತ್ತಿದ್ದ ಕೃಷ್ಣಪ್ಪನನ್ನು ಅವಳು ಸಿಡಿಮಿಡಿಗೊಳ್ಳುತ್ತ, ದುರುಗುಟ್ಟಿ ನೋಡುತ್ತ ನಿಂತುಬಿಡುವಳು. ಅನಕ್ಷರಸ್ಥೆಯಾದ ಸಾವಿತ್ರಮ್ಮನಿಗೆ ಕೃಷ್ಣಪ್ಪನನ್ನು ಮಗ್ನಗೊಳಿಸುವ ಈ ಕಸುಬು ಯಾವುದೋ ಮಾಟ ಮಾಡುವ ವಿಧಿಯಂತೆ ಕಾಣುತ್ತಿತ್ತು. ಒಂದು ಬೆಳಿಗ್ಗೆ ಅವನಿನ್ನೂ ನಿದ್ದೆಯಲ್ಲಿದ್ದಾಗ ಆ ಪುಸ್ತಕವನ್ನು ತೆಗೆದುಕೊಂಡು ಹೋಗಿ ನೀರಿನ ಒಲೆ ಹೊತ್ತಿಸಿದಳು. ಕೇಳಿದರೆ ಅವತ್ತು ಬೆಂಕಿ ಹೊತ್ತಿಸಲು ಕುರುಳು ಇರಲಿಲ್ಲವೆಂದು ಹೇಳುವುದೆಂದುಕೊಂಡಳು.

ಕೃಷ್ಣಪ್ಪ ಎಚ್ಚರಾದವನು ಮಾವಿನ ಎಲೆಯಿಂದ ಹಲ್ಲು ಉಜ್ಜಿ, ನಡುಮನೆಗೆ ಬಂದು 'ಎಲ್ಲಿ ನನ್ನ ಪುಸ್ತಕ?' ಎಂದ. ಅನುಮಾನವಾಗಿ ಬಚ್ಚಲಿಗೆ ಮತ್ತೆ ಹೋಗಿ ನೋಡಿದ ಪುಸ್ತಕದ ರಟ್ಟಿನ ಚೂರೊಂದು ಕರಕಲಾಗಿದ್ದುದು ಕಂಡು ಸಾವಿತ್ರಮ್ಮನ ಎದುರು ನಿಂತು ಮಾತಾಡದೆ ದುರುಗಟ್ಟಿ ನೋಡಿದ. ಸಾವಿತ್ರಮ್ಮ ನಿಷ್ಕಳಂಕ ಭಾವದಿಂದ 'ಕುರುಳು ಇರಲಿಲ್ಲ' ಎಂದಳು. ಕೃಷ್ಣಪ್ಪ ಅಚಲವಾಗಿ ನಿಂತ. ಈ ಹೆಂಗಸನ್ನು ಕೊಲ್ಲಬಹುದು ಎನ್ನಿಸಿತು. ಜೊತೆಗೇ ಕಣ್ಣುಗಳಲ್ಲಿ ನೀರು ತುಂಬಿ ಬಂದವು. ಈ ನೀರನ್ನು ನೋಡಿ ಸಾವಿತ್ರಮ್ಮ ತನ್ನ ಬಗ್ಗೆ ಪಶ್ಚಾತ್ತಾಪ ಪಟ್ಟಾಳೆಂದು ಹಾಸಿಗೆ ಮೇಲೆ ಹೋಗಿ ಮಲಗಿದ. ಕಣ್ಣು ಮುಚ್ಚಿದ. ಅವನಿಗೆ ಅರ್ಥವಾಗದಂಥ ಭಾವನೆಗಳು ಮನಸ್ಸಲ್ಲಿ ಏಳತೊಡಗಿದವು. ತನ್ನ ಸುತ್ತಲಿನ ಕ್ಷುದ್ರತೆ ತನ್ನನ್ನು ನಾಶ ಮಾಡದೇ ಬಿಡದು ಎಂಬ ಭಾವನೆ ಬಲವಾಗುತ್ತ ತಾನು ತೀರ ದುರ್ಬಲ ಎಂದು ಅನ್ನಿಸತೊಡಗಿತು. ತನ್ನ ಬೆರಳನ್ನು ಕತ್ತರಿಸಿ ಹಾಕಬೇಕೆನ್ನಿಸಿ ಪೆಟ್ಟಿಗೆಯಿಂದ ಬ್ಲೇಡ್‌ತೆಗೆದ. ಈಗ ಅಂಜದೆ ಬೆರಳು ಕತ್ತರಿಸಿಕೊಳ್ಳಬಲ್ಲೆನಾದರೆ ನಾನು ಎಲ್ಲಕ್ಕಿಂತ ಗಟ್ಟಿ ಎಂದರ್ಥ ಎಂದು ಬೆರಳು ಕೊಯ್ಯಲು ಸಿದ್ಧನಾಗುತ್ತಿದ್ದಂತೆಯೇ ಪಕ್ಕದ ಮನೆಯ ಹೆಂಗಸೊಬ್ಬಳು 'ಕೇಳಿದರಾ ಸಾವಿತ್ರಮ್ಮ' ಎಂದು ಒಳಗೆ ನುಗ್ಗಿ 'ಅರಸಾಳಲ್ಲಿ ಹೋಟೆಲ್ಲಿಟ್ಟುಕೊಂಡಿದ್ದರಲ್ಲ ಉಡುಪರು – ಅವರ ಹೋಟೆಲಿಗೆ ಬೆಂಕಿ ಬಿತ್ತಂತೆ. ಅವರ ಮೈ ಕೈಯಲ್ಲ ಸುಟ್ಟು ಆಸ್ಪತ್ರೆಗೆ ಸೇರಿದ್ದಾರಂತೆ' ಎಂದಳು.

ಕೃಷ್ಣಪ್ಪನಿಗೆ ಇದನ್ನು ಕೇಳುತ್ತಿದ್ದಂತೆಯೇ ತನ್ನ ಶಾಪ ನೆನಪಾಗಿ ತಾನು ದೈವಾಂಶ ಸಂಭೂತ ಎನ್ನಿಸಿತು. ಶಾಪದ ಪ್ರಕಾರ ಒಂದು ತಿಂಗಳಾಗಬೇಕಿತ್ತು. ಈಗ ತಿಂಗಳ ಮೇಲೆ ಹತ್ತು ದಿನಗಳಾಗಿದ್ದವು. ಕೃಷ್ಣಪ್ಪನ ಉದ್ವೇಗದಲ್ಲಿ ಇದು ಅವನನ್ನು ಬಾಧಿಸಲಿಲ್ಲ. ತಾನು ದೇವಾಂಶ ಸಂಭೋತ, ಈ ಅಂಶ ಬೆಳೆದು ತಾನು ದೇವರೇ ಆಗಿ ಬಿಡಬೇಕು ಎಂದು ಗಹಗಹಿಸಿ ನಕ್ಕ. ಪಕ್ಕದ ಮನೆ ಹೆಂಗಸು, ಸಾವಿತ್ರಮ್ಮ ನೋಡುತ್ತಿದ್ದಂತೆಯೇ ಪೆನ್ಸಿಲ್ ಕೆತ್ತುವಂತೆ ಕಾಲಿನ ಕಿರು ಬೆರಳನ್ನು ಕೆತ್ತಿದ. ಅದರಿಂದ ರಕ್ತ ಚಿಮ್ಮುವಾಗ ನಗುತ್ತಲೇ ಇದ್ದ.

ಅಲ್ಲಿಂದ ಶುರುವಾಯಿತು, ಕೃಷ್ಣಪ್ಪನ ಹುಚ್ಚು. ಮಹೇಶ್ವರಯ್ಯನಂತೆ ನಡು ಮನೆಯಲ್ಲಿ ಕೂತು ರಂಗೋಲೆಯಿಂದ ದೊಡ್ಡದೊಂದು ಮಂಡಳ ಬರೆದು ಅದನ್ನು ಅರಿಸಿನ ಕುಂಕುಮದಿಂದ ತುಂಬಿದ. ನಡುವೆ ಒಂದು ಬೆಳಗಿದ ಗಿಂಡಿಯಿಟ್ಟು ದೇವಿಯನ್ನು ಪ್ರತಿಷ್ಠಾಪಿಸಿದ. ಬರಿ ಕೌಪೀನ ಧರಿಸಿ ಕೂತು ಮಹೇಶ್ವರಯ್ಯ ಕೊಟ್ಟಿದ್ದ ಸೌಂದರ್ಯ ಲಹರಿಯನ್ನು ಓದಲು ಪ್ರಾರಂಭಿಸಿದ. ಶೂದ್ರರು ಮಂತ್ರ ಹೇಳುವುದೇ ಎಂದು ಸಾವಿತ್ರಮ್ಮ ರೇಗಿದಳು. ಹೆದರಿದಳು. ಸ್ಪಷ್ಟವಾಗಿ ಮಂತ್ರೋಚ್ಚಾರ ಮಾಡುತ್ತಿದ್ದ ಅವನ ಹತ್ತಿರ ಹೋಗಲಾರದೆ ಕಂಗಾಲಾಗಿ ನಿಂತಳು. ಸ್ಕೂಲಿಂದ ಬಂದ ಮಕ್ಕಳನ್ನು ಹಿತ್ತಲಿಂದಲೇ ಅಡಿಗೆ ಮನೆಗೆ ಕರೆದು ಕೃಷ್ಣಪ್ಪನ ಹತ್ತಿರ ಹೋಗಬೇಡೆಂದಳು. ಗಣಮಗನಂತೆ ಕುಂತ ಕೃಷ್ಣಪ್ಪನನ್ನು ಕಂಡು ಅವಳ ಗಂಡ

ರಂಗಪ್ಪನೂ ತಬ್ಬಿಬ್ಬಾದ. ತೋರಣ ಕಟ್ಟಿ ಎಂದು ಕೃಷ್ಣಪ್ಪ ನಡುವೆ ಕೂಗಿ ಹೇಳಿದಾಗ ರಂಗಪ್ಪನೇ ಸ್ವತಃ ಹೋಗಿ ಮಾವಿನ ಎಲೆ ತಂದು ತೋರಣ ಕಟ್ಟಿದ.

ಯಾರೂ ನಡುಮನೆಯಲ್ಲಿ ಸುಳಿಯಲಿಲ್ಲ. ಹೀಗೆ ಮೂರು ದಿನ ಪೂಜೆಗೆ ಸಾವಿತ್ರಮ್ಮ ತುಟಿಪಿಟಕ್ಕೆನ್ನದೆ ಮಡಿಯಾಗಿ ಪಾಯಸ ಕೋಸುಂಬರಿಗಳ ನೈವೇದ್ಯ ತಯಾರಿಸಿದಳು. ಈ ಅನಿರೀಕ್ಷಿತವಾದ ಸಂದರ್ಭವನ್ನು ಹೇಗೆ ಎದುರಿಸಬೇಕೆಂಬುದು ಅಕ್ಕಪಕ್ಕದ ಯಾರಿಗೂ ತಿಳಿಯಲಿಲ್ಲ. ಕಛೇರಿಯಲ್ಲಿದ್ದ ಉಳಿದ ಬ್ರಾಹ್ಮಣ ಗುಮಾಸ್ತರು ಇದರಿಂದ ನಿನಗೆ ಕೆಡಕಾಗುತ್ತೆ ಎಂದು ರಂಗಪ್ಪನನ್ನು ಹೆದರಿಸಿದರು. ಇನ್ನು ಕೆಲವರು ದ್ವಿಜನಲ್ಲದವನು ದೇವಿಯನ್ನು ಆವಾಹಿಸುವುದೇ ಶಕ್ಯವಲ್ಲೆಂದರು. ಈ ದೀಕ್ಷೆಯನ್ನು ಕೃಷ್ಣಪ್ಪನಿಗೆ ಕೊಟ್ಟಿರಬಹುದಾದ ಮಹೇಶ್ವರಯ್ಯ ಯಾವ ಜನ ಎಂಬ ಊಹಾಪೋಹಗಳಿಗೆ ಸಮಂಜಸ ಉತ್ತರವಿರಲಿಲ್ಲ. ಬಂಗಾಳದ ಶಕ್ತಿಪಂಥದ ಉಪಾಸನೆ ಇದಾದಲ್ಲಿ ಕೃಷ್ಣಪ್ಪನಿಗೂ ಉಳಿದವರಿಗೂ ಕೆಡುಕು ಕಟ್ಟಿಟ್ಟದ್ದೆ ಎಂದ ಮಂತ್ರಗಳ ಅಲ್ಪ ಸ್ವಲ್ಪ ಪರಿಚಯವಿದ್ದ ಗುಮಾಸ್ತನೊಬ್ಬ. ರಂಗಪ್ಪನ ಜೊತೆ ಬಂದು, ಹೊರಗೆ ನಿಂತು ಮಂತ್ರ ಕೇಳಿಸಿಕೊಂಡು ಅರ್ಥಗರ್ಭಿತವಾಗಿ ಇದು ತಾಂತ್ರಿಕ ಉಪಾಸನೆ ಎಂದು ತಲೆಯಾಡಿಸಿದ. ರಂಗಪ್ಪ ಇದರ ನಿವಾರಣೆಗೆ ಉಪಾಯವೇನೆಂದು ಕೈಮುಗಿದು ಬೇಡಿದ. ‘ಇದೇ – ನೋಡಿ ಹೇಳ್ತೀನಿ. ಆವಾಹನೆ ಮಾಡಿದ ಮೇಲೆ ಸರಿಯಾದ ವಿಸರ್ಜನೆಯೂ ಆಗಬೇಕು. ಈ ಮಾಟ ಮಂತ್ರಗಳು ನೋಡಿ ಅದಕ್ಕೆ ಕೈ ಹಾಕಿದವರನ್ನೆ ನುಂಗಿ ಬಿಡುತ್ತವೆ’ ಎಂದ. ಆತ ನಿಜವಾಗಿ ಹೆದರಿದಂತೆ ಕಂಡು ರಂಗಪ್ಪ ಕಂಗಾಲಾದ.

ಕೃಷ್ಣಪ್ಪ ನಿದ್ದೆಯನ್ನೂ ಮಾಡುತ್ತಿರಲಿಲ್ಲ. ದಿನಕ್ಕೆ ಮೂರು ಸಾರಿ ಬಾವಿಯಿಂದ ನೀರು ಸೇದಿ ತಲೆ ಮೇಲೆ ಸುರಿದುಕೊಂಡು ಕೂತುಬಿಡುತ್ತಿದ್ದ. ಗಟ್ಟಿಯಾಗಿ ಮಂತ್ರಗಳನ್ನು ಹಗಲು ರಾತ್ರೆ ಓದುತ್ತಲೆ ಇರುತ್ತಿದ್ದ. ನಿದ್ದೆ ಮಾಡುತ್ತಿರಲಿಲ್ಲ. ದೇವಿಗೆ ನೈವೇದ್ಯ ಮಾಡಿದ ಪಾಯಾಸವನ್ನು ಚೂರು ತಿನ್ನುತ್ತಿದ್ದ – ಅಷ್ಟೆ. ರಂಗಪ್ಪ ಪ್ರತಿದಿನ ಬೆಳಿಗ್ಗೆ ಹೋಗಿ ಒಂದು ಬುಟ್ಟಿ ತುಂಬ ಹೂವು ತರುತ್ತಿದ್ದ – ದೇವಿಗೆ ಪ್ರಿಯವಾದ ದಾಸವಾಳ ಹೂವಿಗಾಗಿ ನಾಲ್ಕು ಮೈಲಿ ಹೋಗಿ ಬರುತ್ತಿದ್ದ. ಇಡೀ ಮನೆ ಕೃಷ್ಣಪ್ಪ ಹೇಳಿದಂತೆ ಮೂರು ದಿನ ನಡೆದುಕೊಂಡಿತು.

ದೈವಾರಾಧನೆಯನ್ನು ಬುದ್ಧಿಪೂರ್ವಕವಾಗಿ ನಿರಾಕರಿಸುವ ಕೃಷ್ಣಪ್ಪನಿಗೆ ಈಗಲೂ ಆಗ ತಾನು ಪಡೆದ ಸ್ವಚ್ಛಂದ ಸ್ಥಿತಿ ರಹಸ್ಯಮಯವಾಗಿ ಕಾಣುತ್ತದೆ. ಮೂರು ದಿನ ಹೀಗೆ ದೇವಿ ಪೂಜೆ ಮಾಡಿದ ಮೇಲೆ ತನ್ನ ಮರ್ತ್ಯ ಶರೀರಕ್ಕಿಂತ ತಾನು ಬೇರೆ ಎನ್ನಿಸಿತಂತೆ. ಅನ್ನಿಸಿದ್ದೇ ಪೂಜೆಯನ್ನು ಬಿಟ್ಟು ಎದ್ದು, ತೊಟ್ಟ ಕೌಪೀನವನ್ನು ಬಿಚ್ಚಿ ಹಾಕಿ ಹೊರಬಂದನಂತೆ. ಬೆತ್ತಲೆಯಾಗಿ ಬೀದಿಯಲ್ಲಿ ನಡೆದನಂತೆ. ಆಗ ಅರ್ಧ ಭಯ, ಅರ್ಧ ಗೌರವಗಳಲ್ಲಿ ಜನ ತನ್ನನ್ನು ನೋಡುವಾಗ ಅವನ ಉನ್ಮಾದ ಹೆಚ್ಚಾಗಿ ಊರಿನ ತುದಿಯಲ್ಲಿದ್ದ ಗಣಪತಿ ಕಟ್ಟೆಯ ಮೇಲೆ ಹೋಗಿ ಕೂತು ಬಿಟ್ಟನಂತೆ.

ಮುಂದಿನದು ಕೃಷ್ಣಪ್ಪನಿಗೆ ನೆನಪಿಲ್ಲ. ಮಹೇಶ್ವರಯ್ಯ ಎಲ್ಲಿಂದ ಬಂದರೋ, ತನ್ನನ್ನು ಒಯ್ದು ಏನು ಚಿಕಿತ್ಸೆ ಮಾಡಿಸಿದರೋ – ಕೃಷ್ಣಪ್ಪ ಅಂತೂ ಕೊನೆಗೆ ಸರಿಹೋದ.

ಇದು ಹುಚ್ಚಾದರೆ ಕೊನೆಯಲ್ಲಿ ಎದುರು ನೋಡುತ್ತ ಮಲಗಿರುವ ಕೃಷ್ಣಪ್ಪನಿಗೆ ಇಂಥ ಉನ್ಮಾದ ಈಗಲೂ

ಶಕ್ಯವಾಗಿದೆಯೆಂದೇ  ಹೇಳಬೇಕು. ಅವನನ್ನು ತಿರಸ್ಕಾರದಿಂದ ನೋಡುವುದು ಯಾರಿಗೂ ಸಾಧ್ಯವಿಲ್ಲ. ಅವನ ಹೆಸರೂ ಕೂಡ ಅವನ ಮಿತಿಯನ್ನು ಸಾರುವಂತಿತ್ತಲ್ಲವೇ? ರಿಜಿಸ್ಟರಿನಲ್ಲಿ ಅವನ ಹೆಸರು ಕೃಷ್ಣಪ್ಪಗೌಡ. 'ಕೃಷ್ಣಪ್ಪಗೌಡ' ಎಂದರೆ ಸಲಿಗೆಯನ್ನೂ, ಅವನು ಶೂದ್ರ ಎಂಬುದನ್ನೂ ಸೂಚಿಸುವಂತಿತ್ತಾದ್ದರಿಂದ ಅವನನ್ನು ಹೇಗೆ ಕರೆಯಬೇಕೆಂಬುದೇ ಅವನ ಉಪಾಧ್ಯಾಯರಿಗೆ ಸಮಸ್ಯೆಯಾಗುತ್ತಿತ್ತು. ಕೃಷ್ಣಪ್ಪ ಎಂದರೆ ತೀರ ಸಲಿಗೆಯಾಗುತ್ತಿತ್ತು. ಹಾಗಾಗಿ ಎಲ್ಲರೂ ಆತನಿಗೊಂದು ಹೆಸರೇ ಇಲ್ಲವೆನ್ನುವಂತೆ 'ಗೌಡರೇ' ಎಂದು ಕರೆಯುವುದು.

ಅವನು ತನ್ನ ಕ್ಷುದ್ರತೆಯನ್ನು ಹೀಗೇ ಹಠಾತ್ತನೆ ಮೀರಿ ಎಲ್ಲರಿಗೂ ದಂಗು ಬಡಿಸಿ ಬಿಡುತ್ತಿದ್ದು, ಒಮ್ಮೆ ರಾಜ್ಯಪಾಲರ ಭಾಷಣದಲ್ಲಿ ದೇಶದ ಕ್ಷಾಮ ಪರಿಸ್ಥಿತಿ ಬಗ್ಗೆ ಯಾವ ಕಾಳಜಿಯೂ ವ್ಯಕ್ತವಾಗಿಲ್ಲವೆಂದು ಕೋಪೋದ್ರಿಕ್ತನಾಗಿ, ಭಾಷಣದ ಪ್ರತಿಯನ್ನು ನೆಲದ ಮೇಲೆ ಹಾಕಿ, ಕಾಲಿನಿಂದ ಮೆಟ್ಟಿ ನಿಂತ ಅವನ ಉಗ್ರಮೂರ್ತಿಯನ್ನು ಉಳಿದ ಜನಪ್ರತಿನಿಧಿಗಳು ಒಂದು ನಿಮಿಷ ಏನು ಮಾಡುವುದು ತಿಳಿಯದೇ ಎವೆಯಿಕ್ಕದೆ ನೋಡಿದ್ದರು. ನಂತರ ಸಭೆಗೆ ಅವಮಾನ ಇತ್ಯಾದಿ ಕೂಗಾಡಿ ಅವನನ್ನು ಹೊರಗೆ ಹಾಕಿದ್ದರು. ಖದೀಮರಿಗೆ ಮಾತ್ರ ಸೌಜನ್ಯ ಅಗತ್ಯ ಎಂದು ಕೃಷ್ಣಪ್ಪನ ನಿಲುವು. ಆದರೆ ತನಗೆ ಪರಿಚಿತನೊಬ್ಬ ವೈರಿಯಾಗಿರಲಿ, ಅವನು ಖಾಹಿಲೆಯಿಂದ ಮಲಗಿದ್ದಾನೆಂದು ಗೊತ್ತಾದರೆ ಹಣ್ಣು ಕಟ್ಟಿಸಿಕೊಂಡು ಹೋಗಿ ಅವನನ್ನು ನೋಡುತ್ತಿದ್ದ – ಹೀಗೆ ಕೃಷ್ಣಪ್ಪ ಬಂದು ನೋಡಿದರೆ ಅತ್ಯಂತ ಹರ್ಷತರಾಗಿ ಬಿಡುತ್ತಿದ್ದರು.

ಒಂದು ಬೆಳಿಗ್ಗೆ ಕೃಷ್ಣಪ್ಪನಿಗೆ ಉಚ್ಚೆಗೆ ಅವಸರವಾಯಿತು. ಆದರೆ ಏಳಲಾರ. 'ಸೀತಾ, ಸೀತಾ' ಎಂದು ಹೆಂಡತಿಯನ್ನು ಪ್ಯಾನ್‌ಕೊಡಲು ಕೂಗಿದ. ಅವಳು ಸ್ನಾನ ಮಾಡುತ್ತಿದ್ದಿರಬೇಕು. ದುರ್ಬಲವಾಗಿದ್ದ ದೇಹವಲ್ಲವೇ, ತಡೆಯಲಾರದೆ ಮಲಗಿದ್ದಲ್ಲೆ ಉಚ್ಚೆ ಮಾಡಿಕೊಂಡ. ಅವಳು ಸ್ನಾನ ಮುಗಿಸಿಕೊಂಡು ಬಂದು ಖಿನ್ನವಾಗಿದ್ದ ಅವನ ಮುಖ ಕಂಡು 'ಏನು'? ಅಂದಳು. ಕೃಷ್ಣಪ್ಪ ಹೇಳಿಕೊಳ್ಳದಿದ್ದರೂ ವಾಸನೆಯಿಂದ ಆಕೆಗೆ ತಿಳಿಯಿತು. ಇದರಿಂದ ಆಕೆಗೆ ಸಂತೋಷವಾಗಿರಬೇಕೆಂದು ಊಹಿಸಿ ಕೃಷ್ಣಪ್ಪನಿಗೆ ಕೋಪ ಬಂತು. ಹೆಂಡತಿ ಲಗುಬಗೆಯಿಂದ ಬೇರೆ ಹಾಸಿಗೆಗೆ ಅವನನ್ನು ಎತ್ತಿ ವರ್ಗಾಯಿಸುತ್ತ 'ನನ್ನನ್ನು ಕಂಡರೆ ಸಿಡಿಮಿಡಿ ಅಂತೀರಲ್ಲ – ಬೇರೆ ಯಾರು ನಿಮ್ಮ ಉಚ್ಚೆ ಹೇಲು ಬಳೀತಿದ್ದರು ಹೇಳಿ? ನಿಮಗಾಗಿ ಕಾದಿಕೊಂಡಿದ್ದಳು ಅಂತೀರಲ್ಲ, ಆ ಆಕಿ ಈ ಕೆಲಸ ಮಾಡುತ್ತಿದ್ದಳ? ಅಥವಾ ಆ ಲೂಸಿಯೋ ಪೂಸಿಯೋ ಇದ್ದಳಂತಲ್ಲ ಅವಳು ಮಾಡ್ತಿದ್ದಳ?' ಹೆಂಡತಿ ರಮಿಸಲು ಆಡಿದ ಮಾತೆಂದು ತಿಳಿದು ಕೃಷ್ಣಪ್ಪ ಒಳಗಿಂದೊಳಗೆ ಇನ್ನಷ್ಟು ಉರಿದ. ಈ ಹೆಂಗಸು ತನ್ನ ಸೇವೆಯಲ್ಲಿ ಕೊನೆಗೂ ತನ್ನನ್ನು ಗೆಲ್ಲುತ್ತಿದೆ ಎನ್ನಿಸಿತು. ಗೌರಿ ದೇಶಪಾಂಡೆ ಮತ್ತು ಲೂಸಿನಾರ ವಿಷಯವನ್ನು ಹೆಂಡತಿಗೆ ಹೇಳಿದವನೂ ಕೃಷ್ಣಪ್ಪನೆ. ಅಂಥ ಸಂಗತಿಗಳನ್ನು ಹೇಳಿ ಅವಳ ಸಣ್ಣತನ ಗೆಲ್ಲಲು ಅವನು ಪ್ರಯತ್ನಿಸಿದ್ದ. ಅವನು ಮಾತನಾಡುವಾಗ ಅವಳು ಹಾ ಹೂ ಅನ್ನುವವಳಲ್ಲ. 'ಏನೊ ನಂಗೆದಲ್ಲ ತಿಳೀದು. ನಿಮ್ಮ ಮಧ್ಯಾಹ್ನದ ಔಸ್ತಿ ತಗೊಂಡ್ರ' ಎನ್ನುತ್ತಾಳೆ. ಅಥವಾ ಪಕ್ಕದ ಮನೆ ಹೆಂಗಸು ಮ್ಯಾಟನಿಗೆ ಕರೆದಿದಾರೆ ಹೋಗಿ ಬರ್ತೇನೆಅನ್ನುತ್ತಾಳೆ. ಗೃಹಕೃತ್ಯದ ನಿತ್ಯದ ಉಪದ್ವ್ಯಾಪಗಳು, ಹೆಚ್ಚೆಂದರೆ ಬ್ಯಾಂಕಿನ ಉಳಿದ ಕೆಲಸಗಾರರ ಮದುವೆ, ಮುಂಜಿ, ಮಕ್ಕಳು, ಬಾಣಂತನ ಇತ್ಯಾದಿ ಸಂಗತಿಗಳು ಇಷ್ಟೇ ಅವಳ ಪ್ರಪಂಚ. ಇವಳ ಜೊತೆ ಕೃಷ್ಣಪ್ಪ ಮದುವೆಯಾದ ವರ್ಷ ಒಬ್ಬ ಮಗಳನ್ನು ಪಡೆದಿದ್ದ ಅಷ್ಟೇ. ಆಮೇಲೆ ದೇಹ ಸಂಬಂಧವನ್ನೂ ಇಟ್ಟುಕೊಳ್ಳಲಾರದೆ ಹೋಗಿದ್ದ. ಆದರೆ ಈಗ ಅವನ ಮೈ ತೊಳೆಯುವುದರಿಂದ ಹಿಡಿದು, ಉಚ್ಚೆ ಹೇಲು ಎತ್ತುವವಳೂ ಅವಳೆ. ಅವಳು ಗೆಲ್ಲುತ್ತಿದ್ದಳು ಎಂದು ಕೃಷ್ಣಪ್ಪನಿಗೆ ಗೊತ್ತಾಗಿತ್ತು. ತಾನು ಕ್ರೂರವಾಗಿ ನಡೆದುಕೊಂಡಾಗ ಈಚೆಗೆ ಅವಳು ಶಾಂತವಾಗಿ ಸಹಿಸಿಕೊಂಡಿರುವುದನ್ನು ಕಂಡಾಗಲಂತೂ ಕೃಷ್ಣಪ್ಪನಿಗೆ ತನ್ನ ವ್ಯಕ್ತಿತ್ವವೇ ಪೊಳ್ಳಾಗಿಬಿಡುತ್ತಿದೆ ಎಂದು

ಭಯವಾಗುತ್ತಿತ್ತು.

ಪ್ರಾರಂಭದಿಂದಲೇ ಅವಳು ಗೆದ್ದಿದ್ದಳು. ಇಲ್ಲದಿದ್ದಲ್ಲಿ ಲೂಸಿನಾ ಮತ್ತು ಗೌರಿಯರ ಕತೆಯನ್ನು ಹೆಂಡತಿಗೆ ಅವನು ಹೇಳಿ ಅವಳ ಗೌರವ ಸಂಪಾದಿಸಲು ಪ್ರಯತ್ನ ಪಡಬೇಕಾಗಿರಲಿಲ್ಲ. ಹೆಂಡತಿಯನ್ನು ಸಂಭೋಗಿಸುವ ಮುಂಚೆ ಈ ತನ್ನ ಮೈ ಈ ತನ್ನ ಮನಸ್ಸು ಸಾಮಾನ್ಯವಾದ್ದಲ್ಲ ಎಂದು ಅವಳಿಗೆ ಅನ್ನಿಸುವಂತೆ ಮಾಡುವ ಕೃಷ್ಣಪ್ಪನ ಉಪಾಯಗಳು ಸೀತೆಯ ದಡ್ಡತನದಿಂದಾಗಿ ಅವನಿಗೇ ಹಾಸ್ಯಾಸ್ಪದವಾಗಿ ಕಂಡು ಬಿಡುತ್ತಿದ್ದವು. ಸಾವಿತ್ರಮ್ಮ ತಾನು ಬರೆಯುತ್ತಿದ್ದ ದಿನಚರಿ ಸುಟ್ಟಿದ್ದನ್ನು ಹೇಳಿದಾಗ 'ದಿನಚರಿಯಲ್ಲೇನು ಮಹಾ ಇರೋಕ್ಕೆ ಸಾಧ್ಯ' ಎಂದು ಅವಳು ಆಶ್ಚರ್ಯಪಟ್ಟಿದ್ದಳು. ನಿಧಾನವಾಗಿ ಕಚ್ಚೆ ಕಟ್ಟಿದ ಪಂಚೆ ಅಂಗಿಗಳನ್ನು ಬಿಚ್ಚುತ್ತ ಅವನು ಆಡುತ್ತಿದ್ದ ಮಾತುಗಳಿಂದ ಬೋರಾದ ಸೀತೆ, 'ಬೇಗ ಬನ್ನಿ. ಹೆಚ್ಚು ಹೊತ್ತು ಸತಾಯಿಸಬೇಡಿ ನನ್ನ. ಬೆಳಿಗ್ಗೆ ಒಂಬತ್ತು ಗಂಟೆಗೇ ಬ್ಯಾಂಕಿಗೆ ಹೋಗಬೇಕಲ್ಲ' ಎಂದು ರಮಿಸುವಂತೆ ನಕ್ಕಾಗ ಕೃಷ್ಣಪ್ಪನಿಗೆ ಅವಳ ಮೇಳಿನ ಆಸೆಯೇ ಬತ್ತಿಬಿಡುತ್ತಿತ್ತು. ಮೂಲದಲ್ಲಿ ಇವಳ ಮಟ್ಟದವನೇ ನಾನು ಇರಬೇಕು. ಇಲ್ಲದಿದ್ದಲ್ಲಿ ಇವಳನ್ನು ಮದುವೆಯಾಗುತ್ತಿದ್ದೆನೆ? ನನ್ನ ನಿಜವಾದ ಮಟ್ಟ ನಾನು ಮುಟ್ಟಿದೆ ಎಂದು ಖಿನ್ನವಾಗಿ ಮಲಗುತ್ತಿದ್ದ. ಅಥವಾ ಅವಳ ಸಂಗ ಮಾಡಬೇಕೆನ್ನಿಸಿದಾಗ ಅದಕ್ಕೆ ಮುಂಚೆ ಚೆನ್ನಾಗಿ ಕುಡಿದು ಬಿಡುತ್ತಿದ್ದ.

* * *

ಕೃಷ್ಣಪ್ಪ ಬಿ.ಎ. ಓದುವಾಗ ಕಾಲೇಜಿನ ಕೊನೆ ವರ್ಷದಲ್ಲಿ ಅವನ ಸಹಪಾಠಿಯಾಗಿದ್ದ ಗೌರಿ ದೇಶಪಾಂಡೆ ಜೊತೆ ಅವನ ಸಖ್ಯ ಶುರುವಾಯಿತು. ಸ್ಕೂಲಿಗೆ ಲೇಟಾಗಿ ಸೇರಿದ್ದರಿಂದ ಕೃಷ್ಣಪ್ಪ ಅವಳಿಗಿಂತ ಏಳೆಂಟು ವರ್ಷಗಳಾದರೂ ಹಿರಿಯ. ನಲವತ್ತೆರಡು, ನಲವತ್ತೇಳರ ಚಳುವಳಿಗಳಲ್ಲಿ ಕೃಷ್ಣಪ್ಪ ವಿದ್ಯಾರ್ಥಿ ನಾಯಕನಾಗಿದ್ದವನಾದ್ದರಿಂದ ಹುಡುಗಿಯರಿಗೆಲ್ಲ ಅವನೊಂದು ಲೆಜೆಂಡು. ಅವನ ಸಿಟ್ಟು, ಗರ್ವ, ಅವನಿಗೆ ಹುಚ್ಚು ಹಿಡಿದ ಕ್ರಮ ಇತ್ಯಾದಿಗಳನ್ನು ತಿಳಿದಿದ್ದ ಹುಡುಗಿಯರಲ್ಲಿ ಸೂಕ್ಷ್ಮ ಮನಸ್ಸಿನವರು ಅವನನ್ನು ತಮ್ಮ ಅಧ್ಯಾಪಕರಿಗಿಂತಲೂ ಹೆಚ್ಚಾಗಿ ಗೌರವಿಸುತ್ತಿದ್ದರು. ಅವನು ಕ್ಲಾಸಿಗೆ ಬರುವುದೇ ಕಡಿಮೆ. ಬಂದಾಗ ಅಧ್ಯಾಪಕರೂ ತಮ್ಮ ಚಿಲ್ಲರೆ ಹಾಸ್ಯಗಳನ್ನು ಮಾಡದೆ ಗಂಭೀರವಾಗಿ ಪಾಠ ಮಾಡುತ್ತಿದ್ದರು. ಪರೀಕ್ಷೆ ಗಿರೀಕ್ಷೆಗಳೆಂದು ತಲೆಕೆಡಿಸಿಕೊಳ್ಳದ ಕೃಷ್ಣಪ್ಪ ಅಸಮಾನ್ಯ ಬುದ್ಧಿಶಾಲಿ, ಸ್ವತಂತ್ರವಾಗಿ ಯೋಚಿಸುತ್ತಾನೆ, ವಯಸ್ಸಾದವ ಇತ್ಯಾದಿ ಕಾರಣಗಳಿಂದ ಅಧ್ಯಾಪಕರು ಅವನ ಬಗ್ಗೆ ಮುಜುಗರ ಪಡುತ್ತಿದ್ದರು.

ಕೃಷ್ಣಪ್ಪ ಕಗ್ರನೆಯ ಗಟ್ಟಿಮುಟ್ಟಾದ ಆಳು. ಶುಭ್ರವಾದ ಖಾದಿ ಪಂಚೆಯನ್ನುಟ್ಟು ಜುಬ್ಬ ತೊಟ್ಟು ಕಾಲೇಜಿಗೆ ಬರುತ್ತಿದ್ದ. ಈ ಬಿಳಿಯ ಬಟ್ಟೆಯಲ್ಲಿ ಅವನು ಮಾಟವಾಗಿ ಕಡೆದು ನಿಲ್ಲಿಸಿದ ಕಪ್ಪು ವಿಗ್ರಹದಂತೆ ಕಾಣುತ್ತಿದ್ದ. ಅವನ ಪ್ರಶಾಂತ ಮುಖ ದುರುಗುಟ್ಟಿ ನೋಡುವಾಗ ಮಾತ್ರ ಕ್ರೂರವಾಗಿ ಭಯ ಹುಟ್ಟಿಸುವಂತೆ ಇರುತ್ತಿತ್ತು. ಮಾತು ಮೃದು. ದಪ್ಪವಾದ ಹಾಡುಗಾರನ ಗಂಟಲು ಅವನದು. ಆಫ್ರಿಕಾದ ಪ್ರಿನ್ಸಎಂದು ಹುಡುಗಿಯರು ಅವನನ್ನು ಕರೆಯೋದು. 'ಪ್ರಿನ್ಸ್‌ಬಂದಿದ್ದಾನೆ ಕಣೆ ಇವತ್ತು' ಎಂದು ಅವನನ್ನು ಅಪರೂಪವಾಗಿ ಕಂಡಾಗ ಹುಡುಗಿಯರು ಗೆಲುವಾಗುತ್ತಿದ್ದರು.

ಗೌರಿ ದೇಶಪಾಂಡೆ ಕಾಲೇಜಿನಲ್ಲಿ ಹೆಸರಾದ ನರ್ತಕಿ, ಸಂಗೀತಗಾರ್ತಿ, ಕ್ಲಾಸಿನಲ್ಲಿ ಮೊದಲನೆಯವಳು. ಅವಳಿಗೆ

ಕೃಷ್ಣಪ್ಪನೆಂದರೆ ಇಷ್ಟವೆಂದು ಊಹಿಸಿದ್ದ ಜಾಣೆಯರು ಅವಳನ್ನು ರಾಧೆಯೆಂದು ಕಿಚಾಯಿಸುತ್ತಿದ್ದರು. ಎದುರಿಗಲ್ಲ - ಹಿಂದೆ. ಇದಕ್ಕೆ ಕಾರಣ ಗೌರಿ ಯಾರ ಜೊತೆಯೂ ಹೆಚ್ಚು ಬಳಸದೆ ಒಂಟಿಯಾಗಿರುತ್ತಿದ್ದುದು.

ಇದರಿಂದ ಉಳಿದ ಹುಡುಗಿಯರಿಗೆ ಆಶ್ಚರ್ಯವಾಗಲೂ ಕಾರಣವಾಗಿತ್ತು. ಗೌರಿಯ ತಾಯಿ ಗಂಡನನ್ನು ಬಿಟ್ಟು ಓಡಿ ಬಂದು ಅಡಿಕೆ ಮಂಡಿ ಸಾಹುಕಾರನಾದ ನಂಜಪ್ಪನ ಸೂಳೆಯಾಗಿ ಬದುಕುತ್ತಿದ್ದಾಳೆಂದು ಗೊತ್ತಿದ್ದೂ ಗೌರಿಯನ್ನು ನಿಕೃಷ್ಟವಾಗಿ ಕಾಣುವುದು ಸಾಧ್ಯವಿರಲಿಲ್ಲ - ಗೌರಿ ಅಷ್ಟು ಗಂಭೀರವಾಗಿರುವವಳು. ಸಾಹುಕಾರ ನಂಜಪ್ಪ ಗೌರಿಯ ತಾಯಿ ಅನಸೂಯಾ ಬಾಯಿಯನ್ನು ಬಂಗಲೆ ಕಟ್ಟಿ ಇರಿಸಿದ್ದ. ಅವಳ ಓಡಾಟಕ್ಕೆಂದು ಪ್ರತ್ಯೇಕವಾಗಿ ಒಂದು ಕಾರ್ ಮತ್ತು ಡ್ರೈವರನ್ನೂ ಇಟ್ಟಿದ್ದ. ಊಟಿಯ ಗುಲಾಬಿಗಳನ್ನು ಬೆಳೆಸಿದ್ದ ವಿಶಾಲವಾದ ಕಾಂಪೌಂಡಿನ ಆಕೆಯ ಮನೆ ಊರಲ್ಲಿ ಪ್ರಸಿದ್ಧವಾದದ್ದು. ಅನುಸೂಯಾ ಬಾಯಿಯನ್ನು ಹೊರಗೆ ನೋಡಿದವರೇ ಕಡಿಮೆ, ಅವಳನ್ನು ನೋಡದವರೂ ಅವಳ ಸೌಂದರ್ಯವನ್ನು ಹೊಗಳುತ್ತಿದ್ದರು. ಗೌರಿಯೇ ಇಷ್ಟು ಸುಂದರಿಯಾಗಿರಬೇಕಾದರೆ ಅವಳ ತಾಯಿಯೆಷ್ಟು ಇರಬೇಕೆಂದು ಊಹಿಸುತ್ತಿದ್ದರು.

ಅನಸೂಯಾಬಾಯಿ ಕಾರಿನಲ್ಲಿ ಊರಿನ ಒಳಗೆ ಬರುತ್ತಿರಲಿಲ್ಲ. ಊರ ಹೊರಗಿದ್ದ ಬಂಗಲೆಯಿಂದ ಕೆಮ್ಮಣ್ಣುಗುಂಡಿಗೋ, ಮಂಗಳೂರಿಗೋ ಹೋಗಲು ಮಾತ್ರ ಅವಳು ಕಾರನ್ನು ಬಳಸುವುದು. ಗೌರಿ ದೇಶಪಾಂಡೆ ಈ ಕಾರಲ್ಲೇ ನಿತ್ಯ ಕಾಲೇಜಿಗೆ ಬಂದು ಹೋಗುವುದು. ಇದರಿಂದ ಉಳಿದ ಹುಡುಗಿಯರಿಗೆ ಅವಳ ಬಗ್ಗೆ ಇನ್ನಷ್ಟು ಅಸೂಯೆ. ದೇಶಪಾಂಡೆ ಎಂಬ ಅವಳ ಕೊನೆ ಹೆಸರಿನಿಂದಾಗಿ ಅವಳಿಗೊಬ್ಬ ಆ ಹೆಸರಿನ ತಂದೆಯಿರಬೇಕೆಂದೂ, ಅಪ್ಪನ ಜೊತೆಗೆ ಬದುಕದೇ ಯಾವನೋ ತಾಯಿಯ ಮಿಂಡಿನ ಜೊತೆ ಬದುಕುವ ಗೌರಿ ಎಂಥ ನತದೃಷ್ಟೆಯೆಂದೂ, ಇಷ್ಟಿದ್ದೂ ಸಭೆಯಲ್ಲಿ ಕುಣಿಯುವ ಹಾಡುವ ಹುಡುಗಿ ನಾಚಿಕೆಗೆಟ್ಟವಳೆಂದೂ ಹುಡುಗಿಯರೆಲ್ಲ ಆಡಿಕೊಳ್ಳುವರು. ಜೊತೆಗೆ ಗೌರಿಯ ವರ್ತನೆಯಿಂದ ತಬ್ಬಿಬ್ಬಾಗುವರು.

ಈ ಹುಡುಗಿಯರ ಜಗತ್ತಿಗೂ ತನಗೂ ಸಂಬಂಧವೇ ಇಲ್ಲವೆನ್ನುವಂತೆ ಗೌರಿ ಇರುವವಳು. ಮೈಮೇಲೆ ಒಡವೆಯನ್ನೂ ಧರಿಸದೆ ಬಿಳಿಯ ಸೀರೆಯುಟ್ಟು, ಬಿಳಿ ಕುಪ್ಪಸ ತೊಟ್ಟು, ತನ್ನ ಉದ್ದನೆಯ ಕಪ್ಪು ಜಡೆಗೆ ಒಂದು ಬಿಳಿ ಗುಲಾಬಿ ಸಿಕ್ಕಿಸಿಕೊಂಡು ಅವಳು ಗಂಭೀರವಾಗಿ ಕ್ಲಾಸಲ್ಲಿ ಕೂರುವಳು. ಲೇಡಿಸ್‌ರೂಮಿನಲ್ಲಿದ್ದಾಗ ಏನಾದರೊಂದು ಪುಸ್ತಕ ಹಿಡಿದು ಓದುತ್ತಿರುವಳು. ಸಾಮಾನ್ಯವಾಗಿ ಹುಡುಗಿಯರು ಪರಸ್ಪರ ಏಕ ವಚನದಲ್ಲಿ ಮಾತನಾಡಿಕೊಂಡರೂ ತನ್ನನ್ನು ಏಕವಚನದಲ್ಲಿ ಮಾತನಾಡಿಸಭಂದವರನ್ನೂ ಮೃದುವಾಗಿ ಬಹು ವಚನದಲ್ಲಿ ಸಂಭೋಧಿಸಿ ತನ್ನ ದೂರವನ್ನು ಕಾಯ್ದುಕೊಳ್ಳುವಳು. ಕೃಷ್ಣಪ್ಪ ಇವಳನ್ನು ಎಂದೂ ಮಾತನಾಡಿಸದಿದ್ದರೂ ತನ್ನ ಸರೀಕಳು ಎಂಬಂತೆ ಅವಳನ್ನು ನೋಡುವನು.

ಒಂದು ಸಂಜೆ ಕೃಷ್ಣಪ್ಪ ಒಂಟಿಯಾಗಿ ಕಾಲೇಜು ಕಡೆ ವಾಕಿಂಗ್‌ಬಂದ. ಫುಟ್‌ಬಾಲ್‌ಟೀಮೊಂದು ಆಟ ಮುಗಿಸಿಕೊಂಡು ಮನೆ ಕಡೆ ಹೊರಟಿತ್ತು. ಈ ಟೀಮಿನ ಕ್ಯಾಪ್ಟನ್‌ಆಗಿದ್ದ ಧಾಂಡಿಗನೊಬ್ಬ ತನ್ನ ತಂಡವನ್ನು ಬೆನ್ನ ಹಿಂದೆ ನಿಲ್ಲಿಸಿಕೊಂಡು ಗೋಡೆಯ ಮೇಲೇನೊ ಬರೆಯುತ್ತಿದ್ದ. ಎಲ್ಲರೂ ನಗುತ್ತಿದ್ದುದು ಕಂಡು ಕೃಷ್ಣಪ್ಪನ ಗಮನ ಆ ಕಡೆ ಹೋಯಿತು. ಧಾಂಡಿಗನ ಹೆಸರು ರಾಮು - ಕಾಲೇಜಿನ ಪುಂಡನೆಂದು ಪ್ರಸಿದ್ಧ. ಅವನಿಗೂ ಹೆಚ್ಚು ಕಡಿಮೆ ಕೃಷ್ಣಪ್ಪನಷ್ಟೇ ವಯಸ್ಸಾದ್ದರಿಂದ, ಅವನ ತಂದೆ ಊರಿನ ದೊಡ್ಡ ರೈಸ್‌ಮಿಲ್‌ಮಾಲೀಕನಾಗಿದ್ದರಿಂದ ಕೃಷ್ಣಪ್ಪನಿಗೆ ಸಿಗುತ್ತಿದ್ದ ಗೌರವ ಕಂಡರೆ ಅವನಿಗೆ ಅಸೂಯೆ. ಕೃಷ್ಣಪ್ಪ ಇಂಥ ವಿದ್ಯಾರ್ಥಿ ಪುಂಡರ ಜತೆ ಬೆರೆಯುತ್ತಿರಲಿಲ್ಲ - ಅವರನ್ನು ಮುಖವೆತ್ತಿ ನೋಡುತ್ತಲೂ ಇರಲಿಲ್ಲ. ತನಗಿಲ್ಲಿ

ಸರೀಕರು ಯಾರೂ ಇಲ್ಲವೆನ್ನುವಂತೆಯೇ ಅವನು ಕಾಲೇಜಿನಲ್ಲಿ ನಡೆದುಕೊಳ್ಳುತ್ತಿದ್ದುದು. ಯಾರ ಜೊತೆಗೂ ಪೈಪೋಟಿ ಮಾಡದ ಕೃಷ್ಣಪ್ಪನ ಜೊತೆ ಹೇಗೆ ನಡೆದುಕೊಳ್ಳಬೇಕೆಂದು ಇಂಥ ವಿದ್ಯಾರ್ಥಿಗಳಿಗೆ ತಿಳಿಯದು.

ಅವನು ದೊಡ್ಡ ಅಕ್ಷರಗಳಲ್ಲಿ ಬರೆಯುತ್ತಿದ್ದುದನ್ನು ಓದಿದ ಕೃಷ್ಣಪ್ಪನಿಗೆ ಕೋಪದಿಂದ ಮೈ ಬಿಸಿಯಾಯಿತು. 'ಗೌರಿ ಸೂಳೆ ಮಗಳು. ಏ ಗೌರಿ ನಿನ್ನ ಮುತ್ತಿಗೆಷ್ಟು ಬೆಲೆ?' ಎಂಬ ತನ್ನ ವ್ಯಾಕ್ಯಗಳನ್ನು ಸವಿಯುತ್ತಿದ್ದ ನಿಂತಿದ್ದ ರಾಮುವಿನ ಬಳಿ ಹೋಗಿ ಕೃಷ್ಣಪ್ಪ, 'ನೀವು ಬರೆದದ್ದನ್ನು ಅಳಿಸಿ' ಎಂದ – ಅವನ ಗಂಭೀರ ದಪ್ಪ ಸ್ವರದಲ್ಲಿ.

ರಾಮುಗೆ ಒಂದು ಕ್ಷಣ ಏನು ಹೇಳಬೇಕೆಂದು ತಿಳಿಯಲಿಲ್ಲ. 'ಯಾರು ಬರೆದಿದ್ದು ಅಂತ ನಿಮಗೇನು ಗೊತ್ತರಿ?' ಎಂದ ಕ್ಷೀಣವಾಗಿ. ತಾನು ಬುದ್ಧಿವಂತಿಕೆಯ ಮಾತನ್ನಾಡಿಬಿಟ್ಟೆನೆಂದು ಅನುಯಾಯಿಗಳು ತಿಳಿಯಲಿ ಎಂದು ಹೀಯಾಳಿಸುವಂತೆ ನಕ್ಕ.

'ನೀನೇ ಬರೀತ ಇದ್ದದ್ದನ್ನ ನಾನು ನೋಡಿದೆ.' ಕೃಷ್ಣಪ್ಪ ತನ್ನ ಸಿಟ್ಟನ್ನು ಅದುಮಿ ಗಂಭೀರವಾಗಿ ಹೇಳಿದ.

ರಾಮು ಪೈಲ್ವಾನ್, ದೊಡ್ಡ ಮೀಸೆ ಬಿಟ್ಟಿದ್ದ, ಒಳಗಿಂದೊಳಗೆ ತಾನು ಕೃಷ್ಣಪ್ಪನಿಗೆ ಹತ್ತಿರದವನಾಗಬೇಕೆಂಬ ಅಸೂಹೆ ಇದ್ದಿರಬಹುದು. ಇನ್ನೊಬ್ಬ ಗಟ್ಟಿ ಕುಳದ ಜೊತೆ ಜಗಳವಾಡಿದ ಮೇಲೆ ಸಮಸಮದ ಗೆಳೆತನ ಪ್ರಾಪ್ತಿಯಾಗುತ್ತದೆಂಬುದನ್ನು ಅರಿತ ಅನುಭವಿ ಅವನು. ಆದರೆ ಕೃಷ್ಣಪ್ಪ ತನ್ನನ್ನು ನಿಕೃಷ್ಟವಾಗಿ ಕಾಣುತ್ತಿದ್ದಾನೆ ಹೊರತು ಒಂದು ಹೊಡೆದು ತಿರುಗಿ ಹೊಡೆತ ತಿಂದು ಆಪ್ತನಾಗುವುದಕ್ಕೆ ತಯ್ಯಾರಿದ್ದಂತೆ ಕಾಣಲಿಲ್ಲ. ರಾಮು ಕೆಣಕುವ ಧೈರ್ಯ ಮಾಡಿದ.

'ಅವಳೇನು ನಿಮ್ಮ ರಾಧೆಯೇನ್ರಿ?'

ಈಗಲಾದರೂ ತನ್ನನ್ನು ಕೃಷ್ಣಪ್ಪ ಹೊಡೆಯಬಹುದು. ಆಗ ಅವನ ಮೇಲೆ ಬಿದ್ದು ತನ್ನ ಮರ್ಯಾದೆ ಉಳಿಸಿಕೊಳ್ಳಬಹುದು ಎಂದು ರಾಮು ಬಗೆದಿದ್ದು ವ್ಯರ್ಥವಾಯಿತು. ಕೃಷ್ಣಪ್ಪ ಅಲ್ಲೇ ಇದ್ದ ನಲ್ಲಿಯಲ್ಲಿ ತನ್ನ ಕರ್ಚೀಪನ್ನು ಒದ್ದೆ ಮಾಡಿಕೊಂಡು ಬಂದು ಗೋಡೆಯ ಮೇಲೆ ಬರೆದದ್ದನ್ನು ಒರೆಸಲು ಪ್ರಾರಂಭಿಸಿದ. ರಾಮು ಕಾದುನಿಂತ – ಇನ್ನಷ್ಟು ಕೆಣಕಲು.

'ನಿಮಗೆ ಪುಕ್ಕಟೆ ಕೊಡ್ತಾಳೇಂತ ಕಾಣುತ್ತೆ' ಎಂದ. ಅವನ ಮಾತಿಗೆ ಸಂಗಡಿಗರು ಸಿಳ್ಳೆ ಹೊಡೆದರು. ಆದರೆ ಅವರು ಯಾರೂ ಇಲ್ಲವೇ ಇಲ್ಲ ಎಂಬಂತೆ ಕೃಷ್ಣಪ್ಪ ಅವರ ಕಡೆ ನೋಡದೆ ನಡದೇ ಬಿಟ್ಟ. ಇನ್ನೊಮ್ಮೆ ಬರೆಯಬಹುದೆಂದು ಅಷ್ಟು ದೂರ ಹೋದ ಮೇಲೆ ಅವನಿಗೆ ಅನುಮಾನವಾಯಿತು. ತಿರುಗಿ ನೋಡಬೇಕೆಂಬ ಆಸೆಯನ್ನು ಅದುಮಿಕೊಂಡ. ತನ್ನ ಸುತ್ತಲಿನ ಕ್ಷುದ್ರತೆಯನ್ನು ತಾನು ಗೆಲ್ಲುತ್ತಿಲ್ಲವೆ; ಹಾಗೇ ಗೌರಿಯೂ ಗೆಲ್ಲಲಿ ಎನ್ನಿಸಿತು.

ಮಾರನೇ ದಿನ ಗೋಡೆ ಬರಿದಾಗಿತ್ತಾದ್ದರಿಂದ ತಾನು ಗೆದ್ದಿದ್ದೇನೆ ಎಂದು ಕೃಷ್ಣಪ್ಪ ಅಂದುಕೊಂಡರೆ ಅದರ ಮಾರನೇ ದಿನ 'ಗೌರಿ ಕೃಷ್ಣಪ್ಪನಿಗೆ ಪುಕ್ಕಟೆ ಕೊಡುತ್ತಾಳೆ. ಕೃಷ್ಣಪ್ಪ ಗೌರಿಯ ತಲೆಹಿಡುಕ' ಇತ್ಯಾದಿ ಟಾರಿನಲ್ಲಿ ಕಾಣಿಸಿಕೊಂಡವು. ಇಡೀ

ಕಾಲೇಜಿನಲ್ಲಿ ಈ ಬಗ್ಗೆ ಗುಸುಗುಸು ಎದ್ದಿತ್ತು. ಕ್ಲಾಸುಗಳೆಲ್ಲ ಶುರುವಾದ ಮೇಲೆ ಟಾರಿನಿಂದ ಬರೆದದ್ದನ್ನು ಕೆತ್ತಿ ತೆಗೆದು ಜವಾನರು ಈ ಬರವಣಿಗೆಯನ್ನು ಗೋಡೆಯ ಮೇಲೆ ಇನ್ನಷ್ಟು ಆಳವಾಗಿ ಅಚ್ಚಿಸಿದ್ದರು. ಕೃಷ್ಣಪ್ಪ ತನಗಿದು ಸಂಬಂಧವಿಲ್ಲವೆನ್ನುವಂತೆ ಓಡಾಡುತ್ತ ಗೌರಿಯ ಮುಖ ನೋಡಿದ. ಅವಳಿಗೆ ಅದರಿಂದ ದುಃಖವಾಗಿದೆಯೆ ಎಂದು ಅನುಮಾನವಾಯಿತು. ಆದರೆ ಅವಳೂ ವಿಚಲಿತವಾದಂತೆ ಕಾಣಲಿಲ್ಲ. ಅವತ್ತು ಸಂಜೆ ಅವನೇ ಅವಳ ಮನೆಗೆ ಹೋಗಿ ಬೆಲ್ಒತ್ತಿದ.

ಹಾಡುತ್ತಿದ್ದ ಗೌರಿ ಹೊರಗೆ ಬಂದು ಕೃಷ್ಣಪ್ಪನನ್ನು ನೋಡಿ ಆದ ಸಂತೋಷ ತೋರಗೊಡದೆ ಒಳಗೆ ಕರೆದುಕೊಂಡು ಹೋಗಿ ಕೂರಿಸಿದಳು. ತೋರುಗಾಣಿಕೆಯಿಲ್ಲದೆ ಅವಳಲ್ಲಿ ಗುಪ್ತವಾಗಿ ಅರಳಿದ ಭಾವ ಗುರುತಿಸಿ ಉತ್ತೇಜಿತನಾದ ಕೃಷ್ಣಪ್ಪ ಕಾರ್ಪೆಟ್ಟನ್ನು ನೋಡುತ್ತ ನಿಧಾನವಾಗಿ ಹೇಳಿದ:

'ನನ್ನ ಸರೀಕರು ಈ ಕಾಲೇಜಿನಲ್ಲಿ ನೀವೊಬ್ಬರೆ ಅನ್ನೋದು ಇವತ್ತ ಖಾತ್ರಿಯಾಯ್ತು.'

ಕೃಷ್ಣಪ್ಪ ಗೌರಿಯ ಮುಖ ನೋಡದೆ ಗಾಜಿನ ಟೇಬಲ್, ಗೋಡೆಯ ಮೇಲಿನ ದೇವರ ಚಿತ್ರಗಳು, ತಂಬೂರಿ ಇತ್ಯಾದಿಗಳನ್ನು ಗಮನಿಸಲು ಪ್ರಯತ್ನಿಸಿದ. ದೊಡ್ಡ ಗಾಜಿನ ಕಿಟಕಿಯಾಚೆಗೆ ಅರಳಿದ ಗುಲಾಬಿ ಹೂಗಳು ಕಂಡವು. ತಾನು ಹೀಗೆ ಬಂದು ಹೀಗೆ ಮಾತಾಡಿ ಅಗ್ಗವಾಗಿ ಬಿಟ್ಟನೆಂದು ಅವನಿಗೆ ವಿಷಾದವಾಯಿತು.

'ನಾನು ಆಡಿದ್ದನ್ನು ಹಚ್ಚಿಕೋಬೇಡಿ. ಮಾತಾಡಿ ನಾನು ಚೀಪಾದೆ. ನಿಮ್ಮನ್ನೂ ಚೀಪ ಮಾಡಿದೆ' ಎಂದು ಎದ್ದ.

'ಇಲ್ಲ – ಕೂರಿ' ಎಂದು ಗೌರಿ ತಡವರಿಸುತ್ತ ಹೇಳಿದಳು. 'ನಿಜ – ನನ್ನ ತಾಯಿ ನನ್ನ ತಂದೇನ್ನ ನಾನು ಮಗುವಾಗಿದ್ದಾಗ ಬಿಟ್ಟು ಬಂದರು. ನಂಜಪ್ಪನವರು ಅವರನ್ನು ಇಟ್ಟುಕೊಂಡಿದ್ದಾರೆ. ನೋಡಿ, ಇವೆಲ್ಲ ಅವರದೇ ವಸ್ತುಗಳು' ಎಂದು ಎದ್ದು ನಿಂತಳು. 'ಇಷ್ಟು ತಿಳಿದ ಮೇಲೆ ನಿಮಗೆ ಹೇಗೆ ಅನ್ನಿಸ್ತ ಇದೆಯೊ ನನಗೆ ಗೊತ್ತಿಲ್ಲ' ಗೌರಿಯ ಮುಖ ತನ್ನ ಉದ್ವೇಗವನ್ನು ಬಚ್ಚಿಟ್ಟಿಕೊಳ್ಳಲು ಪ್ರಯತ್ನಿಸುತ್ತಿದ್ದಂತೆ ಕಂಡಿತು.

'ನಿಮಗೆ ಸಮಾಧಾನ ಹೇಳಲಿಕ್ಕೆ ನಾನು ಬಂದದ್ದಲ್ಲ. ನೀವೊಬ್ಬ ವಿಶಿಷ್ಟ ವ್ಯಕ್ತೀಂತ ತಿಳಿದು ನಿಮ್ಮನ್ನು ಗೌರವಿಸ್ತೀನಿ' ಎಂದು ಕೃಷ್ಣಪ್ಪ ಎದ್ದು ಒಂದು ಹೆಜ್ಜೆಯಿಟ್ಟ.

'ನನಗೆ ತಂದೆಯಾಗಿದ್ದೋರು ದೇಶಪಾಂಡೆ ಅಂತ. ಅವರೂ ನನ್ನ ತಾಯೀನ್ನ ಇಟ್ಟುಕೊಂಡಿದ್ದರು. ಬ್ಯಾಂಕಿನಲ್ಲಿ ದುಡ್ಡು ಕದ್ದು ಜೈಲಿಗೆ ಹೋದರು. ಗಂಡನಿಲ್ಲದೆ ನನ್ನ ಅಮ್ಮ ಬದುಕಲಾರರು. ಆದ್ದರಿಂದ.'

ಈಗ ಗೌರಿಯನ್ನು ದುರುಗುಟ್ಟಿ ನೋಡುತ್ತ ಕೃಷ್ಣಪ್ಪ ಹೇಳಿದ:

‘ನನ್ನ ನೀವು ಪರೀಕ್ಷೆ ಮಾಡ್ತಿದೀರಲ್ಲವೆ? ಹೀಗೆಲ್ಲ ಮಾಡೋದು ಚೀಪ್’

ಗೌರಿ ಬಾರ ಕಳೆದಂತಾಗಿ ನಕ್ಕುಬಿಟ್ಟಳು. ಹೀಗೆ ನಕ್ಕಾಗ ಅವಳು ತುಂಟು ಹುಡುಗಿಯಂತೆ ಕಂಡು ಕೃಷ್ಣಪ್ಪನಿಗೆ ಕಸಿವಿಸಿಯಾಯಿತು. ಒಂದೋ ನೀನು ನಿನ್ನ ಸುತ್ತಲಿನ ದಿನನಿತ್ಯದ ಕ್ಷುದ್ರತೆ ಗೆಲ್ಲುತ್ತಿ; ಅಥವಾ ಈ ಕ್ಷುದ್ರತೆಗೆ ತುತ್ತಾಗುತ್ತಿ – ಇದು ಬದುಕಿನ ನಿಯಮ ಎನ್ನುವ ಮಾತನ್ನು ಈ ಹುಡುಗಿಗೆ ಹೇಳಿ ತನ್ನ ಒಳಗನ್ನು ತೆರೆಯಬೇಕೆಂದಿದ್ದ ಕೃಷ್ಣಪ್ಪನಿಗೆ ಅವಳ ಸ್ವಭಾವದಲ್ಲಿದ್ದ ತುಂಟತನ ತಡೆಯಾಗಿ ಕಂಡು ನಿರಾಸೆಯಾಯಿತು. ಕೃಷ್ಣಪ್ಪನ ಮುಖದ ಮೇಲಿನ ಭಾವ ‘ನಾನು ನಿನಗೆ ಅಗಮ್ಯ’ ಎಂದು ಸೂಚಿಸಿದ್ದನ್ನು ಕಂಡು

‘ನೀವು ತುಂಬ ಅಹಂಕಾರಿಗಳು ಅಲ್ವ?’ ಎಂದಳು.

ಕೃಷ್ಣಪ್ಪ ಬೇಸರದಿಂದ ಮುಖ ತಿರುಗಿಸಿದ. ಹಣೆಯ ಮೇಲೆ ಕುಂಕುಮದ ಬದಲು ವಿಭೂತಿಯನ್ನಿಟ್ಟುಕೊಂಡು ತಾನು ಬರುವ ಮುಂಚೆ ಅವಳು ಹಾಡುತ್ತಿದ್ದಳು. ಈಗ ಸೊಂಟದ ಮೇಲೆ ಕೈಯನ್ನಿಟ್ಟು ತ್ರಿಭಂಗಿಯಲ್ಲಿ ನರ್ತಕಿಯಂತೆ ನಿಂತಿದ್ದಾಳೆ. ಅವಳು ತನ್ನನ್ನು ಗೆಲ್ಲಲು ಪ್ರಯತ್ನಿಸುತ್ತಿರಬಹುದು. ತನ್ನನ್ನು ರಮಿಸಲು ಸುಮ್ಮನೇ ಕೆಣಕುತ್ತಿದ್ದಾಳೊ ಅಥವಾ ಅದು ಗಂಭೀರವಾದ ಪ್ರಶ್ನೆಯೊ? ಅವಳು ತುಂಟಾಗಿ ಕೇಳಿದ್ದರೆ ತನ್ನ ಉತ್ತರ ಜಂಬಗಾರಿಕೆಯಾಗಿ ಬಿಡುತ್ತೆ. ಕೃಷ್ಣಪ್ಪ ಎತ್ತಲೋ ದುರುಗುಡತ್ತ ನಿಂತಿರುವುದು ಕಂಡು –

‘ತಮಾಷೆಗಲ್ಲ ನಾನು ಹೇಳಿದ್ದು. ನನ್ನ ಅಮ್ಮ ಒಳ್ಳೆಯವಳು. ನಂಜಪ್ಪನವರೂ ಒಳ್ಳೆಯವರು, ಆದರೆ ಯಾರಿಗೂ ನಿಲುಕದ ಹಾಗೆ ನಾನು ಇದ್ದು ಬಿಡಿತೀನಿ. ನಾನು ಅಳದೆ ಬಹಳ ವರ್ಷ ಆಯ್ತು. ಆದ್ದರಿಂದ ನಾನೂ ನಿಮ್ಮ ಹಾಗೇ ಅಹಂಕಾರಿ ಅನ್ನಿಸುತ್ತೆ’ ಎಂದಳು.

ಕೃಷ್ಣಪ್ಪನ ಮುಖ ಕಠಿಣವಾಗಿ ಅವನ ಕಣ್ಣುಗಳು ಕಿರಿದಾದವು.

‘ನನ್ನ ಅಮ್ಮನ ನೋಡತೀರ? – ಮೇಲಿದಾರೆ ಕರೀತೀನಿ’

ಗೌರಿ ಆತಿಥ್ಯ ಮಾಡುವವರ ಧಾಟಿಯಲ್ಲಿ ಕೇಳಿದಳು. ಜುಬ್ಬದ ಜೋಬುಗಳಲ್ಲಿ ಕೈಯಿಟ್ಟು, ನಿರ್ಭಾವದಿಂದ ಗೌರಿಯನ್ನು ನೋಡುತ್ತ,

‘ಬೇಡ ನನಗೇನು ಮಾತಡಬೇಕು ಗೊತ್ತಾಗಲ್ಲ. ಹಿಂಸೆಯಾಗಿ ಬಿಡ್ತದೆ’ ಅಂದು ಕೃಷ್ಣಪ್ಪ ಹೊರಟು ಹೋದ.

* * *

ಸೀದ ರೂಮಿಗೆ ಹೋಗಿ ಒಂದು ಕಾಗದ ಬರೆದ.

‘ಪ್ರಿಯ ಶ್ರೀಮತಿ ಗೌರಿ ದೇಶಪಾಂಡೆ,

ನೀವು ನನ್ನ ಮೇಲೆ ಪರಿಣಾಮ ಮಾಡಲೆಂದು ಮಾತಾಡಿದಿರಿ ಎಂದು ಅನುಮಾನವಾಗಿ ನಾನು ಉತ್ತರ ಕೊಡಲಿಲ್ಲ. ನಾವು ಒಂಟಿಯಾಗಿದ್ದಾಗ ನಮಗೇ ಆಡಿಕೊಳ್ಳದ ಮಾತುಗಳನ್ನು ಬೇರೊಬ್ಬರಿಗೆ ಯಾಕೆ ಹೇಳಬೇಕು ? ಎದುರೊಬ್ಬರು ಇದ್ದಾರೆ ಎಂಬ ಭಾವನೆಯಿಂದ ಹುಟ್ಟುವ ಮಾತುಗಳಲ್ಲಿ ಪಡಪೋಶಿ ಇದೆ. ಆದ್ದರಿಂದ ನಾನು ಸೌಜನ್ಯದ ವಿರೋಧಿ. ದುಡ್ಡು ಮಾಡುವವರಿಗೆ, ಜನಪ್ರಿಯತೆ ಬಯಸುವವರಿಗೆ ಸೌಜನ್ಯದ ಅಗತ್ಯವಿದೆ. ಆಳವಾದ ಸಂಬಂಧಗಳಿಗೆ ಸೌಜನ್ಯ ಅಡ್ಡವಾಗುತ್ತದೆ. ನಾನು ನಿಮ್ಮನ್ನು ಹುಡುಕಿಕೊಂಡು ಬಂದು ಹೇಳಿದ್ದರ ಉದ್ದೇಶ ಬರೀ ಒಬ್ಬರನೊಬ್ಬರು ಗುರುತಿಸಿಕೊಳ್ಳಬೇಕೆಂಬುದು. ಆದರೆ ನಿಮ್ಮ ಸಹಾನುಭೂತಿ ಬೇಡುವ ದೌರ್ಬಲ್ಯದ ಅಂಶ ನನ್ನ ಕ್ರಿಯೆಯಲ್ಲೂ ಇದ್ದಿರಬಹುದು.

ನಾನು ಅಹಂಕಾರಿಯಲ್ಲ. ನೀವೂ ಅಲ್ಲ. ಕ್ಷುದ್ರತೆಗೆ ತುತ್ತಾದವರಿಗೆ ನಾನು ಹಾಗೆ ಕಾಣಿಸಬಹುದು. ಒಂದು ಮರ, ಒಂದು ಪಕ್ಷಿ, ಒಂದು ಮೃಗ, ಒಬ್ಬ ತಿರುಕ – ಯಾರನ್ನೇ ನೋಡಿದಾಗಲೂ ನಾನು ಎಲ್ಲರಿಗಿಂತಲೂ ಅನ್ಯ ಅನ್ನಿಸುತ್ತದೆಯೇ ಹೊರತು ಅವುಗಳಿಗಿಂತ ದೊಡ್ಡವನು ಅನ್ನಿಸುವುದಿಲ್ಲ. ಇತರರು ತನ್ನನ್ನು ಅಕ್ರಮಿಸಲು ಬಂದಾಗ ಮಾತ್ರ ಹಾವು ತನ್ನ ವಿಷವನ್ನು ಬಳಸುವಂತೆ ನಾನು ನನ್ನ ಗರ್ವವನ್ನು ವ್ಯಕ್ತಪಡಿಸುತ್ತೇನೆ. ನಾನು ಹುಟ್ಟಿ ಬಂದ ವಾತಾವರಣದಲ್ಲಿ ಕ್ಷುದ್ರತೆ ಗೆಲ್ಲಲು ಇದು ನನಗೆ ಅಗತ್ಯವಾದ್ದಕ್ಕೆ ನಾನು ಕಾರಣನಲ್ಲ. ನಿಮ್ಮ ಹಿನ್ನೆಲೆ ನೋಡಿದರೆ ನಿಮ್ಮ ಬಗ್ಗೆಯೂ ಇದು ನಿಜ ಎನ್ನಿಸುತ್ತದೆ. ಈ ಹೊರಗಿನ ಕ್ಷುದ್ರತೆ ಹೊರಗಿನದು ಮಾತ್ರವಲ್ಲ – ನಮ್ಮ ಒಳಗೂ ಇರುವಂಥಾದ್ದು. ನಮ್ಮ ತೀವ್ರತೆಯನ್ನು ಕೊಲ್ಲಲು ಇಂಥ ಸಂಚು ನಮ್ಮ ಒಳಗೂ ಹೊರಗೂ ನಡೆಯುತ್ತಲೇ ಇರುವುದರಿಂದ ಸದಾ ಎಚ್ಚರವಾಗಿರುವ ನಿಲುವು ಸಂಪನ್ನರಿಗೆ ಗರ್ವದಂತೆ ಕಾಣಬಹುದು. ಇದು ಅನಿವಾರ್ಯ, ಮೋಹಕ್ಕೆ ವಶವಾಗದ ನಿಷ್ಠುರತೆ, ನಮ್ಮ ಸುತ್ತ ಸಾಯುತ್ತ ಹುಟ್ಟುತ್ತ ಇರುವುದಕ್ಕೆಲ್ಲ ತೆರೆದುಕೊಂಡ ಎಚ್ಚರ – ಇದೇ ಯೋಗ. ಚೈತನ್ಯ ಮತ್ತು ಜಡತ್ವ ಜೋಡಿಗಳು ಎಂಬುದನ್ನು ಮರೆಯಬೇಡಿ.

– ಕೃಷ್ಣಪ್ಪ’

ಕಾಗದ ಬರೆದು ಅಂಚೆಗೆ ಹಾಕಿ ಕೃಷ್ಣಪ್ಪ ಕುಂಬಾರ ಕೊಪ್ಪಲಿಗೆ ಹೋದ. ಕಡಿದಾದ ಬೀದಿಯಲ್ಲಿ ನಡೆಯುತ್ತ ಧಾನ್ಯಗಳನ್ನು ಮಾರುವ ಅಂಗಡಿಯೊಂದರ ಮೇಲಿನ ಉಪ್ಪರಿಗೆಯಲ್ಲಿ ದೀಪವಿದ್ದುದನ್ನು ಕಂಡು ತೀರ ದುರವಸ್ಥೆಯಲ್ಲಿದ್ದ ಉಪ್ಪರಿಗೆ ಮೆಟ್ಟಿಲುಗಳನ್ನು ಕೊಳಚೆ ಗಲ್ಲಿಯೊಂದರಿಂದ ಹತ್ತಿ ಹೋದ. ಹತ್ತಿ ಹೋಗುವಾಗ ಉಚ್ಚೆಯ ನಾತ ಅಸಹನೀಯವಾಗಿತ್ತು. ಮಹಡಿ ಬಾಗಿಲು ತಟ್ಟಿದ.

ಕಚ್ಚೆಪಂಚೆಯುಟ್ಟು ಜುಬ್ಬ ತೊಟ್ಟ ಅಣ್ಣಾಜಿ ಯಾರು ಎಂದು ಕೇಳಿ ಕೃಷ್ಣಪ್ಪನೆಂದು ಗುರುತಿಸಿದ ಮೇಲೆ ಬಾಗಿಲು ತೆರೆದ.

ಅಣ್ಣಾಜಿ ರೂಮಿನಲ್ಲಿ ಊದಿನಕಡ್ಡಿ ಉರಿಯುತ್ತಿದ್ದರಿಂದ ವಾಸನೆ ಹಿತವೆನ್ನಿಸಿತು. ಅಣ್ಣಾಜಿ ಇಂಗ್ಲಿಷಲ್ಲಿ 'ಬಾ ಕೂತುಕೊ' ಎಂದು ನೆಲದ ಮೇಲೆ ಹಾಕಿದ್ದ ಹಾಸಿಗೆಯ ಒಂದು ತುದಿಯನ್ನು ತೋರಿಸಿ ಇನ್ನೊಂದು ತುದಿಯಲ್ಲಿ ತಾನು ಕೂತ.

ನಡುವಯಸ್ಸಿನ ಅಣ್ಣಾಜಿ ಆಕರ್ಷಕ ವ್ಯಕ್ತಿ. ಎದ್ದು ಕಾಣುವ ಚೂಪಾದ ಗಲ್ಲ - ಪೊದೆ ಹುಬ್ಬುಗಳು - ತೆಳ್ಳಗೆ ಎತ್ತರವಾಗಿದ್ದ. ಕೂದಲನ್ನು ಉದ್ದವಾಗಿ ಬೆಳೆಸಿ ಹಿಂದಕ್ಕೆ ಬಾಚಿದ್ದ. ಅವನು ಗಡ್ಡ ಬೆಳೆಸುತ್ತಿದ್ದನೆಂಬುದು ಮುಖದ ಮೇಲೆ ಬೆಳೆದಿದ್ದ ಒಂದು ತಿಂಗಳಿನ ಕೂದಲಿನಿಂದ ತಿಳಿಯಬಹುದಿತ್ತು. ಚಾರ್ಮಿನಾರ್ ಸಿಗರೇಟನ್ನು ಹೊತ್ತಿಸಿ ಅಣ್ಣಾಜಿ ಕೃಷ್ಣಪ್ಪನ ಮಾತಿಗೆ ಕಾದ.

ಕೃಷ್ಣಪ್ಪ ಅಣ್ಣಾಜಿ ಓದುತ್ತಿದ್ದ ಟ್ರಾಟ್ಸ್ಕಿ ಪುಸ್ತಕವೊಂದನ್ನು ಹಾಸಿಗೆ ಮೇಲೆ ಗಮನಿಸಿದ. ನಾಡಹೆಂಚಿನ ಇಳಿಜಾರದ ಸೂರಿನ ಸಣ್ಣ ರೂಮಿನಲ್ಲಿ ಹಾಸಿಗೆ, ಒಂದು ಟ್ರಂಕು, ಕೆಲವು ಪುಸ್ತಕಗಳನ್ನು ಬಿಟ್ಟು ಬೇರೇನೂ ಇರಲಿಲ್ಲ.

ಕೃಷ್ಣಪ್ಪ ಜೇಬಿನಿಂದ ಇನ್ನೂರು ರೂಪಾಯಿಗಳನ್ನು ಎತ್ತಿ ಕೊಟ್ಟ. ಕೃಷ್ಣಪ್ಪನ ಸ್ವಭಾವ ತಿಳಿದ ಅಣ್ಣಾಜಿ 'ಥ್ಯಾಂಕ್ಸ' ಅನ್ನದೆ ಜೇಬಿನಲ್ಲಿ ಹಾಕಿಕೊಂಡು ತನಗಾದ ಸಮಾಧಾನವನ್ನೂ ತೋರಿಸಿಕೊಳ್ಳದೆ ಇಂಗ್ಲಿಷಲ್ಲಿ ಹೇಳಿದ:

'ನಾನು ಈ ರೂಮನ್ನೂ ಬದಲಾಯಿಸಬೇಕಾಗಿ ಬಂದಿದೆ.'

ಅಣ್ಣಾಜಿ ಎದ್ದು ಬೀದಿಗೆ ತೆರೆಯುವ ಮರದ ಸಣ್ಣ ಕಿಟಕಿಯ ಕೊಳಕಾದ ಫರದೆ ಸರಿಸಿ ತೋರಿಸಿದ:

'ಮಫ್ತಿಯಲ್ಲಿರೋ ಪೋಲೀಸ್. ನಿನ್ನೆಯಿಂದ ಈ ರೂಮಿಗೆ ಯಾರು ಬರ್ತಾರೆ ಹೋಗ್ತಾರೆ ಗಮನಿಸ್ತ ಇದೆ ಹಂದಿ.'

'ನನ್ನ ಹಾಸ್ಟೆಲ್‌ರೂಮಿಗೆ ಬಂದಿರು'

ಕೃಷ್ಣಪ್ಪನ ಮಾತಿಗೆ ಅಣ್ಣಾಜಿ ಅದೂ ಕ್ಷೇಮವಲ್ಲವೆನ್ನುವಂತೆ ತಲೆಯಲ್ಲಾಡಿಸಿದ. ಅವನನ್ನು ಅಣ್ಣಾಜಿಯೆಂದು ಕೃಷ್ಣಪ್ಪ ಕರೆಯುವುದಿಲ್ಲ. ಯಾಕೆಂದರೆ ಅವನ ನಿಜವಾದ ಹೆಸರೇನೆಂಬುದು ಕೃಷ್ಣಪ್ಪ ಕೇಳಿಲ್ಲ. ಪೋಲೀಸರಿಂದ ತಲೆ ಮರೆಸಿಕೊಂಡು ತಿರುಗುತ್ತಿದ್ದ ಅಣ್ಣಾಜಿ ಪ್ರತಿ ಊರಲ್ಲೂ ಒಂದೊಂದು ಹೆಸರಿಟ್ಟುಕೊಂಡು ಇರುತ್ತಿದ್ದ. ಗೋವಾದ ಪೋರ್ಚುಗೀಸ್‌ಜೈಲಿನಿಂದ ತಪ್ಪಿಸಿಕೊಂಡು ಬಂದ ಅಣ್ಣಾಜಿ ಮಹಾರಾಷ್ಟ್ರದವನು. ಗೋವಾದಿಂದ ತೆಲಂಗಾಣ ಪ್ರದೇಶಕ್ಕೆ ಹೋಗಿ ಅಲ್ಲಿ ಹಳ್ಳಿಯೊಂದರಲ್ಲಿ ರೈತ ಸಂಘಟನೆ ಮಾಡುತ್ತಿದ್ದಾಗ ಜಮೀಂದಾರನೊಬ್ಬನನ್ನು ಇವನ ಅನುಯಾಯಿಗಳು ಕೊಲ್ಲಲು ಪ್ರಯತ್ನಿಸಿದ್ದರು. ಜಮೀಂದಾರ ಕಾಲು ಮುರಿದುಕೊಂಡು ಬದುಕಿಕೊಂಡ. ಅಣ್ಣಾಜಿಯ ಯೋಜನೆಗೆ ಮೀರಿ ರೈತರಲ್ಲಿ ಕೆಲವರು ಮುಂದುವರೆದಿದ್ದರು. ಸಿಕ್ಕಿಬಿದ್ದ ರೈತರ ಮೇಲೆ ಕೊಲೆಯತ್ನದ ಆಪಾದನೆಯ ವಿಚಾರಣೆ ನಡೆಯುತ್ತಿತ್ತು. ಒಬ್ಬ ಆಪಾದಿತ ರೈತನನ್ನು ಅಪ್ರೂವರ್ ಮಾಡಿಕೊಂಡು ಅಣ್ಣಾಜಿಯ ಬಗ್ಗೆ ಪೋಲೀಸರು ಮಾಹಿತಿ ಸಂಗ್ರಹಿಸಿದ್ದರು. ಅಣ್ಣಾಜಿ ಊರಿಂದ ಊರಿಗೆ ತಪ್ಪಿಸಿಕೊಂಡು ತಿರುಗುತ್ತ ಈ ಊರಿಗೆ ಬಂದಿದ್ದ. ಇಂಗ್ಲಿಷ್‌ಪಾಠ ಹೇಳಿಕೊಡುತ್ತೇನೆಂದು ನಾಲ್ಕೈದು ಮನೆಗಳಲ್ಲಿ ಟ್ಯೂಶನ್ ಇಟ್ಟುಕೊಂಡಿದ್ದ. ಆಂಧ್ರ ಪೋಲೀಸರು ಆರ್. ಎಲ್. ನಾಯಕ್‌ಎಂಬ ಹೆಸರಲ್ಲಿ ಇವನನ್ನು

ಹುಡುಕುತ್ತಿದ್ದರು. ಗೋವಾದ ಪೋರ್ಚುಗೀಸರು ಪಿ. ಟಿ. ದೇಶಪಾಂಡೆ ಎಂಬ ಹೆಸರಿನ ಇವನನ್ನು ಗಲ್ಲಿಗೆ ಏರಿಸಲೂ ಸಿದ್ಧರಾಗಿ ಕಾಯುತ್ತಿದ್ದರು. ಅವನು ಹೇಳಿಕೊಂಡಿದ್ದಕ್ಕಿಂತ ಹೆಚ್ಚನ್ನು ಕೃಷ್ಣಪ್ಪ ಕೇಳುತ್ತಿರಲಿಲ್ಲ. ತನ್ನ ಜೀವನಕ್ಕೊಂದು ಉದ್ದೇಶ ಹುಡುಕುತ್ತಿದ್ದ ಕೃಷ್ಣಪ್ಪನಿಗೆ ನೂರಾರು ಕ್ರಾಂತಿಕಾರಕ ಪುಸ್ತಕಗಳನ್ನು ಓದಿದ್ದ ಅಣ್ಣಾಜಿ ಮಹೇಶ್ವರಯ್ಯನಂತೆಯೇ ಗುರುವಾಗಿ ಕಂಡಿದ್ದ ಎಂದು ಹೇಳಬಹುದು.

ಅಣ್ಣಾಜಿಗೆ ಅವನು ಬಿಟ್ಟ ಬಂದ ಊರಲ್ಲೆಲ್ಲ ಒಬ್ಬಬ್ಬ ಪ್ರೇಯಸಿ. ಪ್ರತಿ ತಿಂಗಳೂ ಅವರಿಗೆಲ್ಲ ಅಷ್ಟಿಷ್ಟು ಹಣ ಅವನು ಕಳಿಸಬೇಕು. ಹೀಗಾಗಿ ಹುಲಿಯ ಹುಣ್ಣಿನಂತೆ ಅವನ ಸಾಲ. ಕೃಷ್ಣಪ್ಪನೇ ಮನಿಯಾರ್ಡರ್ ಮಾಡುವುದು. ಕೊಲ್ಹಾಪುರದಲ್ಲಿ ದರ್ಜಿಯ ಮಗಳೊಬ್ಬಳಿಗೆ ಅವಳ ಬಿ. ಟಿ. ವಿದ್ಯಾಭ್ಯಾಸಕ್ಕಾಗಿ ತಿಂಗಳಿಗೆ ಇಪ್ಪತ್ತೈದು, ಗೋವಾದಲ್ಲಿ ಇವನಿಂದ ಮಗುವನ್ನು ಪಡೆದ ಗುಮಾಸ್ತೆಯೊಬ್ಬಳಿಗೆ ಇಪ್ಪತ್ತೈದು, ಚಿಕ್ಕ ವಯಸ್ಸಲ್ಲೆ ಇವನನ್ನು ಮದುವೆಯಾಗಿ ಒಂದು ಗಂಡು ಮಗು ಹೆತ್ತು ತಾಯಿ ಮನೆ ಸೇರಿ ನಾಗಪುರದಲ್ಲಿದ್ದ ಖಾಸ ಹೆಂಡತಿಗೆ ಇಪ್ಪತ್ತೈದು, ಹದಿನೈದು ವರ್ಷಗಳಿಂದಾದರೂ ಇದಕ್ಕಾಗಿ ಇವನಿಗೆ ಸಾಲ ಕೊಟ್ಟ ಇವನ ಆ ಬಡ ಅನುಯಾಯಿಗಳಿಗೆ ಆಗೀಗ ತೀರಿಸಲು ಇನ್ನಷ್ಟು – ಹೀಗೆ ಮೈಯೆಲ್ಲ ಸಾಲ ಅಣ್ಣಾಜಿಗೆ. ಬರೀ ಚಹಾ ಸಿಗರೇಟಲ್ಲೆ ಬದುಕುತ್ತ, ಈಚಲು ಚಾಪೆ ಮೇಲೆ ಮಲಗಿ ನಿದ್ರಿಸಬಲ್ಲ ಅಣ್ಣಾಜಿಗೆ ಇನ್ನು ಯಾವ ದುಶ್ಚಟವೂ ಇರಲಿಲ್ಲ.

ಪ್ರತಿ ದಿನವೂ ಅಣ್ಣಾಜಿ ದುಡ್ಡಿಗೆ ಪರದಾಡುತ್ತ ಮುಂದಿನವಾರ ಕೊಟ್ಟುಬಿಡುವೆ ಇತ್ಯಾದಿ ಸುಳ್ಳುಗಳನ್ನು ಹೇಳುತ್ತ ಜನರನ್ನು ವಂಚಿಸಲು ತನ್ನೆಲ್ಲ ಆಕರ್ಷಣೆಗಳನ್ನೂ ಬಳಸುವುದು ಕಂಡು ಕೃಷ್ಣಪ್ಪನಿಗೆ ಜಿಗುಪ್ಸೆಯಾಗುತ್ತಿತ್ತು. ಆದರೆ ತನ್ನ ಹೆಸರಿನ ವ್ಯಾಮೋಹವನ್ನೂ ಬಿಟ್ಟ ವ್ಯಕ್ತಿ ಈತ. ಪರಿಚಯವಾದ ಪ್ರಾರಂಭದಲ್ಲಿ ಅಣ್ಣಾಜಿ ಕೇಳುತ್ತಿದ್ದ ದುಡ್ಡನ್ನು ಅವರಿವರಿಂದ ಪಡೆದು ಕೊಡುವಾಗ ಅವನು ಹೇಳುವ ಸುಳ್ಳುಗಳಿಂದಾಗಿ ಕೃಷ್ಣಪ್ಪ ಕ್ಷುದ್ರನಾಗಿ 'ನಿನ್ನ ಮೇಲೆ ನನಗೆ ಗೌರವವಿದೆ. ನನ್ನ ಹತ್ತಿರ ಸುಳ್ಳು ಹೇಳಬೇಡ' ಎಂದಿದ್ದ. ಕ್ಷಣ ಮಂಕಾಗಿ ಕೂತು ಅಣ್ಣಾಜಿ ತನ್ನ ಕಥೆ ಹೇಳಲು ತೊಡಗಿದಾಗ, 'ಸಾಕು ಬಿಡು. ನಾನು ಪ್ರತಿ ತಿಂಗಳೂ ಆದಷ್ಟು ಹಣ ನಿನಗೆ ಒಟ್ಟು ಮಾಡಿಕೊಡುವೆ' ಎಂದಿದ್ದ. ಜೊತೆಗೇ ಇಂಗ್ಲಿಷ್ಟ್ಯೂಷನ್‌ಹೇಳುವುದರಿಂದಲೂ ಅಣ್ಣಾಜಿಗೆ ಸುಮಾರು ನೂರೈವತ್ತು ಸಿಗುತ್ತಿತ್ತು.

'ಯಾವುದೋ ತತ್ವಕ್ಕಾಗಿ ಮೈಮರೆತು ಇರುವ ನೀನು ಯಾಕೆ ಈ ಕ್ಷುದ್ರ ವಿಷಯಗಳಿಗೆ ಸಿಕ್ಕಿಹಾಕಿಕೊಂಡಿದ್ದು ?' ಎಂದು ಉತ್ತರ ಬಯಸದೆ ತನಗೇ ಕೇಳಿಕೊಳ್ಳುವಂತೆ ಕೃಷ್ಣಪ್ಪ ಹೇಳಿದ.

ಅಣ್ಣಾಜಿ ಚಾರ್ಮಿನಾರ್ ಹೊತ್ತಿಸಿ

'ನಿನ್ನಲ್ಲೇ ನೀನು ಸಂಪೂರ್ಣ ಎನ್ನುವ ಗರ್ವ ನಿನಗೆ. ನೀನು ಮೂಲಭೂತವಾಗಿ ಫ್ಯಾಸಿಸ್ಟ್‌ಮನೋಧರ್ಮದವ' ಎಂದ.

ಮುಸ್ಲಿಂ ಹೋಟೆಲಲ್ಲಿ ಬಾಂಬೆ ಟೀ ಕುಡಿಯುತ್ತ ಇಬ್ಬರೂ ಮಾತನಾಡುತ್ತಿದ್ದರು. ರೇಡಿಯೋ ಗದ್ದಲದಲ್ಲಿ ಧ್ವನಿ ಎತ್ತರಿಸಿ ಮಾತಾಡಬೇಕಿತ್ತು. ಕೃಷ್ಣಪ್ಪನಿಗಿದು ಇಷ್ಟವಿಲ್ಲದಿದ್ದರೂ ಹೇಳಿದ:

‘ಕ್ರಾಂತಿಗಾಗಿ ಬದುಕೋವನು ವ್ಯಾಮೋಹಿಯಾಗಿರಕೂಡದು. ದುಡ್ಡಿನ ವ್ಯವಹಾರ ಹಚ್ಚಿಕೊಂಡು ಬೂರ್ಶ್ವಾ ಆಗಬಾರದು.’ ಈ ಹೊಸ ಶಬ್ದಗಳನ್ನು ಅಣ್ಣಾಜಿಯಿಂದಲೇ ಕೃಷ್ಣಪ್ಪ ಕಲಿತಿದ್ದು.

‘ನಿಜ ನೀನು ಹೇಳೋದು. ನಾನು ಸುಮ್ಮನಿದ್ದರೂ ಹೆಂಗಸರು ನನ್ನ ಹಚ್ಚಿಕೋತಾರೆ.’ ತನಗೇ ಅದು ರಹಸ್ಯ ಎನ್ನುವಂತೆ ಅಣ್ಣಾಜಿ ಎದ್ದು ನಿಂತ. ನಡೆನುಡಿಯಲ್ಲಿ ಅಣ್ಣಾಜಿ ಚುರುಕು. ಕೃಷ್ಣಪ್ಪ ನಿಧಾನ.

ಇವು ಕೃಷ್ಣಪ್ಪನ ಜೀವನದಲ್ಲಿ ಬಹಳ ಮುಖ್ಯ ದಿನಗಳು ಎನ್ನಬೇಕು. ಪಾರ್ಕಿನಲ್ಲಿ ಕೂತು ನೆಲಗಡಲೆ ಸುಲಿದು ತಿನ್ನುತ್ತ ಕೃಷ್ಣಪ್ಪ ಅಣ್ಣಾಜಿ ಗಂಭೀರವಾಗಿ ಚರ್ಚಿಸುವರು. ಅಣ್ಣಾಜಿ ತನ್ನ ಪಾಠವನ್ನು ಮಾರ್ಕ್ಸನ ಒಂದು ಮಾತಿನಿಂದ ಶುರು ಮಾಡಿದ್ದ: ‘ಈ ವರೆಗೆ ತಾತ್ವಿಕರು ಪ್ರಪಂಚದ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ; ಆದರೆ ನಮ್ಮ ಈ ಕೆಲಸ ಈ ಪ್ರಪಂಚವನ್ನು ಬದಲಿಸುವುದು.’ ಇಂಥ ಅನೇಕ ಮಾತುಗಳು ಕೃಷ್ಣಪ್ಪನನ್ನು ಆಳವಾದ ವಿಚಾರಗಳಿಗೆ ಹಚ್ಚಿದ್ದವು. ನಮ್ಮ ಪ್ರಜ್ಞೆ ಸ್ವತಂತ್ರ ವಸ್ತುವಲ್ಲ – ಉತ್ಪಾದನೆಗಾಗಿ ನಾವು ತೊಡಗುವ ಅನೇಕ ಸಂಬಂಧಗಳಿಂದ ಉಂಟಾದದ್ದು ಎಂದು ಅಣ್ಣಾಜಿ ಕೆಣಕಿದಾಗ ಜಡಪ್ರಪಂಚದಿಂದ, ದೈನಿಕಗಳಿಂದ ಸೋಲಬಾರದೆಂಬ ಹಠವಾದಿ ಕೃಷ್ಣಪ್ಪ ಒಪ್ಪಿರಲಿಲ್ಲ. ಪಾರ್ಶ್ವವಾಯುವಿನಿಂದ ನರಳುತ್ತಿರುವಾಗಲೂ ಈ ಬಗ್ಗೆ ಅವನಿಗೆ ಅನುಮಾನ ಉಳಿದೇ ಇತ್ತು. ವಾದಿಸಿದ್ದ:

‘ಮನುಷ್ಯ ತನ್ನ ಪರಿಸರಾನ್ನ ಮೀರುತಾನೆ – ಇದನ್ನು ನಾನು ವಾದಿಸಲಾರೆ. ನನ್ನ ಅನುಭವದ ಮಾತು ಇದು. ಆ ವಿಷಯ ಬಿಡು. ಕೂಲಿಕಾರರನ್ನು ರೈತರನ್ನು ನೀನು ಒಟ್ಟು ಮಾಡಿ ಹೋರಾಟಕ್ಕೆ ಹಚ್ಚುವುದು ಯಾವ ಪುರಷಾರ್ರ್ಥಕ್ಕೆ ? ಅವರ ಕೂಲಿ ಇನ್ನಷ್ಟು ಹೆಚ್ಚಿ, ಮನೆಗೊಂದು ರೇಡಿಯೋ, ಸ್ಟೈನ್‌ಲೆಸ್‌ಪಾತ್ರೆಗಳನ್ನು ಅವರು ಕೊಂಡುಬಿಡುವಂತಾದರೆ ಅವರ ಜೀವನ, ಈ ಪ್ರಪಂಚ ಬದಲಾದಂತೆಯೊ ? ಪ್ರತಿ ನಿತ್ಯದ ಬದುಕಿನ ಅದೇ ಕೆಲಸಗಳು, ಅದೇ ಜಂಜಾಟಗಳು, ಅದೇ ತರಲೆ ತಾಪತ್ರೆಯಗಳು ಹೋಗಿಬಿಡ್ತಾವ ? ಅವರು ಇನ್ನಷ್ಟು ಆಸೆಬುರುಕರಾಗುತ್ತಾರೆ – ನಿನ್ನಂಥವರಿಂದ.’

‘ಹಾಗಲ್ಲ, ನೀನು ವ್ಯಕ್ತಿವಾದಿಯ ಹಾಗೆ ಮಾತಾಡ್ತಿದ್ದಿ.’

‘ವ್ಯಕ್ತಿವಾದಿ’ ಇತ್ಯಾದಿ ಶಬ್ದಗಳಲ್ಲಿ ತನ್ನ ಅನುಮಾನ ಬಗೆಹರಿಸಲು ಪ್ರಯತ್ನಿಸುವ ಅಣ್ಣಾಜಿಯ ವಾದ ಕ್ರಮದಿಂದ ಕೃಷ್ಣಪ್ಪನಿಗೆ ಬೇಸರ ಬರುತ್ತಿತ್ತು. ಅಣ್ಣಾಜಿ ಸಮಾಧಾನದಿಂದ ವಿವರಿಸುತ್ತಿದ್ದ:

‘ತಮ್ಮ ಜೀವನದ ಸುಧಾರಣೆಗಾಗಿ ಬಡವರನ್ನು ಹೋರಾಡಕ್ಕೆ ಸಿದ್ಧ ಮಾಡ್ತೀವಿ ಅನ್ನು – ಈ ಹೋರಾಟ ಅಷ್ಟಕ್ಕೆ ನಿಲ್ಲಲ್ಲ. ನಮ್ಮ ವರ್ಗದ ಜೀವನಮಟ್ಟ ಹಚ್ಚಿಸಿಕೊಳ್ಳೊ ಆಸೆಬುರುಕತನಕ್ಕೂ ಅವರ ಆಸೆಗೂ ಮೂಲಭೂತ ವ್ಯತ್ಯಾಸವಿದೆ. ಆದರೆ ಆಸೆ ಚಲನಶೀಲ. ಅವರ ಆಸೆ ಹೆಚ್ಚುತ್ತ ಹೋದಂತೆ ಈ ಪ್ರಪಂಚದ ಸ್ವರೂಪಾನೇ ಬದಲಾಗಬೇಕಾಗಿ ಬರುತ್ತೆ. ಅವರ ದುಡಿಮೆಯೇ ಈ ಸಮಾಜದ ಸ್ಥಿತಿಗೂ ಗತಿಗೂ ದ್ರವ್ಯ ಅನ್ನೋದನ್ನ ಒಪ್ಪಿಕೊಂಡಿದ್ದಿತಾನೆ ? ನಮ್ಮ ಪುರುಷಾರ್ಥಗಳಿಗೆಲ್ಲ ಮೂಲ ಈ ದುಡಿಮೆ. ಆದರೆ ಈ ದುಡಿಮೆಯ ಲಾಭ ಹೋಗೋದು ಬಂಡವಾಳಶಾಹಿಗೆ. ಶೋಷಣೇನೇ ಈ ವ್ಯವಸ್ಥೆಗೆ ಆಧಾರ. ಬಡವರು ಶೋಷಣೆಗೂ ಒಳಗಾಗ್ತಾರೆ; ಬರ್ತಾ ಬರ್ತಾ ತಮ್ಮ ಕೈಯಿಂದ ಬೆಳೆದದ್ದಕ್ಕೂ ತಮಗೂ ಸಂಬಂಧಾನೇ

ಇಲ್ಲವೆನ್ನೋದನ್ನ ಅರೀತಾರೆ. ಮನುಷ್ಯನಿಂದಲೇ ಮನುಷ್ಯನಿಗೆ ಇವೆಲ್ಲ ಆಗ್ತಿರೋದೂಂತ ಅರ್ಥವಾಗ್ತ ಹೋದ ಹಾಗೆ ತನ್ನ ನಿತ್ಯಜೀವನಾನ್ನ ಶುಷ್ಕವಾಗಿ ಮಾಡೋ ವ್ಯವಸ್ಥೆನೇ ಬದಲಾಗಬೇಕು. ಸುಧಾರಣೆಗಳಿಂದ ಇದು ಸಾಧ್ಯವಾಗದು ಅನ್ನೋದನ್ನ ಅರೀತಾರೆ. ಮೇಲಿನ ವರ್ಗದ ನಮ್ಮಂಥ ಕೆಲವರಿಗೆ ಅದು ಬುದ್ಧಿಪೂರ್ವಕವಾಗಿ ಅರ್ಥವಾದರೆ ರೈತರಿಂದ ಹುಟ್ಟಿ ಬಂದ ನಿನ್ನಂಥ ಸೂಕ್ಷ್ಮ ಮನಸ್ಸಿನವರಿಗೆ ಅದು ಅನುಭವದಿಂದ ಗೊತ್ತಾಗತ್ತೆ. ನಿನ್ನಂಥವರು ಅದನ್ನು ಉಳಿದವರಲ್ಲಿ ಬಿಡುತ್ತೀರಿ. ಹಾಗೇ ಕ್ರಾಂತಿ ಆಗುತ್ತೆ. ನಾವಾಗಬೇಕೂಂತ ಬಯಸೋದ್ರಿಂದ ಮಾತ್ರ ಕ್ರಾಂತಿಯಾಗುತ್ತೆ ಅನ್ನೋದು ವ್ಯಕ್ತಿವಾದವಾಗಿಬಿಡತ್ತೆ. ತನ್ನ ಕೋಳಿ ಕೂಗಿದ್ರಿಂದ ಬೆಳಗಾಯ್ತು ಅಂತ ತಿಳಿಯೋ ಮುದುಕಿ ಕಥೆ ಹಾಗೆ ಅದು. ಕ್ರಾಂತಿಯಾಗುತ್ತೆ ಅನ್ನೋದು ಸಮಾಜದ ಚಲನೆಯ ನಿಯಮ. ಅದನ್ನ ತ್ವರಿತಗೊಳಿಸೋ ವೇಗವರ್ಧಕಗಳು, ಅಥವಾ ಸೂಲಗಿತ್ತಿಯರು ನಾವು.'

ಅಣ್ಣಾಜಿಯ ಕಣ್ಣುಗಳು ಹೊಳೆಯುತ್ತಿದ್ದವು. ಪಾರ್ಕನಲ್ಲಿ ಕಡಲೇಕಾಯಿ ಬೆಲ್ಲವನ್ನು ಕೊಳ್ಳಿರೆಂದು ಬೇಡುತ್ತ ಕಾಡುತ್ತ ನಿಂತ ಹುಡುಗನನ್ನು ನೋಡುತ್ತ ಕೃಷ್ಣಪ್ಪ,

'ಇಂಥ ದೈನ್ಯದ ಹುಡುಗರೂ ರೊಚ್ಚೆದ್ದು ಕ್ರಾಂತಿ ಮಾಡ್ತಾರೆ ಅನ್ನು,'

ಎಂದು ಅರ್ಧ ಅನುಮಾನದಿಂದ ಕೇಳುತ್ತಿದ್ದ.

'ಖಂಡಿತವಾಗಿ, ಫ್ರಾನ್ಸಿನ ಜೈಲಿನ ಗೇಟು ಒಡೆದಿದ್ದು ಗೊತ್ತಲ್ಲ,'

'ಯಾವತ್ತೋ ಒಂದು ದಿನ ಆವೇಶದಿಂದ ಕುಣಿದು ಮತ್ತೆ ಪ್ರಪಂಚ ಅದೇ ಅರ್ಥಹೀನ ದೈನಿಕಗಳ ಜಾಡಿಗೆ ಸಿಕ್ಕಿ ಹಾಕಿಕೊಳ್ಳುತ್ತಲ್ಲ?'

'ಇಲ್ಲ - ಕ್ರಾಂತಿಯಿಂದ ನಮ್ಮ ದೈನಿಕವೂ ಸೃಷ್ಟಿಶೀಲವಾಗುತ್ತೆ.' ತನ್ನ ತರ್ಕ ಎಲ್ಲ ಅನುಮಾನಗಳಿಗೆ ಪ್ರೂಫ್‌ಎಂಬ ಅಣ್ಣಾಜಿಯ ಯೋಚನಾಕ್ರಮದಿಂದ ಕೃಷ್ಣಪ್ಪನಿಗೆ ಕರೆಕರೆಯಾಗುತ್ತಿತ್ತು.

'ಹುಟ್ಟೋದು, ಸಾಯೋದು, ಉಣ್ಣೋದು, ಉಳೋದು, ಸಂಭೋಗ ಮಾಡೋದು ಎಲ್ಲವುದಕ್ಕೂ ಒಂದೊಂದು ಹಬ್ಬ ಮಾಡಿದೆಯಲ್ಲ - ನಮ್ಮ ಹಿಂದು ಧರ್ಮ, ನಮ್ಮ ಭೂಮಿ ಹುಣ್ಣಿಮೆ ಹಬ್ಬದ ಅರ್ಥ ಗೊತ್ತ ನಿನಗೆ?'

ಬೇಸರದಿಂದ ಕೃಷ್ಣಪ್ಪ ಹೇಳುತ್ತಿದ್ದ, ಅದನ್ನೂ ಗಂಭಿರವಾಗಿ ಅಣ್ಣಾಜಿ ವಿಶ್ಲೇಷಿಸುತ್ತಿದ್ದ:

'ಶುಷ್ಕವಾಗಿ ಬಿಡುವ ದೈನಿಕಗಳನ್ನು ಭ್ರಮೇಲಿ ಗೆಲ್ಲೋದಕ್ಕೂ ನಿಜದಲ್ಲಿ ವಾಸ್ತವವಾಗಿ ಗೆಲ್ಲೋದಕ್ಕೂ ವ್ಯತ್ಯಾಸವಿದೆ. ಉತ್ಪಾದನೆಯ ಸಂಬಂಧಗಳು ಬದಲಾದಾಗ ದುಡಿಮೆ ಸೃಷ್ಟಿಶೀಲವಾಗುತ್ತೆ. ಅಹಂಕಾರದಲ್ಲಿ ಸೆಟೆದು ದೊಣ್ಣೆ ನಾಯಕನಂತೆ ಓಡಾಡ್ತ ಕ್ಷುದ್ರತೆಯಿಂದ ಹೊರಗೆ ನಿಲ್ತೀನಿ ಅಂತ ನೀನು ತಿಳಿದಿರೋದು ಭ್ರಮೆ. ಹೋಗಿ ರೈತರ ನಡುವೆ ಕೆಲಸ ಮಾಡು.

ಅವರನ್ನು ಹೋರಾಟಕ್ಕೆ ಸಂಘಟಿಸು. ನೀನೊಬ್ಬ ಸೂಲಗಿತ್ತೀಂತ ತಿಳಕೊ – ತಾವು ಉಳೋ ನೆಲಕ್ಕವರು ಒಡೆಯರಾಗೋದೇ ನಿಜವಾದ ಭೂಮಿ ಹುಣ್ಣಿಮೆ.'

ಕೃಷ್ಣಪ್ಪನಿಗೆ ತನ್ನ ಅನುಭವದ ಸತ್ಯವೇ ಬೇರೆ ಎಂದು ಕಂಡರೂ ಅಣ್ಣಾಜಿಯ ವಾದವೂ ಸರಿಯಾಗಿ ಕಂಡು ತಬ್ಬಿಬ್ಬಾಗಿಬಿಡುತ್ತಿದ್ದ.

'ಹಾಗಾದರೆ ರಷ್ಯಾದಲ್ಲಿ ದುಡಿಮೆಯೆಲ್ಲ ಸೃಷ್ಟಿಶೀಲವಾಗಿ ಬಿಟ್ಟಿದೆಯೋ ?'

ಕೃಷ್ಣಪ್ಪ ಅಣ್ಣಾಜಿಯನ್ನು ಹಂಗಿಸುವಂತೆ ಕೇಳುತ್ತಿದ್ದ.

'ನೋಡು ಕೃಷ್ಣಪ್ಪ, ಆಗಬೇಕಾದ್ದೆಲ್ಲ ರಷ್ಯಾದಲ್ಲೆ ಆಗಿಲ್ಲ ನಿಜ. ಕ್ರಾಂತಿಗೆ ಜನರನ್ನು ಸಿದ್ಧಮಾಡಿದ ಪಕ್ಷ ತಾನೇ ಒಡೆಯನಾಗಿ ಬಿಟ್ಟಿದೆ ಅಲ್ಲಿ. ಕ್ರಾಂತಿ ಒಂದು ದಿನದ ಕೆಲಸವಲ್ಲ. ಆದ ತಪ್ಪನ್ನು ಸದಾ ತಿದ್ದಿಕೊಳ್ಳಾನೇ ಹೋಗಬೇಕು. ಈಗ ಚೈನಾದಲ್ಲಿ ನೋಡು. . .'

ಕಾಡುತ್ತಿದ್ದ ಕಡಲೇಕಾಯಿ ಮಾರುವ ಹುಡುಗನನ್ನು 'ಗೆಟ್‌ಅವೇ' ಎಂದು ಗದರಿಸಿ ಅಣ್ಣಾಜಿ ಸಿಗರೇಟು ಹಚ್ಚಿದ. ಬಾಯಲ್ಲಿ ಸಿಗರೇಟು ಸಿಕ್ಕಿಸಿ ತನ್ನ ಜುಬ್ಬದ ಸಡಿಲವಾದ ತೋಳುಗಳನ್ನು ಮುಡಿಸಿಕೊಂಡು ಜೇಬಿನಿಂದ ಪೆನ್ಸಿಲ್‌ಕಾಗದ ತೆಗೆದ. ಚೈನಾದ ಮ್ಯಾಪನ್ನು ಬರೆದು ಲಾಂಗ್‌ಮಾರ್ಚನ್ನು ವಿವರಿಸುತ್ತಿದ್ದಂತೆಯೇ ಕೃಷ್ಣಪ್ಪ ರೇಗಿದ ಧ್ವನಿಯಲ್ಲಿ ಹೇಳಿದ:

'ನಮ್ಮ ದೇಶದ ಕಮ್ಯುನಿಸ್ಟರು ದೇಶದ್ರೋಹಿಗಳು. ನಲವತ್ತೆರಡರ ಚಳುವಳೀಲಿ ಯಾಕೆ ಬ್ರಿಟಿಷರ ಪರವಾಗಿ ಕೆಲಸ ಮಾಡಿದ್ರು ಹೇಳು ? ನನಗಂತೂ ರಷ್ಯಾಕ್ಕೂ ಚೈನಾಕ್ಕೂ ತಲೆಹಿಡುಕನಾಗಿ ಕೆಲಸ ಮಾಡೋದು ಸಾಧ್ಯವಿಲ್ಲ.'

ಅಣ್ಣಾಜಿ ಸಮಾಧಾನ ಕಳೆದುಕೊಳ್ಳದೆ ಹೇಳಿದ:

'ನಮ್ಮ ದೇಶದ ಕಮ್ಯುನಿಸ್ಟರು ಬಂಜೆಯರು – ಒಪ್ಪಿದೆ. ಆದರೆ ಎರಡನೇ ಮಹಾಯುದ್ಧದ ಸಮಯದಲ್ಲಿ ಜರ್ಮನೀನ್ನ ಸೋಲಿಸೋದು ಮುಖ್ಯವಾಗಿತ್ತು. ಅನ್ನೋದನ್ನೂ ನಾನು ಒಪ್ಪುತ್ತೀನಿ. ಆದರೂ ನಾನು ಆಗ ಪಾರ್ಟಿ ಬಿಟ್ಟು ಗಾಂಧಿ ಚಳವಳೀಲಿ ಭಾಗವಹಿಸಿದ್ದೆ – ಇವೆಲ್ಲ ಕಾಂಟ್ರಡಿಕ್ಷನ್ನುಗಳು. ನೋಡು ಕೃಷ್ಣಪ್ಪ ನನ್ನ ಉದ್ದೇಶ ಇದು: ಆಸೆ ಬುರುಕರ ಬಗ್ಗೆ ಪ್ರಚಂಡ ತಿರಸ್ಕಾರ ಇರೋದನ್ನ ನಿನ್ನಲ್ಲಿ ನಾನು ಕಂಡಿದೇನೆ. ಈ ತಿರಸ್ಕಾರ, ಈ ಗರ್ವ ದಲಿತರ ಕ್ರಾಂತಿಗೆ ಅತ್ಯಗತ್ಯವಾದ ಡ್ರೈವಿಂಗ್‌ಫೋರ್ಸ್. ನನಗಿಂತ ನೀನೇ ಗಟ್ಟಿಯಾಗಿ ಉಳೀತಿ ಅಂತ ಅನ್ನಿಸೋದರಿಂದ ಈ ಕ್ರಾಂತಿಯ ಬೀಜಾನ್ನ ಬಿತ್ತಲಿಕ್ಕೆಂತ ನಿನಗಿದೆಲ್ಲ ನಾನು ಹೇಳ್ತಿದೇನೆ. ನನ್ನ ಜೀವನ ಈಗ ನೂರು ತರಲೆ ತಾಪತ್ರಯಗಳಲ್ಲಿ ಗಂಟುಗಂಟಾಗಿ ಬಿಟ್ಟಿದೆ. ನಾನಾಗಿ ಇದನ್ನೆಲ್ಲ ಹರಕೊಳ್ಳಲಾರೆ. ದೇಶದಲ್ಲಿ ಜನ ಕ್ರಾಂತಿಗೆ ಸಿದ್ಧರಾದಾಗ ನಾನೆಲ್ಲ ಹರಕೊಂಡು ಅವರ ಜೊತೆ ನಿಂತಿರ್ತೇನಿ ಅಂತ ನನಗೆ ಗೊತ್ತು. ಗೋವಾದಲ್ಲಿ ಪೋಲೀಸರು ಒಂದು ಹೆಜ್ಜೆ ಮುಂದಿಟ್ಟೆ. ಗುಂಡಿನ ಶಬ್ದಕ್ಕಾಗಿ ಕಾದೆ. ಆಗ ಹಿಮ್ಮೆಟ್ಟುತ್ತಿದ್ದ ನನ್ನ

ಹಿಂದಿದ್ದ ಜನರೆಲ್ಲ ಇದ್ದಕ್ಕಿದ್ದಂತೆ ನುಗ್ಗಿಬಂದರು. ಪೋಲೀಸರು ಶೂಟ್‌ಮಾಡಲಾರದೆ ಸುಮ್ಮನೆ ನಿಂತರು. ನನ್ನ ಗರ್ವದ ಮಿತೀನ್ನ ನಾನು ಇಂಥ ಸಂದರ್ಭಗಳಲ್ಲಿ ಮೀರದರೆ ನೀನು ಮಾತ್ರ ಪ್ರತಿಕ್ಷಣಾನೂ ಮೀರತ ಹೋಗಬಲ್ಲೆ; ರೈತರವನಾದ್ದರಿಂದ ನೂರಾರು ಜನರನ್ನು ನಿನ್ನ ಜೊತೇಲಿ ತಗೊಂಡು ಹೋಗಬಲ್ಲೆ ಅಂತ ತಿಳಿದಿದ್ದೀನಿ. ಹೋಗಬಲ್ಲೆ ಅಲ್ಲ – ಹೋಗಲೇ ಬೇಕಾಗುತ್ತೆ. ಇದು ಸೈಂಟಿಫಿಕ್‌ಸತ್ಯ. ವ್ಯಕ್ತಿವಾದಿಯಾದರೆ ನಿನ್ನ ಸ್ವಭಾವ ಫ್ಯಾಸಿಸ್ಟಆಗ್ತಾ ಹೋಗುತ್ತೆ. ಆದ್ರಿಂದ ನೀನು ಮಾಸ್‌ಮ್ಯಾನ್‌ಆಗಬೇಕು. ವರ್ಗಹೋರಾಟದ ಮುಂಚೂಣಿಯಲ್ಲಿ ನಿನ್ನಂಥವರು ನಿಲ್ಲಬೇಕು. ಕಮ್ಯುನಿಸ್ಟರನ್ನು ಮರೆತು ಬಿಡು. ಈ ನೆಲದ ಸಾರವನ್ನು ಹೀರಿದ, ಈ ಕ್ಷುದ್ರ ಚರಿತ್ರೇನ್ನ, ಹಾಗೇ ವೈಭವವನ್ನು ಅರ್ಥಮಾಡಿಕೊಂಡ ಒಂದು ಹೊಸ ಕ್ರಾಂತಿಕಾರಿ ಪಕ್ಷಾನ್ನ ಈ ದೇಶದಲ್ಲಿ ನಾವು ಕಟ್ಟಬೇಕು. . . .'

ಅಣ್ಣಾಜಿ ಸ್ಫೂರ್ತಿಯಿಂದ ಮಾತಾಡುತ್ತ ಪರವಶನಾಗಿದ್ದ. ಕೃಷ್ಣಪ್ಪನನ್ನು ಅದು ಆವರಿಸಿತ್ತಾದರೂ ತನ್ನ ಆಳವಾದ ಸಂಶಯವನ್ನು ಹೇಳದೇ ಅವನಿಗೆ ವಿಧಿಯಿರಲಿಲ್ಲ.

'ಜನ ಇನ್ನಷ್ಟು ಸರಾಗವಾಗಿ ಉಣ್ಣೋ ಮಲಗೋ ಸಾಯೋ ಕೆಲಸ ಮಾಡಿಕೋತ ಹೋಗಲಿಕ್ಕೆ ಈ ಉಪದ್ವ್ಯಾಪವೆಲ್ಲ ಯಾಕೆ ಹೇಳು.'

ಅಣ್ಣಾಜಿಗೆ ಕೋಪ ಬಂತು.

'ಮುಚ್ಚು ಬಾಯಿ. ಗರ್ವದ ಮಾತಾಡಬೇಡ. ಜೀವನಕ್ಕಿಂತ ನೀನು ಶ್ರೇಷ್ಠ ಅಂತ ತಿಳಿಯೋಕೆ ನೀನು ಯಾರು ? ದೇವರ ? ಕ್ಷುದ್ರವಾದ ದೈನಿಕ, ದೈನಿಕ ಅಂತ ಗೋಳಿಡ್ತೀಯಲ್ಲ – ಅದನ್ನು ಬಿಟ್ಟು ಉಳಿದದ್ದೇನಿದೆ ? ಈ ದೈನಿಕ ಜೀವನಕ್ಕೆ ಪ್ರಭೇನ್ನ ತರೋದಕ್ಕಿಂತ ದೊಡ್ಡ ಕೆಲಸ ಏನಿದೆ ? ಸಮಾಧಿಯಲ್ಲೋ, ಭಕ್ತಿಯ ಪರವಶತೇಲೊ ಎಲ್ಲಕ್ಕಿಂತ ಮೇಲೆ ಹೋಗ್ತೀನಿ ಅಂತ ತಿಳಿದಿರೋ ಹಿಂಜಿದ ಬುದ್ಧಿಯ ಈಡಿಯಟ್ಟರಂತೆ ಮಾತಾಡಬೇಡ.'

ಈ ವರೆಗೆ ಯಾರೂ ಕೃಷ್ಣಪ್ಪನನ್ನು ಹೀಗೆ ಜರೆದಿರಲಿಲ್ಲ. ಈ ಮಾತಾಡುವಾಗ ಅಣ್ಣಾಜಿ ಅವನ ಬದುಕಿನ ಮಿತಿಗಳನ್ನು ಮೀರಿದ್ದು ಕಂಡು ಕೃಷ್ಣಪ್ಪ ಗೌರವದಿಂದ ಹೇಳಿದ – ತಾನು ಹೇಳೋದು ಅಪ್ರಸ್ತುತ ಎನ್ನಿಸಿದರೂ.

'ನೋಡು ನನಗೆ ಇಬ್ಬರು ಹತ್ತಿರದವರು ಇದಾರೆ. ಬುದ್ಧ ಮತ್ತು ಕ್ರಿಸ್ತ. ತಾಯಿಗೆ ಕ್ರಿಸ್ತ ಹೇಳಿದನಲ್ಲ 'ಏ ಹೆಂಗಸು ನೀನು ಯಾರು ?' ಅಂತ – ಅದ ನನಗೆ ಇಷ್ಟವಾದ ನಿಲುವು. ಹಾಗೇನೇ ನಮ್ಮ ಅಲ್ಲಮ, ನಾನಕ, ಕಬೀರರಂಥ ಅರೆ ಹುಚ್ಚರೂ ಯಾವುದೋ ದೊಡ್ಡ ಸತ್ಯಾನ್ನ ತಮ್ಮ ಮಾತಲ್ಲಿ ಆರದಂತೆ ಬಚ್ಚಿಟ್ಟಿದ್ದಾರೆ ಅಂತ ನನಗನ್ನಿಸುತ್ತೆ. ಆದ್ರಿಂದ ಜನರ ಹೊಟ್ಟೆ, ಬಟ್ಟೆ ಉಪದ್ವ್ಯಾಪಗಳಲ್ಲಿ ಮುಳುಗೋದೂಂದ್ರೆ. . . . .'

ತಾನು ಮಾತನ್ನು ಪೂರ್ಣ ಮಾಡಿದರೆ ತನ್ನ ಮನಸ್ಸಿನಲ್ಲಿ ನಿಜವಾಗಿ ಇರೋ ಗೊಂದಲಾನ್ನ ಸರಳಗೊಳಿಸದಂತೆ ಆದೀತೆಂದು ಕೃಷ್ಣಪ್ಪ ಅರ್ಧಕ್ಕೆ ನಿಲ್ಲಿಸಿದ.

ಅಣ್ಣಾಜಿ ಸುಮ್ಮನಿದ್ದ. ಕೃಷ್ಣಪ್ಪನೂ ಸುಮ್ಮನೇ ಕೂತ. ಪಾರ್ಕಿನಲ್ಲಿ ಗಾಳಿ ಹಿತವಾಗಿತ್ತು. ಹೊಸದಾಗಿ ಮದುವೆಯಾದ ದಂಪತಿಗಳು, ಚಿಕ್ಕ ಮಕ್ಕಳನ್ನು ಸಂತೈಸುತ್ತ ಕೂತ ಹೆಂಗಸರು, ಅವಳ ಡೊಳ್ಳು ಹೊಟ್ಟೆಯ ಗಂಡಂದಿರು, ನಿವೃತ್ತರಾದ ಮೇಲೆ ತಮ್ಮ ಬೆಳೆದ ಮಕ್ಕಳ ಜೊತೆ ಕಾದಾಡುವ ಮುದುಕರು, ಇಂಥ ಜೀವನ ಇನ್ನಷ್ಟೂ ಉಜ್ವಲವಾಗುತ್ತದೆ ಎಂದು ಅಣ್ಣಾಜಿ ಹೇಳುತ್ತಾನಲ್ಲ ಅದು ಹೇಗೆ ಎಂದು ಆಶ್ಚರ್ಯಪಡುತ್ತ ಕೃಷ್ಣಪ್ಪ ಕೂತ. ಅಣ್ಣಾಜಿ ಮೃದುವಾಗಿ ಹೇಳಿದ:

‘ನೀನು ಹೇಳಿದ ಯಾರೂ ಸಮಾಜ ಬಿಟ್ಟು ನಿಲ್ಲಲಿಲ್ಲ ಕೃಷ್ಣಪ್ಪ. ಅವರಿಗೂ ನಮಗೂ ಇರೋ ವ್ಯತ್ಯಾಸ ಅಂದ್ರೆ ಅವರು ಭ್ರಮೇಲಿ ಗೆಲ್ಲಲಿಕ್ಕೆ ನೋಡಿದರು. ನಾವು ಕಾರ್ಖಾನೇಲಿ, ಹೊಲದಲ್ಲಿ ನಿಜವಾಗಿ ಗೆಲ್ಲಲಿಕ್ಕೆ ಪ್ರಯತ್ನಪಡ್ತೇವೆ. ನೀನು ಹೀಗೆ ಪ್ರಾಮಾಣಿಕವಾಗಿ ಉಳಿದರೆ ನೀನೂ ನನ್ನ ಥರಾನೇ ಯೋಚನೆ ಮಾಡಲೇಬೇಕಾಗತ್ತೆ – ಇವತ್ತಲ್ಲ ನಾಳೆ.’

* * *

ಅಣ್ಣಾಜಿ ತಾನು ಪಾಠ ಹೇಳಿಕೊಡುತ್ತಿದ್ದ ಚನ್ನವೀರಯ್ಯನ ಮನೇಲಿ ಹೋಗಿ ಸದ್ಯಕ್ಕೆ ಇರುವುದೆಂಬ ತನ್ನ ನಿರ್ಧಾರವನ್ನು ಕೃಷ್ಣಪ್ಪನಿಗೆ ಹೇಳಿದ. ಈ ಮಫ್ತಿಯಲ್ಲಿರೋನು ಸಿಐಡಿ ಅಲ್ಲದಿರಬಹುದೆಂದು ಕೃಷ್ಣಪ್ಪನಿಗೆ ಅನುಮಾನ. ತನ್ನ ಸುತ್ತದ ರಹಸ್ಯದ ವಾತಾವರಣವನ್ನು ಬಯಸುವ ಅಣ್ಣಾಜಿಯ ಭ್ರಮೆಯಿರಬಹುದು ಅದು. ಇಲ್ಲವಾದಲ್ಲಿ ತನ್ನ ದಿನನಿತ್ಯದ ವಿಧಿಗಳೆಲ್ಲ ಅಣ್ಣಾಜಿಗೆ ಸಪ್ಪೆಯಾಗಿಬಿಡುತ್ತವೆ. ಆದರೆ ನಿಜವಾಗಿ ಹೆದರಿದಂತೆಯೂ ಅವನು ಕಾಣುತ್ತಿದ್ದ.

‘ನಾನು ದೀಪ ಆರಿಸಿ ಹೊರಗೆ ಹೊರಟು ಹೋಗ್ತೇನೆ. ಸ್ವಲ್ಪ ಹೊತ್ತು ಬಿಟ್ಟು ನೀನು ನನ್ನ ಬೆಡಿಂಗ್ಮತ್ತು ಪುಸ್ತಕಗಳನ್ನು ಚನ್ನವೀರಯ್ಯನ ಮನೆಗೆ ಸಾಗಿಸು. ಆ ಹಂದಿಗದು ಗೊತ್ತಾಗದಂತೆ’ ಎಂದು ಪಿಸುಗುಟ್ಟಿ ಅಣ್ಣಾಜಿ ದೀಪ ಆರಿಸಿ ಹೊರಟ. ಕೃಷ್ಣಪ್ಪ ಕಿಟಕಿಯ ಮೂಲಕ ಮಫ್ತಿಯವನ ಚಲನ ವಲನಗಳನ್ನು ಗಮನಿಸುತ್ತ ನಿಂತ. ಅಣ್ಣಾಜಿ ದೀಪ ಆರಿಸಿ ಇಳಿದದ್ದನ್ನ ಅವನು ಗಮನಿಸಿರಬಹುದೆಂದು ಅನುಮಾನವಾಯಿತು. ಆತನೂ ಅಲ್ಲಿಂದ ಕದಲಿದ. ಅಣ್ಣಾಜಿಯ ಬೆನ್ನು ಹತ್ತಿ ಅವನು ನಡೆದಿರಬಹುದು. ಅಣ್ಣಾಜಿ ಇದನ್ನು ಮೊದಲೇ ಊಹಿಸಿ, ತಾನು ಸೀದ ಚನ್ನವೀರಯ್ಯನ ಮನೆಗೆ ಹೋಗುವುದಿಲ್ಲವೆಂದೂ ಕಾಕ ಹೋಟೆಲಲ್ಲಿ ಏನಾದರೂ ತಿಂದು, ತಾನು ಟ್ಯೂಶನ್ಹೇಳುವ ಒಂದೆರಡು ಮನೆಗಳಿಗೆ ಹಾಗೇ ಭೇಟಿ ಕೊಟ್ಟು, ಇನ್ನೊಂದು ತಿಂಗಳು ತಾನು ಬರುವುದಿಲ್ಲವೆಂದು ಹೇಳಿ, ಬಳಸುದಾರಿಯಲ್ಲಿ ಚನ್ನವೀರಯ್ಯನ ಮನೆಗೆ ಹೋಗುತ್ತೇನೆಂದೂ ಕೃಷ್ಣಪ್ಪನ ಜತೆ ತನ್ನ ಗೆರಿಲ್ಲಾ ಉಪಾಯಗಳನ್ನು ಸೂಚಿಸಿದ್ದ.

ಸ್ವಲ್ಪ ಹೊತ್ತಿನ ಮೇಲೆ ಮಫ್ತಿಯಲ್ಲಿದ್ದವನು ಇನ್ನೂ ಹತ್ತಿರ ಪ್ರತ್ಯಕ್ಷವಾದ. ಬೋಡುತಲೆ ದಪ್ಪ ಕತ್ತುಗಳ, ಕೋಟ್ ಹಾಕಿ ಪಂಚೆಯುಟ್ಟ ಅವನು ಸಿಗರೇಟು ಕೊಳ್ಳುತ್ತ ಕೋಣೆಯ ಎದುರಿನ ಬೀದಿಯ ಮಗ್ಗಲಲ್ಲೆ ನಿಂತಿದ್ದ. ಕೃಷ್ಣಪ್ಪ, ಅವನನ್ನು ಗುರುತಿಟ್ಟುಕೊಳ್ಳಲು ಸೂಕ್ಷ್ಮವಾಗಿ ಗಮನಿಸಿದ. ಅವನ ಪಂಚೆ ಶುಭ್ರವಾಗಿತ್ತು. ಅಡಿಕೆ ತೋಟದ ಸಾಹುಕಾರನಂತೆ ಕಾಣುತ್ತಿದ್ದ. ಹಳ್ಳಿಯಿಂದ ಅಡಿಕೆ ಮಾರಲು ಬಂದಿರಬಹುದು. ಈ ಬೀದಿಯ ಸುತ್ತಮುತ್ತ ಇರುವರೆಂದು ಹೇಳಲಾದ ಯಾವುದೋ ವೇಶಯ್ಯ ಮನೆಯೊಳಗೆ ಹೋಗಲು ಪ್ರಶಸ್ತವಾದ ಸಮಯಕ್ಕಾಗಿ ಕಾಯುತ್ತಿರಬಹುದು. ಇಂಥ ಕ್ಷುಲ್ಲಕ ಸಿಐಡಿ

ಕೆಲಸಕ್ಕೆ ತಾನು ನಿಲ್ಲಬೇಕಾಯಿತೆಂದು ಕೃಷ್ಣಪ್ಪನಿಗೆ ರೇಗಿತು. ಈ ವರೆಗೆ ಭಾಗವಹಿಸಿದ ಎಲ್ಲ ಚಳವಳಿಗಳಲ್ಲೂ ಗಾಂಧಿವಾದಿಯಾಗಿದ್ದ ಕೃಷ್ಣಪ್ಪನಿಗೆ ರಾಜಾರೋಷವಾಗಿ ಮಾಡಲಾಗದ ಅಣ್ಣಾಜಿಯ ರಾಜಕೀಯದಲ್ಲೇನೋ ತಪ್ಪಿದೆ ಎನ್ನಿಸಿತು. ತಾನು ಇದ್ದ ಪಾರ್ಟಿಗಳನ್ನೆಲ್ಲ ಒಡೆಯುತ್ತ ಕೃತ್ರಿಮಗಳಿಗೆ ಟ್ಯಾಕ್ಟಿಕ್ಸ್ಎಂಬ ಹೆಸರು ಕೊಟ್ಟು ಅಣ್ಣಾಜಿ ಮಾಡುತ್ತಿದ್ದ ಕಾರಸ್ತಾನಗಳಲ್ಲೇ ಪಕ್ವವಾಗುತ್ತ ಹೋಗಬೇಕಾದ ರಾಜಕೀಯ ಕ್ರಾಂತಿ, ಕೃಷ್ಣಪ್ಪನ ಸ್ವಭಾವಕ್ಕೆ ಒಗ್ಗಿರಲಿಲ್ಲ. ಆದರೆ ಅಣ್ಣಾಜಿ ದಾರ್ಶನಿಕನಂತೆಯೂ ಕೃಷ್ಣಪ್ಪನಿಗೆ ಕಂಡಿದ್ದ. ತನ್ನ ಹತ್ತಿರ ಅವನು ಮುಚ್ಚುಮರೆ ಮಾಡುತ್ತಿರಲಿಲ್ಲ.

ಕೋಟು ಪಂಚೆಯ ವ್ಯಕ್ತಿ ತನ್ನ ಜೇಬಿನಿಂದ ಕಪ್ಪು ಟೊಪ್ಪಿ ತೆಗೆದು ತಲೆಗೆ ಹಾಕಿಕೊಂಡು ಒಂದು ಜಟಕ ಹತ್ತಿದ್ದನ್ನು ಕೃಷ್ಣಪ್ಪ ನೋಡಿದ. ಅವನು ಕಣ್ಮರೆಯಾದ ಮೇಲೆ ಹೋಗಿ ಒಂದು ಜಟಕಾ ತಂದು ಅಣ್ಣಾಜಿಯ ಸರ್ವಸ್ವವಾದ ಹೋಲ್ಡಾಲಿನಲ್ಲಿ ಎಲ್ಲವನ್ನೂ ತುಂಬಿಕೊಂಡು ಬಳಸುದಾರಿಯಲ್ಲಿ ಚನ್ನವೀರಯ್ಯನ ಮನೆಗೆ ಹೋದ.

* * *

ಚನ್ನವೀರಯ್ಯ ಸುಮಾರು ಮುವ್ವತ್ತು ವರ್ಷ ವಯಸ್ಸಿನ ಶ್ರೀಮಂತ. ಅವನ ವೃತ್ತಿ ಕಂಟ್ರ್ಯಾಕ್ಟು. ಊರಿನ ಮುನಸಿಪಾಲಿಟಿಯ ಮೆಂಬರ್. ಪ್ರಸಿಡೆಂಟಾಗುವ ಸನ್ನಾಹದಲ್ಲಿದ್ದ. ಊರಿನ ರೋಟರಿ ಕ್ಲಬ್ಬಿನ ಸದಸ್ಯನೂ ಆಗಿದ್ದ ಅವನಿಗೆ ತಾನು ರೋಟರಿ ಗವರ್ನರ್ ಆಗಿ ಅಮೆರಿಕಾಕ್ಕೆ ಹೋಗಬೇಕೆಂಬ ಆಸೆಯಿತ್ತು. ಸ್ವಾತಂತ್ರ್ಯಬಂದ ಮೇಲೆ ಕಾಂಗ್ರೆಸ್‌ಸೇರಿ ಸಿಲ್ಕಿನ ಕ್ಲೋಸ್‌ಕಾಲರ್ ಕೋಟು, ಪ್ಯಾಂಟ್‌ಗಳನ್ನು ಧರಿಸಿ ಕಾರಿನಲ್ಲಿ ಓಡಾಡುತ್ತ ಪೇಪರಲ್ಲಿ ಆಗೀಗ ಸುದ್ದಿಯಾಗುವಷ್ಟು ಗಣ್ಯವ್ಯಕ್ತಿಯಾಗಿದ್ದ.

ಆತನ ಆಸೆಗಳ ಪೂರೈಕೆಗಿದ್ದ ಒಂದು ಕೊರತೆಯೆಂದರೆ ಅವನಿಗೆ ಸರಿಯಾಗಿ ಇಂಗ್ಲೀಷ್‌ಬರದೇ ಇದ್ದದ್ದು. ರೋಟರಿಯ ಪ್ರೆಸಿಡೆಂಟಾಗುವುದೂ ಈ ಐಬಿನಿಂದಾಗಿ ಸಾಧ್ಯವಾಗದೆ ಕಾಲೇಜಲ್ಲಿದ್ದಾಗ ತಾನು ಪುಂಡಾಟಿಕೆಯಲ್ಲಿ ಕಾಲ ಕಳೆದದ್ದಕ್ಕಾಗಿ ವಿಷಾದ ಪಡುತ್ತಿದ್ದ. ಎಷ್ಟು ಹಣವಿದ್ದರೂ ಅವನ ವರ್ಚಸ್ಸು ಊರಿನ ಆಚೆ ನಡೆಯುತ್ತಿರಲಿಲ್ಲ.

ಪೋಲೀಸ್‌ಮುಖ್ಯರನ್ನೆಲ್ಲ ಕಬ್ಬುಗಳಲ್ಲಿ ಕಾಣುತ್ತಿದ್ದ ಈ ವ್ಯಕ್ತಿಯ ಆಪ್ತನಾಗಲು ಇಷ್ಟಪಟ್ಟು ಅಣ್ಣಾಜಿ ಜಿಲ್ಲೆಗೆ ಬಂದ ಮೊದಲ ವಾರದಲ್ಲಿ ಅವನನ್ನು ಹೋಗಿ ನೋಡಿ ಇಂಗ್ಲಿಷಲ್ಲಿ ಮಾತಾಡಿಸಿದ್ದ. ತಾನು ಸ್ಟೇಟ್ಸ್ ಮನ್ನಿನ ಸಂಪಾದಕ ವರ್ಗದಲ್ಲಿ ಕೆಲಸ ಮಾಡಿದವನೆಂದೂ ಈಗ ಕೆಲಸ ಬಿಟ್ಟು ಒಂದು ಪುಸ್ತಕ ಬರೆಯುತ್ತಿರುವುದಾಗಿಯೂ ತನ್ನ ಹೆಸರು ಅಣ್ಣಾಜಿ ಎಸ್. ಕತ್ರೆಯೆಂದೂ ಪರಿಚಯ ಮಾಡಿಕೊಂಡು ಊರಿನ ಗಣ್ಯವ್ಯಕ್ತಿಯೂ ಕಾಂಗ್ರೆಸ್‌ಧುರೀಣನೂ ಆದ ಚನ್ನವೀರಯ್ಯ ಈ ಜಿಲ್ಲೆಯ ಸ್ವಾತಂತ್ರ್ಯಯೋಧರ ಕಥೆಗಳನ್ನು ತಾನು ಬರೆಯುತ್ತಿರುವ ಪುಸ್ತಕಕ್ಕೆ ಒದಗಿಸಲು ಸಾಧ್ಯವೇ ಎಂದು ಕೇಳಿದ್ದ.

ಅಮೃತಶಿಲೆಯ ಕಲ್ಲು ಹಾಸಿದ ಹಜಾರದಲ್ಲಿ ಬೆತ್ತದ ಕುರ್ಚಿ ಮೇಲೆ ತುಂಬ ತಿಳಿದವನಂತೆ ಕೂತು ತಲೆಹಾಕುತ್ತ ಚನ್ನವೀರಯ್ಯ ಕೇಳಿಸಿಕೊಂಡ. ರೇಡಿಯೋದಲ್ಲಿ ಕೇಳಿಬರುವ ಇಂಗ್ಲಿಷಿನಂತೆ ನಿರರ್ಗಳವಾದ ಅಣ್ಣಾಜಿಯ ಇಂಗ್ಲಿಷ್‌ನಿಂದ ಬೆವರುತ್ತ, ಏನೋ ತಿಳಿದವನಂತೆ ಮಾತಿನ ಮಧ್ಯೆ'ಐಸೀ' 'ಆಲ್‌ರೈಟ್' ಎನ್ನುತ್ತ, ಈ ಭೇಟಿ ಮುಗಿಯುವುದಕ್ಕಾಗಿ ಕಾದ.

ಟೀ ತರಲೆಂದು ಒಳಗೆ ಹೋಗಿ, ಮ್ಯಾಜಿಸ್ಟ್ರೇಟರ್ ಮಗಳಾದ್ದರಿಂದ ಕಾನ್ವೆಂಟಲ್ಲಿ ಓದಿದ್ದ ಹೆಂಡತಿಯನ್ನು' ಅವನು ಏನು ಹೇಳ್ತಿದ್ದಾನೆ? ಒಳ್ಳೇ ರೈಲು ಬಿಟ್ಟಂಗೆ ಮಾತಾಡ್ತಾನೆ – ಗೊತ್ತೇ ಆಗ್ಲಿಲ್ಲ' ಎಂದು ಜಬರದಸ್ತಿನಲ್ಲಿ ಮುಗಳ್ನಗುತ್ತ ಕೇಳಿದ. ತನ್ನ ರೋಟರಿಯ ಪ್ರಗತಿಯ ಅನೇಕ ಅಗತ್ಯಗಳಲ್ಲಿ ಇಂಗ್ಲಿಷ್ಮಾತಾಡಬಲ್ಲ ಹೆಣ್ಣೂ ಒಂದೆಂದು ತನ್ನ ಶ್ರೀಮಂತಿಕೆಯ ಬಲದಿಂದ ಉಮೆಯನ್ನು ಗಳಿಸಿದ್ದ. ಕಸೂತಿ ಹಾಕುತ್ತ ಅಣ್ಣಾಜಿಯ ಮಾತುಗಳನ್ನು ಒಳಗಿನಿಂದ ಕೇಳಿಸಿಕೊಂಡ ಉಮಾ ಡೈನಿಂಗ್ಟೇಬಲಿನಲ್ಲಿ ಮೇಲೆ ಟೀ ಮತ್ತು ಬಿಸ್ಕತ್ತುಗಳನ್ನಿಡುತ್ತ ಗಂಡನಿಗೆ ಅವನ ಮಾತಿನ ತಾತ್ಪರ್ಯ ತಿಳಿಸಿ ಅವನನ್ನು ಒಳಗೆ ಕರೆಯುವಂತೆ ಹೇಳಿದಳು. ಚನ್ನವೀರಯ್ಯ 'ಕಮ್ಇನ್' ಎಂದ ಮೇಲೆ ಒಳ ಹೋದ ಅಣ್ಣಾಜಿ ಉಮೆಗೆ ಗೌರವದಿಂದ ಬಾಗಿ, ತಾನು ಕೊಲ್ಹಾಪುರದಲ್ಲಿದ್ದಾಗ ಕನ್ನಡ ಬರುತ್ತಿತ್ತೆಂದೂ ಈ ಊರಲ್ಲಿ ತನ್ನ ಬಿಡುವು ಸಮಯದಲ್ಲಿ ಕೆಲವು ಹುಡುಗರಿಗೆ ಇಂಗ್ಲಿಷ್ಹೇಳಿಕೊಡುತ್ತಿದ್ದೇನೆಂದೂ ತನ್ನ ಹರಕು ಮುರುಕು ಕನ್ನಡದಲ್ಲಿ ತಿಳಿಸಿದ. ಸ್ವಾತಂತ್ರ್ಯಬಂದರೂ ನಮ್ಮ ಜನಕ್ಕೆ ಇಂಗ್ಲಿಷ್ವ್ಯಾಮೋಹ ಹೋಗಲಿಲ್ಲ. ನೀವು ಕನ್ನಡದಲ್ಲಿ ಆರೇಟರ್ ಅಂತ ಕೇಳಿದೀನಿ ಎಂದು ಚನ್ನವೀರಯ್ಯನನ್ನು ಹೊಗಳಿ ಟೀಯನ್ನು ಸವಿದು ಉಮೆಯನ್ನು ಅಭಿನಂದಿಸಿದ.

ಚನ್ನವೀರಯ್ಯ ಹೀಗೆ ಹಠಾತ್ತನೆ ತನಗೊಬ್ಬ ಬುದ್ಧಿಜೀವಿಯ ಸ್ನೇಹವಾಗಿದ್ದರಿಂದ ಹಿಗ್ಗಿದ. ತನ್ನ ರೋಟರಿ ಗೆಳೆಯರಿಗೆ ಇಷ್ಟು ನಿರರ್ಗಳ ಇಂಗ್ಲಿಷ್ಮಾತನಾಡುವವನನ್ನು ಗುರುತುಮಾಡಿಕೊಟ್ಟು ಅವರ ಗರ್ವ ಇಳಿಸಿಬೇಕೆಂದುಕೊಂಡ. ತಾನು ಗುಪ್ತವಾಗಿ ಅವನಿಂದ ಇಂಗ್ಲಿಷ್ಕಲಿಯಬೇಕೆಂದು ನಿರ್ಧರಿಸಿದ.

ಅಣ್ಣಾಜಿಯ ಪ್ಲಾನ್ಅವನು ತಿಳಿದದ್ದಕ್ಕಿಂತ ಹೆಚ್ಚು ಯಶಸ್ವಿಯಾಗಿತ್ತು. ಪ್ರತಿ ಬೆಳಿಗ್ಗೆ ಚನ್ನವೀರಯ್ಯ ಅಣ್ಣಾಜಿಯನ್ನು ಕಾರ್ ಕಳಿಸಿ ಕರೆಸಿಕೊಳ್ಳುತ್ತಿದ್ದ. ಸುಪ್ರಭಾತ ಕೇಳಿಸಿಕೊಳ್ಳುತ್ತ ಲಾನ್ಮೇಲೆ ಅಡ್ಡಾಡುವ ಚನ್ನವೀರಯ್ಯ ಗೇಟಿನಿಂದಲೇ ಅಣ್ಣಾಜಿಯನ್ನು ತಾನು ಕಲಿಯುತ್ತಿದ್ದ ಸಂಭಾಷಣೆಯ ಇಂಗ್ಲಿಷಿಂದ ಸ್ವಾಗತಿಸಿ, ಒಳಗೆ ಕರೆದುಕೊಂಡು ಹೋಗುತ್ತಿದ್ದ. ಬ್ರೇಕ್ಫಾಸ್ಟ್ನಡೆಯುವಾಗ ಈ ಇಂಗ್ಲಿಷ್ಸಂಭಾಷಣೆ ಮುಂದುವರಿಯುತ್ತಿತ್ತು. ಇದು ಚೆನ್ನಾಗಿದೆ, ವಂದನೆ, ಸಕ್ಕರೆ ಬೇಕೋ? ಎಷ್ಟು ಚಮಚ? ಇವತ್ತಿನ ಹವೆ ಚೆನ್ನಾಗಿದೆ ಇತ್ಯಾದಿಗಳನ್ನು ಹೇಳುತ್ತ ಕೇಳುತ್ತ, ಚನ್ನವೀರಯ್ಯ ಕಾಲೇಜಿನಲ್ಲಿ ತಪ್ಪಾಗಿ ಕಲಿತದ್ದನ್ನೆಲ್ಲ ಅಣ್ಣಾಜಿ ತಿದ್ದುತ್ತ ಬ್ರೇಕ್ಫಾಸ್ಟ್ಮುಗಿಯುತ್ತಿತ್ತು. ಇಷ್ಟಕ್ಕಿಂತ ಹೆಚ್ಚು ಇಂಗ್ಲಿಷ್ಗೊತ್ತಿದ್ದ ಉಮೆ ಅಣ್ಣಾಜಿಯ ವಿದ್ಯಾವಂತ ನಡೆನುಡಿಗಳಿಂದ ಖುಷಿಪಡುತ್ತ ಬಡಿಸುತ್ತಿದ್ದಳು. ಅವನಷ್ಟು ಸುಶಿಕ್ಷಿತರು ಯಾರೂ ಅವಳ ಮನೆಗೆ ಬರುತ್ತಿರಲಿಲ್ಲ. ಬರುವವರೆಲ್ಲ ಕಾಳಸಂತೆಕೋರರು, ಜೂಜುಗಾರರು, ಒರಟಾಗಿ ಮಾತಾಡುತ್ತ, ತಾನೊಬ್ಬಳು ಒಳಗಿದ್ದೇನೆಂಬುದನ್ನು ಗಮನಿಸದೆ ಕೊಟ್ಟ ತಿಂಡಿ ಕಾಫಿಗಳನ್ನು ಹೀರಿ, ತೇಗಿ, ತಮ್ಮ ಮೆಟ್ಟಿಗೆ ಅಂಟಿದ್ದ ಮಣ್ಣು ಸಗಣಿಗಳನ್ನು ಕಾರ್ಪೆಟ್ಟಿಗೆ ಒರೆಸಿ ಹೋಗುವವರು. ತಮ್ಮ ಮನೆಯ ಈ ಶ್ರೀಮಂತಿಕೆ ಬಗ್ಗೆ ಅಣ್ಣಾಜಿಯಲ್ಲಿದ್ದ ಸೂಕ್ಷ್ಮ ತಿರಸ್ಕಾರವನ್ನವಳು ಗಮನಿಸಿದ್ದಳು. ಈ ಇಂಗ್ಲಿಷ್ಪಾಠ ಇತ್ಯಾದಿಗಳನ್ನು ಯಾವುದೋ ಗುಪ್ತ ಉದ್ದೇಶಕ್ಕಾಗಿ ಈತ ಮಾಡುತ್ತಿದ್ದಾನೆ, ಇವನು ರಹಸ್ಯ ವ್ಯಕ್ತಿ ಎಂದು ಅವಳಿಗೆ ಗುಮಾನಿ ಬಂದಿತ್ತು. ಎಳಸಾದ ಮೂಗು ತುಟಿಗಳ, ಸ್ವಲ್ಪ ಕಂದು ಬಣ್ಣದ ಮುಖದ, ಚುರುಕಾದ ಚಿಕ್ಕ ಕಣ್ಣುಗಳ, ಚಿರತೆಯಂಥ ಮೈಕಟ್ಟಿನ ಉಮೆಯನ್ನು ಅಣ್ಣಾಜಿ ಬಹಳ ಸೂಕ್ಷ್ಮವಾಗಿ ಖುಷಿಪಡಿಸುತ್ತಿದ್ದ. ಅವಳ ಇರುವಿಕೆಯನ್ನ ಏಕಾಗ್ರವಾಗಿ ತನ್ನ ಇಡೀ ವ್ಯಕ್ತಿತ್ವ ಗಮನಿಸುತ್ತಿದೆ ಎಂಬುದನ್ನು ಯಾವ ಮಾತೂ ಆಡದೆ ಅವಳಿಗೆ ತಿಳಿಯುವಂತೆ ಮಾಡುತ್ತಿದ್ದ. ಅವನಿಗೆ ಶ್ರೀಮಂತರ ಬಗ್ಗೆ ಇದ್ದ ತಿರಸ್ಕಾರ, ಅವನು ಮೌನವಾಗಿದ್ದಾಗಿನ ಅವನ ಮುಖದ ಅಗಮ್ಯ ಭಾವಗಳನ್ನು ಗುರುತಿಸಿದ್ದ ಉಮೆ ತನ್ನ ಬಗೆಗಿದ್ದ ಅವನ ಗೌರವದಿಂದ ಕೃತಜ್ಞಳಾಗಿದ್ದಳು.

ಅವನು ನೇರ ಹೇಳದಿದ್ದರೂ ಅವನಿಗೆ ಇಷ್ಟವೆಂದು ಗಮನಿಸಿ ಅವಳು ಥಳುಕಿನ ರೇಯಾನ್‌ಸೀರೆಗಳನ್ನು ಬಿಟ್ಟು ಗಂಜಿ ಹಾಕಿ ಇಸ್ತ್ರೀ ಮಾಡಿದ ಹತ್ತಿಯ ಸೀರೆಯನ್ನೇ ಉಡುವಳು. ಅವನು ಹೋಗುವಾಗ ವಿಶೇಷ ತಿಂಡಿಯೇನಾದರೂ ಮಾಡಿದ್ದರೆ ಅವರಿಗೆ ಕೊಡಿರೆಂದು ಗಂಡನಿಗೆ ಹೇಳಿ ಟಿಫನ್‌ಬಾಕ್ಸಿನಲ್ಲಿಟ್ಟು ಕೊಡುವಳು. ಅವನು ಗಂಡನ ನೆಪದಲ್ಲಿ ತನಗೆಂದೇ ತಂದು ಕೊಡುತ್ತಿದ್ದ ಗಾರ್ಕಿ ಚೆಕಾವ್‌ಕಥೆಗಳನ್ನೆಲ್ಲ ಓದಿ ಮೆಚ್ಚಿಕೆ ಸೂಸುವಳು. 'ನನಗೆ ಓದಲು ಬಿಡುವೇ ಇರುವುದಿಲ್ಲ. ಅವಳು ನಿತ್ಯ ಓದಿ ಹೇಳ್ತಾಳೆ' ಎಂದು ಚನ್ನವೀರಯ್ಯ ನಗುತ್ತ ಇಂಗ್ಲಿಷಲ್ಲಿ ಹೇಳಿದಾಗ ಅಣ್ಣಾಜಿ ನಿರ್ಭಾವದಿಂದ ಅವನನ್ನು ತಿದ್ದುವನು.

'She will read it everyday ಅಲ್ಲ – She reads it everyday to me'

'Yes. Yes. She reads it everyday to me – ನನ್ನ ಫ್ರೆಂಡ್ಸೆಲ್ಲ ಡಬಲ್‌ಗ್ರಾಜುಯೇಟ್ಸಆದರೂ ಈ ತಪ್ಪು ಮಾಡ್ತಾರೆ ನೋಡಿ. ಹಾಗಾಗಿ ನಂಗೂ ಅದೇ ಅಭ್ಯಾಸವಾಗಿ ಹೋಗಿದೆ' – ಚನ್ನವೀರಯ್ಯ ನಗುತ್ತ ಸಿಗರೇಟ್‌ಹೊತ್ತಿಸಿ ಅಣ್ಣಾಜಿಗೂ ನೀಡುವನು.

'You must first offer it to me' ಎಂದು ಅಣ್ಣಾಜಿ ನಗುವನು. ಚನ್ನವೀರಯ್ಯ 'Excuse me' – ಎನ್ನುವನು. ತಾನು ಇದನ್ನು ಗಮನಿಸುತ್ತಿದ್ದೇನೆಂಬುದನ್ನು ಅಣ್ಣಾಜಿಯೂ ಅರಿತಿರುವುದು ಕಂಡು ಉಮೆಗೆ ದಿಗಿಲಾಗುವುದು.

ತನ್ನ ರೂಮು ಅಪಾಯವೆಂದು ಹೆದರಿದ್ದ ಅಣ್ಣಾಜಿ ಚನ್ನವೀರಯ್ಯನಿಗೆ ಇಂಗ್ಲಿಷಲ್ಲಿ ಹೇಳಿದ್ದ – ಬ್ರೇಕ್‌ಫಾಸ್ಟ್‌ಸಮಯದಲ್ಲಿ:

'ನನ್ನ ರೂಮು ಪಿಗ್‌ಸ್ಟೈ ಇದ್ದಂಗಿದೆ. ಹೊರಗೆ ಕ್ಯಾಟ್ಸಅಂಡ್‌ಡ್ಯಾಗ್ಸಆಗಿ ಮಳೆ ಬೀಳುವಾಗಂತೂ ಒಳಗೆ ಮಳೆ ಡ್ರಿಪ್‌ಆಗಲು ಶುರುವಾಗತ್ತೆ. ಕೆಲವು ಸಾರಿ ಘರ್ರೆಯಾದ ಕಂಬಳಿ ಹುಳುಗಳು ಮೂವಿಂಗ್ ರ್ಯಾಗ್‌ಸ್‌ನಂತೆ ಗೋಡೆ ಮೇಲೆ ಹರೀತಿರ್ತಾವೆ.'

ತನಗೆ ಇಂಗ್ಲಿಷಿನ ಈಡಿಯಮ್ಮುಗಳ ಇನ್ನೊಂದು ಪಾಠವೋ ಇದು, ಅಥವಾ ಏನಾದರೂ ಅಣ್ಣಾಜಿ ಹೇಳುತ್ತಿರುವನೋ, ಅಥವಾ ಎರಡೂ ಒಟ್ಟಿಗೋ – ಥಟ್ಟನೆ ಅರಿಯಲಾರದೆ ಪುಂಖಾನುಪುಂಖವಾದ ಪದವೃಂದಗಳಿಗೆ ಸೋಜಿಗಪಡುತ್ತ ನೆನಪಿಡಲು ಪ್ರಯತ್ನಿಸುತ್ತ ಚನ್ನವೀರಯ್ಯ ಕೇಳಿಸಿಕೊಂಡ. ಗಂಡ ಪೆದ್ದಾಗಿ ಕೇಳಿಸಿಕೊಳ್ಳುವುದು ನೋಡಿ ಉಮೆಗೆ ನಗು ಬಂತು.

'ನನಗೊಂದು ರೂಮು ಬೇಕು. ಮುನಿಸಿಪಾಲಿಟಿ ಸದಸ್ಯರಲ್ಲವೇ ನೀವು ಮಿಸ್ಟ್‌ಚನ್ನವೀರಯ್ಯ. ಎಲ್ಲಾದರೂ ರೆಕಮೆಂಡ್‌ಮಾಡಿ ಕೊಡಿಸುತ್ತೀರ?'

ಚನ್ನವೀರಯ್ಯ ಇನ್ನೂ ಚೇತರಿಸಿಕೊಂಡಿರಲಿಲ್ಲ. ಅವನಿಗೆ ಇಂಗ್ಲಿಷಿನಲ್ಲಿ ಆಗಿದ್ದ ಆಘಾತ 'ಮುನಿಸಿಪಾಲಿಟಿ ಸದಸ್ಯ ತಾನು' ಎಂಬ ತನ್ನ ಘನತೆಯನ್ನು ನೆನಪು ಮಾಡಿ ಕೊಡುವಂಥ ಅರ್ಥವಾಗುವ ಮಾತಿನಿಂದ ಕಡಿಮೆಯಾದಂತಾಗಿ ಚನ್ನವೀರಯ್ಯನ ಮುಖದಲ್ಲಿ ಸಮಾಧಾನ ಮೂಡಿತು. ಅವನ ಮುಗಳ್ನಗುವಿನ ಅಸಂಬದ್ಧತೆಯನ್ನು ಸವಿಯುತ್ತ ಅಣ್ಣಾಜಿ ಸುಮ್ಮನೆ ಕೂತ. ಉಮ ಕನ್ನಡದಲ್ಲಿ ಹೇಳಿದಳು.

'ಅಷ್ಟು ಕೆಟ್ಟ ರೂಮಲ್ಲಿ ನೀವು ಯಾಕಿರಬೇಕು ? ಗರಾಜ್‌ಮೇಲೆ ನಮ್ಮ ಗೆಸ್ಟ್‌ರೂಮಿದೆಯಲ್ಲ. ಬೇರೆ ರೂಮು ಸಿಗುವ ತನಕ ಇಲ್ಲೇ ಬಂದಿರಿ.'

ಚನ್ನವೀರಯ್ಯ ಸುಧಾರಿಸಿಕೊಳ್ಳುತ್ತ 'ಎಸ್. ಎಸ್.' ಎಂದ. ತಾನೂ ಗರಾಜ್‌ಅನ್ನುವುದನ್ನು ಪದೇ ಪದೇ ಮರೆತು 'ಗ್ಯಾರೇಜ್' ಅಂದು ಅಣ್ಣಾಜಿಯಿಂದ ತಿದ್ದಿಸಿಕೊಳ್ಳುತ್ತಿದ್ದರೂ ತನ್ನ ಹೆಂಡತಿ ಉಮಾ ಎಷ್ಟು ಬೇಗ ಸರಿಯಾದ ಉಚ್ಚಾರಣೆಯನ್ನು ಹಿಡಿದುಬಿಡುವಳೆಂದು ಅವನಿಗೆ ಸಿಟ್ಟು, ಮಾತ್ಸರ್ಯ, ಇಂಥವಳು ತನ್ನ ವಸ್ತುವೆಂಬ ಅಭಿಮಾನ ಒಟ್ಟಿಗೇ ಹುಟ್ಟಿದವು.

ಕೃಷ್ಣಪ್ಪ ತಂದ ಟ್ರಂಕು ಬೆಡ್ಡಿಂಗನ್ನು ಉಮೆಯೇ ಜವಾನನ ಮುಖಾಂತರ ಗೆಸ್ಟ್‌ರೂಮಿಗೆ ಸಾಗಿಸಿದಳು. ಅಣ್ಣಾಜಿಯ ಅದೃಷ್ಟವನ್ನು ಕೃಷ್ಣಪ್ಪ ಆಶ್ಚರ್ಯದಿಂದ ಗಮನಿಸಿದ. ಇಲ್ಲಿ ಅಣ್ಣಾಜಿಯ ಕ್ವಿಲ್ಟ್‌ನ ಅಗತ್ಯವಿರಲಿಲ್ಲ. ಬೀರುವಿನಲ್ಲಿ ಅದನ್ನು ಉಮೆ ಇರಿಸಿದಳು. ಬುಕ್‌ಕೇಸಿನಲ್ಲಿ ತಾನೇ ಪುಸ್ತಕಗಳನ್ನು ಜೋಡಿಸಿದಳು. ಬೇಟೆ ಮರದ ಕಾಟ್‌ನ ಮೇಲೆ ಡನ್‌ಲಪ್‌ಹಾಸಿಗೆ ಹಾಸಿತ್ತು. ಅದರ ಮೇಲೆ ಶುಭ್ರವಾದ ಬಿಳಿ ಶೀಟನ್ನು ಟಕ್ ಮಾಡಿ ಮೇಲೆ ಪಕ್ಷಿಗಳ ಚಿತ್ರವಿದ್ದ ಇನ್ನೊಂದು ಬಟ್ಟೆ ಹಾಸಿತ್ತು. ಮೇಜಿನ ಮೇಲೆ ತಣ್ಣೀರನ ಫ್ಲಾಸ್ಕ್‌ಹಾಸಿತ್ತು. ಕಿತ್ತಲೆ ಬಣ್ಣದ ಕರ್ಟನ್‌ಗಳನ್ನು ಕಿಟಕಿಗೆ ಹಾಕಲಾಗಿತ್ತು. ಈ ರೂಮಿನಲ್ಲಿ ಅಣ್ಣಾಜಿಯ ಬಣ್ಣಗೆಟ್ಟ ಅಂಕು ಡೊಂಕಾದ ಟ್ರಂಕು ಅತ್ಯಂತ ಕ್ಷುದ್ರವಸ್ತುವಿನಂತೆ ಸೈಡ್‌ಟೇಬಲ್‌ಮೇಲಿರುವುದನ್ನು ಉಮೆ ನಸು ನಗುತ್ತ ಗಮನಿಸಿದಳು. ತಾನೇ ಅದನ್ನು ಎತ್ತಲು ಹೋಗಿ ಭಾರವಾಗಿರುವುದನ್ನು ಕಂಡು ಜವಾನನಿಂದ ಅದನ್ನು ಎತ್ತಿಸಿ ಬೀರುವಿನಲ್ಲಿ ಇಡಿಸಿದಳು.

'ಊಟ ಮುಗಿಸಿ ಅಣ್ಣಾಜಿ ಬರುತ್ತಾರೆ' ಎಂದ ಕೃಷ್ಣಪ್ಪ. ಉಮೆಯ ಮುಖ, ಇದರಿಂದ ಖಿನ್ನಗೊಂಡಂತ ಕಂಡಿತು. ಕೃಷ್ಣಪ್ಪ 'ನಾನು ಹೋಗುತ್ತೀನಿ' ಎಂದಾಗ 'ಇರಿ' ಎಂದು ಉಮೆ ಜವಾನನ ಕೈಯಲ್ಲಿ ಬೋರ್ನವೀಟ ತರಿಸಿಕೊಟ್ಟು, 'ಇವರು ಕ್ಲಬ್ಬಿಗೆ ಹೋಗಿದ್ದಾರೆ. ಬರೋದು ಲೇಟು. ನೋಡಬೇಕಾದರೆ ಕಾದಿರಿ' ಎಂದಳು. 'ಇಲ್ಲ' ಎಂದು ಕೃಷ್ಣಪ್ಪ ಅವಳಿಗೆ ಮೌನವಾಗಿ ನಮಸ್ಕರಿಸಿ ಹೊರಟು ಹೋದ. ಮೆಟ್ಟಲು ಇಳಿಯುವಾಗ ಅವನಿಗೆ ನೆನಪಾಯಿತು. ಅಣ್ಣಾಜಿಯನ್ನು ನೋಡಲು ಬಂದ ಕಾರಣವನ್ನೇ ಅವನು ಮರೆತುಬಿಟ್ಟಿದ್ದ. ತಾನು ಕಾಲೇಜನ್ನು ಬಿಡುತ್ತಿದ್ದೇನೆಂಬ ನಿರ್ಧಾರವನ್ನು ನಾಳೆ ಹೇಳಿದರಾಯಿತೆಂದು ಹಾಸ್ಟೆಲಿಗೆ ಹೋಗಿ ಊಟ ಬೇಡವೆಂದು ಮಲಗಿದ. ಬೆಳಗಿನ ಝಾವದ ತನಕ ನಿದ್ದೆ ಹತ್ತಲಿಲ್ಲ. ಈ ಹಿಂದೆ ಅವನಿಗೆ ಅನ್ನಿಸದಿದ್ದ ದಿಗಿಲು, ಸಂಪೂರ್ಣ ಅರ್ಥವಾಗದ ವಿಚಿತ್ರ ರೀತಿಯ ದಿಗಿಲು – ಇದ್ದಕ್ಕಿದ್ದಂತೆ ರಾತ್ರೆಯಲ್ಲ ಅವನನ್ನು ಕಾಡಿತು. ಬೆಳಗಿನ ಝಾವವಾಗುತ್ತಿದ್ದಂತೆ ಹಾಸ್ಟೆಲಿನ ಎದುರು ನಿಲ್ಲಿಸಿದ ಲಾರಿಗಳನ್ನು ಸ್ಟಾರ್ಟ್‌ಮಾಡುವ ಗದ್ದಲದಿಂದ ಎಂದಿನಂತೆ ಇವತ್ತು ಅವನಿಗೆ ಕರಕರೆಯಾಗಲಿಲ್ಲ. ಬದಲಾಗಿ ಈ ಪರಿಚಿತ ಶಬ್ದದಿಂದ ಸಮಾಧಾನವಾಯಿತು.

* * *

ಮಾರನೇ ಬೆಳಿಗ್ಗೆ ಎದ್ದಾಗ ಕೃಷ್ಣಪ್ಪನ ಕಣ್ಣುಗಳು ನಿದ್ದೆಯಿಲ್ಲದೆ ಕೆಂಪಾಗಿದ್ದುವು. ಹಾಸ್ಟೆಲಲ್ಲಿ ಅವನಿಗೆ ಉಚಿತ ವಸತಿ ಊಟಗಳ ವ್ಯವಸ್ಥೆಯಿದ್ದರೂ ಬೆಳಿಗ್ಗೆ ಅವನ ರೂಮಿಗೆ ಯಾವನಾದರೂ ಒಬ್ಬ ಹೈಸ್ಕೂಲ್‌ಓದುತ್ತಿದ್ದ ವಿದ್ಯಾರ್ಥಿ ಕಾಫಿ ತಂದು ಕೊಡುತ್ತಿದ್ದ. ಅವನ ಸೇವೆಗೆ ಪೈಪೋಟಿಯೇ ನಡೆಯುತ್ತಿತ್ತು ಹಾಸ್ಟೆಲಲ್ಲಿ. ತನ್ನ ಮನಸ್ಸು ಯಾಕೆ ಹೀಗೆ ಕಲಸಿಕೊಂಡಿದೆ ಎಂದು ಅರ್ಥವಾಗದೆ ಮುಖ ತೊಳೆದು ಮತ್ತದೇ ದಿಗಿಲುಪಡುತ್ತ ಕೃಷ್ಣಪ್ಪ ಕೂತಾಗ ಕಿಶೋರ ಕುಮಾರ ಎಂಬ ಶ್ರೀಮಂತರ ಮನೆಯ ಹುಡುಗ ಕಾಫಿಯನ್ನಿಟ್ಟು 'ಗೌಡರೇ ಕಾಫಿ' ಎಂದು ಕಿಟಕಿ ನೋಡುತ್ತ ಕೂತ ಅವನನ್ನು ಕರೆದು ಹೇಳಿದ. ಕೃಷ್ಣಪ್ಪ ಕೃತಜ್ಞತೆಯಿಂದ ಕಾಫಿ ಇಸಕೊಂಡು 'ನಿಂದಾಯಿತಾ ? ಕೂತುಕೊ' ಎಂದ.

'ಗೌಡರೇ ನಿಮ್ಮ ಮೇಲೆ ಅದೇನೇನೋ ಗಲೀಜೆಲ್ಲ ಹಾಸ್ಟೆಲ್‌ಗೋಡೆ ಮೇಲೆ ಅದ್ಯಾರೋ ಸುವರ್ಗಳು ಬರ್ದಿದವೆ – ಹಾಸ್ಟೆಲಲ್ಲಿ ಎಲ್ರಿಗೂ ಸಿಟ್ಟು ಬಂದಿದೆ' ಎಂದ.

'ಬರೀಲಿ ಬಡು' ಎಂದ ಕೃಷ್ಣಪ್ಪ. ತನಗೆ ರಾತ್ರೆ ನಿದ್ದೆ ಬಂದಂತಿರಲಿಲ್ಲ. ಯಾವ ಹೊತ್ತಲ್ಲಿ ಬಂದು ಈ ಪೋಕರಿಗಳು ಬರೆದಿರಬಹುದೆಂದು ಕೃಷ್ಣಪ್ಪನಿಗೆ ಆಶ್ಚರ್ಯವಾಯಿತು.

'ಏನೇನೋ ಗಲೀಜೆಲ್ಲ ಬರ್ದಿದ್ದಾರೆ. ಓದ್ಲಿಕ್ಕೆ ಹೇಸಿಗೆಯಾಗುತ್ತೆ, ಅಳಿಸ್ತ ಇದಾರೆ – ನೀವದನ್ನ ಓದಬಾರ್ದು ಅಂತ'

ಕೃಷ್ಣಪ್ಪ ಮುಗುಳ್ನಕ್ಕು ಕಾಫಿ ಕುಡಿದ ಬಟ್ಟಲನ್ನು ಎತ್ತಿಕೊಂಡು ಕೆಳಗೆ ಹೊರಟ. ಕಿಶೋರ ಬಟ್ಟಲು ಬೇಡಿದರೂ ಕೊಡಲಿಲ್ಲ.

ಬ್ರಶ್ಯನ್ನು ಸುಣ್ಣದಲ್ಲದ್ದಿ ಗೋಡೆಗೆ ಬಳಿಯುತ್ತ ನಿಂತ ಹಾಸ್ಟೆಲಿನಲ್ಲಿ ತನ್ನ ಸಹಪಾಠಿಗಳಿಗೆ ಕೃಷ್ಣಪ್ಪ.

'ಹೋಗ್ಲಿ ಬಿಡ್ರೊ – ಯಾಕೆ ತಲೆ ಕೆಡಿಸಿಕೊಳ್ತೀರಿ ?' ಎಂದ.

ಇದು ವಾಲಿಬಾಲ್‌ಟೀಮಿನ ಘಟಿಂಗರ ಕೆಲಸವೆಂದು ಊಹಿಸಿದ್ದ ಹಾಸ್ಟೆಲಿನ ಹುಡುಗರು ಕ್ರುದ್ಧರಾಗಿದ್ದರು. ಒಕ್ಕಲಿಗ ವಿದ್ಯಾರ್ಥಿಗಳಿಗೇ ಆದ ಅವಮಾನವೆಂದು ಈ ಹುಡುಗರು ಸಿಟ್ಟಾಗಿದ್ದಾರೆಂದು ಕೃಷ್ಣಪ್ಪನಿಗೆ ಹೊಳೆಯಿತು.

'ಸೂಳೆ ಮಕ್ಕಳ ಪುಳಚಾರನ್ನ ಕಕ್ಕಸ್ತೀವಿ'

ಹಳೆಯ ಮೋಟರ್ ಸೈಕಲೊಂದನ್ನು ಇಟ್ಟುಕೊಂಡು ರೋಫಾಗಿ ಓಡಾಡಿಕೊಂಡಿದ್ದ ಶಾಮಣ್ಣ ಹೇಳಿದ. ದೊಡ್ಡ ಜಮೀಂದಾರನ ಮಗನಾಗಿದ್ದರೂ ಶಾಮಣ್ಣನಿಗೆ ತನ್ನ ಜನಾಂಗದ ಬುದ್ಧಿಜೀವಿಯೆಂದು ಕೃಷ್ಣಪ್ಪನ ಮೇಲೆ ಗೌರವ.

‘ನಾನು ಕಾಲೇಜನ್ನೆ ಬಿಡಬೇಕೊಂತಿದೀನಿ’ ಎಂದು ಕೃಷ್ಣಪ್ಪ ಅವರನ್ನು ಸಮಾಧಾನಪಡಿಸಲು ಹೇಳಿದ.

‘ಗೌರೀ ಸಿಸ್ಟರ್ ನ ಕಾಲಿನ ಕೆಳಗೆ ನುಸಿಯೋ ಹಾಗೆ ಇವರನ್ನು ಬಗ್ಗಿಸ್ತೀವೊ ಇಲ್ವೋ ನೋಡಿ. ನೀವು ಯಾಕೆ ಕಾಲೇಜು ಬಿಡಬೇಕು ?’ ಎಂದ ಶಾಮಣ್ಣ. ಅವನು ಸಹ ಹುಡುಗಿಯರನ್ನು ರೇಗಿಸುತ್ತಿದ್ದರೂ ಕೃಷ್ಣಪ್ಪನ ಬಗ್ಗೆ ಗೌರಿ ದೇಶಪಾಂಡೆಗೆ ಗೌರವವೆಂದು ತಿಳಿದು ಅವನು ಗೌರಿಯನ್ನು ಮಾತ್ರ ಸಿಸ್ಟರ್ ಎಂದು ಸೇರಿಸಿ ಕರೆಯುತ್ತಿದ್ದರು. ಕೃಷ್ಣಪ್ಪ ಇನ್ನು ಹೆಚ್ಚು ಮಾತಾಡದೆ ರೂಮಿಗೆ ಹೋಗಿ ಓದಲು ಕೂತ. ಆದರೆ ಅವನ ಮನಸ್ಸು ಏಕಾಗ್ರಗೊಳ್ಳದೆ ಅವನಿಗೆ ಅರಿಯಲಾರದೆ ದಿಗಿಲಿನಿಂದ ವಿಚಲಿತವಾಯಿತು. ತನಗೆ ಮೀರಿದ್ದೇನೋ ತನ್ನ ಎದುರಾಗುತ್ತಿದೆ ಎಂಬುದಕ್ಕೆ ಈ ದಿಗಿಲು ಸೂಚನೆಯೆಂದು ಕೃಷ್ಣಪ್ಪನಿಗೆ ಅನ್ನಿಸಿತು. ಬೆಳಗಿನ ತಿಂಡಿಯನ್ನು ತಿನ್ನದೆ ಅಣ್ಣಾಜಿಯನ್ನು ನೋಡಲೆಂದು ನಿಧಾನವಾಗಿ ನಡೆದುಕೊಂಡು ಹೊರಟ.

ತನ್ನ ದಿಗಿಲಿಗೆ ಕಾರಣವೇನೆಂದು ಸ್ಪಷ್ಟವಾಗಿ ಗೊತ್ತಾಗದಿದ್ದರೂ ಗೌರಿ ದೇಶಪಾಂಡೆಯ ಮೌನವಾದ ಮೂರ್ತಿ ಅವನ ಮನಸ್ಸಿಗೆ ಬಂದು ಅವಳು ತನಗೆ ತೀರಾ ಅವಶ್ಯವಾಗಿಬಿಡುತ್ತಿದ್ದಾಳೆ ಎಂದು ಹೊಳೆಯಿತು. ಪಾರ್ಕಿನಲ್ಲಿ ನಡೆಯುತ್ತಿದ್ದ ಕೃಷ್ಣಪ್ಪನಿಗೆ ಸೀದ ಅವಳ ಮನೆಗೆ ಹೋಗಿ ಅವಳನ್ನು ನೋಡಬೇಕೆನ್ನಿಸಿತು. ನೋಡಿ ಏನು ಹೇಳುವುದು ? ನಿನ್ನನ್ನು ಪ್ರೀತಿಸುತ್ತೀನಿ ಎಂದು ಹೇಳುವುದೇ ? ಅದು ಸಾಧ್ಯವಿಲ್ಲ. ಅದಕ್ಕೆ ಕಾರಣ ತನ್ನ ಗರ್ವವೇ ? – ತಿಳಿಯಲಿಲ್ಲ. ಅಂತೂ ತನ್ನಲ್ಲೇನೋ ಕೊರತೆಯಿದೆ, ಅವಳಿಂದಲ್ಲದೆ ಅದು ತುಂಬದು ಎನ್ನಿಸತೊಡಗಿತು. ತಾನು ನಿಸ್ಸಹಾಯಕವಾಗಿ ಅವಳ ಮನೆಗೆ ಎಲ್ಲಿ ಹೋಗಿಬಿಡಬಹುದೋ ಎಂದು ದಿಗಿಲಾಯಿತು. ಗೋಡೆಯ ಮೇಲೆ ಕಾಣಿಸಿಕೊಂಡಿದ್ದ ಬರಹಗಳು ತನ್ನ ಗಾಂಭೀರ್ಯ ತನ್ನ ಅಂತರಂಗಗಳ ಮೇಲೆ ಹೊರಗಿನ ಕ್ಷುದ್ರತೆಯ ಆಘಾತದ ಪ್ರಯತ್ನವಾಗಿ ಕಂಡು ಅದು ತನ್ನನ್ನು ಬಾಧಿಸುತ್ತಿಲ್ಲವೆಂದು ಕೃಷ್ಣಪ್ಪ ತಿಳಿದಿದ್ದ: ಇಂಥದನ್ನು ಗಮನಿಸುವುದು ಕೂಡ ಕಳಪೆಯೆಂದು ಅವನು ಅಂದುಕೊಂಡಿದ್ದ. ಆದ್ದರಿಂದ ತನಗಾಗುತ್ತಿದ್ದ ದಿಗಿಲು ಅವನಿಗೆ ಇನ್ನಷ್ಟು ರಹಸ್ಯವಾಗಿ ಕಂಡಿತು.

ಅಣ್ಣಾಜಿ ಮೆತ್ತನೆಯ ಸೋಫಾದ ಮೇಲೆ ಕಾಲು ಚಾಚಿಕೊಂಡು ಚಾರ್ಮಿನಾರ್ ಸೇದುತ್ತ ಉಮೆ ಜೊತೆ ಮಾತನಾಡುತ್ತಿದ್ದ. ಉಮೆ ಸ್ಟೂಲೊಂದರ ಮೇಲೆ ಅವನಿಗೆ ಎದುರಾಗಿ ಕೂತು ಕೈ ಬೊಗಸೆ ಮಾಡಿ ಅದರಲ್ಲಿ ತನ್ನ ಗುಂಡಾದ ಮುಖವನ್ನಿಟ್ಟು ತನ್ನ ದೊಡ್ಡ ಕಣ್ಣುಗಳಿಂದ ಅವನನ್ನು ಮೆಚ್ಚುಗೆಯಿಂದ ನೋಡುತ್ತ ಕೇಳಿಸಿಕೊಳ್ಳುತ್ತಿದ್ದಳು. ಅಣ್ಣಾಜಿ ಫ್ರೆಂಚ್‌ಕ್ರಾಂತಿಯ ಕಥೆಯನ್ನು ರಮ್ಯವಾಗಿ ಸಿನಿಮಾದಲ್ಲಿ ಕಣ್ಣಿಗೆ ಕಟ್ಟಿಸುವಂತೆ ಹೇಳುತ್ತಿದ್ದ. ಕೃಷ್ಣಪ್ಪ ಮೌನವಾಗಿ ಒಳಗೆ ಬಂದು ಇನ್ನೊಂದು ಸೋಫಾದಲ್ಲಿ ಕೂತು. ಅಣ್ಣಾಜಿಗೆ ಹಠಾತ್ತನೆ ಪ್ರಾಪ್ತವಾದ ಅದೃಷ್ಟವನ್ನು ಸುತ್ತು ಕಣ್ಣುಹರಿಸಿ ನೋಡಿದ. ಮೇಜಿನ ಮೇಲೆ ಹೂವಿನ ಕುಂಡ ಬೇರೆ. ಉಮೆಯ ಕಣ್ಣುಗಳು ಹೊಳೆಯುತ್ತಿದ್ದವು. ಅಣ್ಣಾಜಿ ತನ್ನ ಒಂದು ತಿಂಗಳ ಗಡ್ಡವನ್ನು ನುಣ್ಣನೆ ಕ್ಷೌರ ಮಾಡಿ, ಸ್ನಾನ ಮುಗಿಸಿ, ಶುಭ್ರವಾದ ಪಂಚೆಯುಟ್ಟು ಜುಬ್ಬ ತೊಟ್ಟು ಕೂತಿದ್ದ.

‘ಮಿಸ್ಟರ್ ಚನ್ನವೀರಯ್ಯ ರೋಟರೀಲಿ ಇವತ್ತು ಸಂಜೆ ಮಾತಾಡೋಕೆ ಹೇಳಿದ್ದಾರೆ. ನೀನೂ ಬಾ’ ಎಂದು ಕೃಷ್ಣಪ್ಪನ್ನ ಅಣ್ಣಾಜಿ ಕರೆದ. ಕೃಷ್ಣಪ್ಪನಿಗೆ ಕಾಫಿ ತರಲು ಉಮಾ ಕೆಳಗಿಳಿದು ಹೋದಳು.

ಕೃಷ್ಣಪ್ಪ ಉತ್ತರ ಕೊಡದಿದ್ದುದನ್ನು ಕಂಡು ಅಣ್ಣಾಜಿ,

‘ಮಾರ್ಕ್ಸವಾದದ ಚಾರಿತ್ರಿಕ ಸಿದ್ಧಾಂತದ ಬಗ್ಗೆ ಮಾತಾಡ್ತಿದೀನಿ’ ಎಂದ.

‘ರೋಟರೀಲಿ ?’

ಕೃಷ್ಣಪ್ಪ ವ್ಯಂಗ್ಯವಾಗಿ ಕೇಳಿದ.

‘ವೈ ನಾಟ್ ?’ ಅಣ್ಣಾಜಿಯೂ ವ್ಯಂಗ್ಯವಾಗಿ ಹೇಳಿದ. ಬಿತ್ತುವುದು ನನ್ನಂಥವರ ಕೆಲಸ. ಉದಾಹರಣೆಗೆ ಉಮಾ ನೋಡು. ಬ್ಯೂರೋಕ್ರಾಟ್‌ಹಿನ್ನೆಲೆಯಿಂದ ಬಂದು ಕಾಂಪ್ರಡಾರ್ ಕ್ಯಪಿಟಲಿಸ್ಟ್‌ವರ್ಗ ಸೇರಿದ್ದಾಳೆ. ಆದರೆ ಪೊಟೆನ್ಸಿಯಲ್ಲಿ ಅವಳು ರೆವಲ್ಯೂಶನರಿ. ಶ್ರೀಮಂತ ವರ್ಗ ಅಂಥವಳನ್ನೂ ತನ್ನ ಸ್ವತ್ತಾಗಿ ಮಾಡಲು ನೋಡುತ್ತದೆ. ಆದರೆ. . .’

‘ಈಗ ನೀನೂ ಅದರ ಸ್ವತ್ತಾಗಿದೀಯಲ್ಲ ?’ ಕೃಷ್ಣಪ್ಪ ರೂಮಿನ ವೈಭವದ ಮೇಲೆ ಕಣ್ಣು ಹಾಯಿಸಿ ಹೇಳಿದ. ಅಣ್ಣಾಜಿ ವ್ಯಂಗ್ಯವಾಗಿ ನಕ್ಕು ಕೃಷ್ಣಪ್ಪನ ಟೀಕೆಯನ್ನು ತಳ್ಳಿಹಾಕಿದ.

ತಾನು ಹೆಚ್ಚು ಹೊತ್ತು ಕೂತಿರುವುದು ಉಮಾಗೆ ಇಷ್ಟವಿಲ್ಲವೆನ್ನುವುದನ್ನು ಸೂಕ್ಷ್ಮವಾಗಿ ಗಮನಿಸಿ ಕೃಷ್ಣಪ್ಪ ಕಾಫಿ ಕುಡಿದು ಎದ್ದ. ಇನ್ನೂ ಸ್ವಲ್ಪ ಕೂತಿರಲೂ ಅಣ್ಣಾಜಿ ಒತ್ತಾಯ ಮಾಡಿದರೂ ಕೃಷ್ಣಪ್ಪ ಕೇಳದೆ ಸಂಜೆ ಮೀಟಿಂಗಿಗೆ ಬರುವೆನೆಂದು ಹೇಳಿ ಊರಾಚೆಗಿದ್ದ ಗುಡ್ಡದ ಕಡೆ ನಡೆದ. ಅವನಿಗೆ ಒಂಟಿಯಾಗಿರುವುದು ತುಂಬ ಅಗತ್ಯವಾಗಿತ್ತು. ಗೌರಿ ಮನೆಯಿಂದ ದೂರವಿರುವುದೂ ಅವಶ್ಯವೆನ್ನಿಸಿತ್ತು.

* * *

ಊರಿನ ಹತ್ತಿರವಿದ್ದ ಗುಡ್ಡದ ಮೇಲೊಂದು ಗುಹೆಯಿತ್ತು. ಈ ಗುಹೆಯಲ್ಲಿ ಬರೀ ಕೌಪೀನಧಾರಿಯಾದ ಉದ್ದ ಗಡ್ಡವನ್ನು ಬಿಟ್ಟು ಮುದುಕ ಬೈರಾಗಿಯೊಬ್ಬನಿದ್ದ. ಅವನ ಹೆಸರೇನು ಯಾರಿಗೂ ತಿಳಿಯದು. ಯಾರ ಹತ್ತಿರವೂ ಅವನು ಮಾತನಾಡುತ್ತಿರಲಿಲ್ಲ. ಪ್ರತಿ ಬೆಳಿಗ್ಗೆ ಅವನು ಗುಡ್ಡ ಇಳಿದು ಊರಿಗೆ ಬರುತ್ತಿದ್ದ. ದಿನಕ್ಕೊಂದು ಬೀದಿಯನ್ನು ಆರಿಸಿಕೊಂಡು ಬೀದಿಯ ತುದಿಯಲ್ಲಿ ನಿಂತು ಗಟ್ಟಿಯಾಗಿ ರಾಗವಾಗಿ ಭಗವದ್ಗೀತೆಯ ಅಧ್ಯಾಯಗಳನ್ನು ಒಂದು ಗಂಟೆ ಕಾಲ ಹಾಡುತ್ತಿದ್ದ. ಅವನು ನೆಲದ ಮೇಲಿಟ್ಟ ಬುಟ್ಟಿಯಲ್ಲಿ ದಾರಿಹೋಕರು ಅಕ್ಕಿಯನ್ನೊ ಬೇಳೆಯನ್ನೊ ಹಣ್ಣನ್ನೊ ಹಾಕುತ್ತಿದ್ದರು. ಈ ಸಣ್ಣ ಬುಟ್ಟಿ ತುಂಬಿದ ಮೇಲೆ ಬೈರಾಗಿ ಏನನ್ನೂ ಸ್ವೀಕರಿಸುತ್ತಿರಲಿಲ್ಲ. ತನ್ನ ಪಠಣ ಮುಗಿಸಿ ಬೆಟ್ಟಕ್ಕೆ ಹಿಂದುರಗಿ ಅದನ್ನು ಬೇಯಿಸಿ ತಿಂದುಬಿಡುತ್ತಿದ್ದ ಅಷ್ಟೆ.

ಕೃಷ್ಣಪ್ಪನಿಗೆ ಈ ಬೈರಾಗಿಯೆಂದರೆ ಕುತೂಹಲ. ಬೆಟ್ಟ ಹತ್ತಿ ಅವನ ಗುಹೆಯ ಹತ್ತಿರ ಕೂತ. ಬೈರಾಗಿ ತನ್ನ ನಿತ್ಯದ ಅಕ್ಕಿ ಬೇಳೆಯನ್ನು ಒಂದು ಕಲ್ಲು ಮರಿಗೆಗೆ ಹಾಕಿ ಗುಹೆಯ ಹೊರಗಿದ್ದ ಮೂರು ಕಲ್ಲುಗಳ ಒಲೆಯ ಮೇಲಿಟ್ಟು ಬೇಯಿಸುತ್ತಿದ್ದ. ಕೃಷ್ಣಪ್ಪ ನಮಸ್ಕಾರ ಎಂದು ಅಲ್ಲೆ ಒಂದು ಬಂಡೆಯ ಮೇಲೆ ಕೂತು ಕಾದ. ಬೈರಾಗಿ ಮಾತಾಡಲಿಲ್ಲ. ಅನ್ನ ಬೇಳೆಗಳು ಬೆಂದ ಮೇಲೆ ಗುಹೆಯ ಒಳಗಿಂದ ಬೈರಾಗಿ ಮುತ್ತುಗದ ಎಲೆಗಳನ್ನು ತಂದು ಕಡ್ಡಿಯಿಂದ ಅವುಗಳನ್ನು ಹೆಣೆದು ಮೂರು ದೊಡ್ಡ ಎಲೆಗಳಾಗಿ ಮಾಡಿದ, ಪಾತ್ರೆಯಲ್ಲಿ ಇದ್ದುದನ್ನು ಸಮವಾಗಿ ಈ ಮೂರು ಎಲೆಗಳಿಗೂ ಬಡಿಸಿ ಒಂದನ್ನು ಸ್ವಲ್ಪ ದೂರ ಹೋಗಿ ಇಟ್ಟು ಬಂದ. ಬಂಡೆಗಳ ಮರೆಯಿಂದ ಒಂದು ನಾಯಿ ಈ ಆಹಾರಕ್ಕೆ ನಿಧಾನವಾಗಿ ಬರುವುದನ್ನು ಕೃಷ್ಣಪ್ಪ ಕಂಡ. ಅವಸರವಿಲ್ಲದೇ ಬೈರಾಗಿ ಹಿಂದಕ್ಕೆ ಬಂದು ಮತ್ತೊಂದು ಎಲೆಯನ್ನು ಕೃಷ್ಣಪ್ಪನ ಎದುರಿಗಿಟ್ಟು ಉಳಿದ ಎಲೆಯ ಎದುರು ತಾನು ಕೂತು ಕಣ್ಣು ಮುಚ್ಚಿ ಧ್ಯಾನ ಮಾಡಿದ. ಏನು ಹೇಳಬೇಕು ಕೃಷ್ಣಪ್ಪನಿಗೆ ತಿಳಿಯಲಿಲ್ಲ. ಬೈರಾಗಿ ಊಟ ಮಾಡಲು ತೊಡಗಿದ ಮೇಲೆ ಕೃಷ್ಣಪ್ಪನೂ ಎಲೆಯ ಮೇಲಿದ್ದುದನ್ನು ತಿಂದ. ಅದರಲ್ಲಿ ಯಾವ ರುಚಿಯೂ ಇರಲಿಲ್ಲ. ಆದರೆ ಹಸಿವಾಗಿತ್ತು – ತಿಂದ.

ಬೈರಾಗಿ ಊಟ ಮುಗಿಸಿ ಎಲೆಯನ್ನು ದೂರ ಎಸೆದು ಬಂದ ಕೃಷ್ಣಪ್ಪನೂ ಎಸೆದು ಮೊದಲಿದ್ದ ಜಾಗಕ್ಕೆ ಬಂದು ಕೂತ. ಈಗಲೂ ಬೈರಾಗಿ ಮಾತಾಡಲಿಲ್ಲ. ಕ್ರಮೇಣ ಕೃಷ್ಣಪ್ಪನಿಗೂ ಮಾತಿನ ಅಗತ್ಯ ಕಾಣಲಿಲ್ಲ. ಬೈರಾಗಿ ನೆರಳಿನಲ್ಲಿ ಮಲಗಿ ಕಣ್ಣು ಮುಚ್ಚಿದ. ಈ ಬೈರಾಗಿ ಬರೀ ಠೊಳ್ಳೋ, ಗಟ್ಟಿಯೋ, ಮುಕ್ತನೋ, ಈಡಿಯಟ್ಟೋ – ಇಂಥ ಪ್ರಶ್ನೆಗಳೆಲ್ಲ ಅಪ್ರಸ್ತುತ ಎನ್ನಿಸಿಬಿಟ್ಟಿತು. ಇದರಿಂದ ಕೃಷ್ಣಪ್ಪನಿಗೆ ತನಗಾಗುತ್ತಿದ್ದ ದಿಗಿಲು ಇನ್ನಷ್ಟು ಹೆಚ್ಚಿತು. ಹಲವು ಸಾಧ್ಯತೆಗಳ ಎದುರಿಗೆ ನಿಂತಿರುವುದರಿಂದ ಈ ದಿಗಿಲು ತನಗೆ ಹುಟ್ಟಿರಬೇಕು. ಈ ಬಂಡೆಗಳಿಂದ ಉರುಳಿ ಸಾಯಬಹುದು. ಅಣ್ಣಾಜಿಯಂತೆ ಸಮಾಜದ ಜೊತೆ ಪರದಾಡಬಹುದು. ಗೌರಿಯನ್ನು ಪ್ರತಿ ರಾತ್ರೆ ತಬ್ಬಿ ಸಂಭೋಗಿಸಿ ಮಕ್ಕಳನ್ನು ಪಡೆಯಬಹುದು. ಮಾಡದೇ ಈಗಿನಂತೆ ಇರಬಹುದು. ಹಾಗಿರುವುದೂ ಇನ್ನೊಂದನ್ನು ಮಾಡಿದಂತೆಯೇ, ಯಾವುದಕ್ಕೂ ಅರ್ಥವಿಲ್ಲ. ಅಥವಾ ತಾನು ಕೊಟ್ಟ ಅರ್ಥವಿದೆ.

ಬೈರಾಗಿ ಎದ್ದು ಕೂತ. ಅವನ ಮುಖ ನಿರ್ಭಾವವಾಗಿತ್ತು. ಎದ್ದು ಹೋಗಿ ಒಂದು ಬಂಡೆಗೆ ಮರೆಯಾಗಿ ಕೂತು ಉಚ್ಚೆ ಹೊಯ್ದು ಬಂದು ಮತ್ತೆ ಮಲಗಿದ.

ಈ ಬೈರಾಗಿ ಪ್ರತಿನಿತ್ಯ ತಾನು ಹೀಗಿರುವುದೆಂದು ನಿರ್ಧಾರ ಮಾಡಿ ಹೊರಡುತ್ತಾನೆಯೇ ? ಅಥವಾ ಅವನ ನಿರ್ಧಾರ ಆಗಿ ಹೋಗಿದೆಯೇ ? ಅವನಿಗೆ ಖುಷಿಯಾಗುತ್ತಿದೆಯೆ ? ಅಥವಾ ಅದರ ಅಗತ್ಯವಿಲ್ಲವೆ ?

ಇವನು ಹೀಗೆ ಸುಮ್ಮನೇ ನಾಳೆಯ ತನಕ ಇದ್ದು ಬಿಡುವನಲ್ಲ ? ಕರ್ಮ ಮಾಡು, ಕರ್ಮ ಮಾಡದೇ ಸುಮ್ಮನೇ ಇದ್ದುಬಿಡು. ಹಿಗ್ಗಬೇಡ, ಕುಗ್ಗಬೇಡ ಇತ್ಯಾದಿಗಳನ್ನು ನಿತ್ಯ ರಾಗವಾಗಿ ಒದರುವುದರ ಮೂಲಕ ತನ್ನ ನಿತ್ಯದ ಅನ್ನ ಸಂಪಾದಿಸಿ ಬರಿದೇ ಇರುತ್ತಾನಲ್ಲ. ಯಾವುದರಿಂದ ಇವನು ಚಲಿಸುತ್ತಾನೆ ? ಇತ್ಯಾದಿಗಳಿಂದ ರಗಳೆಯಾಗಿ ಕೃಷ್ಣಪ್ಪನ ಅಪ್ರಯತ್ನವಾಗಿ ಥಟ್ಟನೇ ಎದ್ದು ನಿಂತು,

‘ಸ್ವಾಮಿಗಳೆ ಹೇಳಿ – ನಂದೊಂದು ಪ್ರಶ್ನೆಯಿದೆ’ ಎಂದ. ಬೈರಾಗಿ ಕಣ್ಣುಗಳನ್ನು ಪಿಳಿಪಿಳಿ ಬಿಡುತ್ತ ಮಲಗಿಯೇ ಇದ್ದ.

‘ನೀವೇನು ಮೌನಿಗಳ? ಹಾಗಾದರೆ ಯಾಕೆ ನಿತ್ಯ ಭಗವದ್ಗೀತೆ ಹಾಡ್ತೀರಿ ಬೀದಿಗಳ ಮೇಲೆ, ನಿಮ್ಮ ಉದ್ದೇಶ ಏನು?’

ಬೈರಾಗಿ ಮುಖವನ್ನೂ ತಿರುಗಸಲಿಲ್ಲ. ಆತ ಕಿವುಡನಿರಬಹುದೆನ್ನಿಸಿತು. ತನ್ನ ಮಾತುಗಳು ವೃಥಾ ಕಿರುಚಾಟವಾಗುತ್ತಿರುವುದನ್ನು ಗಮನಿಸಿದರೂ ತಡೆದುಕೊಳ್ಳಲಾರದೆ ಬೈರಾಗಿ ಹತ್ತಿರ ಕೂತು ಕೂಗಿದ.

‘ಹೇಳ್ರೀ. . . .’

ಕೃಷ್ಣಪ್ಪನಿಗೆ ತಾನು ತೀರಾ ಹಾಸ್ಯಾಸ್ಪದವಾಗಿಬಿಟ್ಟಂತೆ ಎನ್ನಿಸಿತು. ನಿಸ್ಸಾಯಕನಾಗಿ ಬೈರಾಗಿಯ ಕೈಯನ್ನು ಬಲವಾಗಿ ಹಿಡಿದ. ಪ್ರತಿಭಟಿಸದೆ ಅವನ ಕೈಯಲ್ಲಿ ತನ್ನ ಕೈಯನ್ನಿಟ್ಟು ಬೈರಾಗಿ ಪೂರ್ವ ದಿಕ್ಕನ್ನು ನೋಡುತ್ತಲೇ ಕೂತಿದ್ದ. ಕಿರುಚಿಕೊಳ್ಳಬೇಕೆನ್ನಿಸಿತು. ಕಣ್ಣು ಕಿವಿ ಮೂಗು ಚರ್ಮಗಳು ಹೊರಗನ್ನು ಒಳಗೆ ಬಿಡುತ್ತಲೇ ಇರುತ್ತವಲ್ಲವೆ? ಹೊರಗನ್ನೂ ಒಳಗನ್ನೂ ಇನ್ನಷ್ಟು ಆಪ್ತವಾಗಿ ಶಿಶ್ನ ಯೋನಿಗಳು ಬಿಗಿಯುತ್ತವಲ್ಲವೆ? ಈ ಸತ್ಯ ಬಿಟ್ಟು ಬೇರೇನನ್ನು ಈ ಗೋಸಾಯಿ ಕಂಡಿದ್ದಾನೆ? ತಾನವನಿಂದ ಪ್ರತಿಕ್ರಿಯೆ ಅಪೇಕ್ಷಿಸಿದ್ದರಿಂದಲ್ಲವೇ ಅವನ ಅಗಮ್ಯತೆ ಇನ್ನಷ್ಟು ರಹಸ್ಯವಾಗಿ ಬಿಟ್ಟಿದ್ದು? ಅವನು ಈಡಿಯಟ್ಟಿದ್ದರೂ ತನ್ನನ್ನು ಗೆದ್ದಿದ್ದಾನೆ. ಒಂದು ಕ್ಷಣ ಅವನನ್ನು ಹಿಂಸೆ ಮಾಡಿಯಾದರೂ ಪ್ರತಿಕ್ರಿಯೆ ಪಡೆಯಬೇಕೆಂಬ ಚಪಲವನ್ನು ಅದುಮಿಕೊಂಡು ನಿರಾಸೆಯಲ್ಲಿ ಕೃಷ್ಣಪ್ಪ ಎದ್ದು ನಿಂತ. ಭಾರವಾದ ಕಾಲುಗಳನ್ನು ಎಳೆಯುತ್ತ ಬೆಟ್ಟ ಇಳಿದು ಊರಿಗೆ ನಡೆದ.

ರೋಟರಿ ಕ್ಲಬ್ಬಿನ ಸಭೆಯಲ್ಲಿ ಅದರ ರಿಚುಯಲ್ಲುಗಳನ್ನು ಅಣ್ಣಾಜಿ ಸಹಿಸುತ್ತಿರುವುದಕ್ಕೆ ಆಶ್ಚರ್ಯಪಡುತ್ತ ಕೃಷ್ಣಪ್ಪ ಕೂತ. ಅಣ್ಣಾಜಿ ವ್ಯಕ್ತಿ ಮತ್ತು ಸಮಾಜದ ಅನ್ಯೋನ್ಯತೆಯ ಬಗ್ಗೆ, ಉತ್ಪಾದನಾ ವಿಧಾನಗಳ ಬದಲಾವಣೆ, ವರ್ಗಪ್ರಜ್ಞೆ, ಕ್ರಾಂತಿಗಳ ಬಗ್ಗೆ ನಿರರ್ಗಳ ಇಂಗ್ಲಿಷಲ್ಲಿ ಮಾತಾಡುವುದನ್ನೂ, ಇಂಗ್ಲಿಷಲ್ಲಿ ನಡೆಯುವ ಈ ಕ್ರಾಂತಿ ಸಿಲ್ಕ್‌ಜುಬ್ಬ, ಸೂಟುಗಳನ್ನು ತೊಟ್ಟ ಮಂದಿಗೆ ಜೋಗುಳದಷ್ಟು ಅಪ್ಯಾಯಮಾನವಾಗಿ ಕಾಣುವುದನ್ನೂ ಅಸಹ್ಯಪಡುತ್ತ ಕೃಷ್ಣಪ್ಪ ಅನುಭವಿಸಿದ. ಕರ್ಮ ಪುನರ್ಜನ್ಮಗಳಂತೆಯೇ ಈ ಕ್ರಾಂತಿಯೂ ಕಾಲಾನುಕಾಲದಲ್ಲಿ ಇನೆವಿಟಬಲ್ – ಯಾಕಾಗಬಾರದು? ಪ್ರಳಯದಂತೆ? ಚನ್ನವೀರಯ್ಯ ಬೀಗುತ್ತ ಕೂತಿದ್ದ. ವಂದನಾರ್ಪಣೆ ಮುಂಚೆಯೇ ಕೃಷ್ಣಪ್ಪ ಎದ್ದು ಹಾಸ್ಟೆಲಿಗೆ ಹೋದ.

* * *

ಕತ್ತಲಾಗಿತ್ತು. ಹಾಸ್ಟೆಲಿನ ಎದುರು ಗೌರಿ ದೇಶಪಾಂಡೆಯ ಕಾರು ನಿಂತಿತ್ತು. ಡ್ರೈವರ್ ಸಿಗರೇಟು ಸೇದುತ್ತ ಕಾರಿನ ಹೊರಗೆ ನಿಂತಿದ್ದ. ಹಾಸ್ಟೆಲಿನ ಹುಡುಗರೆಲ್ಲ ಬಲು ಸಂಭ್ರಮದಲ್ಲಿ ಗುಂಪುಗಳಾಗಿ ನಿಂತು ಉದ್ವೇಗದಿಂದ ತಮ್ಮ ತಮ್ಮಲ್ಲೆ ಮಾತಾಡಿಕೊಳ್ಳುತ್ತಿದ್ದರು. ಈ ಹಾಸ್ಟೆಲಿನ ಒಳಗೆ ಒಂದು ಹೆಣ್ಣು ಜೀವ ಬಂದದ್ದು ಇದೇ ಮೊದಲ ಬಾರಿ. ಒಂದು ಹೆಣ್ಣು ಸೊಳ್ಳೆ ಕೂಡ ತಮ್ಮ ಗಂಡು ಹಾಸ್ಟೆಲಿಗೆ ಬರಲಾರದು ಎಂದು ತಿಳಿದ ಈ ಹುಡುಗರಿಗೆ ಗೌರಿ ದೇಶಪಾಂಡೆಯ ಆಗಮನ

ಐತಿಹಾಸಿಕ ಘಟನೆಯಾಗಿ ಬಿಟ್ಟಿತ್ತು. ಕೃಷ್ಣಪ್ಪನನ್ನು ಕಂಡೊಡನೆ ಮಾತು ನಿಲ್ಲಿಸಿದರು. ಕೃಷ್ಣಪ್ಪ ಮಹಡಿ ಹತ್ತಿ ಹೋಗಿ ತನ್ನ ರೂಮಿನ ಬಾಗಿಲು ತೆರೆದ. ಗೌರಿ ಅದೇನೋ ಪುಸ್ತಕವನ್ನು ಮಗ್ನವಾಗಿ ಓದುತ್ತಿದ್ದವಳು ರೂಮಿನ ಬಾಗಿಲು ತೆರೆದೊಡನೆ ಎದ್ದು ನಿಂತಳು.

'ಕ್ಷಮಿಸಿ. ನಿಮ್ಮ ರೂಮಿಗೆ ಬಂದು ತೊಂದರೆ ಕೊಡುತ್ತಿದ್ದೇನೆ' ಎಂದು ಮೃದುವಾಗಿ ನಕ್ಕಳು. ಅವಳ ಹಾಲು ಬಣ್ಣದ ಅಗಲವಾದ ಮುಖ ಶಾಂತವಾಗಿತ್ತು. ಹಣೆಯ ಮೇಲೆ ದೊಡ್ಡ ಪುಡಿ ಕುಂಕುಮವನ್ನು ಇಟ್ಟಿದ್ದಳು. ಸ್ವಲ್ಪ ದಪ್ಪವಾದ ಅವಳ ಕೆಳತುಟಿ, ಭಾರವಾದ ಮೊಲೆಗಳು, ದುಂಡನೆಯ ತೋಳುಗಳು, ನೀಳವಾದ ಕಾಲುಗಳು, ಅವಳು ನಿಲ್ಲುವ ತ್ರಿಭಂಗಿ ಇಡೀ ಬೆನ್ನಿನ ಮೇಲೆ ಭಾರವಾಗಿ ಇಳಿಬಿದ್ದ ಕಪ್ಪು ಜಡೆ – ಇವು ಒಟ್ಟಿನಲ್ಲಿ ಮೋಹ ಹುಟ್ಟಿಸುವಂತಿದ್ದರೆ ಅವಳ ಪ್ರಶಾಂತವಾದ ದೊಡ್ಡ ಕಣ್ಣುಗಳು, ಕೊರೆದುಬಿಟ್ಟಂತಿದ್ದ ಹುಬ್ಬುಗಳು, ಅದಕ್ಕೆ ವಿರುದ್ಧವಾಗಿ ಇವಳು ಅಗಮ್ಯ ಎನ್ನುವ ಭಾವನೆ ಹುಟ್ಟಿಸುವಂತಿದ್ದವು. ಮೌನದ ಮಡುವಿನಲ್ಲಿ ಸದಾ ಅಡಗಿಕೊಂಡ ಕನ್ನೆಯಂತೆ ಕಾಣುತ್ತಿದ್ದಳು. ತನ್ನ ಸಂತೋಷ ಮೆಚ್ಚುಗೆ ಬಿಚ್ಚಿಡಲಾರದೆ ಕೃಷ್ಣಪ್ಪನೂ ಕಲ್ಲಿನಲ್ಲಿ ಕಡೆದ ಕಪ್ಪು ವಿಗ್ರಹದಂತೆ ನಿಂತ.

'ಕೂರಬಹುದಲ್ಲ ?'

ತುಂಟ ನಗೆ ನಕ್ಕು ಗೌರಿ ಕೇಳಿ, ಇದ್ದುದು ಒಂದೇ ಕುರ್ಚಿಯಾದ್ದರಿಂದ ತಾನೆಲ್ಲಿ ಕೂರುವುದೆಂದು ಹುಡುಕಿದಳು. ಹಾಸಿಗೆ ಮೇಲೆ ಕೃಷ್ಣಪ್ಪ ಕೂತು ಅವಳಿಗೆ ಕುರ್ಚಿ ತೋರಿಸಿದ. ಗೋಡೆಯ ಮೇಲೆ ಕೃಷ್ಣಪ್ಪನಿಗೆ ಪೂಜ್ಯರಾಗಿದ್ದ ವಿವೇಕಾನಂದ ಗಾಂಧೀಜಿಯವರನ್ನು ಗೌರಿ ಗಮನಿಸಿದಳು.

'ನೀವು ಕಾಲೇಜು ಬಿಡ್ತಿದ್ದೀರಂತೆ ನಿಜವೆ ?' ಎಂದಳು.

'ಹೌದು. ಅದಕ್ಕೆ ಕಾರಣ ನನಗೇನಾದರೂ ಬೇರೆ ಮಾಡಬೇಕೂಂತ ಅನ್ನಿಸಿದ್ದು. ನೀವಲ್ಲ.'

ಗೌರಿಗೆ ಸಮಾಧಾನವಾದದ್ದು ಕೃಷ್ಣಪ್ಪನಿಗೆ ತಿಳಿಯಿತು. ಗೌರಿ ಹೇಳಿದಳು:

'ನಿಮ್ಮ ಕಾಗದ ಬಂತು. ನನಗೆ ನನ್ನ ತಾಯಿ ಬಿಟ್ಟರೆ ನೀವು ಮಾತ್ರ ಇರೋದು – ಹೇಗೆ ಹೇಳಲಿ ಗೌರವನೋ ಪ್ರೀತಿನೋ ಅಂತ. . . ಆದರೆ ಮಾತ್ರ ಇದನ್ನ ಬಾಯಿ ಬಿಟ್ಟು ಹೇಳ್ದೆ ಅಂತ ಮನಸ್ಸಿಗೆ ಹಚ್ಚಿಕೋಬೇಡಿ. ಯಾವ ಉದ್ದೇಶಾನೂ ಇರ್ಲಿಲ್ಲ ನನಗೆ ಇಲ್ಲಿ ಬರಲಿಕ್ಕೆ.'

ಗೌರಿ ತುಂಬ ಸಹಜವಾಗಿ ಮಾತಾಡಿದ್ದಳು. ಕೃಷ್ಣಪ್ಪ ತಲೆ ಬಾಗಿ ಕೂತು ಹೇಳಿದ:

'ಈ ಹುಡುಗರ ಹಾಸ್ಟೆಲಿಗೆ ಒಬ್ಬರೇ ಬಂದಿದೀರಲ್ಲ. ನಿಮ್ಮ ತಾಯಿ ಏನೆಂದುಕೋತಾರೆ ?'

‘ನೀವೂ ಇಂಥ ಪ್ರಶ್ನೆ ಕೇಳ್ತೀರೀಂತ ನನಗೆ ಅನ್ನಿಸಿರಲಿಲ್ಲ. . .’ ಕೃಷ್ಣಪ್ಪನಿಗೆ ತನ್ನ ಉತ್ತರದಿಂದ ನಾಚಿಕೆಯಾದ್ದನ್ನು ಗಮನಿಸಿದ ಗೌರಿ ನಗುತ್ತ ಹೇಳಿದಳು:

‘ನನ್ನ ತಾಯಿ ಜೈಲಲ್ಲಿರೋ ನನ್ನ ತಂದೇನ್ನ ಬಿಟ್ಟು ಬಂದಿದ್ದರಿಂದ ನನ್ನ ಯಾವ ಇಷ್ಟಕ್ಕೂ ವಿರೋಧ ಬರಲ್ಲ. . . .’

‘ಹಾಗಂತ ಅಂದು ನೀವು ರಚ್ಚು ತೀರಿಸಿಕೊಳ್ಳಬಾರದಲ್ಲ ?’

ಕೃಷ್ಣಪ್ಪ ಚೇತರಿಸಿಕೊಂಡಿದ್ದ.

‘ಇದು ರಚ್ಚೂಂತ ನಿಮಗೆ ಯಾಕೆ ಅನ್ನಿಸುತ್ತೆ ? ನಾನು ನಿಮ್ಮನ್ನ ಇಷ್ಟಪಡ್ತೀನಿ ಅಂತ ಹೇಳಿದೆ. ನಿಮಗೆ ಗರ್ವ ಅಲ್ಲವೆ ? ಇಂಥ ಮಾತನ್ನ ನಾನು ಆಡಬಹುದೂಂತ ಕೂಡ ನಿಮ್ಮ ಸ್ವಭಾವದಿಂದ ನೀವೂ ನಿರೀಕ್ಷಿಸಿರಲಿಲ್ಲ.’

ಕೃಷ್ಣಪ್ಪ ತಬ್ಬಿಬ್ಬಾಗಿದ್ದ. ಗೌರಿ ಎದ್ದು ನಿಂತು,

‘ಬರಬೇಕೂಂತ ಅನ್ನಿಸಿದಾಗ ಬನ್ನಿ ಮನೇಗೆ’ ಎಂದು ಹೊರಟುಹೋದಳು.

ಪ್ರೇಮ ಎಷ್ಟು ತೀವ್ರವಾಗುತ್ತದೋ ಅಷ್ಟೇ ಪ್ರೀತಿಯ ವಸ್ತು ಅಗಮ್ಯವೆನಿಸುತ್ತದೆ ಎಂಬುದು ಕೃಷ್ಣಪ್ಪನ ಅನುಭವಕ್ಕೆ ಬಂತು. ನಾವು ತೀವ್ರವಾಗಿ ಆಸೆಪಟ್ಟಿದ್ದನ್ನು ಭೋಗಿಸಿಲ್ಲ, ಅಥವಾ ಆಸೆ ತೀವ್ರವಾಗಿದ್ದಾಗ ಭೋಗಿಸಿಲ್ಲ – ಎಂದುಕೊಳ್ಳುತ್ತಾನೆ ಕೃಷ್ಣಪ್ಪ ಸಾವನ್ನು ಎದುರಿಸುತ್ತ.

ಹೀಗೆ ಪ್ರೇಮ ಆಸೆ ನಿರಾಸೆಗಳ ಯಾವತ್ತೂ ಬಗೆಹರಿಯದ ಬೆಂಕಿಯ ಚಿತ್ರಕ್ಕೆ ಕೃಷ್ಣಪ್ಪನನ್ನು ಗೌರಿ ಸಿಕ್ಕಿಸಿದ್ದಳು. ಮತ್ತಿನ್ನೊಂದು ರಾತ್ರೆಯನ್ನ ನಿದ್ದೆಯಿಲ್ಲದೆ ಕಳೆದು, ಬೆಳಿಗ್ಗೆ ಎದ್ದು ಅಣ್ಣಾಜಿಯನ್ನು ನೋಡಲು ಹೋದ. ಅಣ್ಣಾಜಿ ಬ್ರೇಕ್‌ಫಾಸ್ಟ್‌ಮುಗಿಸಿ ತೋಟದಲ್ಲಿ ಚನ್ನವೀರಯ್ಯನ ಜೊತೆ ಕೂತಿದ್ದ. ಚನ್ನವೀರಯ್ಯ ಹರಕು ಮುರುಕು ಇಂಗ್ಲಿಷಲ್ಲಿ ಹಿಂದಿನ ದಿನದ ಅಣ್ಣಾಜಿ ಭಾಷಣವನ್ನು ತನ್ನ ಗೆಳೆಯರೆಲ್ಲ ಮೆಚ್ಚಿಕೊಂಡಿದ್ದನ್ನೂ, ದೊಡ್ಡ ದೊಡ್ಡ ಅಡ್ವೋಕೇಟರೂ ಆ ಇಂಗ್ಲಿಷಗೆ ತಲೆದೂಗಿದ್ದನ್ನೂ ವಿವರಿಸುತ್ತಿದ್ದ. ಕೃಷ್ಣಪ್ಪನಿಗೆ ಕೂರಲು ಕುರ್ಚಿ ಕೊಡಬೇಕೋ, ಅಥವಾ ನಿಂತಿದ್ದು ಮಾತಾಡಿ ಹೋಗುವ ಮಟ್ಟದವನೋ ಎಂಬುದನ್ನು ತೀರ್ಮಾನಿಸಲಾರದೆ ಚನ್ನವೀರಯ್ಯ ಅವನನ್ನು ದಿಟ್ಟಿಸಿ ನೋಡುತ್ತಿದ್ದಾಗ ಅಣ್ಣಾಜಿ ಗೆಲುವನಿಂದ ಎದ್ದು ನಿಂತು ತನ್ನ ಕುರ್ಚಿಯನ್ನೆ ಅವನಿಗೆ ಕೊಡುವುದನ್ನು ಕಂಡು ಚನ್ನವೀರಯ್ಯ ‘ಬೇಡಿ. ಕುರ್ಚಿ ತರಿಸ್ತೇನೆ’ ಎಂದು ಕರ್ಕಶವಾಗಿ ‘ಏ ಮಾದ – ಏ ಮಾದ, ಎಲ್ಲಿ ಹೋದೆಯೊ’ ಎಂದು ಕೂಗಿದ. ಅಣ್ಣಾಜಿ ನಿಂತಿರುವುದು ನೋಡಿ, ಅವನೂ ನಿಂತ. ಅಣ್ಣಾಜಿ ಗೌರವಕ್ಕೆ ಪಾತ್ರವಾದ ಕೃಷ್ಣಪ್ಪನನ್ನು ಆಪಾದಮಸ್ತಕ ಪರೀಕ್ಷಿಸಿದ. ‘ಇವರು ಮಿಸ್ಟರ್ ಕೃಷ್ಣಪ್ಪಗೌಡ – ಇನ್ನು ಹತ್ತು ವರ್ಷಗಳಲ್ಲಿ ಈ ದೇಶದ ದೊಡ್ಡ ನಾಯಕರಾಗುತ್ತಾರೆ – ರೈತನಾಯಕರಾಗುತ್ತಾರೆ. ಒರಿಜಿನಲ್‌ಆಗಿ ಯೋಚನೆ

ಮಾಡಬಲ್ಲವರು. ಗ್ರಾಸ್‌ರೂಟ್ಸ್‌ಪಾಲಿಟಿಕ್ಸ್‌ಮಾಡಬಲ್ಲರು' ಎಂದು ಅಣ್ಣಾಜಿ ಕೃಷ್ಣಪ್ಪನನ್ನು ಗುರ್ತುಮಾಡಿಕೊಡುತ್ತಿದ್ದಂತೆ ಚನ್ನವೀರಯ್ಯ ಲಾನಿನ ಹಲ್ಲುಗಳನ್ನು ನೋಡುವುದು ಕಂಡು ಅಣ್ಣಾಜಿ ತನ್ನ ಪಾಠದ ಕ್ರಮಕ್ಕೆ ಹಿಂದುರಿಗಿದ. 'ಗ್ರಾಸ್‌ರೂಟ್‌ಅನ್ನೋದು ಈಡಿಯಮ್. ಗಾಂಧೀ ಪಾಲಿಟಿಕ್ಸ್ ಗ್ರಾಸ್‌ರೂಟ್ಸ್‌ಪಾಲಿಟಿಕ್ಸ್ ಉದಾಹರಣೆಗೆ. ಮೇಲು ಮೇಲಿನ ಬದಲಾವಣೆಗಳಿಗೆ ಮಾತ್ರ ಪ್ರಯತ್ನಿಸಿದೆ ಕಾಮನ್‌ಪೀಪಲ್ಸ್ ನ ಕಾನ್‌ಶಸ್ ನೆಸ್ಸನ್ನೂ ಬದಲು ಮಾಡಲು ಪ್ರಯತ್ನಿಸೋದು – ನಿನ್ನೆ ಅದೇ ನಾನು ಮಾತಾಡಿದ್ದು'.

ಚನ್ನವೀರಯ್ಯ ಅರ್ಥಪೂರ್ಣವಾಗಿ ಕೃಷ್ಣಪ್ಪನನ್ನೂ ಒಳಪಡಿಸಿಕೊಳ್ಳಲು ಯತ್ನಿಸುವ ಮಾತಿನಲ್ಲಿ ಹೇಳಿದ:

'ಈಗಿನ ಕಾಲದ ಇಂಗ್ಲಿಷ್‌ಸ್ಟಾಂಡರ್ಡ್‌ಎಷ್ಟು ಕೆಳಗಿಳಿದಿದೆ ಅಂದ್ರೆ ಡಬಲ್‌ಗ್ರಾಜುಯೇಟಿಗಳಿಗೂ ಅರ್ಥವಾಗಲ್ಲ. ಅಲ್ಲೇನ್ರಿ ಮಿಸ್ಟರ್ ಕೃಷ್ಣಪ್ಪಗೌಡ – ಡೆಮಾಕ್ರಸಿ ಅಂತ ಕಾಕಪ್ಪ ಬೋಳಪ್ಪಗಳನ್ನೂ ಮೇಷ್ಟ್ರಾಗಿ ಮಾಡಿದ್ರೆ ನಮ್ಮ ಮಕ್ಕಳು ಹೇಗೆ ಕಲಿತಾರು ಹೇಳ್ರಿ.'

ಗೌರಿ ದೇಶಪಾಂಡೆಯ ಮನೆಗೆ ಹೋಗದಿರಲೆಂದು ಕೃಷ್ಣಪ್ಪ ಅಣ್ಣಾಜಿಯನ್ನು ನೋಡಲು ಬಂದದ್ದು. ಆದರೆ ಲಾನಿನ ಮೇಲೆ ನಡೆಯುತ್ತಿದ್ದ ಈ ನಾಟಕ ಅವನಿಗೆ ಅಸಹನೀಯವಾಯಿತು.

'ಕ್ಷಮಿಸಿ – ನಾನು ಹೋಗಬೇಕು' ಎಂದ. ಉಮೆಯೇ ಸ್ವತಃ ಟ್ರೇನಲ್ಲಿ ಕಾಫಿ ತರುವುದು ಕಂಡು ಮುಳ್ಳಿನ ಮೇಲೆ ಕೂತಂತೆ ಕೂತು ಕಾಫಿ ಕುಡಿದ. ಅವನು ಏಳಬೇಕೆಂದಿದ್ದಾಗ ಚನ್ನವೀರಯ್ಯನೇ ಕಾರು ತರಲು ಹೇಳಿ ಹೊರಟಿದ್ದರಿಂದ ಅಣ್ಣಾಜಿ ಜತೆ ಅವನ ಗರಾಜ್ ಮೇಲಿನ ರೂಮಿಗೆ ಹೋದ. ಬಾಗಿಲು ಹಾಕಿಕೊಂಡು,

'ಅಣ್ಣಾಜಿ – ನಾನು ಕಾಲೇಜನ್ನು ಬಿಟ್ಟೆ. ಹುಡುಗಾಟಿಕೆ ಸಾಕಾಯ್ತು' ಎಂದ. ಅಣ್ಣಾಜಿ ಹರ್ಷದಲ್ಲಿ ಕೃಷ್ಣಪ್ಪನನ್ನು ತಬ್ಬಿಕೊಳ್ಳಲು ಹೋಗಿ, ಅವನು ಸೆಟೆದದ್ದು ಕಂಡು, ಅವನಿಗೆ ಮೈಮುಟ್ಟಿಸಿಕೊಳ್ಳುವುದೆಂದರೆ ಮುಜಗರವೆಂಬುದನ್ನು ನೆನಪು ಮಾಡಿಕೊಂಡು ಚಾಚಿದ ಕೈಗಳನ್ನು ಹಾಗೇ ಎತ್ತಿ,

'ಗ್ರೇಟ್ – ಹಳ್ಳಿಗೆ ಹೋಗು' ಎಂದು ಸಿಗರೇಟ್‌ಹತ್ತಿಸಿದ. ಇಬ್ಬರೂ ಸ್ವಲ್ಪ ಹೊತ್ತು ಮೌನವಾಗಿ ಕೂತಿದ್ದರು.

'ನಿನ್ನೆ ಮೀಟಿಂಗಿಗೆ ಡಿ. ಎಸ್. ಪೀ ನೂ ಬಂದಿದ್ದ.' ಕೃಷ್ಣಪ್ಪ ಪ್ರಶ್ನಾರ್ಥಕವಾಗಿ ಅಣ್ಣಾಜಿ ಮುಖ ನೋಡಿದ.

'ಎಸ್. ನಾನು ರೆಸ್ಪೆಕ್ಟಬಲ್ ಆಗೋಕೆ ಪ್ರಯತ್ನಿಸ್ತ ಇದೀನಿ. ಆದರೆ ನೋಡು.'

ಎಂದು ಅವತ್ತಿನ ಹಿಂದೂ ಪತ್ರಿಕೆಯ ಒಳಪುಟದ ಕಾಲಂ ಒಂದನ್ನು ತೋರಿಸಿದ. ಅದರಲ್ಲಿ ಸ್ವಾಮೀಜಿ ಎಂದು ಕರೆಸಿಕೊಳ್ಳುತ್ತ ತೆಲಾಂಗಣ ಪ್ರದೇಶದಲ್ಲಿ ರೈತರನ್ನು ಹಿಂಸೆಗೆ ಪ್ರಚೋದಿಸಿದವನೊಬ್ಬ ತಪ್ಪಿಸಿಕೊಂಡಿದ್ದಾನೆಂದೂ, ಅವನು

ಹಿಡಿದುಕೊಟ್ಟವರಿಗೆ ಸೂಕ್ತ ಬಹುಮಾನ ಕೊಡುವುದಾಗಿಯೂ ಪ್ರಕಟವಾಗಿತ್ತು. ಬೋಳಿಸಿದ ತಲೆ, ಕಾವಿ ಜುಬ್ಬ, ಕಾವಿ ಪಂಚೆ ಧರಿಸಿದ ಎತ್ತರವಾದ ನಿಲುವಿನ ಕೋಲುಮುಖದ ಈ ಸ್ವಾಮೀಜಿಯ ವರ್ಣನೆಯೂ ಸುದ್ದಿಯಲ್ಲಿತ್ತು. ಕೃಷ್ಣಪ್ಪ ಅನುಮಾನದಿಂದ ಬಂಗಾಳಿ ಗೃಹಸ್ಥನಂತೆ ಕಾಣುವ ಅಣ್ಣಾಜಿಯನ್ನು ನೋಡುತ್ತಿದ್ದಾಗ ಅಣ್ಣಾಜಿ ತನ್ನ ಟ್ರಂಕಿನಿಂದ ಒಂದು ಕಾವಿ ಜುಬ್ಬ ಪಂಚೆಗಳನ್ನು ಹೊರಗೆ ತೆಗೆದು ಕಾಗದದಲ್ಲಿ ಸುತ್ತಿ.

'ಇನ್ನಿದರ ಉಪಯೋಗವಿಲ್ಲ ಇದನ್ನು ಸುಟ್ಟುಬಿಡು' ಎಂದ.

'ಮುಂದೆ?' ಎಂದ ಕೃಷ್ಣಪ್ಪ.

'ನೀನು ಹಳ್ಳಿಗೆ ಹೋದ ಮೇಲೆ ಅಲ್ಲಿ ಎಲ್ಲಾದರೂ ನನ್ನ ಮುಚ್ಚಿಡು. ಈಗ ಸದ್ಯ ನಾನು ರಾಯ್‌ಧೋರಣೆಯಿಂದ ಮಾರ್ಕ್ಸ್‌ವಾದವನ್ನು ಟೀಕಿಸಿ ಮಾತಾಡುತ್ತ ಬರೆಯುತ್ತ ನನ್ನ ಐಡೆಂಟಿಟೀನ ಮುಚ್ಚಿಕೊಂಡಿರ್ತೀನೆ. ನೋಡು.'

ಎಂದು ರೂಮಲ್ಲಿ ತನ್ನೊಂದು ಪುಸ್ತಕದಿಂದ ಕತ್ತರಿಸಿ ಅಂಟಿಸಿದ್ದ ಲಿಂಕನ್‌ಮತ್ತು ರೂಸ್ ವೆಲ್ಟರ ಫೋಟೋಗಳನ್ನು ತೋರಿಸಿದ.

ಕೃಷ್ಣಪ್ಪನಿಗೆ ತನಗಾಗುತ್ತಿದ್ದ ನಿಷ್ಕಾರಣವಾದ ದಿಗಿಲುಗಳನ್ನು ಹೇಳಿಕೊಳ್ಳಬೇಕೆನ್ನಿಸಿದ್ದರೂ, ಮಾತಾಡಲು ಇಷ್ಟವಾಗಲಿಲ್ಲ. ಕಾವಿ ಅಂಗಿ ಪಂಚೆಗಳನ್ನು ಅವತ್ತಿನ ಹಿಂದೂನಲ್ಲಿ ಸುತ್ತಿಕೊಂಡು ಹೊರಡಲು ನಿಂತಾಗ ಬಾಗಿಲು ತಟ್ಟಿದ್ದು ಕೇಳಿಸಿತು. ಅಣ್ಣಾಜಿ ಕಣ್ಣುಗಳಲ್ಲಿ ಸಂತೋಷ ಚಿಮ್ಮಿತು.

'ಉಮಾ ಇರಬೇಕು. ಮಾರ್ವಲೆಸ್ ಉಮನ್. ರೆವಲ್ಯೂಶನರಿಗೆ ಪಕ್ಕದಲ್ಲಿ ಅಂಥ ಒಬ್ಬ ಉಮನ್‌ಇದ್ದರೆ' ಎಂದು ಹೋಗಿ ಬಾಗಿಲು ತೆರೆದ. ಉಮಾ ಗಾರ್ಕಿಯ ಕಥೆಗಳ ಪುಸ್ತಕ ಹಿಡಕೊಂಡು ನಿಂತು 'ಬರಲೇ' ಎಂದಳು. 'ಇರು. ನಾವು ಗಾರ್ಕೀನ್ನ ಚರ್ಚಿಸ್ತ ಇದೇವೆ' ಎಂದರೂ ಕೃಷ್ಣಪ್ಪ ಒಪ್ಪಲಿಲ್ಲ. ಪ್ರೇಮದಲ್ಲಿ ಹೊಳೆಯುವ ಉಮೆಯ ಕಣ್ಣುಗಳು, ಅವಳ ಉಸಿರಿಗೆ ಏರಿಳಿಯುವ ಉಬ್ಬಿದ ಎದೆ, ಚುರುಕಾದ ಅವಗಾಹನೆಗಳಿಂದ ತನ್ನಲ್ಲಿ ಅಸೂಯೆ ಹುಟ್ಟಿಸುತ್ತದೆ ಎಂಬುದನ್ನು ಗಮನಿಸಿ ಅವನ ಮನಸ್ಸಿಗೆ ಕಸಿವಿಸಿಯಾಗಿತ್ತು. ಅಣ್ಣಾಜಿಗೂ ಉಮೆಯನ್ನು ನೋಡಿ ಅವಳ ಜತೆ ಒಂಟಿಯಾಗಿರಲು ದಿಗಿಲಾಗಿರಬಹುದು – ತನ್ನನ್ನು ಕೂತಿರಲು ಒತ್ತಾಯ ಮಾಡುತ್ತ ಮಹಡಿ ಮೆಟ್ಟಿಲು ಇಳಿದು ಬಂದು ಬೀಳ್ಕೊಟ್ಟ.

ಕೃಷ್ಣಪ್ಪನಿಗೆ ಗೌರಿಯ ಮನೆಗೆ ಸೀದ ಹೋಗಬೇಕೆನ್ನಿಸಿ ಅವಳ ಮನೆ ಕಡೆ ನಡೆದ. ಮನೆ ಹತ್ತಿರವಾಗುತ್ತಿದ್ದಂತೆ ದಿಗಿಲಾಗತೊಡಗಿತು. ಅವಳು ಮನೆಯಲ್ಲಿರಕೂಡದು ಎಂದು ಆಸೆಪಡುತ್ತ ಗೇಟ್‌ಎದುರು ನಿಂತ. ಪೋರ್ಟಿಕೋನಲ್ಲಿ ಕಾರ್ ಇಲ್ಲದಿರುವುದು ಕಂಡು ಮನಸ್ಸು ಹಗುರವಾಯಿತು. ಈ ಹೊತ್ತಿಗೆ ಅವಳು ಕಾಲೇಜಿಗೆ ಹೋಗಿರುತ್ತಾಳೆಂಬುದನ್ನು ಅವನು ಮರತೇಬಿಟ್ಟಿದ್ದ. ಅಥವಾ ಕಾರಲ್ಲಿ ಅವಳ ತಾಯಿಯೆಲ್ಲಾದೂ ಹೋಗಿರಲಿಕ್ಕೂ ಸಾಕು. ತೋಟದಲ್ಲಿ ಹೂಗಿಡಿಗಳ ಮಧ್ಯೆ ಕೆಲಸ ಮಾಡುವ ಜವಾನನೊಬ್ಬ ಕೃಷ್ಣಪ್ಪನನ್ನು ಗಮನಿಸಿ, 'ಸಣ್ಣಮ್ಮೋರು ಇಲ್ಲ' ದೊಡ್ಡಮ್ಮೋರನ್ನ ನೋಡಬೇಕೇನು ?

ಎಂದ. ಕೃಷ್ಣಪ್ಪ ಬೇಡವೆಂದು ಸರಸರನೆ ನಡೆದ. ಅವನ ಮನಸ್ಸು ಹಗುರಾಗಿತ್ತು.

ಎಲ್ಲಿಗೆ ಹೋಗುವುದು ತಿಳಿಯದೆ ಅಡ್ಡಾಡುತ್ತಿದ್ದವನು, ಬಿಸಿಲೇರುತ್ತಿದ್ದಂತೆ ಇವತ್ತು ಆ ಗೋಸಾಯಿಯ ಮೌನದ ರಹಸ್ಯವನ್ನು ಭೇದಿಸಲೇಬೇಕೆಂದು ಮನಸ್ಸು ಮಾಡಿ ಬೆಟ್ಟ ಹತ್ತಿದ. ಬೆಳಿಗ್ಗೆ ತಿಂಡಿ ತಿನ್ನದ್ದರಿಂದ ತನಗೆ ತುಂಬ ಹಸಿವಾಗುತ್ತಿರುವುದು ಅನುಭವವಾಯಿತು. ರಾತ್ರೆ ನಿದ್ದೆ ಬೇರೆ ಇಲ್ಲದೆ ದಣಿವಾಗಲು ಶುರುವಾಯಿತು.

ದೂರದಿಂದಲೇ ಬೈರಾಗಿ ಒಲೆಗೆ ಬೆಂಕಿ ಹಾಕುತ್ತಿರುವುದು ಕಾಣಿಸಿತು. ಇದನ್ನು ಕಂಡು ಹಸಿವು ಹೆಚ್ಚಾಯಿತು. ಹಿಂದಿನ ದಿನದಂತೆಯೇ ಬಂಡೆಯೊಂದಕ್ಕೆ ಒರಗಿ ಕೂತ. ಬೈರಾಗಿ ಒಲೆಯ ಮೇಲೆ ಮಡಕೆಯನ್ನಿಟ್ಟು ಗುಹೆಯಿಂದ ಒಂದು ದಪ್ಪನೆಯ ಪುಸ್ತಕ ತಂದು ಓದುತ್ತ ಕೂತ. ಆ ಪುಸ್ತಕ ಯಾವುದೆಂದು ಕುತೂಹಲವಾಯಿತು. ಆದರೆ ಎದ್ದು ಹೋಗಿ ನೋಡುವುದರಿಂದ ಅವನ ಏಕಾಗ್ರತೆಗೆ ಭಂಗ ಬಂದೀತೆಂದು ಸುಮ್ಮನಾದ. ಸ್ವಲ್ಪ ಹೊತ್ತಿನ ಮೇಲೆ ಬೈರಾಗಿ ಗುಹೆಯಿಂದ ಮುತ್ತುಗದ ಎಲೆಗಳನ್ನು ತಂದು ಮೂರು ಊಟದೆಲೆಗಳನ್ನು ಹೆಣೆದ. ಅವನ ಊಟದಲ್ಲಿ ಇವತ್ತೂ ತನಗೆ ಪಾಲಾಗುತ್ತಿದೆ. ಅಷ್ಟರಮಟ್ಟಿಗೆ ತನ್ನ ಇರುವಿಕೆಯನ್ನು ಅವನು ಗಮನಿಸಿದ್ದಾನೆ. ಯಾವ ಸಂದಿಯಿಂದಲೋ ನಾಯಿ ಪ್ರತ್ಯಕ್ಷವಾಗಿ ಇನ್ನೊಂದು ಬಂಡೆಯ ನೆರಳಲ್ಲಿ ಮಲಗಿ ನಾಲಿಗೆ ಚಾಚಿ ಉಸಿರಾಡತೊಡಗಿತು. ಕಪ್ಪು ಚುಕ್ಕೆಗಳ ಬೂದು ಬಣ್ಣದ ನಾಯಿ, ಯಾವತ್ತೋ ಈ ಬೈರಾಗಿಯ ಹಿಂದೆ ಬಂದು ಅಲ್ಲಿ ಠಿಕಾಣಿ ಬಿಟ್ಟಿರಬೇಕು.

ಮಡಿಕೆಯಲ್ಲಿದ್ದುದು ಬೆಂದ ಮೇಲೆ ಬೈರಾಗಿ ಅದನ್ನು ಸರಿಯಾಗಿ ಮೂರು ಪಾಲು ಮಾಡುತ್ತಿರುವಾಗ ಕೃಷ್ಣಪ್ಪ ಎದ್ದು ಒಲೆಯ ಹತ್ತಿರ ಹೋಗಿ ಕೂತ. ಬೈರಾಗಿ ಒಂದು ಎಲೆಯನ್ನು ನಾಯಿಗೆ ಇಟ್ಟು ಬರಲು ಹೋದಾಗ ಅವನು ಓದುತ್ತಿದ್ದುದು ವಾಲ್ಮೀಕಿಯ ಸಂಸ್ಕೃತ ರಾಮಾಯಣವೆಂಬುದನ್ನು ಕೃಷ್ಣಪ್ಪ ಗಮನಿಸಿದ. ನಂತರ ಮೌನದಲ್ಲಿ ಅಕ್ಕಪಕ್ಕ ಕೂತು ಇಬ್ಬರ ಊಟವೂ ನಡೆಯಿತು. ಇವತ್ತು ಬೇಯಿಸಿದ್ದರಲ್ಲಿ ಅಕ್ಕಿ ಬೇಳೆಗಳ ಜೊತೆ ಕಾಯಿ ಮತ್ತು ಬೆಲ್ಲಗಳೂ ಇದ್ದವು. ಯಾರೋ ಅದನ್ನು ಇಕ್ಕಿರಬೇಕು.

ಬೈರಾಗಿಯನ್ನು ಮಾತಾಡಿಸಬೇಕೆನ್ನಿಸಿತು. ತನ್ನನ್ನು ಅತ್ಯಂತ ತೀವ್ರವಾಗಿ ಬಾಧಿಸುವ ಪ್ರಶ್ನೆಯನ್ನು ಕೇಳಿದರೆ ಹೇಗೆ?

'ಒಂದೊಂದು ಸಾರಿ ಏನು ಮಾಡಬೇಕು ಗೊತ್ತಾಗಲ್ಲ. ನೂರಾರು ಸಾಧ್ಯತೆಗಳು ಎದುರಾಗ್ತವೆ. ಯಾಕೆ ಬದುಕಬೇಕು ತಿಳಿಯಲ್ಲ.'

ಕೃಷ್ಣಪ್ಪನಿಗೆ ತನ್ನದು ಅಸಂಬದ್ಧ ಪ್ರಲಾಪವೆನ್ನಿಸುವಂತೆ ಬೈರಾಗಿ ಯಾವ ಭಾವನೆಯನ್ನೂ ತೋರಿಸಿದೆ ತಿನ್ನುತ್ತ ಕೂತಿದ್ದ. ಅವನ ಮೌನದಿಂದ ತನ್ನ ಪ್ರಶ್ನೆಯೇ ಸುಳ್ಳೋ, ಸ್ವಕಲ್ಪಿತವೋ ಎಂದು ಕೃಷ್ಣಪ್ಪನಿಗೆ ಅನುಮಾನವಾಯಿತು. ಅಥವಾ ಯಾವನೋ ಪೆದ್ದನ ಬಳಿ ಒಳಗಿನದನ್ನು ಹೇಳಿಕೊಳ್ಳುವ ಮೂರ್ಖ ಕೆಲಸ ತಾನು ಮಾಡುತ್ತಿರಬಹುದು. ಅರ್ಧ ಊಟದ ನಡುವೆಯೇ ಎಲೆಯನ್ನೆಸೆದು ಗುಹೆಗೆ ಅಷ್ಟು ದೂರದಲ್ಲಿದ್ದ ಒಂದು ಹಳ್ಳದಲ್ಲಿ ಕೈ ತೊಳೆದ. ಹಿಂದಕ್ಕೆ ಬರುವಾಗ ಜರುಗಿದ ಒಂದು ಘಟನೆಯಿಂದ ಬೈರಾಗಿ ಅವನಿಗೆ ಇನ್ನಷ್ಟು ರಹಸ್ಯವಾದ ವ್ಯಕ್ತಿಯಾದ.

ಒಬ್ಬ ಮುದುಕ – ತಲೆಗೆ ಟೋಪಿ ಹಾಕಿ ಅಂಗಿಯ ಮೇಲೊಂದು ಧೋತ್ರ ಹೊದ್ದವ ಊಟ ಮಾಡುತ್ತಿದ್ದ ಬೈರಾಗಿಯ ಎದುರು ಬಂದು ನಿಂತ. ಧೋತ್ರದಿಂದ ಮುಖ ಒರೆಸಿಕೊಳ್ಳುತ್ತ ನೀರು ಕೇಳಿದ. ಬೈರಾಗಿ ಹೂಜಿಯಲ್ಲಿದ್ದ ನೀರನ್ನೂ ಎಲೆಯಿಂದ ಕಟ್ಟಿದ ದೊನ್ನೆಯನ್ನೂ ಅವನಿಗೆ ತೋರಿಸಿದ. ಮುದುಕ ನೀರು ಕುಡಿದು, ದೊನ್ನೆಯ ತಳದಲ್ಲಿದ್ದುದನ್ನು ಕಣ್ಣಿಗೆ ಒರೆಸಿಕೊಂಡು.

'ಮೂಕಾಂಬಿಕಾ ದೇವಸ್ಥಾನಕ್ಕೆ ಹೋಗಬೇಕು. ದಾರಿ ತಪ್ಪಿಬಿಟ್ಟೆ, ಇಲ್ಲಿಂದ ದೂರವ?' ಎಂದು ಕೇಳಿದ.

ಬೈರಾಗಿಯ ಊಟ ಮುಗಿದಿತ್ತು. ಎದ್ದು ನಿಂತ. ಕೈತೊಳೆದು ಬಂದು,

'ಈ ದಾರಿಯಲ್ಲಿ ಹೋಗಿ, ಆ ದೊಡ್ಡ ಬಂಡೆಯ ಹತ್ತಿರ ಬಲಕ್ಕೆ ತಿರುಗಿ, ಅಲ್ಲಿ ಮೆಟ್ಟಿಲುಗಳು ಇವೆ. ಸುಮಾರು ನೂರು ಮೆಟ್ಟಿಲು ಹತ್ತಿದರೆ ದೇವಸ್ಥಾನ ಸಿಗುತ್ತೆ' ಎಂದ.

ಮುದುಕ ಕೈ ಮುಗಿದು ಹೋದ ಮೇಲೆ ಕೃಷ್ಣಪ್ಪ ಆಶ್ಚರ್ಯದಿಂದ ಬೈರಾಗಿಯನ್ನು ನೋಡುತ್ತ,

'ಅದೇಕೆ ನೀವು ನನ್ನ ಹತ್ತರಿ ಮಾತಾಡಲ್ಲ?' ಎಂದ.

ಈ ಪ್ರಶ್ನೆಗೆ ಉತ್ತರ ಸಿಗಲಿಲ್ಲ. ವ್ಯಾಯಾಮದಿಂದ ಎಡಪಾರ್ಶ್ವಕ್ಕೆ ಜೀವಧಾತು ಹರಿಸಲು ಯತ್ನಿಸುತ್ತಿರುವ ಕೃಷ್ಣಪ್ಪ ಈ ಘಟನೆ ನೆನೆಸಿಕೊಂಡು ಹೇಳುತ್ತಾನೆ. 'ಪ್ರಶ್ನೆ ಫ್ಯಾಕ್ಚುಯಲ್‌ಆಗಿದ್ದರೆ ಮಾತ್ರ ಈ ಬೈರಾಗಿ ಉತ್ತರ ಕೊಡುತ್ತಿದ್ದ. ಅಭಿಪ್ರಾಯದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿರಲಿಲ್ಲ. ಅಣ್ಣಾಜಿ ಉಕ್ಕುವ ಮನುಷ್ಯನಾದರೆ ಈ ಬೈರಾಗಿ ಅಗತ್ಯವಿದ್ದಷ್ಟು ಮಾತ್ರ ಜಗತ್ತಿಗೆ ತೆರೆದುಕೊಂಡಿದ್ದವ. ಆದರೆ ಇದರಿಂದಾಗಿ ಅವನ ಒಳಗೆ ಏನು ಮಾಗಿ ಫಲ ಬಿಟ್ಟಿತೋ, ಅದರಿಂದ ಅವನೇನು ಪಡೆದನೋ, ಯಾರೇನು ಪಡೆದರೊ ಹೇಳಕ್ಕಾಗಲ್ಲ. ಆದರೆ ನಾನಾಗಲೀ ಅಣ್ಣಾಜಿಯಾಗಲೀ ಕೊನೆಗೂ ಕಡಿದಿದ್ದಾದರೂ ಏನು?' ಹೀಗೆ ಕೃಷ್ಣಪ್ಪ ಮಾತಾಡುವಾಗ ಅವನು ತುಂಬ ಖಿನ್ನನಾಗಿರುತ್ತಾನಾದ್ದರಿಂದ ಇದು ಕೂಡ ಅವನ ಒಟ್ಟು ಅಭಿಪ್ರಾಯವೆಂದು ಹೇಳಲಿಕ್ಕಾಗುವುದಿಲ್ಲ. ಆ ಬೈರಾಗಿಯಂತೂ ಅವನನ್ನು ಕಾಡಿದ್ದಾನೆ ಎಂಬುದಷ್ಟು ನಿಜ. ಅವನಂತೆಯೇ ಮೌನಿಯಾಗಿ ಒಳಗಿರುವುದನ್ನು ಧಗಧಗ ಉರಿಸಿಕೊಂಡಿರಬೇಕೆಂಬ ಆಸೆ ಅವನನ್ನು ಬಿಟ್ಟಿಲ್ಲ. ಮಲಮೂತ್ರ ವಿಸರ್ಜನೆಯ ವ್ಯವಧಾನ ಕಳೆಯುತ್ತಿರುವ ಈಗಲೂ ಕೂಡ.

ಅವನು ಮಾತಾಡುತ್ತಾನೆ ಎಂದು ಗೊತ್ತಾದ ಮೇಲೆ ಅವನನ್ನು ಮಾತಾಡಿಸುವಂಥ ಪ್ರಶ್ನೆ ತನ್ನಲ್ಲೇನಿದೆ ಎಂದು ಕೃಷ್ಣಪ್ಪ ಸಂಕಟಪಡುತ್ತ ಹುಡುಕಿದ. ಕೇಳುವ ಪ್ರಶ್ನೆ ನಿಜವಾದ ಪ್ರಶ್ನೆಯಾಗಿರಬೇಕು. ಸ್ಪಷ್ಟವಾಗಿ ಕೇಳುವಂತಿರಬೇಕು – ಇಂಥಲ್ಲಿಗೆ ದಾರಿ ಎಲ್ಲಿ ಎನ್ನುವಷ್ಟು. ತನ್ನ ಕಷ್ಟಗಳೆಲ್ಲ ಮನಸ್ಸಿನ ಲಾಲಸೆಯಿಂದ ಹುಟ್ಟಿದ್ದಿರಬಹುದೆಂದು ಕೃಷ್ಣಪ್ಪನಿಗೆ ಭಯವಾಯಿತು. ಅಥವಾ ತನ್ನ ಸಮಸ್ಯೆ ಏನೆಂಬುದೇ ನಿಜವಾಗಿ ತನಗೆ ಗೊತ್ತಿಲ್ಲವೆಂದುಕೊಂಡ. ಒಮ್ಮೆ ಅಂಥ ಪ್ರಶ್ನೆ ಕೇಳುವುದು

ಸಾಧ್ಯವಾದರೂ ಅದು ಈ ಬೈರಾಗಿಯ ಅರಿವಿಗೆ ದಕ್ಕಲಾರದಾಗಿ ಅವನು ಸುಮ್ಮನಿರಬಹುದು. ಅಥವಾ ಯಾವುದೂ ಇನ್ನೊಬ್ಬರನ್ನು ಕೇಳಿ ಬಗೆಹರಿಸಿಕೊಳ್ಳಬಲ್ಲ ಪ್ರಶ್ನೆಯಲ್ಲ ಎಂಬ ನಿಲುವು ಆತನದ್ದಿರಬಹುದು.

ಕೃಷ್ಣಪ್ಪ ಸಂಜೆಯಾಗುತ್ತಿದ್ದಂತೆ ಬೆಟ್ಟವನ್ನಿಳಿದ. ಗೌರಿ ದೇಶಪಾಂಡೆಯನ್ನು ಹೋಗಿ ನೋಡುವುದೆ? ನೋಡಿದರೆ ಏನು ಹೇಳುವುದು? ತನ್ನೆಲ್ಲ ವರ್ತನೆಗಳೂ ಅಪಕ್ವವೆನ್ನಿಸಿ ಹಾಸ್ಟಲಿಗೆ ಹೋದ. ಹುಡುಗರೆಲ್ಲ ತನ್ನನ್ನು ಏನೋ ಕೇಳಲು ಕಾಯುತ್ತಿದ್ದಾರೆ ಎಂದು ಗೊತ್ತಾದರೂ 'ಸುಸ್ತಾಗಿದೆ ಕಣ್ರೋ, ನಾಳೆ ಮಾತಾಡೋಣ' ಎಂದು ರೂಮಿಗೆ ಹೋಗಿ ಮಲಗಿದ. ಕಿಶೋರ ತಂದು ಕೊಟ್ಟ ಹಾಲನ್ನು ಕುಡಿದು, ಅವನು ಕೊಟ್ಟ ಲಕೋಟೆಯನ್ನು ಆತುರದಿಂದ ಒಡೆದು ಓದಿದ.

'ಇವತ್ತು ನನ್ನನ್ನು ಕೇಳಿಕೊಂಡು ಮನೆಗೆ ಬಂದಿದ್ದವರು ನೀವೇ ಇರಬೇಕು. ಮಹಡಿಯಲ್ಲಿದ್ದ ನನ್ನ ತಾಯಿಗೆ ಇನ್ನು ಯಾರು ಕವಿಯ ಹಾಗೆ ಕಂಡಿರಲು ಸಾಧ್ಯ? ನಾಳೆ ಬನ್ನಿ – ಬರಬೇಕೆನ್ನಿಸಿದರೆ. ಸಂಕೋಚ ಮಾಡಿಕೋಬೇಡಿ. ನಿಮ್ಮವಳೇ ಗೌರಿ ದೇಶಪಾಂಡೆ.'

ಕೃಷ್ಣಪ್ಪನಿಗೆ ಸಂತೋಷವಾಯಿತು. ಭಯವಾಯಿತು. ಸಾವಿನ ಜೊತೆ ಹೆಣಗುತ್ತಿರುವ ಈ ದಿನಗಳಲ್ಲಿ ಆಗ ನಡೆಯುತ್ತಿದ್ದುದನ್ನೆಲ್ಲ ನೆನಪು ಮಾಡಿಕೊಂಡು ಅವನು ಆಶ್ಚರ್ಯಪಡುತ್ತಾನೆ. ನಮ್ಮ ಕಲ್ಪನೆ ಯಾಕೆ ಪ್ರೀತಿಗೆ ದಕ್ಕಿದ ಹೆಣ್ಣಿಗಿಂತ ದಕ್ಕಲಾರದೆ ಹೋದವಳನ್ನೇ ಹೆಚ್ಚು ಹಚ್ಚಿಕೊಳ್ಳುತ್ತದೆ? ಅವಳನ್ನು ಅಷ್ಟು ಬಯಸಿಯೂ ಯಾಕೆ ತನಗೆ ಅವಳನ್ನು ಸರಳವಾಗಿ ಸ್ಪಷ್ಟವಾಗಿ ನೀನು ನನಗೆ ಬೇಕು ಎಂದು ಕೇಳುವುದು ಸಾಧ್ಯವಾಗಲಿಲ್ಲ? ಅಷ್ಟು ಸುಲಭವಾಗಿ, ಚುರುಕಾಗಿ, ಹಗುರಾಗಿ ಮಾತಾಡಿಬಿಡುತ್ತಿದ್ದ ಆಕೆಗೂ ಹೆಣ್ಣಿಗೆ ಗಂಡು ಬೇಕಾಗುವ ರೀತಿಯಲ್ಲಿ ನೀನು ನನಗೆ ಬೇಕು ಎಂದು ಸೂಚಿಸಲು ಸಾಧ್ಯವಾಗಲಿಲ್ಲ? ದೈವಿಕವೆನಿಸುತ್ತಿದ್ದ ಅವಳ ಮುಖವನ್ನು ನೆನೆದಾಗ ಅವಳ ಮಾಟವಾದ ದೇಹವನ್ನು ಬಯಸುವುದು ಸಾಧ್ಯವಾಗುತ್ತಿರಲಿಲ್ಲ. ಅವಳ ದೇಹವನ್ನು ಕೂಡುವ ಬಯಕೆಯಾದಾಗ ಅವಳ ಮಾತು ಮುಖ ಕಣ್ನೋಟಗಳು ನೆನಪಾಗಿ ತನ್ನ ಆಸೆಗಳ ಬಗ್ಗೆ ಹೇಸಿಗೆ ಪಡುವಂತಾಗುತ್ತಿತ್ತು. ಆದ್ದರಿಂದ ಆ ದಿನಗಳಲ್ಲಿ ತನ್ನ ಭಾವನೆಯನ್ನೆಲ್ಲ ಇಡೀ ತನ್ನ ಪ್ರಾಣ ಬಯಸುವ ಒಂದು ಮಾತನ್ನಾಗಿ, ಒಂದು ಪ್ರಶ್ನೆಯನ್ನಾಗಿ, ಒಂದು ಅಚಲ ನಿರ್ಧಾರವನ್ನಾಗಿ ಹೇಳಲು ಸಾಧ್ಯವಾಗುತ್ತಿರಲಿಲ್ಲ.

ಕೃಷ್ಣಪ್ಪನಿಗೆ ಆವತ್ತು ನಿದ್ದೆ ಬಂತು. ಮಧ್ಯರಾತ್ರೆ ಏನೋ ಗಲಾಟೆಯಾದಂತಾಗಿ ಎಚ್ಚರವಾಯಿತು. ಎದ್ದು ದೀಪ ಹಾಕಿದ. ಮಹಡಿಯ ಮೆಟ್ಟಿಲುಗಳನ್ನು ಇಳಿಯುವಾಗ ಹಾಸ್ಟೆಲಿನ ವಿದ್ಯಾರ್ಥಿಗಳೆಲ್ಲ ಆವೇಶದಲ್ಲಿ ಯಾರನ್ನೋ ಒಳಗೆ ನೂಕುತ್ತಿದ್ದಂತೆ ಕಂಡಿತು. ಕೃಷ್ಣಪ್ಪ ಅವಸರವಾಗಿ ಇಳಿಯುತ್ತಿದ್ದಂತೆ ಶಾಮಣ್ಣ ಏದುಸಿರು ಬಿಡುತ್ತ ಕೃಷ್ಣಪ್ಪನನ್ನು ಅವನ ರೂಮಿಗೆ ತಳ್ಳಿಕೊಂಡು ಹೋಗಿ ಬಾಗಿಲು ಹಾಕಿಕೊಂಡು ಕೈ ಮುಗಿದು ನಿಂತ: ಶಾಮಣ್ಣ ಕುಡಿದಂತಿತ್ತು. ದಮ್ಮಿನಿಂದ ಉಸಿರಾಡುತ್ತ ಬಡಬಡಿಸಿದ.

'ನೀವು ಸ್ವಲ್ಪ ಸುಮ್ಮಿರಬೇಕು. ಆ ಹಾರುವ ಮಕ್ಕಳ ಪುಳಚಾರು ಕಕ್ಕಿಸಿದ ಮೇಲೆ ನಿಮ್ಮನ್ನ ಕರೀತೀವಿ. ನಿಮ್ಮ ಕಾಲಿಗೆ ಬೀಳಿಸ್ತೀವಿ. ಅವರಿಗೇನೂ ಅಪಾಯ ಮಾಡಲ್ಲ. ನಿಮ್ಮಾಣೆ –' ಎಂದು ಶ್ಯಾಮಣ್ಣ ಲಗುವಿನಿಂದ ಹೊರಗೆ ಹೋಗಿ ಕೃಷ್ಣಪ್ಪನ ಬಾಗಿಲನ್ನು ಹಾಕಿಕೊಂಡು ಚಿಲಕ ಹಾಕಿದ. ಕೃಷ್ಣಪ್ಪ ನಿಸ್ಸಹಾಯಕವಾಗಿ ಕೂತು ಕೆಳಗೆ ಅತ್ಯಂತ ನಾಚಿಕೆ ಸ್ವಭಾವದ

ಹುಡುಗರೂ ಅಬ್ಬರಿಸಿ ಬೈಯುವುದನ್ನೂ, ದಬ್‌ದಬ್‌ಶಬ್ದಗಳನ್ನೂ, ವಾಗ್ವಾದವನ್ನೂ, ಇದ್ದಕ್ಕಿದ್ದಂತೆ ಎಲ್ಲವೂ ಸ್ತಬ್ಧವಾದುದನ್ನೂ ಕೇಳಿಸಿಕೊಂಡ. ಚಿಲಕ ತೆಗೆಯಿತು. ಶಾಮಣ್ಣ ಎದುರು ನಿಂತು' ನಾಳೆ ಬೇಕಾರೆ ನಮಗೆಲ್ಲ ಬೈಯ್ರಿ, ಈಗ ಕೆಳಗೆ ಬನ್ನಿ. ಆ ಸುವರ್ ಗಳು ನಿಮಗೆ ಅಪಾಲಜಿ ಕೇಳಕ್ಕೆ ಒಪ್ಪಿಕೊಂಡಿದಾವೆ' ಎಂದ.

ಕೃಷ್ಣಪ್ಪ ಕೆಳಗೆ ಬಂದು ನೋಡಿದ ದೃಶ್ಯ ಹಾಸ್ಯಾಸ್ಪದವಾಗಿತ್ತು. ಗ್ಯಾಂಗಿನ ಲೀಡರ್ ರಾಮುವನ್ನು ಒಂದು ಮಂಚದ ಕಾಲಿಗೆ ಕಟ್ಟಿಹಾಕಲಾಗಿತ್ತು. ಹಾಸ್ಟೆಲಿನ ಒಲೆಯ ಬೂದಿ ಕರಿಗಳನ್ನು ತಂದು ಅವನ ಮುಖಕ್ಕೆ ಬಳಿಯಲಾಗಿತ್ತು. ಅವನ ಇಬ್ಬರು ಸಂಗಡಿಗರ ಕೈಗಳನ್ನು ಹಿಂದಕ್ಕೆ ಕಟ್ಟಿ ಕಾಲುಗಳಿಗೆ ಹಗ್ಗ ಬಿಗಿದು ಆ ಹಗ್ಗವನ್ನು ಕಿಟಕಿಯ ಸರಳಿಗೆ ಬಿಗಿದಿತ್ತು. ರಾಮುವಿನ ಬೂದಿ ಕರಿ ಬಳಿದಿದ್ದ ದೊಡ್ಡ ಮೀಸೆಯ ಮುಖ ಭಯ ಕೋಪ ತಾತ್ಸಾರಗಳಿಂದ ವಿಕರವಾಗಿತ್ತು. ಶಾಮಣ್ಣ ಅವನ ಎದುರು ನಿಂತು, ಗೆಲುವಿನಲ್ಲಿ ಬೀಗುತ್ತ ಕೃಷ್ಣಪ್ಪನ ಸಮ್ಮುಖದಲ್ಲಿ ಜಬರದಸ್ತಿನಿಂದ ವಿಚಾರಣೆ ನಡೆಸಿದ – ಗೌರವ ಸೂಚಕವಾದ ಬಹುವಚನದಲ್ಲಿ. ಆದರೆ ಈ ಹದಕ್ಕೆ ಬರುವ ಮುಂಚೆ ಆಡಬೇಕಾದ ಮಾತುಗಳೆನ್ನಲ್ಲ ಆಯಾ ಕ್ರಮದಲ್ಲಿ ಆಡಿ ಮುಗಿದಿತ್ತೆಂದು ಕೃಷ್ಣಪ್ಪನಿಗೆ ತಿಳಿಯದಿರಲಿಲ್ಲ.

'ಮಧ್ಯರಾತ್ರೆ ನಮ್ಮ ಹಾಸ್ಟೆಲಿನ ಗೋಡೆ ಮೇಲೆ ನೀವು ಹೊಲಸು ಹೊಲಸಾಗಿ ಬರೀತ ಇದ್ದರೊ ಇಲ್ವೋ'

ಶಾಮಣ್ಣ ಪ್ರಶ್ನೆಗೆ ರಾಮು ಮುನಿಸಿ ಧ್ವನಿಯಲ್ಲಿ ಹೇಳಿದ.

'ಹೂ. . . .'

'ಅದು ಹೇಲು ತಿನ್ನುವಂಥ ಕೆಲಸ ಅನ್ನೋದನ್ನ ಒಪ್ಪಿಕೋತೀರ ?'

ಶಾಮಣ್ಣ ತನ್ನ ಪ್ಯಾಂಟಿನ ಜೇಬಿನಿಂದ ಸೈಕಲ್‌ಚೈನನ್ನು ಹೊರಗೆಳೆಯುತ್ತಿರುವುದನ್ನೆ ನೋಡುತ್ತ ರಾಮು ವಿಕಾರವಾದ ಮುಖದಲ್ಲಿ

'ಸರಿ' ಎಂದ.

'ಕೃಷ್ಣಪ್ಪಗೌಡರು ನಮಗೆಲ್ಲ ಲೀಡರ್. ಅವರ ಕ್ಷಮಾಪಣೆ ಕೇಳಿಕೊಳ್ಳಬೇಕು ನೀವು. ಅದಕ್ಕೆ ಮುಂಚೆ ನಿಮ್ಮನ್ನು ನಾವು ಫ್ರೀ ಮಾಡ್ತೇವೆ. ಯಾಕೇಂದ್ರೆ ನಿಜವಾದ ವಿಷಾದ ವ್ಯಕ್ತಪಡಿಸಬೇಕು.'

ಶೋಕಿಲಾಲನೆಂದು ತಾನು ತಿಳಿದಿದ್ದ ಶಾಮಣ್ಣನ ಈ ಮಗ್ಗಲು ಕಂಡು ಕೃಷ್ಣಪ್ಪನಿಗೆ ಸೋಜಿಗವಾಯಿತು. ಶಾಮಣ್ಣನ ಕಣ್ಣನ್ನೇ ಗಮನಿಸಿ ಹುಡುಗರು ಮೂವರನ್ನೂ ಬಿಚ್ಚಿದರು. ರಾಮು ಸೆಟೆದುಕೊಂಡೇ ಕೃಷ್ಣಪ್ಪನ ಕಡೆ ತಿರುಗಿ,

‘ನಮ್ಮ ವಾಚುಗಳನ್ನ ಬಿಚ್ಚಿಟ್ಟುಕೊಂಡಿದ್ದಾರೆ – ಕೊಡಿಸಿ ಮತ್ತೆ’ ಎಂದ.

‘ಛೆ ನಾವೇನು ಕಳ್ಳರಲ್ಲ’ ಎಂದು ಶಾಮಣ್ಣ ಅವರ ಮೂರು ವಾಚುಗಳನ್ನೂ ಹಿಂದಕ್ಕೆ ಕೊಟ್ಟು ಹುಡುಗರ ಜೊತೆ ಅವರಿಗೆ ಸುತ್ತುವರೆದು ನಿಂತು ಕೃಷ್ಣಪ್ಪನನ್ನು ಅವರಿಗೆ ಎದುರಾಗಿ ನಿಲ್ಲಿಸಿದ.

ಕೃಷ್ಣಪ್ಪ ತನಗೆ ಸಹಜವಾದ ಮಾತಿನ ಕ್ರಮದಲ್ಲಿ ಯಾವ ಉದ್ವೇಗವೂ ಇಲ್ಲದೆ ಹೇಳಿದ:

‘ನನಗೇನೂ ನಿಮ್ಮ ಕ್ಷಮಾಪಣೆ ಬೇಡ. ನೀವು ಮತ್ತು ನಾನು, ಅಥವಾ ಗೌರಿ ದೇಶಪಾಂಡೆಯವರು ಮತ್ತು ನೀವು ಸಮಸಮಾಂತ ತಿಳಿದು ಹೀಗೆ ಮಾಡೋದು, ನೋಡಿ ಸರಿಯಲ್ಲ. ಪಾಪ ನೀವೇನು ಮಾಡ್ತೀರಿ – ನಿಮ್ಮ ಹಾಗೆ ನಾನೂ ಆ ಕಾಲೇಜಲ್ಲಿ ಕಾಲಾನ ವ್ಯಯ ಮಾಡ್ತಿರೋದ್ರಿಂದ ಅಂಥ ಭ್ರಮೆ ನಿಮಗೆ ಉಂಟಾಗಿದೆ. . . .’

ಹೊರಡುವುದರಲ್ಲಿದ್ದ ರಾಮುವನ್ನು ಶಾಮಣ್ಣ ಕೈ ತಡೆದು, ಕಣ್ಣು ಕೆಕ್ಕರಿಸಿ ನಿಲ್ಲಿಸಿ, ‘ಅವರಿಗೆ ಬೇಡದೆ ಇರಬಹುದು. ಆದರೆ ನಾವು ಡಿಮ್ಯಾಂಡ್‌ಮಾಡ್ತೀವಿ ಅವರ ಕ್ಷಮಾಪಣೆ ಕೇಳಿ ಅಂತ’

ರಾಮು ತಡವರಿಸುತ್ತ –

‘ತಪ್ಪಾಯ್ತು – ಕ್ಷಮಿಸಬೇಕು’ ಎಂದ.

ಶಾಮಣ್ಣ ‘ಒಂದು ಬಕೆಟ್ಟು ನೀರು ತರ್‍ರೊ’ ಎಂದ.

ಬಕೆಟ್ಟು ಬಂದಾಗ ತನ್ನ ಟವಲನ್ನು ಅದರಲ್ಲದ್ದಿ ರಾಮುವಿನ ಮುಖ ತೊಳೆಯಲು ಹೋದ. ಅವನು ಮುಖ ತಿರುಗಿಸಿದಾಗ

‘ನೀವು ಕ್ಷಮಾಪಣೆ ಕೇಳಿಕೊಂಡ ಮೇಲೆ ನಾನು ಬಳೆದ ಮಸೀನ ಒರಸೋದು ನನ್ನ ಡ್ಯೂಟಿ ನೋಡಿ’ ಎಂದ.

ರಾಮು ಒಪ್ಪಲಿಲ್ಲ. ತಾನೇ ತೊಳೆದುಕೊಂಡ. ಆ ಮೇಲೆ ಶಾಮಣ್ಣ –

‘ಈಗ ಗೋಡೆ ಮೇಲೆ ನೀವು ಬರದದ್ದನ್ನು ನೀವೇ ಅಳಿಸಬೇಕು. ಅದು ಕರಾರು’ ಎಂದ. ರಾಮು ಮತ್ತು ಸಂಗಡಿಗರು ಒಪ್ಪಿಕೊಂಡು ಹೊರಟರು. ಇಡೀ ಹಾಸ್ಟೆಲ್‌ಹೊರಗೆ ನಿಂತು ಅವರು ಒರೆಸುವುದನ್ನು ಈಕ್ಷಿಸಿತು.

ರಾಮು ಮತ್ತು ಸಂಗಡಿಗರನ್ನು ಶಿಕ್ಷಿಸುವುದು ಕ್ಷುಲ್ಲಕ ಎನ್ನುವಂತೆ ಗಂಭೀರವಾಗಿ ತಾನು ವರ್ತಿಸಿದ್ದರೂ, ಆ ಶಿಕ್ಷೆಯನ್ನು ತಾನು ಸೂಕ್ಷ್ಮವಾಗಿ ಬಯಸಿರಲೂಬಹುದು ಎನ್ನಿಸುತ್ತದೆ ಈಗ ಕೃಷ್ಣಪ್ಪನಿಗೆ. ಮುಂದೆ ಅವನ ರಾಜಕೀಯ ಜೀವನದಲ್ಲಿ

ಇಂಥ ಪ್ರಸಂಗಗಳೆಷ್ಟೋ ಎದ್ದಾಗ ಸೇಡು ತೀರಿಸಿಕೊಳ್ಳುವುದರಲ್ಲಿ ತಾನು ತೋರಿಸುತ್ತಿದ್ದ ನಿರಾಸಕ್ತಿಯೇ ತನ್ನ ಎದುರಾಳಿಗಳನ್ನು ನಿರ್ನಾಮ ಮಾಡಿಸಬಲ್ಲ ಅಸ್ತ್ರವಾದದ್ದಿದೆ. ತಾನು ಬಾಯಾರೆ ಹೇಳದೆ ಆಗಬೇಕಾದ್ದು ಬೇರೆಯವರಿಂದ ಆದದ್ದಿದೆ. ತಾನು ಶುಚಿಯಾಗಿದ್ದು ಬೇರವರ ಕೈಯಲ್ಲಿ ಇಂಥ ಕೆಲಸ ಮಾಡಿಸಿಕೊಳ್ಳುವುದು ಸರಿಯೋ ? ಆದರೆ ಇಂಥ ನೈತಿಕ ಪ್ರಶ್ನೆಗಳು ಯಃಕಶ್ಚಿತ ಸೂಕ್ಷ್ಮಗಳು ಅನ್ನಿಸುವಂಥ ಸಾಮಾಜಿಕ ನ್ಯಾಯಕ್ಕೆ ಸಂಬಂಧಪಟ್ಟ ಸಂದರ್ಭಗಳು ಅವು. ದೀನದಲಿತರ ಪರವಾಗಿ ಹೋರಾಟದಲ್ಲಿ ಒಮ್ಮೆ ಗಟ್ಟಿಯಾಗಿ ಅಚಲವಾಗಿ ನಿಂತ ಬಳಿಕ ಅದರಲ್ಲಿ ಗೆಲ್ಲಲು ಮಾಡುವ ಕೆಲಸವೆಲ್ಲ ನ್ಯಾಯವಾದ್ದು ಎಂಬ ಅಣ್ಣಾಜಿ ಹೇಳಿರಲಿಲ್ಲವೆ ? ಈಗ ಮಾತ್ರ ಒಂದೊಂದು ಬೆರಳನ್ನೂ ಮಡಿಸಿ ಬಿಚ್ಚುವುದನ್ನು ಕಲಿಯುತ್ತಿರುವ ಕೃಷ್ಣಪ್ಪನನ್ನು ತಾನು ಒರಟಾಗಲು ಬಿಟ್ಟ ತನ್ನ ವ್ಯಕ್ತಿತ್ವದ ಅಂಶಗಳು ಕಾಡುತ್ತವೆ. ಸಂಪೂರ್ಣ ಪರಹಿತಕ್ಕೆ ಬದುಕುವುದರಲ್ಲಿ ಕೂಡ ತಾವು ಇಡಿಯಾಗಿ ಉಳಿಯುತ್ತೇವೆಂಬುದು ನಿಶ್ಚಿತವಲ್ಲವೆನಿಸುತ್ತದೆ.

ಮಾರನೇ ದಿನ ಬೆಳಿಗ್ಗೆ ಹೋಗಿ ಗೌರಿ ದೇಶಪಾಂಡೆಯನ್ನು ಕೃಷ್ಣಪ್ಪ ನೋಡಿದ್ದ. ಅವಳು ಕಾಲೇಜಿಗೆ ಹೋಗದೆ ಮನೆಯಲ್ಲಿ ಉಳಿದಳು. ತನ್ನ ಮಗಳು ಯಾವುದಾದರೂ ಒಬ್ಬ ಹುಡುಗನನ್ನು ಹಚ್ಚಿಕೊಂಡಿದ್ದಾಳಲ್ಲ ಎಂದೇ ಅವಳ ತಾಯಿ ಅನುಸೂಯಾ ಬಾಯಿಗೆ ಖುಷಿಯಾದಂತೆ ಕಂಡಿತು. ಎತ್ತರವಾಗಿ, ತಳ್ಳಗೆ ಇದ್ದ ಅನಸೂಯಾಬಾಯಿ ಹಸಿರು ಬಣ್ಣದ ರೇಷ್ಮೆ ಸೀರೆಯುಟ್ಟು ಮಹಡಿಯಿಂದ ಇಳಿದು ಬಂದು ಕೃಷ್ಣಪ್ಪನಿಗೆ ಮುಜುಗರವಾಗದ ರೀತಿಯಲ್ಲಿ ಉಪಚರಿಸಿದರು. ಅವರ ತಲೆಗೂದಲಿನಲ್ಲಿ ಬಿಳಿಕೂದಲಗಳು ಕಾಣಿಸಿಕೊಂಡಿದ್ದರೂ ಆಕೆಯ ಮುಖ ಇನ್ನೂ ಯೌವನದ ಚುರುಕುಗಳನ್ನೂ ಮೋಹಕತೆಯನ್ನೂ ಉಳಿಸಿಕೊಂಡಿತ್ತು. ಕೃಷ್ಣಪ್ಪನಿಗೂ, ಮಗಳಿಗೂ ತಿಂಡಿ ಕೊಟ್ಟು ಪಾಸ್ಕಿನಲ್ಲಿ ಕಾಫಿಯನ್ನಿಟ್ಟು, ಇಬ್ಬರನ್ನು ಮಾತಾಡಿಕೊಂಡಿರುವಂತೆ ಹೇಳಿ ತನ್ನ ಕೋಣೆಗೆ ಹೊರಟುಹೋದರು.

ಗೌರಿಯೇ ಕೃಷ್ಣಪ್ಪನಿಗೆ ಉಪ್ಪಿಟ್ಟು ಬಡಿಸುತ್ತ ಅವನ ಬಿಗಿ ಸಡಿಲ ಮಾಡಲು ಪ್ರಯತ್ನಿಸಿದಳು.

'ಮುಂದೇನು ಮಾಡಬೇಕೂಂತ ಇದೀರಿ ?'

ಕೃಷ್ಣಪ್ಪ ಈ ಪ್ರಶ್ನೆಗೆ ಉತ್ತರ ಹೇಳಲು ಕಷ್ಟಪಡುವುದನ್ನು ಗೌರಿ ಗಮನಿಸಿದಳು:

'ಗೊತ್ತಿಲ್ಲ, ಊರಿಗೆ ಹೋಗಿ ಇರ್ತೀನಿ. ನಂಗೊಂದು ತಾಯಿ ಇದೆ. ಸ್ವಲ್ಪ ಗದ್ದೆ ಇದೆ. ಹಳ್ಳೀಲಿ ಇರ್ತ ಏನು ಮಾಡಬೇಕೂಂತ ಹೊಳೆಯತ್ತೊ ಅದನ್ನು ಮಾಡ್ತೀನಿ. ನೀವು ?'

ಕೃಷ್ಣಪ್ಪ ಸೌಜನ್ಯಕ್ಕಾಗಿ ಈ ಪ್ರಶ್ನೆ ಕೇಳಿರಲಿಕ್ಕಿಲ್ಲ. ಉಪ್ಪಿಟ್ಟನ್ನು ತಿಂದು ಮುಗಿಸಿದ ಕೃಷ್ಣಪ್ಪನಿಗೆ ಸೇಬನ್ನು ಕತ್ತರಿಸಿದಳು. ನಂಜಪ್ಪನವರು ತನ್ನ ತಾಯಿಗೆಂದು ಸಿಮ್ಲಾದಿಂದ ಬುಟ್ಟಿಯಲ್ಲಿ ಸೇಬು ತರಿಸುತ್ತಾರೆ ಎಂದು ಕೃಷ್ಣಪ್ಪನಿಗೆ ಹೇಳಿ ಅವನ ಪ್ರತಿಕ್ರಿಯೆ ಗಮನಿಸಬೇಕೆಂಬ ಆಸೆಯನ್ನು ಅದುಮಿಕೊಂಡಳು.

'ಒಬ್ಬ ಹುಡುಗಿಗೆ ತಾಯಿಯಾಗುವ ಆಸೆ ಇಲ್ಲದೆ ಇರಬಹುದು ಅನ್ನೋದನ್ನ ನೀವು ಒಪ್ಪಿಕೋತೀರ.'

ಕೃಷ್ಣಪ್ಪ ಇಂಥ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. ಗೌರಿ ಅವಸರಪಡದೆ ಅವನ ಉತ್ತರಕ್ಕಾಗಿ ಕಾದಳು.

'ನಾನು ಆ ಬಗ್ಗೆ ಯೋಚನೆ ಮಾಡಿರ್ಲಿಲ್ಲ. ಹೆಂಗಸು ಮಕ್ಕಳಿಗಾಗಿ ಆಸೆಪಡೋದು ಸಹಜ ಅಂದುಕೊಂಡಿದ್ದೆ.'

'ಅಲ್ಲ – ನಾನು ಹೇಳ್ತಿರೋದು ಅವಳಿಗೆ ಮಕ್ಕಳ ಮೇಲೆ ಆಸೆ ಇರ್ತದೆ. ಆದರೆ ತಾನೇ ಸ್ವತಃ ತಾಯಿಯಾಗಬೇಕೂಂತ ಇಲ್ಲದೇ ಇರಬಹುದು.'

'ಯಾಕೆ – ಭಯದಿಂದಲ?'

'ಇಲ್ಲ. ಭಯ ಕೂಡ ಅಲ್ಲ. ಗಂಡಸಿನ ಸಂಗದ ಆಸೆ ಇದ್ದೂ ತನ್ನ ದೇಹ ಮಕ್ಕಳನ್ನು ಪಡೆಯೋ ಸಾಧನವಾಗೋದು ಒಬ್ಬ ಹೆಣ್ಣಿಗೆ ಇಷ್ಟವಾಗದೇ ಇರಬಹುದು. ಇದು ಅನೈಸರ್ಗಿಕ ಅಂತೀರ?'

'ನಿಮಗೆ ಹಾಗೆ ಅನ್ನಿಸಿದರೆ ಆಗ ನಾನದನ್ನ ಅರ್ಥಮಾಡಿಕೊಳ್ಳೋಕೆ ಪ್ರಯತ್ನಿಸುತ್ತೀನಿ. ಆದರೆ ನೀವು ತುಂಬ ಜನರಲ್ಆಗಿ ಕೇಳಿದರೆ ನನಗೇನು ಹೇಳ್ಬೇಕು ತಿಳಿಯಲ್ಲ.'

ಗೌರಿ ಉತ್ಸುಕಳಾಗಿ ಹೇಳಿದಳು –

'ರೂಮಲ್ಲಿ ಕೂತು ಮಾತಾಡೋಣ ಬನ್ನಿ.'

ಬೇಕಾದರೆ ಸಿಗರೇಟ್ಹಚ್ಚಿ ಎಂದು ಒಂದು ಡಬ್ಬಿಯನ್ನು ಎದುರಿಟ್ಟಳು. ನಂಜಪ್ಪ ತನ್ನ ಉಪಯೋಗಕ್ಕೆಂದು ಇಲ್ಲಿ ಬಿಟ್ಟಿರುವ ಪ್ಲೇಯರ್ಸ್ ಡಬ್ಬಿಯಿರಬಹುದೆಂಬ ಯೋಚನೆ ಕೃಷ್ಣಪ್ಪನಿಗೆ ಬಂದು ಹೋಯಿತು. ಸಿಗರೇಟ್ಹಚ್ಚಿ ಕೂತವನಿಗೆ ಗೌರಿ,

'ಎಸ್. ನನಗೆ ಹಾಗನ್ನಿಸತ್ತೆ. ಇದಕ್ಕೆ ಕಾರಣ ನಾನಿರೋ ವಿಶೇಷ ಸಂದರ್ಭಾಂತ ದಯವಿಟ್ಟು ತಿಳೀಬೇಡಿ. ಅಮ್ಮ ಹಾಗೆ ಅಂದುಕೊಂಡು ತುಂಬ ನರಳ್ತಾರೆ. ನಂಗ ತುಂಬ ದೇಶಗಳಲ್ಲಿ ತಿರುಗಾಡಬೇಕು, ತುಂಬ ಪುಸ್ತಕ ಓದಬೇಕು. ಬಗೆಬಗೆಯ ಜನರ ಜೊತೆ ಬೆರೀಬೇಕು – ಹೀಗೆ ಏನೇನೋ ಅನ್ನಿಸ್ತ ಇರತ್ತೆ. ಯಾವನೋ ಒಬ್ಬ ಗಂಡನ್ನು ಕೂಡಿಕೊಂಡು ಅವನ ಸಹಧರ್ಮಿಣಿಯಾಗಿ ಇಡೀ ಆಯಸ್ಸು ಕಳೀಬೇಕು ಅನ್ನಿಸಲ್ಲ.'

ಕೃಷ್ಣಪ್ಪ ಸುಮ್ಮನೆ ಕೂತ. ಗೌರಿ ನಗುತ್ತ,

'ನಿಮಗೆ ಶಾಕ್ಆಗಿರಬಹುದು ಅಲ್ವ? ಆದರೆ ನಿಜವಾಗಿಯೂ ಹಾಗೆ ನನಗೆ ಅನ್ನಿಸುತ್ತೆ. ಜೊತೆಗೇನೇ ಸ್ವಲ್ಪ ನಾನು ನಮ್ಮ

ತಾಯಿ ಹಾಗೇನೇ – ನನಗೆ ಗಂಡಸು ಬೇಕು. ನಾನು ಚಲ್ಲು ಹುಡುಗಿ ಅಲ್ಲಾಂತಲೂ ತಿಳಿದಿದ್ದೇನೆ. ಬನ್ನಿ.'

ತನ್ನ ಪ್ರಶ್ನೆಗೆ ಉತ್ತರ ಕೊಡುವ ಅಗತ್ಯವಿಲ್ಲದಂತೆ ಮಾಡಲು ಗೌರಿ ಕೃಷ್ಣಪ್ಪನನ್ನು ತೋಟಕ್ಕೆ ಕರೆದುಕೊಂಡು ಹೋಗಿ ಗುಲಾಬಿಗಳನ್ನು ತೋರಿಸಿದಳು. ತೋಟದ ಮೂಲೆಯಲ್ಲಿ ಒಂದು ಮರದ ಪೊಟರೆಯಲ್ಲಿದ್ದ ಹಕ್ಕಿಯ ಗೂಡನ್ನು ತೋರಿಸಿದಳು – ಪಕ್ಕದಲ್ಲಿ ನಿಂತು ಮೃದುವಾದ ತುಪ್ಪಳದಲ್ಲಿ ಇನ್ನೂ ಹಸಿಹಸಿಯಾಗಿದ್ದ, ಕೆಂಪು ಬಾಯನ್ನು ತೆರೆದು ಚೀ ಚೀ ಎನ್ನುವ ಮರಿಯನ್ನು ತೋರಿಸುತ್ತ ಗೌರಿ ತನ್ನ ರಟ್ಟೆಯ ಮೇಲೆ ತುಂಬ ಸ್ವಾಭಾವಿಕವಾಗಿ ತನ್ನ ಮುಖವನ್ನು ಒತ್ತಿದ್ದಳು. ಅವಳ ಹರ್ಷದಿಂದ ಅದರುತ್ತ ಮೈಮರೆತು ನಿಂತಿದ್ದು ಕೃಷ್ಣಪ್ಪನಿಗೆ ತಿಳಿಯಿತು. ಅವನು ಹುಡುಗನಿದ್ದಾಗ ಇಂಥ ಎಷ್ಟೋ ಗೂಡುಗಳನ್ನು ಹುಡುಕಿಕೊಂಡು ಹೋಗಿದ್ದಾನೆ. ಕೆಲವೊಮ್ಮೆ ಅನಗತ್ಯ ಕ್ರೌರ್ಯದಿಂದ ಚಾಟರಿ ಬಿಲ್ಲಲ್ಲಿ ಹಕ್ಕಿಯ ಕಾಲಿಗೆ ಹೊಡೆದು ಅವುಗಳನ್ನು ನೋಯಿಸಿದ್ದಾನೆ. ಆದರೆ ಗೌರಿಯ ಉತ್ಸಾಹದಿಂದ ಅವನು ಇವತ್ತು ತುಂಬ ಮೃದುವಾದ. ಹೂಗಳ ಚಿತ್ರವಿದ್ದ ಗರಿಗರಿಯಾಗಿ ಇಸ್ತ್ರಿಯಾದ ಬಿಳೀಸೀರೆಯುಟ್ಟು, ಜಡೆಯನ್ನು ಎದೆಯ ಮೇಲೆ ಬಿಟ್ಟು, ಸಂತೋಷದಲ್ಲಿ ಒದ್ದೆಯಾದ ಕಣ್ಣುಗಳಿಂದ ಗೌರಿ ಕೃಷ್ಣಪ್ಪನ ಮುಖವನ್ನು ನೋಡಿದಳು. ಹಗುರವಾಗಿ ಮುಟ್ಟುತ್ತ ತನ್ನ ಪಕ್ಕದಲ್ಲೇ ನಿಂತ ಗೌರಿಗೆ ಇನ್ನಷ್ಟು ಒತ್ತಿಕೊಂಡು ನಿಲ್ಲಬೇಕೆನ್ನಿಸಿದ್ದನ್ನು ಕೃಷ್ಣಪ್ಪ ತಡೆದುಕೊಂಡ.

ಬೆಟ್ಟದ ಕಡೆ ಹೋಗೋಣವೆಂದು ಕೃಷ್ಣಪ್ಪ ಸೂಚಿಸಿದಾಗ ಗೌರಿ ಒಪ್ಪಿ ಕಾರಿನಲ್ಲಿ ಹೋಗೋಣವೆ ಎಂದಳು. ಕೃಷ್ಣಪ್ಪನಿಗೆ ಅದರಿಂದ ಮುಜುಗರವಾದರೂ ಅವಳನ್ನಷ್ಟು ದೂರ ನಡೆಸುವುದರಿಂದ  ಬಳಲಿಯಾಳೆಂದು ಒಪ್ಪಿಕೊಂಡ. ದಾರಿಯಲ್ಲಿ ಅವಳಿಗೆ ಮಹೇಶ್ವರಯ್ಯ ಮತ್ತು ಅಣ್ಣಾಜಿಯವರ ಬಗ್ಗೆ ಹೇಳಿದ. ಇಷ್ಟು ಸುಲಭವಾಗಿ ತನ್ನ ಬಗ್ಗೆ ಗೌರಿಯ ಬಳಿ ಮಾತಾಡಿಕೊಳ್ಳುತ್ತಿದ್ದೇನೆಂದು ಕೃಷ್ಣಪ್ಪನಿಗೆ ಆಶ್ಚರ್ಯವಾಯಿತು. ಬೆಟ್ಟದ ತಪ್ಪಲಲ್ಲಿ ಕಾರು ನಿಲ್ಲಿಸಿ ಬೈರಾಗಿಯ ಬಗ್ಗೆ ಅವಳಿಗೆ ಗೊತ್ತೆ ಎಂದು ಕೇಳಿದ. ಊರಿನಿಂದ ದೂರ ಬದುಕುತ್ತಿದ್ದ ಅವಳಿಗೆ ಗೊತ್ತಿರಲಿಲ್ಲ. ಕೃಷ್ಣಪ್ಪ,

'ಬನ್ನಿ ಅವರನ್ನು ನೋಡುವ' ಎಂದು ಗೌರಿಯ ಜೊತೆ ಬೆಟ್ಟ ಹತ್ತುವಾಗ ಹೇಳಿದ;

'ನೋಡಿ ನಿಮ್ಮ ಪ್ರಶ್ನೆಗೆ ಏನು ಹೇಳಬೇಕು ಗೊತ್ತಿಲ್ಲ. ನಿಮಗೆ ಹಾಗನ್ನಿಸತ್ತೆ ಅಂದ್ರೆ ಸರಿ. ಆದರೆ. . . .'

ಗೌರಿ ಏದುಸಿರು ಬಿಡುವುದು ಕಂಡು ನಿಂತ. ಮುಂದಿನ ದಾರಿ ಸ್ವಲ್ಪ ಕಡಿದಾಗಿತ್ತು. ಒಂದು ಬಂಡೆಯನ್ನು ಏರಬೇಕಾಗಿತ್ತು. ಗೌರಿ ಸೀರೆಯನ್ನು ಮುದುಡಿಕೊಂಡು ಸ್ವಾಭಾವಿಕವಾದ ಧ್ವನಿಯಲ್ಲಿ ಹೇಳಿದಳು:

'ರಚ್ಚೆಗೆ ಹಾಗೆ ಮಾಡ್ತಿದೀನಿ ಅಂತ ನಮ್ಮ ಅಮ್ಮನ ಹಾಗೇ ನೀವೂ ಯೋಚಿಸಬೇಡಿ.'

'ಇಲ್ಲ' ಎಂದು ಕೃಷ್ಣಪ್ಪ ಬಂಡೆಯನ್ನು ಹತ್ತಿ ಗೌರಿಯನ್ನು ಹತ್ತಿಸಿಕೊಳ್ಳಲು ಕೈಚಾಚಿದ. ಗೌರಿ ಅವನ ಶಕ್ತಿಯುತವಾದ ರೆಟ್ಟೆಗಳಿಗೆ ಹಗುರವಾಗಿ ಚಿಮ್ಮಿ ಬಂಡೆ ಹತ್ತಿದಳು.

‘ಪಾಲಿಟಿಕ್ಸ್ ಅಂದ್ರೆ ನನಗೆ ಬೋರ್’ ಎಂದು, ಇದು ತನ್ನ ಖಚಿತ ಅಭಿಪ್ರಾಯವೆನ್ನುವಂತೆ ಹೇಳಿದಳು: ‘ಇದೇ ಸಣ್ಣ ಊರೂಂತ ನನಗೆ ಅನ್ನಿಸತ್ತೆ. ದೊಡ್ಡೂರಲ್ಲಿ ಪ್ರೈವಸಿ ಇರುತ್ತೆ. ಬೊಂಬಾಯಿಗೋ ಡೆಲ್ಲಿಗೋ ಹೋಗಿ ಓದಿಬೇಕೂಂತಿದೀನಿ. ಅದು ಹೇಗೆ ನೀವು ಹಳ್ಳೀಲಿ ಇರ್ತೀರೋ?’ ಕೃಷ್ಣಪ್ಪ ಅವಳು ಹೇಳಿದದಕ್ಕಿಂತ ಹೆಚ್ಚನ್ನು ಅವಳ ಮಾತಲ್ಲಿ ಹುಡುಕಿದ. ಬೈರಾಗಿಯ ಗುಹೆಯ ಎದುರು ನಾಯಿ ಗದ್ದಲ ಮಾಡುತ್ತ ಆವೇಶದಲ್ಲಿದ್ದಂತೆ ಕಂಡಿತು. ಒಲೆಯ ಮೇಲೆ ತನ್ನ ಆಹಾರವನ್ನು ಬೇಯಿಸುತ್ತಿದ್ದ ಬೈರಾಗಿ ಎದ್ದು ನಿಂತು ನಾಯಿಯನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದ. ಗುಹೆಯ ಹತ್ತಿರ ಬರುತ್ತಿದ್ದಂತೆ ಗೌರಿ ಭಯದಲ್ಲಿ ಸಣ್ಣಗೆ ಕೂಗಿಕೊಂಡು ಕೃಷ್ಣಪ್ಪನಿಗೆ ಆತು ನಿಂತಳು. ಒಂದು ನಾಗರಹಾವು ಹೆಡೆ ಬಿಚ್ಚಿ ನಾಯಿಯನ್ನು ಹೆದರಿಸುತ್ತ ಗುಹೆಯ ಕಡೆ ಚಲಿಸುತ್ತಿತ್ತು. ಬೈರಾಗಿ ನಾಯಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದ. ಸರ್ಪ ಅವಸರವಾಗಿ ಗುಹೆಯನ್ನು ಹೊಕ್ಕಿತು. ಬೈರಾಗಿ ನಾಯಿಯನ್ನು ತಡವುತ್ತ ಗುಹೆಯಿಂದ ಆಚೆ ಅದನ್ನು ಹೋಗುವಂತೆ ಪುಸಲಾಯಿಸಲು ಶುರುಮಾಡಿದ. ನಾಯಿ ಕ್ರಮೇಣ ಶಾಂತವಾಗಿ ದೂರ ಹೋಗಿ ತನ್ನ ಜಾಗದಲ್ಲಿ ಮಲಗಿ ಗುಹೆಯ ಕಡೆ ನೋಡುತ್ತ ಗುರುಗುಟ್ಟತ್ತ ಮಲಗಿತು. ಮಡಕೆಯಲ್ಲಿದ್ದದ್ದು ಬೆಂದ ಮೇಲೆ ಬೈರಾಗಿ ಎಲೆಗಳನ್ನು ತರಲು ಗುಹೆಯ ಒಳಗೆ ಹೋಗುತ್ತಿರುವುದನ್ನು ನೋಡಿದ ಗೌರಿ ಭಯಗ್ರಸ್ಥಳಾಗಿ ಕೃಷ್ಣಪ್ಪನನ್ನು ಗಟ್ಟಿಯಾಗಿ ಹಿಡಿದು ನಡುಗತೊಡಗಿದಳು. ಗುಹೆಯಿಂದ ಬುಸ್ ಎನ್ನುವ ಶಬ್ದ ಬಂತು. ಒಳ ಹೋಗಲಿದ್ದ ಬೈರಾಗಿ ಸ್ತಬ್ಧವಾಗಿ ನಿಂತ. ಮೈಯಲ್ಲ ಕಿವಿಯಾಗಿ ಮಲಗಿದ್ದ ನಾಯಿ ಮತ್ತೆ ಉದ್ವಿಗ್ನವಾಗಿ ಬೊಗಳುತ್ತ ಓಡಿಬಂತು. ಬೈರಾಗಿ ಅದನ್ನು ತಬ್ಬಿ ಹಿಡಿದು ಸಂತೈಸಲು ನೋಡಿದ. ಕೃಷ್ಣಪ್ಪನ ಹತ್ತಿರ ನಾಯಿಯನ್ನು ಎಳೆದು ತಂದು ಅದನ್ನು ಹಿಡಿದುಕೊಳ್ಳುವಂತೆ ಕಣ್ಣಿಂದ ಸೂಚಿಸಿದ. ಕೃಷ್ಣಪ್ಪನು ನಾಯಿಯನ್ನು ಹಿಡಿದುಕೊಂಡಿದ್ದಾಗ ಹೊರಗೆ ಮಡಕೆಯಲ್ಲಿದ್ದ ನೀರಿನಿಂದ ಸಮತಲವಾಗಿದ್ದ ಎದುರಿನ ಕಲ್ಲಿನಲ್ಲಿ ನಾಲ್ಕು ಜಾಗಗಳನ್ನು ತೊಳೆದ. ಕೃಷ್ಣಪ್ಪ, ‘ಸ್ವಾಮಿ ನಮಗೆ ಊಟ ಬೇಡ’ ವೆಂದಾಗ ಮಡಕೆಯಲ್ಲಿದ್ದ ಅರ್ಧ ಭಾಗವನ್ನು ದೂರದಲ್ಲಿ ನಾಯಿಗೆ ಬಡಿಸಿ, ನಾಯಿಯನ್ನು ಊಟದೆಡೆ ಎಳೆದುಕೊಂಡು ಹೋದ. ಆದರೆ ನಾಯಿ ಊಟವನ್ನು ಒಲ್ಲದೆ ಹಿಂದಕ್ಕೋಡಿ ಗುಹೆಯ ಎದುರು ನಿಂತು ಬೊಗಳತೊಡಗಿತು. ಹಾವು ಬುಸ್ ಎನ್ನುತ್ತಲೇ ಇತ್ತು. ಮತ್ತೆ ಬೈರಾಗಿ ನಾಯಿಯನ್ನು ಬಲತ್ಕಾರವಾಗಿ ಎಳೆದುಕೊಂಡು ಹೋಗಿ ಅದರ ಊಟದೆದುರು ನಿಲ್ಲಿಸಲು ನೋಡಿದ.

ಗೌರಿ ಈ ನಾಟಕವನ್ನೆಲ್ಲ ಚಕಿತಳಾಗಿ ನೋಡುತ್ತ ಕೂತಳು. ನಾಯಿ ಬೈರಾಗಿಯ ಕೈಯಲ್ಲಿ ಒದ್ದಾಡುತ್ತಲೇ ಇತ್ತು.

‘ನಾಯಿಯನ್ನು ಅದರ ಪಾಡಿಗೆ ಬಿಟ್ಟುಬಿಡುವ ಮನುಷ್ಯ ನೀವು ಅಂತ ತಿಳಿದಿದ್ದೆ’ ಎಂದು ಕೃಷ್ಣಪ್ಪ. ಗೀತೆಯ ‘ನಾಯಂ ಹಂತಿ ನ ಹನ್ಯತೆ’ ಅವನಿಗೆ ನೆನಪಾಗಿತ್ತು. ಬೈರಾಗಿ ನಿತ್ಯ ಓದುವ ಪುಸ್ತಕವಲ್ಲವೇ ಅದು ?

ಬೈರಾಗಿ ತೀವ್ರವಾಗಿ ಕೃಷ್ಣಪ್ಪನ ಮಾತನ್ನು ಗಮನಿಸಿದಂತೆ ಅನ್ನಿಸಿತು. ಒಂದು ಸಣ್ಣ ನಿಟ್ಟುಸಿರು ಅವನಿಂದ ಹೊರಬಂದದ್ದನ್ನು ಕೃಷ್ಣಪ್ಪ ಗಮನಿಸಿ ಕುತೂಹಲದಿಂದ ಅವನ ಪ್ರತಿಕ್ರಿಯೆಗೆ ಕಾದ. ಬೈರಾಗಿ ನಾಯಿಯನ್ನು ಬಿಟ್ಟ. ನಾಯಿ ಚಂಗನೆ ನೆಗೆದು ಗುಹೆಯ ಎದುರು ನಿಂತು ಬೊಗಳಿತು. ಬುಸ್ ಎನ್ನುವ ಶಬ್ದ ಏರುತ್ತ ಇಳಿಯುತ್ತ ಇಡೀ ಗುಹೆ ಉಸಿರಾಡುತ್ತಿರುವ ಭಾವನೆ ಉಂಟಾಯಿತು. ಬೈರಾಗಿಯ ಮುಖ ವಿವರ್ಣವಾದ್ದನ್ನು ಕೃಷ್ಣಪ್ಪ ಗಮನಿಸಿದ. ಗೌರಿ ಕೃಷ್ಣಪ್ಪನನ್ನು ತಬ್ಬಿ ತನ್ನ ಮುಖವನ್ನು ಅವನ ಎದೆಯ ಮೇಲೆ ಮುಚ್ಚಿಕೊಂಡಳು. ಕೃಷ್ಣಪ್ಪ ಮುಂದಿನ ಅನಿವಾರ್ಯ ಘಟನೆಗೆ ಕಾದ. ನಾಯಿ ಗುಹೆಯನ್ನು ನುಗ್ಗಿತು. ಹಾವು ಬುಸುಗುಡುವ ಶಬ್ದ ಮಾತ್ರ ಮೊದಲು ಕೇಳಿಸುತ್ತಿದ್ದು, ಅದು ಕ್ರಮೇಣ ಕಡಿಮೆಯಾಗಿ ಬಟ್ಟೆ ಒಗೆಯುವಂತೆ

ಬಡಿಯುವ ಶಬ್ದ ಗುಹೆಯಿಂದ ಬಂತು. ಇನ್ನೊಂದು ಕ್ಷಣದಲ್ಲಿ ರಕ್ತವನ್ನು ಮೂತಿಯ ತುಂಬ ಬಳಿದುಕೊಂಡ ನಾಯಿ ಇನ್ನೂ ಒದ್ದಾಡುತ್ತಿದ್ದ ಹಾವನ್ನು ಕಚ್ಚಿಕೊಂಡು ಪೊದೆಗಳ ಸಂದಿಗೆ ಓಡಿತು. ಗುಹೆಯ ಬಾಗಿಲಿಂದ ತೊಟ್ಟಿಕ್ಕಿದ್ದ ರಕ್ತವನ್ನು ನೋಡುತ್ತ ಬೈರಾಗಿ ಬಡಿಸಿಕೊಂಡಿದ್ದ ಆಹಾರವನ್ನು ಬಾಚಿ ಎಸೆದು ಬಂದು ಕೂತ. ಅವನು ಶಾಂತನಾಗಲು ಪ್ರಯತ್ನಿಸುತ್ತಿರುವಂತೆ ಕಂಡಿತು.

ಈಗಲೂ ಕೃಷ್ಣಪ್ಪ ಈ ಘಟನೆಯನ್ನು ನೆನಪು ಮಾಡಿಕೊಳ್ಳುತ್ತ 'ಆ ಬೈರಾಗಿ ತಾನು ಕಂಡ ಹಿಂಸೇನ್ನ ದಕ್ಕಿಸಿಕೊಂಡನೋ ಇಲ್ಲವೋ ನನಗೆ ತಿಳಿಯಲ್ಲ' ಅಂತಾನೆ.

ಬಲಗೈ ಬೆರಳುಗಳನ್ನು ಚೂರು ಚೂರೇ ಮಡಿಸುತ್ತ ಬಿಚ್ಚುತ್ತ ಹಸ್ತವನ್ನು ಅಲ್ಲಾಡಿಸಲು ಕೃಷ್ಣಪ್ಪ ಪ್ರಯತ್ನಿಸಲು ಶುರು ಮಾಡಿದ. ನಂತರ ಒಂದು ಬೆಳಿಗ್ಗೆ ಮೊಣಕೈಯನ್ನು ಮತ್ತು ಕಾಲನ್ನು ಮಡಿಸುವುದು ಕೂಡ ತನಗೆ ಸಾಧ್ಯವಾಗಬಹುದೆಂಬ ಭರವಸೆ ಮೂಡಿದಾಗ ಸಣ್ಣದಾಗಿ ಗೆಲುವು ಅವನಲ್ಲಿ ಹುಟ್ಟಿತು. ಅಮೇರಿಕಾದಿಂದ ಹಿಂದಕ್ಕೆ ಬಂದು ದೆಹಲಿಯ ಮಿರಾಂಡದಲ್ಲಿ ಇಂಗ್ಲಿಷ್ ಕಲಿಸಿಕೊಡುತ್ತಿದ್ದ ದೇಶಪಾಂಡೆಗೆ ನಾಲ್ಕು ದಿನಗಳ ಮಟ್ಟಿಗೆ ಬಂದು ತನ್ನನ್ನು ನೋಡಿ ಹೋಗುವಂತೆ ಬರೆಸಬೇಕೆನ್ನಿಸಿತು. ಅವಳನ್ನು ನೋಡಿ ಕೊನೆಪಕ್ಷ ಹದಿನೈದು ವರ್ಷಗಳ ಮೇಲಾಗಿತ್ತು. ಇನ್ನೂ ಅವಳು ಮಕ್ಕಳಾಗದೆ ಮದುವೆಯಾಗದೆ ಇದ್ದಾಳೆ. ಫಿಲಡೆಲ್ಫಿಯಾದಲ್ಲಿ ಅವಳು ಓದುತ್ತಿದ್ದಾಗ ತಾನೊಬ್ಬ ಅಮೆರಿಕನ್‌ಜೊತೆ ಬದುಕುತ್ತಿರುವುದಾಗಿ ಬರೆದಿದ್ದಳು. ಮೂರು ವರ್ಷಗಳ ನಂತರ ಅವನಿಗೆ ಸ್ವಂತ ಮಕ್ಕಳು ಬೇಕೆಂಬ ಆಸೆಯಿರುವುದಾಗಿಯೂ, ಅದನ್ನು ಅವನ ಹೇಳಿಕೊಳ್ಳದಿದ್ದರೂ ತನ್ನಿಂದ ಅವನು ನಿರಾಶನಾಗಕೂಡದೆಂದು ಅವನಿಂದ ಬೇರೆಯಾಗುತ್ತಿದ್ದೇನೆಂದೂ ಬರೆದಿದ್ದಳು. ಅಂದ ಮೇಲೆ ಅವತ್ತು ಗೌರಿ ಮಾತಾಡುವಾಗ ಮಕ್ಕಳು ಬೇಡವೆಂಬುದಕ್ಕೆ ಅವಳ ಅಪಕ್ವತೆ ಕಾರಣವಿರಬಹುದೆಂಬ ತನ್ನ ಊಹೆ ಸರಿಯಲ್ಲವೆಂದು ಕ್ರಮೇಣ ಅವನಿಗೆ ಖಾತ್ರಿಯಾಗಿತ್ತು.

ಅಂತೂ ಅವು ಕೃಷ್ಣಪ್ಪನ ಪಾಲಿಗೆ ಅತ್ಯಂತ ಆತಂಕದ ದಿನಗಳು. ಆಳವರಿಯದ ಪ್ರಪಾತದ ಅಂಚಿನಲ್ಲಿ ತುದಿಗಾಲಿನ ಮೇಲೆ ನಿಂತವನಂತೆ ಆಗ ಅವನು ಇರುತ್ತಿದ್ದ. ಲಘುವಾಗಿ ಉಲ್ಲಾಸವಾಗಿ ಗೌರಿ ಅವನ ಜೊತೆ ಇರಲು ಪ್ರಯತ್ನಿಸಿ ಸೋತಿದ್ದಳು. ಇಬ್ಬರೂ ಒಟ್ಟಿಗಿದ್ದಾಗ ಒಬ್ಬರನ್ನೊಬ್ಬರು ದೀಪದಂತೆ ಚೂಪಾಗಿ ಉರಿಸಿಕೊಳ್ಳುತ್ತಿದ್ದುದು ಇತ್ತೇ ವಿನಾ ಆರಾಮಾಗಿ ಒಬ್ಬರ ಬಸಿಗೆ ಇನ್ನೊಬ್ಬರು ಕರಗಿ ಮೆತ್ತಗಾದದ್ದು ಇಲ್ಲ. ಗೌರಿ ತನ್ನನ್ನು ಕೃಷ್ಣಪ್ಪ ಸ್ವೀಕರಿಸಲು ಅಗತ್ಯವಾದ ಮಾತೆಂದು ಏನೋ ಶುರು ಮಾಡುವಳು:

'ನಿಮಗೆ ನಾನು ಹೇಳಿಲ್ಲ ಅಲ್ಲವ? ನನ್ನ ತಂದೆ ಬೆಳಗಾಂನಲ್ಲಿದ್ದಾಗ ನಂಜಪ್ಪನವರು ಅವರೂ ಸ್ನೇಹಿತರು. ಒಟ್ಟಿಗೇ ಏನೋ ಬಿಸಿನೆಸ್‌ಮಾಡ್ತಿದ್ದರು. ನಮ್ಮನೇಲೇ ನಂಜಪ್ಪ ಇಳ್ಕೊತ್ತ ಇದ್ದುದ್ದು. ನನ್ನ ತಂದೆಗೆ ಇನ್ನೊಬ್ಬ ಪ್ರೇಯಸಿಯೂ ಇದ್ದಳಂತೆ –'

ಕೃಷ್ಣಪ್ಪನಿಗೆ ಇವೆಲ್ಲ ಅನಗತ್ಯ ವಿವರಣೆಗಳೆನ್ನಿಸಿ ಅನ್ಯಮನಸ್ಕನಾಗಿಬಿಡುತ್ತಿದ್ದ. ತನ್ನ ಜೊತೆ ಯಾವುದೋ ಉತ್ಕರ್ಷ ಬಯಸಿ ಬಂದ ಕೃಷ್ಣಪ್ಪನನ್ನು ತಾನು ಸಣ್ಣ ವಿಷಯಗಳಿಗೆ ಎಳೆಯುತ್ತಿದ್ದೇನೆಂದು ಅವಳಿಗೆ ಪಶ್ಚಾತ್ತಾಪವಾಗಿಬಿಡುತ್ತಿತ್ತು. ಅವನಿಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಮಾಡಿಸಿ ಬಡಿಸುವುದರಲ್ಲಷ್ಟೆ, ಈ ನೆಲದ ಕೆಲಸಗಳನ್ನು ಅವನ ಜೊತೆ ಅವಳು

ಮಾಡುತ್ತಿದ್ದುದು.

ಪ್ರತಿ ಸಂಜೆ ಬಂದು ಬಿಡುತ್ತಿದ್ದ ಕೃಷ್ಣಪ್ಪ ಗೌರಿ ತನಗೆ ಅಪರಿಚಿತಳೋ ಎನ್ನುವಂತೆ –

‘ಕ್ಷಮಿಸಿ. ನಿಮಗೆ ಓದಬೇಕಿತ್ತೊ ಏನೋ. ಪರೀಕ್ಷೆ ಹತ್ತಿರವಾಗುತ್ತದೆಯಲ್ಲವೇ?’ ಎನ್ನುವನು. ಹೀಗೆ ಸಲಿಗೆಯಲ್ಲೂ ದೂರ ಉಳಿಯುವ ಕೃಷ್ಣಪ್ಪ ಅವಳಿಗೆ ಇಷ್ಟವೂ ಆಗುವುದು.

‘ಇಲ್ಲ ಬನ್ನಿ’ ಎನ್ನುವಳು. ಕೃಷ್ಣಪ್ಪ ಏನೂ ಮಾತಾಡದೆ ಅವನ ವಿಶಾಲವಾದ ಕಣ್ಣುಗಳನ್ನು ರೂಮಿನಲ್ಲಿ ವಿರಾಮವಾಗಿ ಹರಿಸುತ್ತ ಕೂತರೆ,

‘ಹಾಡಲ?’ ಎಂದು ಗೌರಿ ಕೇಳುವಳು. ಹಾಡಿನಿಂದ ಕೃಷ್ಣಪ್ಪ ಸಡಿಲವಾಗುವನೆಂದು ಅವಳಿಗೆ ಗೊತ್ತು. ಮಗಳು ಕೃಷ್ಣಪ್ಪನ ಎದುರು ಹಾಡುತ್ತ ಕೂತಿರುವುದನ್ನು ಅನಸೂಯಾಬಾಯಿ ಇಳಿದು ಬಂದು ಕೇಳಿಸಿಕೊಳ್ಳುವಳು. ಅವಳು ಮೂಲೆಯಲ್ಲಿದ್ದ ಮೋಡದ ಮೇಲೆ ಯಾರಿಗೂ ಆತಂಕವಾಗದ ರೀತಿಯಲ್ಲಿ ಶಾಂತವಾಗಿ ಕೂತಿರುವುದು ಕೃಷ್ಣಪ್ಪನಿಗೆ ಪ್ರಿಯವಾಗುವುದು. ಗುಂಗುರು ಕೂದಲಿನ ಕಪ್ಪು ವಿಗ್ರಹದಂತಿದ್ದ ದೃಢಕಾಯಕನಾದ ಕೃಷ್ಣಪ್ಪನನ್ನೂ, ಹಾಲಿನ ಬಣ್ಣದ ತೀವ್ರ ಭಾವನೆಗಳ ತನ್ನ ಮಗಳನ್ನೂ ಕಣ್ತುಂಬ ನೋಡುತ್ತ ಅನಸೂಯಾಬಾಯಿ ಖುಷಿಪಡುವರು. ಅವರು ಸದಾ ಓದುತ್ತಿದ್ದ ಶರತ್‌ಕಾದಂಬರಿಯ ಪ್ರಸಂಗಗಳಲ್ಲಿ ಈ ಇಬ್ಬರನ್ನೂ ಇಡುವರು. ನಂಜಪ್ಪನವರು ಈ ನಡುವೆ ಬಂದರೆ ಯಾರಿಗೂ ಮುಜುಗರವಾಗುವುದಿಲ್ಲ. ಬಡವನಾದ ಕೃಷ್ಣಪ್ಪನ ಜೊತೆಗಿನ ಸ್ನೇಹ ಮೊದಲಲ್ಲಿ ಅವರಿಗೆ ಇಷ್ಟವಾಗದಿದ್ದರೂ ಗೌರಿ ಎಂದರೆ ಹೆದರುತ್ತಿದ್ದ ನಂಜಪ್ಪ ಸುಮ್ಮನಾಗಿದ್ದರು. ಈಚೀಚೆಗೆ ಮಹಾದೈವಭಕ್ತರಾಗಿದ್ದ ನಂಜಪ್ಪ ಸಂಜೆ ಗಣಪತಿ ದೇವಸ್ಥಾನದಿಂದ ಪೂಜೆ ಮುಗಿಸಿಕೊಂಡು ಕುಂಕುಮ ಪ್ರಸಾದ ತಂದಿರುತ್ತಿದ್ದರು. ಈ ಪ್ರಸಾದವನ್ನು ಮೂವರಿಗೂ ಕೊಟ್ಟು ಅವರು ಮಹಡಿ ಹತ್ತಿ ಹೋಗುವರು. ಯಾವಾಗ ಅನಸೂಯಾಬಾಯಿ ಎದ್ದು ಹೋಗುತ್ತಿದ್ದರೋ ಗೌರಿಗಾಗಲೀ ಕೃಷ್ಣಪ್ಪನಿಗಾಗಲೀ ಗೊತ್ತಾಗುತ್ತಿರಲಿಲ್ಲ.

ಯಾಕೆ ಗೌರಿಯನ್ನು ತಾನು ಆಗ ಪಡೆಯಲಿಲ್ಲ? ಕೃಷ್ಣಪ್ಪನಿಗೆ ಒಂಟಿಯಾಗಿದ್ದಾಗ ಅವಳನ್ನು ಕೂಡುವ ತೀವ್ರ ಆಸೆಯಾಗುತ್ತಿತ್ತು. ಆದರೆ ತಾನು ಚತುಷ್ಪಾದಿಯಾಗಿ ಅವಳನ್ನು ಸಂಭೋಗಿಸುವುದನ್ನು ಕಲ್ಪಿಸಿಕೊಳ್ಳುತ್ತಿದ್ದಂತೆಯೇ ತನ್ನ ಬಗ್ಗೆ ಅತ್ಯಂತ ಜುಗುಪ್ಸೆಯಾಗಿ ಬಿಡುತ್ತಿತ್ತು. ಅವನನ್ನು ಇಂಥ ಪಾಪ ಭಾವನೆಯಿಂದ ಬಿಡುಗಡೆ ಮಾಡಿದವಳೆಂದರೆ ಲೂಸಿನಾ – ಮೈಯ ಚಳಿಯನ್ನು ಬಿಡಿಸಿ ಅದರ ಪ್ರತಿ ಸಂದಿ ಮೂಲೆಯನ್ನೂ ಜೀವಂತವೆಂದು ತೋರಿಸಿದವಳು. ಆದರೆ ಅದು ಮೊದಲೇ ಗೌರಿಯಿಂದ ಆಗಿದ್ದರೆ. . . .

ಮಧ್ಯಾಹ್ನ ಒಂದು ದಿನ ಕೃಷ್ಣಪ್ಪ ಅಣ್ಣಾಜಿಯನ್ನು ನೋಡಲೆಂದು ಹೊರಟ. ಈಚೆಗೆ ಅಣ್ಣಾಜಿ ದುಡ್ಡಿಗೆ ಪರದಾಟವಾಡಬೇಕಾಗಿರಲಿಲ್ಲ. ಬೇಕಾದ್ದಕ್ಕಿಂತ ಹೆಚ್ಚು ದುಡ್ಡು ಅವನ ಹತ್ತಿರ ಓಡಾಡುತ್ತಿತ್ತು. ಕೃಷ್ಣಪ್ಪ ತಂದು ಕೊಟ್ಟ ಸಾಲವನ್ನೆಲ್ಲ ಹಿಂದಕ್ಕೆ ಕೊಟ್ಟಿದ್ದ. ಎಲ್ಲಿಂದ ಇಷ್ಟು ಹಣವೆಂದು ಕೃಷ್ಣಪ್ಪ ಕೇಳದಿದ್ದರೂ, ಅವನೇ ಉಮೆಯ ಔದಾರ್ಯವನ್ನು ಹೊಗಳಿದ್ದ. ಅವಳು ಗಂಡನಿಗೆ ತಿಳಿಯದಂತೆ ಕಪ್ಪು ಹಣವನ್ನು ತಿಜೋರಿಯಿಂದ ಕದ್ದು ಕೊಡುತ್ತಿರಬಹುದು. ಅಣ್ಣಾಜಿಯನ್ನು

ಇದರ ಅನೈತಿಕತೆ ಬಾಧಿಸುವುದಿಲ್ಲ. ಕೃಷ್ಣಪ್ಪನ ಜೊತೆ ಮಾರ್ಕ್ಸ್ ಲೆನಿನ್ ವಾದಗಳ ಅತ್ಯಂತ ಸೂಕ್ಷ್ಮ ಸಮಸ್ಯೆಗಳ ಬಗ್ಗೆ ಈಗಲೂ ಮೈ ಮರೆತು ಮಾತಾಡುವನು. ಉಮೆ ಇದನ್ನು ಕೇಳಿಸಿಕೊಳ್ಳುತ್ತ ತನ್ನ, ಎಣ್ಣೆಗೆಂಪು ಬಣ್ಣದ ದುಂಡುಮುಖವನ್ನು ಕೈಗಳಲ್ಲಿಟ್ಟು, ಕೂತಿರುವಳು. ಅತ್ಯಂತ ಜಟಿಲವಾದ ವಾದಗಳನ್ನು ಅವಳ ಕಡೆ ತಿರುಗಿ ಅಣ್ಣಾಜಿ ಮಂಡಿಸುವನು. ಆರಾಧನೆಯಲ್ಲಿ ಹೂವೆಸೆಯುವಂತೆ ವಿಚಾರಗಳನ್ನು ಉಮೆಗೆ ಎಸೆಯುತ್ತ ಅಣ್ಣಾಜಿ ದೇವಿಯ ವಿಗ್ರಹವನ್ನು ಪೂಜಿಸುತ್ತ ಕೂತವನಂತೆ ಆಗ ಕೃಷ್ಣಪ್ಪನಿಗೆ ಕಾಣುವನು.

ಅವನು ಮಧ್ಯಾಹ್ನ ಹೋಗಿ ಬಾಗಿಲೆದುರು ನಿಂತಿದ್ದಾಗ ಉಮೆ ನರಳುತ್ತಿದ್ದಂತೆಯೂ ಮತ್ತು ಅಣ್ಣಾಜಿ ಗುಟ್ಟಾಗಿ ಏನೋ ಹೇಳುತ್ತಿದ್ದಂತೆಯೂ ಕೇಳಿಸಿತು. ಬಾಗಿಲು ತಟ್ಟ ಹೋದವನು ಹಿಂದೆಗೆದ. ತನ್ನ ಹೆಜ್ಜೆ ಸಪ್ಪಳ ಕೇಳಿಸಿರಬೇಕು. ಇಬ್ಬರೂ ಎದ್ದು ಆವೇಗದಿಂದ ಉಸಿರಾಡುತ್ತ ಗಡಿಬಿಡಿಯಲ್ಲಿ ಓಡಾಡುತ್ತಿರುವುದನ್ನು ಬಾಗಿಲ ಹೊರಗಿಂದ ಕೇಳಿಸಿಕೊಂಡ ಕೃಷ್ಣಪ್ಪನಿಗೆ ಮುಜುಗರವಾಯಿತು. ತಾನೀಗ ಹೊರಟು ಹೋಗುವುದೂ ಸರಿಯಲ್ಲ; ನಿಂತಿರುವುದೂ ತಪ್ಪು. ಏನು ಮಾಡುವುದೆಂದು ತಿಳಿಯದೆ – 'ನಾನು ಕೃಷ್ಣಪ್ಪ. ಆಮೇಲೆ ಬರ್ತೀನಿ. ಸುಮ್ಮನೆ ಬಂದಿದ್ದೆ – ಅಷ್ಟೇ' ಎಂದ. ಅಣ್ಣಾಜಿಗೆ ಇದರಿಂದ ತುಂಬ ಸಮಾಧಾನವಾದದ್ದು ಅವನ ಧ್ವನಿಯಿಂದಲೇ ಹೊಳೆಯಿತು:

'ಓ ಕೃಷ್ಣಪ್ಪನ ? ಇರು. ಹೋಗಬೇಡ'

ಕೃಷ್ಣಪ್ಪನಿಗೆ ಇನ್ನಷ್ಟು ಕಷ್ಟವಾಯಿತು. ಈಗ ತಾನು ಹೋಗುವಂತಿಲ್ಲ. ಏನೂ ಆಗದಿದ್ದ ರೀತಿಯಲ್ಲಿ ಅಣ್ಣಾಜಿ ಊಮೆಯರ ಮುಖ ನೋಡಬೇಕು. ಅವರಿಬ್ಬರೂ ಮುಚ್ಚಿಟ್ಟುಕೊಳ್ಳುವುದು ಕಷ್ಟವಾಗದಂತೆ, ಇದೆಲ್ಲ ತಿಳಿಯದ ಪೆದ್ದನಂತೆ ತಾನು ಕಾಣಿಸಿಕೊಳ್ಳಬೇಕು.

ಬಾಗಿಲು ತೆರೆಯಿತು. ಕೂದಲು ಕೆದರಿದ್ದ ಉಮ ಬಟ್ಟೆಯಿಂದ ಪುಸ್ತಕಗಳ ಧೂಳು ಹೊಡೆಯುತ್ತ ಸ್ಟೂಲಿನ ಮೇಲೆ ನಿಂತಿದ್ದಳು. ಅವಳು ಈ ಕೆಲಸದಲ್ಲಿದ್ದುದರಿಂದ ಕೂಡಲೇ ಬಾಗಿಲು ತೆರೆಯಲಾಗಲಿಲ್ಲವೆಂದು ತಾನು ತಿಳಿಯಬೇಕು. ಆದರೆ ಅಣ್ಣಾಜಿ ಈಗ ತಾನೇ ಎದ್ದವನಂತೆ ಕಣ್ಣುಜ್ಜಿಕೊಳ್ಳುತ್ತಿರುವುದು ಮಾತ್ರ ಅಭಾಸವಾಗಿತ್ತು. ಆದರೆ ಒಂದೆರಡು ನಿಮಿಷಗಳಲ್ಲಿ ಅಣ್ಣಾಜಿ ಲೆನಿನ್ನಿನ 'ಡೆಮೊಕ್ರಟಿಕ್‌ಸೆಂಟ್ರಲಿಸಂ' ತತ್ವದಲ್ಲಿದ್ದ ಕಾಂಟ್ರಡಿಕ್ಷನ್ನುಗಳನ್ನು ನಿಜವಾಗಿಯೂ ಮಗ್ನವಾಗಿ ಚರ್ಚಿಸುತ್ತಿದ್ದ. ನಡುವೆ ಲೆನಿನ್ ಹೇಳಿದ ಮಾತೊಂದು ಸರಿಯಾಗಿ ನೆನಪಾಗದೆ, 'ಉಮ, ಲೆನಿನ್‌ನ ಕಲೆಕ್ಟೆಡ್‌ವರ್ಕ್ಸ್ ಇದೆಯಲ್ಲ – ಕೊಡು' ಎಂದ. ಉಮೆ ಪುಸ್ತಕ ತಂದು ಎದುರಿಟ್ಟಳು. 'ಮಿಸ್ಟರ್ ಚನ್ನವೀರಯ್ಯನಿಗಿಂತ ಇವಳೇ ಬೇಗ ಕಲಿತಿದ್ದಾಳೆ. ಇವಳಿಗೆ ವಿಚಾರಶಕ್ತಿಯೂ ಇದೆ' ಎಂದು ಅಣ್ಣಾಜಿ ಹೊಗಳಿ, ಪುಸ್ತಕದಲ್ಲಿ ತನಗೆ ಬೇಕಾದ ಮಾತನ್ನು ಹುಡುಕಿದ. ಉಮೆ ಕಾಫಿ ಮಾಡಿ ತರಲು ಕೆಳಗೆ ಹೋದಳು.

ಕೃಷ್ಣಪ್ಪ ತನ್ನ ಜೀವನದಲ್ಲೆಲ್ಲ ಅತ್ಯಂತ ತೀವ್ರವಾದ ಅಸೂಯೆಯನ್ನು ಅವತ್ತು ಅನುಭವಿಸಿದ. ಉಮೆಯ ನಡಿಗೆಯಲ್ಲಿ ಕಂಡ ಹಿತವಾದ ಆಯಾಸ ಅವನನ್ನು ವಿಚಲಿತಗೊಳಿಸಿತು. ಅಣ್ಣಾಜಿಯ ಹಾಗೆ ತಾನು ಯಾಕಿಲ್ಲವೆಂದು ತೀವ್ರ ಅತೃಪ್ತನಾದ. ಇವನಿಗೊಂದು ಹಸಿವು ಬಾಯಾರಿಕೆಗಳ ದೇಹವೇ ಇಲ್ಲವೋ ಏನೊ ಅನ್ನಿಸುವಂತಿದ್ದ ಅಣ್ಣಾಜಿ ತನಗೆ ಬೇಕಾದ್ದನ್ನು

ಹೆಣ್ಣಿನಿಂದ ಇಷ್ಟು ಸುಲಭವಾಗಿ ಪಡೆಯುವಾಗ ತನಗೇಕೆ ಸಾಧ್ಯವಾಗುತ್ತಿಲ್ಲ ? ಕಲ್ಪನೆಯಲ್ಲೂ ಅವನು ಗೌರಿಯನ್ನು ಬತ್ತಲಾಗಿ ನೋಡಲಾರ. ಅಣ್ಣಾಜಿ ಸತ್ತ ಮೇಲೂ ಈ ಅಸೂಯೆ ಕೃಷ್ಣಪ್ಪನಲ್ಲಿ ಉಳಿದಿತ್ತು. ಅದನ್ನು ಅವನು ಕಳಕೊಂಡಿದ್ದೆಂದರೆ ಲೂಸಿನಾ ಅವನ ಇಡೀ ದೇಹವನ್ನು ಅವಳ ತುಟಿ ಮತ್ತು ನಾಲಿಗೆಯ ತುದಿಗಳಿಂದ ಬೆಂಕಿಯ ಹಾಸಿಗೆ ಮಾಡಿ ಅದರ ಮೇಲೆ ತನ್ನ ಚಿರತೆಯಂತೆ ಮಾಟವಾದ ದೇಹವನ್ನು ನೀಡಿದಾಗ. ಕೃಷ್ಣಪ್ಪ ಇದ್ದಕ್ಕಿದ್ದಂತೆ ಎದ್ದು ನಿಂತಿದ್ದು ನೋಡಿ ಅಣ್ಣಾಜಿ ಯಾವ ದೈನ್ಯವೂ ಇಲ್ಲದೆ:

'ಹೋಗಬೇಡ – ಕೂತಿರು. ಉಮೆ ಅನುಮಾನದಿಂದ ಒದ್ದಾಡಿಯಾಳು. ನಿನ್ನ ಊಹೆ ಸರಿ. ಆದರೆ ಇವೆಲ್ಲ ನನ್ನ ಕೈ ಮೀರಿದ್ದು'

ಎಂದ. ಇಷ್ಟು ಸರಳವಾಗಿ ಬಿಡಬಲ್ಲ ಅಣ್ಣಾಜಿಯನ್ನು ಕಂಡು ಕೃಷ್ಣಪ್ಪ ಚಕಿತನಾದ.

. . . . . . . . .

ಪೂರ್ಣ ಸೆರಗು ಹೊದ್ದು, ದೊಡ್ಡ ಕುಂಕುಮವಿಟ್ಟು ಮೂಗುಬೊಟ್ಟನ್ನಿಟ್ಟ ಮೂಗನ್ನು ಚೂರು ತಗ್ಗಿಸಿ ಕಾಫಿ ಹಿಡಿದು ನಿಂತ ಉಮೆಯನ್ನು ನೋಡಿ ಕೃಷ್ಣಪ್ಪನಿಗೆ ಇನ್ನೂ ಹೆಚ್ಚಿನ ಆಶ್ಚರ್ಯವಾಯಿತು. ಪಾಪಪ್ರಜ್ಞೆಯಿಂದ ನರಳದೆ ಸಾಮಾಜಿಕ ಕಟ್ಟುಗಳನ್ನು ಹೆಣ್ಣು ಮೀರಬಲ್ಲಳು ಹಾಗಾದರೆ. ಅಣ್ಣಾಜಿ ತುಂಬ ಸ್ನೇಹ ಧ್ವನಿಯಲ್ಲಿ,

'ಕುತಕೋ ಉಮ. ಒಂದು ಸೀರಿಯಸ್ಸಾದ ವಿಷಯ ನಿಮ್ಮಿಬ್ಬರಿಗೂ ಹೇಳೋದಿದೆ'

ಎಂದು ಅವಳನ್ನು ಎದುರು ಕೂರಿಸಿಕೊಂಡು ತನಗೆ ವಿಶಿಷ್ಟವಾದ ರೀತಿಯಲ್ಲಿ ಕ್ಲಾಸ್ ತಗೊಂಡ.

'ಈ ವರೆಗೆ ಸಮಾಜ ಸೃಷ್ಟಿಸಿದ ಎಲ್ಲ ಉತ್ಪಾದನಾ ಸಂಬಂಧಗಳೂ ಮನುಷ್ಯನ ಸ್ವಾತಂತ್ರ್ಯವನ್ನು ಮಿತಗೊಳಿಸುವಂಥವು. ಉದಾಹರಣೆಗೆ ಗಂಡು ಹೆಣ್ಣಿನ ಸಂಬಂಧ ನೋಡುವ. ಉಳಿದ ಪದಾರ್ಥಗಳಂತೆಯೇ ಹೆಣ್ಣು ಕೂಡ ಒಂದು ಸ್ವತ್ತಾಗಿದೆ. ಆದ್ದರಿಂದಲೇ ಇದು ಸ್ವಂತದ ಹೆಣ್ಣು ಇದು ಪರ ಹೆಣ್ಣು ಎಂಬ ವಿಂಗಡಣೆಗಳ ಮುಖಾಂತರ ತನ್ನ ಸ್ವತ್ತನ್ನು ಕಾಯ್ದುಕೊಳ್ಳುವ ವ್ಯವಸ್ಥೆಯನ್ನು ಮನುಷ್ಯ ಫ್ಯೂಡಲ್ ಪದ್ಧತಿಯಲ್ಲೂ ಕ್ಯಾಪಿಟಲಿಸ್ಟ್‌ಪದ್ಧತಿಯಲ್ಲೂ ಮಾಡಿಕೊಂಡಿದ್ದಾನೆ. ಈ ಎಲ್ಲ ಪದ್ಧತಿಗಳೂ ಮನುಷ್ಯನ ಸಹಜ ವಿಕಾಸವನ್ನು ತಡೆಗಟ್ಟುತ್ತವೆ. ಹಾಗೆಯೇ ನಮ್ಮ ಈ ಲಿಬಿಡೊ – ಈ ನಮ್ಮ ಕಾಮ ಜೀವನ – ಅನೈಸರ್ಗಿಕವಾದ ಕಟ್ಟುಪಾಡುಗಳಿಗೆ ಒಳಗಾಗುತ್ತದೆ. ಕೊರತೆಯ ಆಧಾರದ ಮೇಲೆ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ನಿಂತಿದೆ – ಕೃತಕವಾದ ಕೊರತೆ ಮತ್ತು ಶೋಷಣೆ. ಇದು ಕಾಮ ಜೀವನಕ್ಕೂ ಅನ್ವಯಿಸುತ್ತದೆ. ಈಗ ನೋಡಿ ಸಮೃದ್ಧಿಯಲ್ಲಿ ಮನುಷ್ಯನ ಹೊಟ್ಟೆ, ಬಟ್ಟೆ, ವಸತಿ ವಿರಾಮಗಳ ಅಗತ್ಯಗಳು. ಸಾಂಸ್ಕೃತಿಕ ಅಗತ್ಯಗಳು, ಪೂರೈಕೆಯಾಗುತ್ತ ಹೋದಂತೆ ಮನುಷ್ಯನ ಅಂತಿಮವಾದ ಬಿಡುಗಡೆಗೆ ಅವನು ಸಿದ್ಧನಾಗುತ್ತಾನೆ. ತಮ್ಮನ್ನು ತೀವ್ರವಾದ ನೋವು ಸಂಕಟಗಳಿಗೆ ಗುರಿ ಮಾಡುವ ಕಾಮಜೀವನಕ್ಕೆ ಸಂಬಂಧಪಟ್ಟ ನಿಷೇಧಗಳನ್ನು ಹರಿದು ಗಂಡು ಹೆಣ್ಣು ಬಿಡುಗಡೆ ಪಡೆಯುತ್ತಾರೆ.

ಮದುವೆಯಾದವಳಲ್ಲಿ ಮಾತ್ರ. ಅದೂ ನಿಯಮಕ್ಕನುಸಾರವಾಗಿ ಈ ದೇಹ ಕೆಲವೇ ಬಗೆಯ ಸುಖಗಳನ್ನು ಪಡೆಯಬಹುದೆಂಬ ಅಡಚಣೆಗಳು ಮಾಯವಾಗುತ್ತವೆ. ಆಸ್ತಿಯ ಅಗತ್ಯ ವರ್ಗರಹಿತ ಸಮಾಜದಲ್ಲಿ ಮಾಯವಾದಂತೆ, ಆಗ ಇಡೀ ದೇಹವೂ ಬಿಡುಗಡೆ ಹೊಂದಿ ಸುಖದ ಬುಗ್ಗೆಯಾಗುತ್ತದೆ. ಈ ಸುಖದ ಸಾಧನೆಯೇ ಮನುಷ್ಯನಿಗೆ ನೈತಿಕತೆಯನ್ನೂ ತರುತ್ತದೆ. ತಾನು ಭೋಗಿಸುವುದು ಅತ್ಯಂತ ಅಮೂಲ್ಯವಾದದ್ದು, ಸ್ವತಂತ್ರವಾದದ್ದು ಎನ್ನುವ ಧೋರಣೆಗಿಂತ ದೊಡ್ಡ ನೈತಿಕತೆ ಎಲ್ಲಿದೆ.'

'ನಿನ್ನ ಜೀವನ ಕ್ರಮವನ್ನು ಜಸ್ಟಿಫೈ ಮಾಡಿಕೊಳ್ಳೋಕೆ ನೀನು ಹೀಗೆ ವಾದಿಸುತ್ತ ಎಂದು ಹೇಳಬಹುದಲ್ಲ'?

ಕೃಷ್ಣಪ್ಪ ಉಮೆ ಅಲ್ಲಿರುವುದನ್ನು ಮರೆತು ಕಟುವಾಗಿ ಹೇಳಿದ್ದ.

'ನನ್ನ ವಿಷಯ ಬಿಟ್ಟು ಯೋಚಿಸು. ನೋಡು ಕೃಷ್ಣಪ್ಪ ನೀನು ರೈತ ಜನಾಂಗದವನು. ನಿನ್ನ ಪೂರ್ವಿಕರು ಭೂ ಮಾಲೀಕರು. ಆದ್ದರಿಂದ ಹೆಣ್ಣಿನ ಬಗ್ಗೆ ಮೂಲತಃ ನೀನು ಫ್ಯೂಡಲ್' ಅಣ್ಣಾಜಿ ಅರ್ಧ ಹಾಸ್ಯದಲ್ಲಿ ಹೇಳಿದ್ದ.

'ಸ್ವಚ್ಛಂದ ಜೀವನ ನಡೆಸಬಾರದು ಅಂತ ನಂಬೋದು, ಹೆಣ್ಣನ್ನ ಪವಿತ್ರ ಅಂತ ತಿಳಿಯೋದು ಫ್ಯೂಡಲ್ಆದರೆ ಯಾಕಾಗಬಾರದು ?'

'ಹೆಣ್ಣು ಯಾಕೆ ಪವಿತ್ರ ಹೇಳು ? ಅವಳು ಸೊತ್ತಾದ್ದರಿಂದ. ಹೀಗೆ ಹೇಳೋವರೆ ಹೆಂಗಸರನ್ನ ಹೊಡೆಯೋವರು. ಅಡಿಗೆ, ಅಲಂಕಾರ, ಸಂಗೀತಕ್ಕೆ ಮಾತ್ರ ಹೆಂಗಸರು ಲಾಯಕ್ಕು ಅಂತ ತಿಳಿಯೋವರು. ತನ್ನ ಜೊತೆ ಸಂಭೋಗಕ್ಕೆ ಒಪ್ಪೊ ಹೆಣ್ಣು ಕಳಪೆಯವಳು ಅಂತ ಭಾವಿಸೋವರು. . . .'

ಕೃಷ್ಣಪ್ಪನಿಗೆ ಅಣ್ಣಾಜಿಯ ಕೊನೆಯ ಮಾತಿನಿಂದ ಮರ್ಮಸ್ಥಳಕ್ಕೆ ಏಟು ಬಿದ್ದಂತೆ ನೋವಾಗಿತ್ತು. ಅಣ್ಣಾಜಿಯ ಎದುರು ಉಮೆ ಯಾವ ಕಲ್ಮಷವೂ ಇಲ್ಲದ ಹೆಣ್ಣಿನಂತೆ ಕೂತಿದ್ದಳು ನಿಜ. ಆದರೆ ರಾತ್ರೆ ಅವಳು ತನ್ನ ಗಂಡನಿಗೂ ಮೈಯನ್ನು ತೆರಬೇಕಲ್ಲವೆ? ಚಿನ್ನದ ಹಲ್ಲಿನ ಚನ್ನವೀರಯ್ಯನಿಂದಲೂ ಅವಳ ದೇಹ, ಸುಖದ ಬುಗ್ಗೆಯಾಗುವುದೇ ? ಅಣ್ಣಾಜಿಯಿಂದ ಆದಷ್ಟೆ ? ಇಲ್ಲದಿದ್ದಲ್ಲಿ ಹೇಗೆ ಅವಳು ಗಂಡನಿಗೆ ಮೈ ಒಡ್ಡುತ್ತಾಳೆ ? ಕೃಷ್ಣಪ್ಪನ ಇಡೀ ವ್ಯಕ್ತಿತ್ವ ಇಬ್ಬರಲ್ಲಿ ಒಂದು ಹೆಣ್ಣು ಒಡೆದುಕೊಳ್ಳಲಾರದು ಎಂದು ಪ್ರತಿಭಟಿಸಿತ್ತು. ಆದರೆ ಹೇಳಲಿಲ್ಲ. ಪ್ರಾಯಶಃ ಉಮೆ ಗಂಡನ ಜೊತೆ ಯಾಂತ್ರಿಕವಾಗಿದ್ದು, ಅಣ್ಣಾಜಿ ಜೊತೆ ಮಾತ್ರ ನಿಜವಾಗಿ ಅರಳಬಹುದು. ಹಾಗಿದ್ದಲ್ಲಿ ಅವಳು ಗಂಡನನ್ನು ಬಿಡಬೇಕು. ಉಮೆಯಿಲ್ಲದಿದ್ದಲ್ಲಿ ಅಣ್ಣಾಜಿಯ ಜೊತೆ ಹೀಗೆ ವಾದಿಸಬಹುದಿತ್ತು ಎಂದುಕೊಂಡು ಸುಮ್ಮನೇ ಕೂತ.

ಅವತ್ತು ಸಂಜೆ ಗೌರಿ ಮನೆಗೆ ಹೋದವನು ಇದನ್ನೇ ಚಿಂತಿಸುತ್ತಿದ್ದ. ತನಗೆ ಗೌರಿ ಬೇಕು – ಆದರೆ ಅವಳು ತನ್ನೊಡನೆ ಹಳ್ಳಿಗೆ ಬರುವವಳಲ್ಲ. ಮದುವೆಯಾಗದೆ ನನ್ನ ಜೊತೆ ಮಲಗೆಂದು ಕೇಳುವುದು ಅವಳನ್ನು ಒಂದು ಭೋಗದ ವಸ್ತುವಾಗಿ ಕಂಡಂತೆ. ಅದಕ್ಕವಳು ಒಪ್ಪಿದರೂ ನಂತರ ಆಕೆ ಕೀಳೆಂದು ತಾನು ಯೋಚಿಸುವುದು ಖಂಡಿತ. ಈ ಬಗೆಯಲ್ಲಿ ಒದ್ದಾಡುತ್ತ

ಕೃಷ್ಣಪ್ಪ ಗೌರಿಯ ಪ್ರಶ್ನೆಗಳಿಗೆ ಹಾ ಹೂ ಎಂದಷ್ಟೇ ಉತ್ತಿರಿಸಿ ಹಿಂದಕ್ಕೆ ಬಂದಿದ್ದ. ಮಾರನೇ ದಿನ ಬೆಟ್ಟಕ್ಕೆ ಹೋಗಿ ಬೈರಾಗಿಯ ಜೊತೆ ಕೂತ. ಅವನು ಅದೇ ಪುಸ್ತಕ ಓದುತ್ತಿದ್ದ. ಅವನನ್ನೇನು ಕೇಳುವುದು ಎಂದು ಬೇಸರವಾಯಿತು. ಅವನು ಅಡಿಗೆ ಮಾಡಲು ಪ್ರಾರಂಭಿಸಿದಾಗ ಎದ್ದು ನಿಂತ. ತನ್ನನ್ನು ಕೂತಿರುವಂತೆ ಕೇಳಲು ಬೈರಾಗಿಗೆ ಆಸೆಯಾಗಿರಬಹುದು. ಆದರೆ ಅವನ ನಿಯಮದ ಪ್ರಕಾರ ಕೇಳಲಾರದೆ ಸುಮ್ಮನಿದ್ದಾನೆ ಎಂದು ಅವನ ಮುಖದ ಮೇಲಿನ ಭಾವದಿಂದ ಅನುಮಾನವಾಯಿತು. ಹೀಗೆ ಪ್ರಯತ್ನಪೂರ್ವಕವಾಗಿ ಒಣಗುವ ಮಾರ್ಗ ತನ್ನದಲ್ಲವೆಂದು ಬೆಟ್ಟವನ್ನಿಳಿದ.

ಆದರೆ ವೀಲ್‌ಚೇರಿನ ಮೇಲೆ ಅವನನ್ನು ಕೂರಿಸಿ ಅವನ ಹೆಂಡತಿ ನೂಕುವಾಗ ಕೃಷ್ಣಪ್ಪ ಯೋಚಿಸುತ್ತಾನೆ: ನಾನು ಹೆಂಡತಿಯನ್ನು ಹೊಡೆಯಲು ಹೋಗಿದ್ದೇನೆ. ಒಂದೇ ಉದ್ದೇಶಕ್ಕಾಗಿ ಬದುಕಿ ಅದರಲ್ಲೂ ಸಫಲನಾಗದೆ ಒಣಗುತ್ತಿದೇನೆ. ನಿಧಾನವಾಗಿ ಸಾಯುತ್ತಿದ್ದೇನೆ. ಯಾರೂ ನನ್ನ ಹತ್ತಿರ ಬಂದು ತಮ್ಮ ಪ್ರೇಮದ ಕಥೆಯನ್ನು ಹೇಳಿಕೊಳ್ಳುವುದಿಲ್ಲ; ಪಕ್ಷಾಂತರ ಮಾಡಿದವರ, ಮಾಡಲಿರುವವರ ಸುದ್ದಿಯನ್ನು ಮಾತ್ರ ತರುತ್ತಾರೆ. ಯಾಕೆ ನನಗೆ ಹೀಗಾಯಿತು ?

ಮೈ ದುರ್ಬಲವಾದ್ದರಿಂದ ಇಂಥ ಯೋಚನೆಗಳು ಕಾಡುತ್ತವೆ ಎಂದು ರೇಗುತ್ತದೆ.

'ಏ ನಾಗೇಶ' ಎಂದು ಕರೆಯುತ್ತಾನೆ. ಯುವಜನ ಸಭಾದ ಕಾರ್ಯದರ್ಶಿ ನಾಗೇಶ ಎದುರು ನಿಂತು. 'ಏನು ಗೌಡರೇ' ಅನ್ನುತ್ತಾನೆ. 'ಯಾವುದಾದರೂ ಹುಡುಗೀನ್ನ ಪ್ರೀತಿ ಗೀತಿ ಮಾಡಿಲ್ವೇನೋ ನೀನು ?' ಅಂದು ನಗುತ್ತಾನೆ. 'ನಾನಾ ಗೌಡರೆ ? ಅದಕ್ಕೆಲ್ಲಿ ಬಿಡುವಿದೆ ಹೇಳಿ. ಇಷ್ಟೊಂದು ದೇಶದ ಸಮಸ್ಯೆಗಳ ಮಧ್ಯೆ. . .' ನಾಗೇಶ ಹಾಸ್ಯದ ಸೋಂಕಿಲ್ಲದಂತೆ ಗಂಭೀರವಾಗಿ ಮಾತಾಡಲು ತೊಡಗಿದಾಗ 'ಹೋಗಲಿ ಬಿಡು ಈ ಸ್ಟೇಟ್ ಮೆಂಟ್‌ಬರ್ಕೊ' ಎಂದು ಅವತ್ತಿಗೆ ಅಗತ್ಯವಾದ ಬೇರೆ ರಾಜಕಾರಣಿಗಳು ಗಮನಿಸುವುದಕ್ಕೆ ಹೆದರುವ ಮಾತುಗಳನ್ನು ಹೇಳುತ್ತಾನೆ. ನಾಗೇಶ ಪುಳಕಿತನಾಗಿ ಬರೆದುಕೊಳ್ಳುತ್ತಾನೆ. ಚಿಗುರು ಮೀಸೆ, ಚಿಗುರಿದ ಗಡ್ಡಗಳ ನಾಗೇಶನ ಮಾಟವಾದ ಮುಖ, ಅವನು ಬೆನ್ನಿನ ತನಕ ಬೆಳೆಸಿದ ಕೂದಲುಗಳನ್ನು ಕೃಷ್ಣಪ್ಪ ಅರ್ಧ ಪ್ರೀತಿ ಅರ್ಧ ಹಾಸ್ಯಗಳಲ್ಲಿ ನೋಡುತ್ತಾನೆ. ಅವನ ವಯಸ್ಸಿನಲ್ಲಿ ತಾನೊಬ್ಬ ಮನುಷ್ಯ, ಇಂಥವ ಎಂದು ಅನ್ನಿಸಿಕೊಳ್ಳಲು ಪ್ರಾಯಶಃ ತಾನೂ ರಾಜಕೀಯಕ್ಕೆ ಇಳಿದಿದ್ದವನಲ್ಲವೇ ? ಕಾಲನ್ನು ಮಡಿಸಲು ಪ್ರಯತ್ನ ಪಡುತ್ತ, ಗೌರಿ ದೇಶಪಾಂಡೆಗೆ ಬರುವಂತೆ ನಾಳೆ ಬರೆಸುವುದು ಎಂದುಕೊಳ್ಳುತ್ತಾನೆ. ಅವಳಿಗೆ ತನ್ನ ಮೇಲೆ ಇನ್ನೂ ಇಷ್ಟವಿದ್ದಿದ್ದಲ್ಲಿ ಅವಳೇ ಬರದೆ ಇರುತ್ತಿದ್ದಳೆ ? ಡೆಲ್ಲಿಯಲ್ಲಿ ಈಗ ತಾಯಿ ಜೊತೆ ಇರುವಳಂತೆ, ಪ್ರತಿ ದಿನ ಕಾಗದ ಬರೆಸಬೇಕೆಂದುಕೊಂಡರೂ ತನ್ನ ಈ ಅವಸ್ಥೆಯನ್ನವಳು ನೋಡಕೂಡದೆಂದು ಮುಂದೂಡುತ್ತಾನೆ.

ಈಗ, ಪ್ರಾಯಶಃ ಸಾಯಬಹುದಾದ ಈಗ, ತಾನು ಇಡಿಯಾಗಿ ಉಳಿದಿದ್ದೇನೆಯೆ ? ಎಂಬ ಪ್ರಶ್ನೆ ಅವನನ್ನು ಕಾಡುತ್ತಲೆ ಇರುತ್ತದೆ.

* * *

ವೀಲ್‌ಚೇರಿನ ಮೇಲೆ ಕೂತು ಹೀಗೆ ಯೋಚಿಸುತ್ತಿರುವ ಕೃಷ್ಣಪ್ಪನ ಕಣ್ಣೆದುರು ಅವನು ತೀವ್ರವಾಗಿ ದ್ವೇಷಿಸಿದ ಮಠದ

ಪಾರುಪತ್ತೆದಾರನಾಗಿದ್ದ ನರಸಿಂಹಭಟ್ಟ, ದೊಡ್ಡ ಅಡಿಕೆ ತೋಟದ ಮಾಲೀಕ ಶಿವನಂಜಗೌಡ. ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿ ಲಕ್ಷಗಟ್ಟಲೆ ತಿಂದು ದೇಶದ ಮುಖ್ಯಮಂತ್ರಿಯಾದ ವೀರಭದ್ರಪ್ಪ, ದಪ್ಪ ಮುಖದ ವಾರಂಗಲ್‌ಪೋಲೀಸ್ ಅಧಿಕಾರಿ ನಿಲ್ಲುತ್ತಾರೆ. ಕೃಶವಾದ ಕೈಕಾಲುಗಳ ಮಕ್ಕಳನ್ನು ಬಗಲಲ್ಲಿ ಹೊತ್ತ, ಕೆದರಿದ ತಲೆಯ ಹೆಂಗಸರು, ಮಂಡಿತನಕ ಮಾಸಲು ಪಂಚೆಯುಟ್ಟ ರೈತರು ಇವರ ಮೇಲೆ ಆವೇಶದಿಂದ ನುಗ್ಗುತ್ತಾರೆ. ಚೂರುಚೂರೇ ಅವರನ್ನು ಹಿಂಸಿಸುತ್ತ ನಿಧಾನವಾಗಿ ಕೊಲ್ಲುತ್ತಾರೆ. ಅವರ ರಕ್ತ ತಂದು ತನ್ನ ಪಾರ್ಶ್ವವಾಯು ಬಡಿದ ಕಾಲಿಗೂ ಪಕ್ಕಕ್ಕೂ ತಿಕ್ಕುತ್ತಾರೆ. ಈ ರಕ್ತವಲ್ಲ ಕಣ್ರೋ – ಪಾರಿವಾಳದ ರಕ್ತ. ಬಿಸಿಯಾಗಿರಬೇಕು ಎಂದು ಯಾರೋ ಅನ್ನುತ್ತಾರೆ. ಕೃಷ್ಣಪ್ಪ ನಗುತ್ತಾನೆ.

ಹೀಗೆ ಕನಸು ಕಾಣುತ್ತ ಕೃಷ್ಣಪ್ಪನ ಕಣ್ಣುಗಳು ಕ್ರೂರವಾಗಿ ದುರುಗುಟ್ಟುವುದನ್ನು ಅಪ್ಪನಿಗೆ ಏನೋ ಹೇಳಲು ಬಂದ ಅವನ ಮಗಳು ಗೌರಿ ಕಂಡು ಹೆದರುತ್ತಾಳೆ. ಕೃಷ್ಣಪ್ಪ ತನ್ನ ಕಾಲನ್ನು ಈಗ ಎತ್ತಬಲ್ಲೆ ಎಂದು ತಿಳಿಯುತ್ತ ಇಡೀ ಮನಸ್ಸನ್ನು ತನ್ನ ಪಾದವಾಗಿ ಏಕಾಗ್ರಗೊಳಿಸುತ್ತಾರೆ. ಎತ್ತಲು ನೋಡುತ್ತಾನೆ. ಸೊಂಟದಿಂದ ಮೇಲಕ್ಕೆ ಈಗ ಎತ್ತಿಬಿಡುತ್ತೇನೆ ಎಂದು ತಿಳಿದ ಕಾಲು ಸ್ವಲ್ಪ ಪಾದದ ಉಂಗುಷ್ಟದಲ್ಲಿ ಮೇಲಕ್ಕೇರುತ್ತದೆ. ಕೃಷ್ಣಪ್ಪ ನಿಟ್ಟುಸಿರಿಟ್ಟು ಮತ್ತೆ ಇನ್ನೊಂದು ಹಗಲುಗನಸಿಗೆ ಮರಳುತ್ತಾನೆ. ಈಗ ರೈತರು ಕೊಲ್ಲುತ್ತಿಲ್ಲ. ಗಂಭೀರವಾಗಿ ಹೊಟ್ಟೆ ಡುಬ್ಬರಾದ ವೈರಿಗಳನ್ನು ಎದುರು ನಿಲ್ಲಿಸಿ ಶಿಸ್ತಿನಿಂದ ಅವರ ವಿಚಾರಣೆ ನಡೆಸುತ್ತಿದ್ದಾರೆ.

ಒಂದು ಘಟನೆ ಮುಖ್ಯವಾಗಿ ಕೃಷ್ಣಪ್ಪನನ್ನು ಹಳ್ಳಿಗೆ ಹೋಗಿ ನೆಲಸುವಂತೆಯೂ ರೈತ ಸಂಘಟನೆಯಲ್ಲಿ ತೊಡಗುವಂತೆಯೂ ಮಾಡಿತು. ಅದು ಅಣ್ಣಾಜಿಯ ದಸ್ತಗಿರಿ, ಮತ್ತು ಕೊಲೆ.

ಅಣ್ಣಾಜಿ ಮೈಕೈ ತುಂಬಿಕೊಂಡು ಅವನೇ ತಮಾಷೆ ಮಾಡುತ್ತಿದ್ದಂತೆ ಪೊಗದಸ್ತಾದ ಬೂರ್ಜ್ವಾನಂತೆ ಕಾಣಲು ಪ್ರಾರಂಭಿಸಿದ್ದ. ತನ್ನ ಎಲ್ಲ ಕಥೆಯನ್ನೂ ಉಮೆಗೆ ಹೇಳಿದ್ದ. ಅವನ ಜೊತೆ ತಾನೂ ಎಲ್ಲಿಂದರಲ್ಲಿಗೆ ಓಡಿಹೋಗುವುದಾಗಿ ಅವಳು ಹೇಳಿದ್ದಳು. ಇದನ್ನು ಅಣ್ಣಾಜಿ ಅವಳ ರೋಮಾಂಟಿಸಂ ಎಂದು ಕೃಷ್ಣಪ್ಪನ ಹತ್ತಿರ ತಮಾಷೆ ಮಾಡಿದ್ದರೂ ಈಕೆ ಗುಪ್ತವಾಗಿ ತನಗೆಂದು ತಿಜೋರಿಯಿಂದ ತಗೆದಿದ್ದ ಹಣ, ಅವಳ ಜತೆಗಿನ ತನ್ನ ವ್ಯವಹಾರಗಳು ಇಂಗ್ಲಿಷ್ ಕಲಿಯುವ ಅಮಲು ಇಳಿಯುತ್ತಿದ್ದಂತೆ ಚನ್ನವೀರಯ್ಯನಿಗೆ ತಿಳಿಯುವುದೆಂದೂ, ಆ ಮೇಲೆ ತಾವಿಬ್ಬರೂ ಒಟ್ಟಾಗಿ ತೀರ್ಮಾನ ತೆಗೆದುಕೊಳ್ಳಲೇ ಬೇಕಾಗುವುದೆಂದೂ ಅಣ್ಣಾಜಿಗೆ ಚಿಂತೆಯಾಗಿತ್ತು. ತನ್ನ ಪ್ರತಿಕ್ರಿಯೆ ಸೂಚಿಸಿದ ಕೃಷ್ಣಪ್ಪ ಅಣ್ಣಾಜಿಯ ಈ ಉಪದ್ವ್ಯಾಪಗಳನ್ನು ಕೇಳಿಸಿಕೊಳ್ಳುತ್ತಿದ್ದ.ಕೃಷ್ಣಪ್ಪನೂ ಆಪ್ತನೆಂದು ಗಟ್ಟಿಯಾದ ಮೇಲೆ ಈಚೆಗೆ ಉಮೆ ನಿಸ್ಸಂಕೋಚವಾಗಿ ಅವನಿದ್ದಾಗಲೇ ಅಣ್ಣಾಜಿಯ ಜತೆ ವ್ಯವಹರಿಸುವುದು ನೋಡಿದರೆ ತನಗೆ ಪ್ರಿಯನಾದವನ ಜೊತೆ ಓಡಿಹೋಗುವವಳಂತೆ ತೋರುತ್ತಿದ್ದಾಳೇ ವಿನಾ, ತಾನು ಗಂಡನಿಗೆ ಮೋಸ ಮಾಡುತ್ತಿದ್ದೇನೆಂಬ ಯಾವ ಪಶ್ಚಾತ್ತಾಪವೂ ಅವಳಲ್ಲಿ ಕಾಣಿಸುತ್ತಿರಲಿಲ್ಲ. ಆದರೆ ಅವಳು ತನ್ನನ್ನು ಹಚ್ಚಿಕೊಂಡ ತೀವ್ರತೆಯಿಂದ ಅಣ್ಣಾಜಿಯ ಭಾವನೆಗಳೆಲ್ಲ ಗೊಂದಲಕ್ಕೊಳಗಾಗಿದ್ದಾವೆಂಬುದನ್ನೂ ಕೃಷ್ಣಪ್ಪ ಗಮನಿಸಿದ್ದ. ಅವಳು ಎದುರಿಗಿಲ್ಲದೆ ತನಗೆ ಪ್ರಿಯವಾದ ವಿಚಾರಗಳನ್ನು ಅಣ್ಣಾಜಿ ಮಾತಾಡಲಾರ. ರಾಜಕೀಯದ ಒಣ ವಿಚಾರಗಳೂ – ಉಮೆಗೆ ತಿಳಿಯಲಿ ಬಿಡಲಿ – ಅಣ್ಣಾಜಿ ಅವಳೆದುರು ಮಂಡಿಸುವ ರೀತಿ ಪ್ರಣಯದ ಕಾವಿನಿಂದ ತುಂಬಿರುವುದನ್ನು ಕಂಡು ಕೃಷ್ಣಪ್ಪ ಚಕಿತನಾಗಿದ್ದ. ಅಣ್ಣಾಜಿ ಜೊತೆ ಯಾವುದಾದರೂ ಹಳ್ಳಿಯಲ್ಲಿ ತಾನೂ ದುಡಿಯುವೆನೆಂದು ಉಮೆ ತಿಳಿದಿದ್ದಳು. ಅಣ್ಣಾಜಿ ಕೇರಳಕ್ಕೆ ಹೋಗುವುದೆಂದು ನಿರ್ಧರಿಸಿದ್ದ – ಟ್ಯುಟೋರಿಯಲ್ ಪ್ರಾರಂಭಿಸಲು. ಮನೆಯಲ್ಲಿ

ಮರಗೆಲಸಕ್ಕೆ ಬರುತ್ತಿದ್ದ ಕೇರಳದ ಬಡಗಿಯೊಬ್ಬನಿಂದ ಆಗಲೇ ಉಮೆ ಅಷ್ಟಿಷ್ಟು ಮಲೆಯಾಳಂ ಕಲಿಯಲು ಸಹ ಪ್ರಾರಂಭಿಸಿದ್ದಳು – ಮಾರ್ಕೆಟ್ಟು ಅಂಗಡಿಗಳಲ್ಲಿ ಬೇಕಾಗುವಷ್ಟು. ಇನ್ನು ಹದಿನೈದು ದಿನಗಳಲ್ಲಿ ಅವರು ಓಡಿಹೋಗುವುದೆಂದು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಳ್ಳತೊಡಗಿದ್ದರು. ಉಮೆ ಅತ್ಯಂತ ಅಗತ್ಯವಾದ ತನ್ನ ಬಟ್ಟೆಗಳನ್ನು ಸಣ್ಣ ಟ್ರಂಕಲ್ಲಿ ತುಂಬಿ ಅಣ್ಣಾಜಿ ರೂಮಿನಲ್ಲಿ ಇಟ್ಟಿದ್ದಳು ಕೂಡ. ಪ್ರತಿನಿತ್ಯ ಕ್ಲಬ್ಬಿನಲ್ಲಿ ಇಸ್ಪೀಟ್ಆಡಿ ಕುಡಿದು ಮಧ್ಯರಾತ್ರೆ ಕಳೆದ ಮೇಲೆ ಮನೆಗೆ ಬರುತ್ತಿದ್ದ ಚನ್ನವೀರಯ್ಯನಿಗೆ ತನ್ನ ಹೆಂಡತಿ ಬೇರೆ ಸ್ನೇಹಿತರ ಹೆಂಡಂದಿರಂತೆ ಗಲಾಟೆ ಮಾಡುವುದಿಲ್ಲೆಂದು ಖುಷಿ; ತನ್ನ ಅಂಕೆಯಲ್ಲಿ ಇದ್ದಾಳೆಂದು ಹೆಮ್ಮೆ.

ಒಂದು ದಿನ ಮಧ್ಯಾಹ್ನ ಪೋಲೀಸ್ಜೀಪು ಸೀದ ಬಂದು ನಿಂತಿತು. ಉಮೆಯ ಹತ್ತಿರ ಆಗ ಅಣ್ಣಾಜಿ ಮಾತಾಡುತ್ತ ಕುಳಿತಿದ್ದ. ಬಾಗಿಲು ತಟ್ಟಿದ ಶಬ್ದವಾದಾಗ ಕೃಷ್ಣಪ್ಪನೆಂದು ತಿಳಿದು ಅಣ್ಣಾಜಿ ಬಾಗಿಲು ತೆರೆದ. ಎದುರು ದೈತ್ಯನಂತೆ ಡಿ. ಎಸ್. ಪಿ. ಯೇ ಖುದ್ದು ನಿಂತಿದ್ದ. ಠಾಣೆಗೆ ಬರಬೇಕು ಎಂದ. ಉಮೆ ಗಾಬರಿಯಿಂದ ಎದ್ದು ನಿಂತಳು. 'ಉಮೆ ಹೆದರಬೇಡ. ಇವರೇನೋ ತಪ್ಪು ತಿಳಿದಂತಿದೆ. ಕೃಷ್ಣಪ್ಪನನ್ನು ಠಾಣೆಗೆ ಕಳಿಸು. ನನಗೆ ಜಾಮೀನು ಬೇಕಾಗಬಹುದು'' ಎಂದು ಪೋಲೀಸರಿಗೆ ಇಂಪ್ರೆಸ್ಆಗುವಂತೆ ಶುದ್ಧ ಇಂಗ್ಲಿಷಲ್ಲಿ ಮಾತಾಡಿ ಅಣ್ಣಾಜಿ ಹೊರಟ.

ಸ್ವಲ್ಪ ಹೊತ್ತಿನ ಮೇಲೆ ಬಂದ ಕೃಷ್ಣಪ್ಪನ ಹತ್ತಿರ ಉಮೆ ಅಳಲು ಪ್ರಾರಂಭಿಸಿದಳು. ಕೃಷ್ಣಪ್ಪ ಹೆಣ್ಣು ಅಳುವುದನ್ನು ಸಹಿಸಲಾರ. ಏನು ಹೇಳುವುದೆಂದು ತಿಳಿಯದ ಗೊಂದಲದಲ್ಲಿದ್ದ ಅವನಿಗೆ ಉಮೆ ಒಂದು ಸಾವಿರ ರೂಪಾಯನ್ನು ಕೊಟ್ಟು ಏನಾದರೂ ಮಾಡಿ ಅಣ್ಣಾಜಿಯನ್ನು ಬಿಡಿಸಿಕೊಂಡು ಬರುವಂತೆ ಹೇಳಿದಳು. ಕೃಷ್ಣಪ್ಪ ಠಾಣೆಗೆ ಹೋದಾಗ ಅಣ್ಣಾಜಿಯನ್ನು ವಾರಂಗಲ್ಗೆ ನೇರವಾಗಿ ಜೀಪಿನಲ್ಲಿ ಸಾಗಿಸುತ್ತಿರುವದಾಗಿ ತಿಳಿಯಿತು. ಅಲ್ಲಿ ಕೋರ್ಟಿನಲ್ಲಿ ಅವನನ್ನು ಹಾಜರುಪಡಿಸುತ್ತಾರೆಂದು ಪೋಲೀಸ್ಇನ್ಸ್ಪೆಕ್ಟರ್ ಹೇಳುತ್ತ, 'ಆತನ ಮೇಲೆ ಕೊಲೆ ಪ್ರಯತ್ನದ ಆಪಾದನೆ ಇದೆ ಮಿಸ್ಟರ್ – ಜೋಕೆಯಾಗಿರಿ' ಎಂದ.

ಕೃಷ್ಣಪ್ಪ ಉಮೆಯನ್ನು ನೋಡಲು ಹಿಂದಕ್ಕೆ ಬಂದ. ಅಷ್ಟರಾಗಲ್ಲೇ ಅಣ್ಣಾಜಿಯ ಅರೆಸ್ಟ್ವರ್ತಮಾನ ತಿಳಿದ ಚನ್ನವೀರಯ್ಯ ಮನೆಗೆ ಧಾವಿಸಿ ಹೆಂಡತಿಯನ್ನು ಸಂತೈಸುತ್ತಿದ್ದ. 'ನೋಡಿ ಮಿಸ್ಟರ್ ಕೃಷ್ಣಪ್ಪ – ಆತ ರೆವಲೂಶನ್ಮಾಡ್ತೀನಿ ಅಂತ ಏನೋ ಕೊಲೆ ಗಿಲೆಗೂ ಕೈಹಾಕಿದ್ದಾನಂತೆ. ಇಲ್ಲಿ ಅಂಡರ್ಗ್ರೌಂಡ್ಇದ್ದನಂತೆ ; ಥ್ಯಾಂಕ್ಗಾಡ್ಅಷ್ಟಕ್ಕೆ ಮುಗಿಯಿತಲ್ಲ ಹೇಳಿ. ಆದರೆ ನನ್ನ ವೈಫ್ಗೆ ಅವರ ಮೇಲೆ ತುಂಬ ರಿಗಾರ್ಡ್ಸ್ನೋಡಿ – ಅವರ ನಾಲೆಜ್ಕಂಡು. ನಿಮ್ಮ ಫ್ರೆಂಡ್ಗೇನಾದರೂ ಸಹಾಯ ಮಾಡಬೇಕೆನ್ನಿಸಿದರೆ ದಯಮಾಡಿ ವಾರಂಗಲ್ಗೆ ಹೋಗಿ ಬನ್ನಿ. ಖರ್ಚಿಗೆ ಈ ಐನೂರು ತಕೊಳ್ಳಿ. ಅಣ್ಣಾಜಿಗೆ ಒಂದು ತಿಂಗಳ ಸಂಬಳಾನೂ ಬಾಕಿ ಇತ್ತು. ಆದರೆ ದಯವಿಟ್ಟು ನನ್ನನ್ನು ಇನ್ವಾಲ್ವ್ಮಾಡಬೇಡಿ. ನಾನು ಮಾಡೋದು ಬಿಸಿನೆಸ್ನೋಡಿ – ತುಂಬ ಡೆಲಿಕೇಟು' ಎಂದ. ಕೃಷ್ಣಪ್ಪ ಆ ಹಣವನ್ನೂ ಪಡೆದು ರೈಲಿನಲ್ಲಿ ವಾರಂಗಲ್ಗೆಂದು ಹೊರಟಾಗ ಮಹೇಶ್ವರಯ್ಯ ಪ್ರತ್ಯಕ್ಷರಾಗಿ ಬಿಡುವುದೆ ? 'ಹಾ ನಾನೂ ಬರುವೆನಯ್ಯ – ನಿನ್ನ ಜೊತೆ. ನನಗಷ್ಟು ತೆಲಗೂ ಬರತ್ತೆ' ಎಂದರು.

ಮಹೇಶ್ವರಯ್ಯನ ಕೂದಲು ಹಿಂದಿಗಿಂತ ಹೆಚ್ಚು ಉದ್ದವಾಗಿದ್ದು ಬೆಳ್ಳಗಾಗಿದ್ದುವು. ಹಣೆಯ ಮೇಲಿನ ದೊಡ್ಡ ಕುಂಕುಮ

ನೋಡಿದರೆ ಅವರು ತಮ್ಮ ದೇವೀ ಪೂಜೆಯ ಯಾವುದೋ ಮಂಡಳ ಪೂರೈಸಿ ಬಂದವರಂತೆ ಕಂಡರು. ಎರಡು ಫಸ್ಟ್‌ಕ್ಲಾಸ್‌ಟಿಕೆಟ್ಟುಗಳನ್ನು ಕೊಂಡರು. ಕೃಷ್ಣಪ್ಪ ಅಲ್ಲಿ ಇಲ್ಲಿ ಅಣ್ಣಾಜಿಗೆಂದು ಮಾಡಿದ್ದ ಸಾಲ – ಇನ್ನೂ ತೀರಿಸಲಾರದೆ ಉಳಿದದ್ದು ತೀರಿಸಿದರು. ಕೃಷ್ಣಪ್ಪನನ್ನು ಖಾದಿ ಅಂಗಡಿಗೆ ಕರೆದೊಯ್ದು ಆರು ತೆಳುವಾದ ಪಂಚೆ ಕೊಂಡರು. ಜೊತೆಗೇ ಜುಬ್ಬಗಳಿಗೆ ಬಟ್ಟೆ, ಒಂದು ಉಣ್ಣೆಯ ಕೋಟಿಗೆ ಬಟ್ಟೆಕೊಂಡು ಹೊಲಿಸಲು ಹಾಕಿದರು. ತೋಳು ಎಷ್ಟು ಸಡಿಲವಿರಬೇಕು, ಕತ್ತಿನ ಪಟ್ಟಿ ಹೇಗಿರಬೇಕು. ಜುಬ್ಬ ಕೆಳಬರುತ್ತ ಹೇಗೆ ಅಗಲವಾಗಬೇಕು ಇತ್ಯಾದಿಗಳನ್ನು ಟೇಲರಿಗೆ ಸ್ಪಷ್ಟವಾಗಿ ವಿವರಿಸಿ, ಕೃಷ್ಣಪ್ಪನಿಗೆ 'ನೀನಿನ್ನು ಕಚ್ಚೆಪಂಚೆ ಉಡಬೇಕಯ್ಯ' ಎಂದರು. ಸಂಜೆಯ ರೈಲಲ್ಲಿ ಇಬ್ಬರೂ ವಾರಂಗಲ್ ಮಾರ್ಗವಾಗಿ ಪ್ರಯಾಣ ಮಾಡಿದರು.

ಎರಡು ದಿನಗಳ ಮೇಲೆ ವಾರಂಗಲ್ ತಲ್ಪಿ ಪೋಲೀಸ್‌ಠಾಣೆಗೆ ಟ್ಯಾಕ್ಸಿಯಲ್ಲಿ ಅವಸರವಾಗಿ ಹೋಗಿ ಆರ್. ಎಲ್. ನಾಯಕರನ್ನು ಎಲ್ಲಿಟ್ಟಿದ್ದೀರಿ ? – ಎಂದು ಕೇಳಿದಾಗ ಕೃಷ್ಣಪ್ಪ ಮತ್ತು ಮಹೇಶ್ವರಯ್ಯನನ್ನು ಕೂರಲು ಸಹ ಹೇಳದೆ ಪೋಲೀಸ್‌ಅಧಿಕಾರಿಯೊಬ್ಬ –

'ನಿಮಗೇನು ಆಗಬೇಕು ಅವರು ?' ಎಂದ.

'ನನ್ನ ಸ್ನೇಹಿತ' ಎಂದ ಕೃಷ್ಣಪ್ಪ.

'ಎಚ್ಚರಿಕೆಯಿಂದ ಉತ್ತರ ಕೊಡಿ. ಯಾವ ಹೆಸರಲ್ಲಿ ನಿಮಗೆ ಸ್ನೇಹಿತರಾದರು ? ಅವರ ವಿಷಯ ಏನೇನು ನಿಮಗೆ ಗೊತ್ತು?'

'ಆರ್. ಎಲ್. ನಾಯಕ್ ಎಂಬ ಹೆಸರಲ್ಲೇ ನಿಮಗೆ ಪರಿಚಿತರೋ ಅವರು ?'

ಲೋಕಜ್ಞಾನ ಗೊತ್ತಿದ್ದ ಮಹೇಶ್ವರಯ್ಯ ಕೃಷ್ಣಪ್ಪನಿಗೆ ಮಾತಾಡಲು ಅವಕಾಶ ಕೊಡದೆ ಹೇಳಿದರು:

'ಆ ಹೆಸರಿನಲ್ಲಿ ನೀವು ಅರೆಸ್ಟ್‌ಮಾಡಿದ್ದರಿಂದ ಊಹಿಸಿ ಕೇಳಿದ್ದು ಅಷ್ಟೆ. ನಮ್ಮಲ್ಲಿ ಅವರು ಅಣ್ಣಾಜಿ ಎಂಬ ಹೆಸರಲ್ಲಿ ಇಂಗ್ಲಿಷ್‌ಟ್ಯೂಟರ್ ಆಗಿ ಇವರಿಗೆ ಪಾಠ ಹೇಳುತ್ತಿದ್ದರು.'

'ಓಹೋ ಆತ ಯಾರು ಗೊತ್ತೇ ನಿಮಗೆ ಯಂಗ್‌ಮ್ಯಾನ್ ? ತೆಲಂಗಾಣ ರೀಜನ್ನಿನಲ್ಲಿ ಜಮೀಂದಾರರನ್ನು ಕೊಲೆ ಮಾಡಲು ಕೆಲವು ಕಲ್ಪ್ರಿಟ್ಸರನ್ನು ತಯಾರು ಮಾಡುತ್ತಿದ್ದ ಒಬ್ಬ ಸೋ ಕಾಲ್ಡ್‌ಕಮ್ಯುನಿಸ್ಟ್‌ಘಟಿಂಗ. ನೀನು ಖದ್ದರ್ ಹಾಕಿದ್ದರಿಂದ ವಾರ್ನ್‌ಮಾಡ್ತಿದೇನೆ. ನಿನಗೆ ಅವನು ಗುರ್ತು ಅಂತಲೂ ಹೇಳಿಕೋಬೇಡ. ಅವನನ್ನು ಫಿನಿಶ್‌ಮಾಡಿಯಾಯ್ತು. ನೋಡಿಲ್ಲವೆ ?' ಎಂದು ಅವತ್ತಿನ ಇಂಗ್ಲಿಷ್‌ಸುದ್ದಿ ಪತ್ರಿಕೆಯೊಂದನ್ನು ಕೃಷ್ಣಪ್ಪನಿಗೆ ಕೊಟ್ಟ.

ಪತ್ರಿಕೆಯಲ್ಲಿ ಅಣ್ಣಾಜಿಯ ಕಾವಿಬಟ್ಟೆ ತೊಟ್ಟ ಫೋಟೋದ ಕೆಳಗೆ ಕಾವಿಯಲ್ಲಿದ್ದ ಆಪಾದಿತನ ಸಾವು ಎಂದು ಶೀರ್ಷಿಕೆಯಿತ್ತು.

ಕರ್ನಾಟಕದಲ್ಲಿ ಅಡಗಿದ್ದ ಈ ಆಪಾದಿತನನ್ನು ಪೋಲೀಸರು ಜೀಪಲ್ಲಿ ತರುವಾಗ ಒಂದು ಅರಣ್ಯದ ಮಧ್ಯೆ ಅವನ ಕೆಲವು ಹಿಂಬಾಲಕರು ಜೀಪನ್ನು ಅಟ್ಯಾಕ್ಮಾಡಿದುದಾಗಿಯೂ, ಈ ಎನ್‌ಕೌಂಟರ್‌ನಲ್ಲಿ ಇಬ್ಬರು ಪೋಲಿಸರಿಗೆ ಗಾಯವಾದುದಾಗಿಯೂ, ಆರ್. ಎಲ್. ಸ್ವಾಮಿ ಅಲಿಯಾಸ್ಅಣ್ಣಾಜಿ ಈ ಗುಂಡೇಟುಗಳ ಮಳೆಯಲ್ಲಿ ಸಿಕ್ಕಿಬಿದ್ದು ಸತ್ತುದಾಗಿಯೂ ಪೋಲೀಸ್ಹೇಳಿಕೆ ಪ್ರಕಟವಾಗಿತ್ತು. ಈ ಸ್ವಾಮಿಯ ಅನುಯಾಯಿಗಳಲ್ಲಿ ಕೆಲವರು ಕರ್ನಾಟಕದಲ್ಲಿ ಇನ್ನೂ ಅಡಗಿರಬಹುದೆಂದೂ, ಕರ್ನಾಟಕ ಪೋಲೀಸರು ಅವರಿಗಾಗಿ ಅರಣ್ಯ ಪ್ರದೇಶಗಳಲ್ಲಿ ಹುಡುಕಾಡುತ್ತಿರುವುದಾಗಿಯೂ ಅಚ್ಚಾಗಿತ್ತು.

ಕೃಷ್ಣಪ್ಪನ ಮುಖ ವಿವರ್ಣವಾಯಿತು. ಎದುರಿಗೆ ಕಾಕಿಬಟ್ಟೆ ತೊಟ್ಟು ಕೈಯಲ್ಲಿ ದೊಣ್ಣೆ ಹಿಡಿದಿದ್ದ ದಪ್ಪನೆಯ ಮುಖದ ಅಧಿಕಾರಿಯನ್ನು ಕೆಕ್ಕರಿಸಿ ನೋಡುತ್ತ ನಿಂತ.

'ಕೊನೇ ಮಾತು ಓದಿದೆಯ? ಜೋಕೇಂದ ಇರು. ಆ ಸೂಳೇಮಗನ ಪರಿಚಯದವ ಅಂದ್ರೆ ನಿನ್ನನ್ನೂ ಆರೆಸ್ಟ್ಮಾಡಬೇಕಾಗುತ್ತೆ' ದಪ್ಪ ಮುಖದ ಅಧಿಕಾರಿ ಹೇಳಿದ.

'ಕೊಲೆಗಡುಕ ಹಂದಿ ಸೂಳೇಮಗನೆ – '

ತಾನೇನು ಮಾಡುತ್ತಿದ್ದೇನೆಂದು ತಿಳಿಯದೆ ಕೃಷ್ಣಪ್ಪ ನುಗ್ಗಿ ಪೋಲೀಸ್ಅಧಿಕಾರಿಯ ಕತ್ತನ್ನು ಹಿಡಿದ. ಇಬ್ಬರು ಕಾನ್‌ಸ್ಟೇಬಲ್‌ಗಳು ಓಡಿ ಬಂದು ಅವನನ್ನು ಎಳೆದರು.

ಮಹೇಶ್ವರಯ್ಯ ಕೈಮುಗಿದು 'ತುಂಬ ಕೋಪದ ಯುವಕ ಸ್ವಾಮಿ ಬಿಟ್ಟುಬಿಡಿ' ಎಂದು ತೆಲುಗಿನಲ್ಲಿ ಅಂಗಲಾಚಿದರು. ಚೇತರಿಸಿಕೊಂಡಿದ್ದ ಕೃಷ್ಣಪ್ಪ 'ಈ ಕೊಳಕನ ಹತ್ತಿರ ಬೇಡ ಬಿಡಿ' ಎಂದ. ಪೋಲೀಸ್ಅಧಿಕಾರಿ, 'ನಿನಗಿಷ್ಟು ಧಿಮಾಕೊ – ನೋಡುತ್ತೇನೆ. ಅಸಾಲ್ಟ್‌ಕೇಸು ಹಾಕುತ್ತೇನೆ. ಮ್ಯಾಜಿಸ್ಟೇಟ್ ಹತ್ತಿರ ನಿನ್ನ ಪ್ರೆಸೆಂಟ್ಮಾಡಿ ವಿಚಾರಣೆಗೆ ಇಲ್ಲಿ ಇಳಿಸಿಕೋತೇನೆ' ಎಂದು ಎದ್ದುನಿಂತ. 'ಈ ಕುಂಕುಮದ ಪೂಜಾರೀನ್ನ ಇಲ್ಲಿಂದ ಕರೆದುಕೊಂಡು ಹೋಗಿ. ಅವನು ಓಡಿಹೋಗದಂತೆ ಕಣ್ಣಿಟ್ಟಿರಿ. ಎಲ್ಲ ಛದ್ಮವೇಷದಲ್ಲಿರೋ ಕೊಲೆಗಡುಕರು' ಎಂದು ತನ್ನ ಪ್ಯಾಂಟನ್ನು ಮೇಲಕ್ಕೆತ್ತಿ ಅಂಗಿಯನ್ನು ಜಗ್ಗಿ ಮೀಸೆ ಹುರಿಮಾಡಿಕೊಂಡ.

ಕಾನ್‌ಸ್ಟೇಬಲ್ಒಬ್ಬ ಬಂದು ಮಹೇಶ್ವರಯ್ಯನನ್ನು ಹೊರಗೆ ತಳ್ಳಲು ಶುರುಮಾಡಿದ. ಮಹೇಶ್ವರಯ್ಯ 'ನಾನೊಬ್ಬ ಲಾಯರನ್ನು ನೋಡ್ತೇನೊ. ಹೆದರಬೇಡ – ದೇವಿಯ ಸ್ತೋತ್ರ ಮಾಡುತ್ತಿರು' ಎಂದು ಹೇಳಿ ಹೊರಗೆ ಹೋದರು.

ಒಬ್ಬ ಇಲ್ಲಿಯ ಮುಖದ ಕುಳ್ಳನೆಯ ಮ್ಯಾಜಿಸ್ಟೇಟ್ಎದುರು ಕೃಷ್ಣಪ್ಪನನ್ನು ಪೋಲೀಸ್ಅಧಿಕಾರಿ ನಿಲ್ಲಿಸಿದ. ತನ್ನ ಮೇಲೆ ಈತ ಆಸಾಲ್ಟ್ಮಾಡಲು ಪ್ರಯತ್ನಿಸಿದ್ದನ್ನೂ ಸ್ವಾಮಿಯ ಸಂಗಡಿಗನಾಗಿದ್ದುದನ್ನೂ ಹೇಳಿ ವಿಚಾರಣೆಗೆ ಸ್ಟೇಶನ್ನಿಗೆ ಬಿಡಬೇಕೆಂದು ಕೋರಿದ. ಕೃಷ್ಣಪ್ಪ ಕಣ್ಣು ಕೆಕ್ಕರಿಸಿ ನೋಡುತ್ತ ಸುಮ್ಮನೇ ನಿಂತ. ಮ್ಯಾಜಿಸ್ಟ್ರೇಟಿನ ಒಪ್ಪಿಗೆ ಪಡೆದು ಅಧಿಕಾರಿ ಕೃಷ್ಣಪ್ಪನನ್ನು

ಊರಿನ ಇನ್ನೊಂದು ಠಾಣೆಗೆ ಒಯ್ದು, ಠಾಣೆಯ ಹಿತ್ತಲಲ್ಲಿ ಇದ್ದ ಒಂದು ಕೋಣೆಯ ಎದುರು ನಿಲ್ಲಿಸಿ, ಅದರ ಬಾಗಿಲು ತೆರೆಯುವಂತೆ ಪಕ್ಕದಲ್ಲಿ ನಿಂತ ಪೋಲಿಸನಿಗೆ ಹೇಳಿದ. ಬಾಗಿಲು ಕಿಂಯ್‌ಗುಡುತ್ತ ತೆರೆದುಕೊಂಡಿತು.

***

ಆ ಕೋಣೆಯಲ್ಲಿ ಒಂದಾದರೂ ಕಿಟಕಿಯಿರಲಿಲ್ಲ. ಗಾಳಿಯಾಡಲು ಅವಕಾಶವಿಲ್ಲದ್ದರಿಂದ ಬೂಸಲು ನಾತ ಗಮ್ಮೆಂದು ಮೂಗಿಗೆ ಬಡಿಯಿತು. ಪೋಲೀಸ್‌ಕಾನ್‌ಸ್ಟೇಬಲ್‌ಕೃಷ್ಣಪ್ಪನನ್ನು ಒಳಗೆ ತಳ್ಳಿ, ಅವನ ಕಾಲಿನ ಬುಡಕ್ಕೆ ಒಂದು ಕಂಬಳಿಯನ್ನು ಎಸೆದ. ಬಾಗಿಲಿಂದ ಒಳಗೆ ಬಂದ ಬೆಳಕಲ್ಲಿ ಉಚ್ಚೆ ಕಕ್ಕಸಗಳಿಗೆಂದು ಇಟ್ಟ ಒಂದು ತುಕ್ಕು ಹಿಡಿದ ಬೋಗಣೆಯನ್ನು ತೋರಿಸಿದ. ಅಂಥದೇ ಇನ್ನೊಂದು ತುಕ್ಕು ಹಿಡಿದ ಪಾತ್ರೆ ತೋರಿಸಿ ಅದರಲ್ಲಿ ಕುಡಿಯಲು ನೀರಿರುತ್ತದೆ ಎಂದ - ಉರ್ದುವಿನಲ್ಲಿ. 'ಎರಡು ಪಾತ್ರೆಗಳೂ ಬೇರೆ ಬೇರೆ ಕೆಲಸಕ್ಕೆ - ನೆನಪಿಟ್ಟಿರು' ಎಂದು ಅಧಿಕಾರಿ ನಕ್ಕ. ಕಾನ್‌ಸ್ಟೇಬಲ್ ಕೃಷ್ಣಪ್ಪನ ಜೇಬುಗಳನ್ನು ಹುಡುಕಿ ಅದರಿಂದ ಸಾವಿರದ ಐನೂರು ರೂಪಾಯಿ, ಸಿಗರೇಟು, ಬೆಂಕಿಪಟ್ಟಣ ಪೆನ್ನುಗಳನ್ನು ತೆಗೆದು ಅಧಿಕಾರಿಗೆ ಕೊಟ್ಟ.

ವಾರಂಗಲ್ ಸೆಖೆ ಅಸಹನೀಯವಾಗಿತ್ತು. ರೂಮೊಳಗೆ ಹೋಗುತ್ತಿದ್ದಂತೆ ಕೃಷ್ಣಪ್ಪನಿಗೆ ಅಲ್ಲಿನ ಧೂಳಿನಿಂದಾಗಿ ಉಸಿರು ಕಟ್ಟಿತು. ಒಳಗಿನ ಕ್ಷೀಣ ಬೆಳಕಿನಲ್ಲಿ ಜೇಡರ ಬಲೆ ಕಟ್ಟಿದ, ಒಲೆಯಂತೆ ಬೇಯುತ್ತಿದ್ದ ರೂಮನ್ನು ಸುತ್ತಲೂ ನೋಡುತ್ತಿದ್ದಂತೆ ಬಾಗಿಲು ಹಾಕಿಕೊಂಡಿತು. ಕಗ್ಗತ್ತಲು ಕವಿಯಿತು.

ಧೂಳಿನ ನೆಲದ ಮೇಲೆ ಕಂಬಳಿಯನ್ನು ಹಾಸಿ ಕೃಷ್ಣಪ್ಪ ಕೂರಲು ನೋಡಿದ. ಆದರೆ ಸೆಖೆಯಿಂದಾಗಿ ಕಂಬಳಿಯ ಮೇಲೆ ಕೂರುವುದು ಅಸಹನೀಯವೆನ್ನಿಸಿತು. ಆದರೆ ಕಾಲು ಬತ್ತಿ ಬಂದದ್ದರಿಂದ ಕಂಬಳಿ ಮೇಲೇ ಕೂತು, ಶರಟನ್ನು ಬಿಚ್ಚಿ, ಮುಖ ಮೈಗಳನ್ನು ಒರೆಸಿಕೊಂಡ. ಸಿಗರೇಟ್‌ಸೇದಬೇಕೆನ್ನಿಸಿತು. ಜೇಬಿನಿಂದ ಎಲ್ಲವನ್ನೂ ಪೋಲೀಸನು ತೆಗೆದಿದ್ದರೂ ಏನಾದರೂ ಇರಬಹುದೆಂಬ ಭರವಸೆಯಿಂದ ಪ್ರತಿ ಜೇಬನ್ನೂ ಮತ್ತೆ ಮತ್ತೆ ಹುಡುಕಿದ.

ಅವನಿಗೆ ಬಂದ ಮೊದಲನೇ ಯೋಚನೆ : ನಾನೀಗ ನನ್ನ ಬುದ್ಧಿಯ ಸ್ಥಿಮಿತವನ್ನು ಕಳೆದುಕೊಳ್ಳಕೂಡದು. ತನ್ನನ್ನು ಗಕ್ಕನೆ ಕಬಳಿಸಿದ್ದ ಈ ಕ್ಷುದ್ರತೆಗೆ ಜಗ್ಗಕೂಡದರು. ಸಾಧ್ಯವಾದಷ್ಟು ವಿಶ್ರಾಂತಿ ತೆಗೆದುಕೊಂಡು ತನ್ನ ಶಕ್ತಿಯನ್ನೆಲ್ಲ ಮುಂದಿನದನ್ನು ಎದುರಿಸಲು ಕಾಯ್ದುಕೊಳ್ಳಬೇಕು. ಚುಚ್ಚುವ ಕಂಬಳಿಯನ್ನೆ ಹಾಸಿಕೊಂಡು ಕಾಲು ಚಾಚಿ ಮಲಗಿದ. ಮೈ ಬೆವರುತ್ತಿದ್ದುದರಿಂದ ಬಾಯಾರಿಕೆಯಾಯಿತು. ನೀರಿದ್ದ ಪಾತ್ರೆ ಕಣ್ಣಿಗೆ ಕಾಣಲಿಲ್ಲ. ಅದರಲ್ಲಿದ್ದ ನೀರನ್ನು ಕುಡಿಯುವುದನ್ನು ನೆನಸಿಕೊಂಡರೇ ಹೇಸಿಗೆಯಾಯಿತು.

ಕಣ್ಣು ಮುಚ್ಚಲು ನೋಡಿದ. ಚೂರು ಹಂದಿದರೂ ಧೂಳೆದ್ದು ಮೂಗು ಕಟ್ಟುವಂತಾಗುತ್ತಿತ್ತು. ಬಾಗಿಲ ಸಂದಿಯಿಂದಾದರೂ ಒಂದು ಬೆಳಕಿನ ರೇಖೆ ಕಂಡೀತೋ ಎಂದು ಆಶಿಸಿದರೆ ಅದು ಒಂದೇ ಹಲಗೆಯ, ಭದ್ರವಾಗಿ ಮುಚ್ಚುವ ಚಿಕ್ಕ ಬಾಗಿಲಾಗಿತ್ತು. ಇಲ್ಲಿ ಇದ್ದರೆ ಹಗಲೋ ರಾತ್ರೆಯೋ ತಿಳಿಯುವುದು ಕೂಡ ಸಾಧ್ಯವಿರಲಿಲ್ಲ. ಕೃಷ್ಣಪ್ಪ ಜೈಲು

ನೋಡುತ್ತಿರುವುದು ಇದೇ ಮೊದಲಲ್ಲಿ. ನಲವತ್ತೆರಡರಲ್ಲಿ, ಮತ್ತೆ ಮೈಸೂರಿನ ಬಿಡುಗಡೆಗೆ ನಲವತ್ತೇಳರಲ್ಲಿ ಅವನು ಜೈಲಿಗೆ ಹೋಗಿದ್ದ. ಆಗ ಜೈಲೆಂದರೆ ಗೆಳೆಯರೆಲ್ಲ ಒಟ್ಟು ಕೂಡಿ ಹಾಡುವ, ಅಡಿಗೆ ಮಾಡಿ ಊಟಮಾಡುವ ಜಾಗವಾಗಿತ್ತು. ಸಿಸ್ಟಮ್ಮನ್ನೆ ವಿರೋಧಿಸಿದಾಗ ಸರ್ಕಾರದ ವರ್ಗಲಕ್ಷಣ ಪತ್ತೆಯಾಗತ್ತೆ ಎಂದು ಅಣ್ಣಾಜಿ ಹೇಳಿದ್ದು ಈ ಕತ್ತಲಲ್ಲಿ ಕೃಷ್ಣಪ್ಪನಿಗೆ ನೆನಪಾಯಿತು. ಒಂದು ಪ್ರಾಣಿಯನ್ನು ಕೊಲ್ಲುವಂತೆ ಅಣ್ಣಾಜಿಯನ್ನು ಕೊಂದಿದ್ದರು. ಒಂದು ಹೆಣ್ಣಿನ ಜೊತೆ ಸಂಸಾರ ಹೂಡಿ ಪ್ರಾಯಶಃ ಶಾಂತವಾಗಿ ಬದುಕುವ ಕನಸು ಕಂಡಿದ್ದ ಅಣ್ಣಾಜಿ. ಕೃಷ್ಣಪ್ಪ ಇದನ್ನು ಯೋಚಿಸುತ್ತಿದ್ದಂತೆ ಅವನ ಮೈ ಕೋಪದಿಂದ ಬಿಸಿಯಾಯಿತು. ಕಂಬಳಿಯ ಮೇಲೆ ಮಲಗಿದ ತನ್ನ ಕಪ್ಪು ದೇಹ ಒಂದು ಭೀಕರ ಘಟಸರ್ಪವಾಗಿ ಅಣ್ಣಾಜಿಯನ್ನು ಕೊಂದವರನ್ನು ತನ್ನ ವಿಷದಲ್ಲಿ ಕಡಿದು ಸಾಯಿಸುವಂತಾಗಿದ್ದರೆ ಎಂದು ಕನಸು ಕಾಣುತ್ತ ಮಲಗಿದ್ದಾಗ, ತನ್ನ ಮೈಯನ್ನೆಲ್ಲ ನೂರಾರು ಕಡೆಗಳಲ್ಲಿ ಕಡಿದಂತಾಗಿ ಎದ್ದು ಕೂತ. ಸೂಜಿಯಂತೆ ಮೈಯನ್ನೆಲ್ಲ ಚುಚ್ಚುತ್ತಿದ್ದವು ತಗಣೆಗಳೆಂಬುದು ಅವನು ರಪ್ಪೆಂದು ಕೈಗಳನ್ನು ಉಜ್ಜಿಕೊಳ್ಳುವಾಗ ಸಿಕ್ಕಿಬಿದ್ದು ಪಿಚಕ್ಕಾದದ್ದರ ದುರ್ನಾತದಿಂದ ತಿಳಿಯಿತು. ಎದ್ದು ನಿಂತು ಮೈಯನ್ನೆಲ್ಲ ಉಜ್ಜಿಕೊಂಡ. ಕತ್ತಿನ ಮೇಲೆಲ್ಲೊ, ಕೈಗೆ ನಿಲುಕದ ಬೆನ್ನಿನ ಮೇಲೆಲ್ಲೋ ತಗಣೆಗಳು ಓಡಾಡುತ್ತಿದ್ದವು. ಬಿಚ್ಚಿದ ಶರಟಿನಿಂದ ಮೈಯನ್ನೆಲ್ಲ ಉಜ್ಜಿಕೊಳ್ಳುತ್ತ ನಿಂತ.

ಹೀಗೇ ಎಷ್ಟು ಹೊತ್ತಾಯಿತೊ. ಮೂಲೆಯಿಂದ ಚರ ಚರ ಶಬ್ದ ಕೇಳಿದಂತಾಯ್ತು. ತಟ್ಟೆಯ ಶಬ್ದವಿರಬೇಕು. ಅದನ್ನು ಪ್ರಾಯಶಃ ಒಂದೆರಡು ಇಲಿಗಳು ತಮ್ಮ ಮುಂಗಾಲುಗಳಿಂದ ಒತ್ತಿ ಕೆರೆಯುತ್ತಿವೆ. ಹೌದು ಚಿಲಿ ಚಿಲಿ ಶಬ್ದ ಬೇರೆ ಬರುತ್ತಿದೆ. ಹಿಂದೆ ಇಲ್ಲಿದ್ದ ಖೈದಿ ಬಿಟ್ಟ ಆಹಾರವಿರಬೇಕು – ಅದನ್ನು ತಿಂದು ಮುಗಿಸಿ ತಟ್ಟೆಯ ತಳವನ್ನು ಕಡಿಯುತ್ತಿವೆ – ಅಂಟಿಕೊಂಡ ಅಗಳುಗಳಿಗಾಗಿ. ಶಬ್ದ ಬರುತ್ತಿದ್ದ ದಿಕ್ಕನ್ನೆ ಏಕಾಗ್ರವಾಗಿ ನೋಡುತ್ತ ನಿಂತ. ಮೈಮೇಲಿನ ತಗಣೆಗಳೆಲ್ಲ. ಉದುರಿದ್ದವು. ಕಾಲಿನಿಂದ ಅವು ಮೇಲಕ್ಕೆ ಹತ್ತದಂತೆ ಉಜ್ಜಿಕೊಳ್ಳುತ್ತ ಕೃಷ್ಣಪ್ಪ ನಿಂತಿದ್ದ. ಚೂರು ಬೆಳಕಿದ್ದರೂ ಇಲಿಯ ಕಣ್ಣುಗಳು ಹೊಳೆಯಬಹುದಿತ್ತು. ಈ ಕೋಣೆಯಲ್ಲಿ ಈ ಇಲಿಗಳ ದೋರಿರಬಹುದು. ಕೃಷ್ಣಪ್ಪ ತಾನು ಓದಿದ್ದ ಕಥೆಗಳನ್ನೆಲ್ಲ ಹುಡುಕತೊಡಗಿದ – ಯಾವುದರಲ್ಲಿ ಹೀಗೊಬ್ಬ ಕೋಣೆಯಲ್ಲಿ ಹಗಲುರಾತ್ರೆಗಳನ್ನು ಕಳೆಯಬೇಕಾಗಿ ಬಂದ ಕಥೆಯಿದೆ ಎಂದು ಕೌಂಟ್‌ಆಫ್‌ಮಾಂಟಿಕ್ರಿಸ್ಟೋ ಕಥೆಯಲ್ಲಿ ನಾಯಕ ತನ್ನ ಕೋಣೆಯಲ್ಲೊಂದು ತೂತು ಕೊರೆದು ಅದನ್ನು ಕ್ರಮೇಣ ದೊಡ್ಡ ಮಾಡುತ್ತ ತಪ್ಪಿಸಿಕೊಂಡದ್ದು ನೆನಪಾಯಿತು. ಅವನು ಯಾವುದರಲ್ಲಿ ತೂತು ಮಾಡಿದ, ಹೇಗದನ್ನು ಕಾವಲುಗಾರರಿಂದ ಮುಚ್ಚಿಟ್ಟ ಇತ್ಯಾದಿ ನೆನಪು ಮಾಡಿಕೊಳ್ಳುತ್ತ ನಿಂತ. ಇಲಿಯ ದೋರು ಇದ್ದಲ್ಲಿ ಅದನ್ನೇ ಅಗಲ ಮಾಡುತ್ತ ಹೋಗುವುದು. ಅದಕ್ಕೆ ಬೇಕಾದ ಆಯುಧ ? ತಟ್ಟೆ ಸ್ಟೀಲಿನದು ಇರಬಹುದೆ ? ಇರಲಾರದು. ಇದ್ದಲ್ಲಿ ಅದನ್ನು ಜಜ್ಜಿ ಅಗೆಯುವ ಸಾಧನ ಮಾಡಬಹುದು.

ಕೃಷ್ಣಪ್ಪ ಸದ್ದಾಗುತ್ತಿದ್ದ ಮೂಲೆಗೆ ನಿಧಾನವಾಗಿ ನಡೆದ. ಕಾಲಿಗೆ ಮೆತ್ತಗಿದ್ದುದ್ದು ಸಿಕ್ಕಿ ನುಣುಚಿಕೊಂಡಂತಾಯ್ತು. ಮೈಯೆಲ್ಲ ಜುಮ್ಮೆಂದಿತು. ಇಲಿ ಎಂದು ಹೇಸಿಗೆಯಿಂದ ನಡುಗುತ್ತ ಗಾಬರಿಯಲ್ಲಿ ತಟ್ಟೆಯ ಮೇಲೆ ಕಾಲಿಟ್ಟದ್ದರಿಂದ ಅದು ಮಗುಚಿಕೊಂಡಿತು. ತಟ್ಟೆಯನ್ನು ಹುಡುಕಿ ಎತ್ತಿದ. ಅದು ನೂರು ಕಡೆ ನೆಗ್ಗಾಗಿ ಅಂಚುಗಳಲ್ಲಿ ಹರಿದುಕೊಂಡಿದ್ದ ಅಲ್ಯೂಮಿನಿಯಂ ತಟ್ಟೆಯಾಗಿತ್ತು. ಅದರಿಂದ ಹಳಸಿದ ನಾತ ಮೂಗಿಗೆ ಹೊಡೆದದ್ದರಿಂದ ಕೈಬಿಟ್ಟ. ಧೂಳಿನ ಮೇಲೆ ಅದು ತೊಪ್ಪೆಂದು ಬಿದ್ದಿತು.

ಹಿಂದೊಮ್ಮೆ ಆದಂತೆ ಬುದ್ಧಿಭ್ರಮಣೆಯಾಗದಂತೆ ಗಟ್ಟಿಯಾಗಿ ಉಳಿಯಬೇಕು ಎಂದುಕೊಂಡು ತಾನು ಇಲ್ಲಿಂದ ತಪ್ಪಿಸಿಕೊಳ್ಳಬಹುದಾದ ಉಪಾಯಗಳನ್ನು ಮತ್ತೆ ಯೋಚಿಸಲು ಪ್ರಾರಂಭಿಸಿದ. ನೂರಾರು ಉಪಾಯಗಳನ್ನು ಹುಡುಕುತ್ತ ಅವುಗಳ ಇತಿಮಿತಿಗಳನ್ನು ಕುರಿತು ಚಿಂತಿಸಲು ಶುರು ಮಾಡಿದ.

ಬಾಗಿಲು ಕಿರ್ರೆಂದು ತೆಗೆಯುವ ಶಬ್ದ ಕೇಳಿದಂತಾಗಿ ಬಾಗಿಲ ಕಡೆ ತಿರುಗಿದ. ಅರ್ಧ ತೆಗೆದ ಬಾಗಿಲಿಂದ ಬೆಳಕು ಬರಲಿಲ್ಲ – ಅಂದರೆ ಕತ್ತಲಾಗಿದೆ ಎಂದು ಅರ್ಥ. ರಾತ್ರೆಯಾದ್ದರಿಂದ ಧಗೆ ಕಡಿಮೆಯಾಗಿರಬಹುದು. ಬಾಗಿಲಿಂದ ಸ್ವಲ್ಪವಾದರೂ ಒಳಬಂದ ಗಾಳಿಯನ್ನು ಆಸೆಯಿಂದ ಕೃಷ್ಣಪ್ಪ ನಿರೀಕ್ಷಿಸಿದ.

ಬಾಗಿಲ ಹೊರನಿಂತವನು ಉರ್ದುವಿನಲ್ಲಿ ಏನೋ ಹೇಳಿದ. ಕೃಷ್ಣಪ್ಪನಿಗೆ ಅದು ಅರ್ಥವಾಗಲಿಲ್ಲ. ಸುವರ್ ಎಂದು ಅವನು ಬೈದದ್ದು ಮಾತ್ರ ಅರ್ಥವಾಯಿತು. ದಪ್ಪ ಮೋರೆಯ ಅಧಿಕಾರಿಯಲ್ಲ. ಯಾರೋ ಕೀರಲು ಧ್ವನಿಯ ಪೋಲೀಸ್‌ಪೇದೆ. ಬೆಂಕಿ ಕಡ್ಡಿ ಗೀರಿ ಅವನು ರೂಮಿನಲ್ಲಿ ಏನೋ ಹುಡುಕುತ್ತ ಬೈಯುತ್ತಲೇ ನಿಂತ. ಸರಸರನೆ ಹೋಗಿ ತಟ್ಟೆಯನ್ನು ಎತ್ತಿ ಅದನ್ನು ಕೃಷ್ಣಪ್ಪನ ಮುಖಕ್ಕೆ ಬೈಯುತ್ತಲೇ ನಿಂತ. ಸರಸರನೆ ಹೋಗಿ ತಟ್ಟೆಯನ್ನು ಎತ್ತಿ ಅದನ್ನು ಕೃಷ್ಣಪ್ಪನ ಮುಖಕ್ಕೆ ತಿವಿಯುತ್ತ ಮತ್ತಷ್ಟು ಬೈದ. ಪ್ರಾಯಶಃ ತಟ್ಟೆಯನ್ನು ಎತ್ತಿಕೊಡಲು ಅವನು ಕೇಳಿರಬೇಕು. ಈ ಪೇದೆ ತೆಳ್ಳಗಿದ್ದ. ಒಣಗಿದ ಚೂಪುಮುಖದಲ್ಲಿ ದೊಡ್ಡ ಮೀಸೆಗಳನ್ನು ಬಿಟ್ಟದ್ದು ಅವನು ಗೀರಿದ ಬೆಳಕಿನಲ್ಲಿ ಕಂಡಿತು.

ಅವನು ಬಾಗಿಲು ಹಾಕಿ ಹೊರಟು ಹೋದ. ಸ್ವಲ್ಪ ಹೊತ್ತಿನ ಮೇಲೆ ಬಾಗಿಲು ತೆಗೆದು 'ಏಯ್' ಎಂದ, ಕೃಷ್ಣಪ್ಪ ಬಾಗಿಲಿನ ಕಡೆ ಹೋದ. ಅವನು ತಟ್ಟೆಯನ್ನೊಡ್ಡಿ ನಿಂತಿದ್ದ. ಅದೇ ತಟ್ಟೆ. 'ನನಗೆ ಊಟ ಬೇಡ'ವೆಂದು ಕೃಷ್ಣಪ್ಪ ಇಂಗ್ಲಿಷಲ್ಲಿ ಹೇಳಿದ. ಪೇದೆ ತಟ್ಟೆಯನ್ನು ರೂಮಿನೊಳಗೆ ಇಟ್ಟು ಬಾಗಿಲು ಹಾಕಿಕೊಂಡ. ಉರ್ದುವಿನಲ್ಲಿ ಏನೋ ಹೇಳುತ್ತ ಹೊರಟುಹೋದ.

ತಟ್ಟೆಯನ್ನು ಹೊರಗೆಸೆಯುವಂತೆಯೂ ಇಲ್ಲ. ಅದರಲ್ಲಿ ಸುರಿದ ಅನ್ನ ಸಾಂಬಾರಿನ ವಾಸನೆಯಿಂದ ಕೃಷ್ಣಪ್ಪನಿಗೆ ವಾಂತಿ ಬರುವಂತಾಯಿತು. ಬಾಯಿ ಮೂಗುಗಳನ್ನು ಮುಚ್ಚಿಕೊಂಡು ಏನು ಮಾಡುವುದು ತಿಳಿಯದೆ ನಿಂತ. ಈ ಆಹಾರಕ್ಕೆ ಇಲಿಗಳು ನುಗ್ಗಿ ಗಲಾಟೆ ಮಾಡುತ್ತವೆ. ಹೇಸಿಗೆಯಿಂದ ಅದನ್ನು ಎತ್ತಿ ಹಿಂದಿನಂತೆಯೇ ಮೂಲೆಯಲ್ಲಿ ಇಟ್ಟು ಮತ್ತೆ ಕೋಣೆಯ ನಡುವೆ ನಿಂತ, ಹೆಜ್ಜೆಯ ಮುಂದು ಇನ್ನೊಂದು ಹೆಜ್ಜೆಯನ್ನು ಜಾಗರೂಕವಾಗಿ ಇಡುತ್ತ ರೂಮಿನ ಗೋಡೆಯನ್ನು ಮುಟ್ಟಿ ಬಳಚುತ್ತ ನಿಧಾನವಾಗಿ ನಡೆದ.

ಪ್ಲಾಸ್ಟರ್ ಅಲ್ಲಿ ಇಲ್ಲಿ ಬಿದ್ದು ತರಿ ತರಿಯಾದ ಗೋಡೆ. ತಗಣೆಗಳೆಲ್ಲ ಈ ಸಂದಿಗಳಲ್ಲಿ ಬೀಡು ಬಿಟ್ಟಿರಬಹುದು. ಬಳಚುತ್ತ ಹೋದಾಗ ನೀರು ಮತ್ತು ಕಕ್ಕಸಿನ ಬೋಗಣಿಗಳು ಸಿಕ್ಕವು. ನೀರಿನಿಂದ ಮುಖವನ್ನು ತೊಳೆದು ಮುಂದೆ ಹೋದ, ರೂಮಿನ ಇನ್ನೊಂದು ಕೊನೆಯಲ್ಲಿ ಸಿಮೆಂಟ್‌ನಲ್ಲಿ ಕಟ್ಟಿದ ಒಂದು ದಿಣ್ಣೆಯಿತ್ತು. ಪ್ರಾಯಶಃ ಮಲಗಲೆಂದು ಈ ದಿಣ್ಣೆ. ಕಂಬಳಿಯಿಂದ ಅದನ್ನು ಒರೆಸಿದ. ಪಾತ್ರೆಯಲ್ಲಿ ಉಳಿದಿದ್ದ ನೀರಿನಿಂದ ಅದರ ಸಿಮೆಂಟಿನ ಮೇಲ್ಭಾಗವನ್ನು ತೊಳೆದು ಅದರ ಮೇಲೆ ಕೂತ. ಮಲಗಲು ತಗಣೆಯ ಭಯ. ಮೂಲೆಯಲ್ಲಿ ಹಲವು ಇಲಿಗಳು ತಟ್ಟೆಗೆ ಮುತ್ತಿದ್ದವು.

ಹೀಗೆ ಕಾಲನ್ನು ಇಳಿಬಿಟ್ಟು ಕೂಡಲು ಇರುವುದರಲ್ಲಿ ಸ್ವಚ್ಛವಾದೊಂದು ಜಾಗ ಸಿಕ್ಕಿತೆಂದೇ ತನಗೆ ಸಮಾಧಾನವಾದ್ದನ್ನು ಗಮನಿಸಿ ಅವನಿಗೆ ಆಶ್ಚರ್ಯವಾಯಿತು. ಹೇಗೆ ಈ ದೇಹ ಒಗ್ಗಿಕೊಳ್ಳುತ್ತದೆ ! ಹಾಗೇ ಜೊಂಪು ಹತ್ತುತ್ತಿದ್ದಾಗ ಹೊರಗೆ ಗದ್ದಲವಾದಂತೆ ಕೇಳಿಸಿತು.

ಬಳೆಯ ಶಬ್ದ, ಜೊತೆಗೆ ಬೂಟಿನ ಶಬ್ದ. ಗಂಡಸು ನಗುತ್ತ ಏನೋ ಉರ್ದುವಿನಲ್ಲಿ ಹಾಸ್ಯ ಮಾಡುತ್ತಾನೆ. ಸಿನಿಮಾ ಅನ್ನು ಶಬ್ದ ಕೇಳಿಸುತ್ತದೆ. ಮೋಜಿನಿಂದ ಗಂಡಸು ಮಾತಾಡುತ್ತಿದ್ದಾನೆ. ದಪ್ಪ ಮುಖದ ಅಧಿಕಾರಿಯ ಮಾತಿನಂತೆ ಕೇಳಿಸುತ್ತದೆ. ಅವನಾದರೆ, ಅವನಿಗೆ ಇಂಗ್ಲಿಷ್ ಬರುವುದರಿಂದ ತನ್ನ ಸಿಗರೇಟ್‌ಪ್ಯಾಕನ್ನು ಕೊಡುವಂತೆ ಕೇಳಬಹುದು. ಕೃಷ್ಣಪ್ಪ ಆಲಿಸಿದ. ಯಾರೋ ತಪ್ಪಿಸಿಕೊಂಡು ಓಡಾಡುವ ಸದ್ದು. ಗಂಡಸು ಏನೋ ಕೂಗಿ ಹೇಳುತ್ತಾನೆ. ಹೆಂಗಸು ಅಳುತ್ತಿದ್ದಾಳೆ. ಈಗವಳು ತೆಲುಗಿನಲ್ಲಿ ಮಾತಾಡುತ್ತಿರುವುದರಿಂದ ಕೃಷ್ಣಪ್ಪನಿಗೆ ಅಲ್ಪಸ್ವಲ್ಪ ಅರ್ಥವಾಗುತ್ತದೆ. ತಾನು ನಿಜವಾಗಿಯೂ ಸಿನಿಮಾಕ್ಕೆ ಹೋಗಿದ್ದುದಾಗಿಯೂ ಜೊತೆಗೆ ಇದ್ದವನು ತನ್ನನ್ನು ನಿಜವಾಗಿಯೂ ಮುಂದಿನ ತಿಂಗಳು ಮದುವೆಯಾಗುವವನೆಂದೂ, ಅವನನ್ನು ಇನ್ನೊಬ್ಬ ಪೋಲೀಸ್ಎಲ್ಲಿಗೆ ಕರೆದುಕೊಂಡು ಹೋದನೆಂದೂ, ಅವನ್ನನ್ನು ಇಲ್ಲಿಗೆ ಕರೆದು ತನ್ನಿ ಕರೆದು ತನ್ನಿ ಎಂದೂ ಅವಳು ಅಳುತ್ತ ಅಂಗಲಾಚುತ್ತಿದ್ದಳು. ಗಂಡಸು ನಗುತ್ತ ಏನೋ ಹೇಳಿದ ಉರ್ದುವಿನಲ್ಲಿ. ಕ್ಷಣದ ಮೌನದ ನಂತರ ಹೆಂಗಸು ತೆಲುಗಿನಲ್ಲಿ ಬಿಡಿ ಬಿಡಿ ನನ್ನ ಬಿಡಿ ಎಂದು ಕಿರುಚತೊಡಗಿದಳು. ಕೃಷ್ಣಪ್ಪ ದಿನ್ನೆಯಿಂದೆದ್ದು ಬಾಗಿಲ ಹತ್ತಿರ ನಿಂತು ದಪದಪನೆ ಬಾಗಿಲು ಬಡಿಯುತ್ತ.

'ನೀವೇನು ರಾಕ್ಷಸರ ? ಮನುಷ್ಯರಲ್ಲವಾ ? – ಬಿಡಿ ಅವಳನ್ನ' ಎಂದು ಇಂಗ್ಲಿಷಿನಲ್ಲಿ ಕೂಗತೊಡಗಿದ. ಹೆಣ್ಣಿನ ರೋದನ ನಿಂತು ಗಂಡು ಗಟ್ಟಿಯಾಗಿ ಉಸಿರಾಡುವುದು ಕೇಳುತ್ತಿದ್ದಂತೆ ಕೃಷ್ಣಪ್ಪ ಜೋರಾಗಿ ಬಾಗಿಲನ್ನು ಒದೆಯುತ್ತ 'ಬಾಗಿಲು ತೆಗೆಯಿರಿ – ತೆಗೆಯಿರಿ' ಎಂದು ಕಿರುಚಿದ. ಕಿರುಚಿವಿಕೆ ತೀವ್ರವಾಗುತ್ತ ಹೋದಂತೆ ತನ್ನ ಅಬ್ಬರ ತನ್ನ ಕಿವಿಯನ್ನೆ ಅಡರಿ ಕಾಲುಗಳು ನಿರ್ಬಲವಾಗಿ ಕುಸಿದು ಕೂತ. ಕ್ರೋಧ ತಿರಸ್ಕಾರಗಳು ಕೂಡ ಮನುಷ್ಯನೆದುರು ಫಲಪ್ರದವಾಗುತ್ತಲೇ ಹೊರತು ಇಂಥ ಕಡೆಯಲ್ಲವೆಂದು ತಿಳಿದು ಚಕಿತನಾದ. ಇದು ಅವನಿಗೆ ಹೊಸ ಅನುಭವ. ಇಂಥವನ್ನು ಆ ಬೈರಾಗಿಯಾಗಲೀ, ಪ್ರತಿ ಹಿಂಸೆಗೆ ಹಿಂಜರಿಯಬಾರದೆಂಬ ತತ್ತ್ವದ ಅಣ್ಣಾಜಿಯಾಗಲೀ, ಗುಪ್ತ ಸಾಧನೆಯಿಂದ ಮುಕ್ತಿಗೆ ಸನ್ನಾಹ ಮಾಡುತ್ತಲೇ ಇರುವ ಮಹೇಶ್ವರಯ್ಯನಾಗಲೀ ಪ್ರಾಯಃ ಕಂಡಿರಲಾರರು. ಇನ್ನು ಹಗಲಾಗುವುದೇ ಇಲ್ಲ ಎನ್ನಿಸಿತು. ಅಥವಾ ಆದರೂ ತನಗೆ ತಿಳಿಯುವುದಿಲ್ಲ. ಇಲಿಗಳು ಖಾಲಿ ತಟ್ಟೆಯನ್ನು ಕೆರೆಯುತ್ತ ಸದ್ದು ಮಾಡತೊಡಗಿದ್ದವು. ಹೊತ್ತಿನ ಪರಿವೆ ಹೊರಟುಹೋಯಿತು.

ಪೇದೆಯೊಬ್ಬ ಬಾಗಿಲು ತೆರೆದ. ಬೆಳಕಿಗೆ ಕೃಷ್ಣಪ್ಪನ ಕಣ್ಣುಗಳು ಒಗ್ಗಲು ಪ್ರಯತ್ನಿಸುತ್ತಿದ್ದಂತೆಯೇ ಇಬ್ಬರು ಪೇದೆಯರು ನುಗ್ಗಿ, ಅವನ ಕಣ್ಣಿಗೆ ಬಟ್ಟೆ ಕಟ್ಟಿ, ಅವನ ಕೈಯನ್ನು ಎಳೆಯುತ್ತ 'ನಡಿ' ಎಂದರು ಉರ್ದುವಿನಲ್ಲಿ. ಕೃಷ್ಣಪ್ಪ ಅವರು ಎಳೆಯುತ್ತಿದ್ದ ದಿಕ್ಕಿನಲ್ಲಿ ನಡೆದ ಒಂದು ಕುರ್ಚಿ. ಇದರಿಂದ ಭರವಸೆ ಹುಟ್ಟುತ್ತಿರಲಾಗಿ ಅವನ ಕಣ್ಣಿಗೆ ಕಟ್ಟಿದ ಪಟ್ಟಿಯನ್ನು ಬಿಚ್ಚಲಾಯಿತು.

ಯಾವುದೋ ಲೋಕದಿಂದ ಇನ್ನೆಲ್ಲಿಗೋ ಬಂದವನಂತೆ ಕೃಷ್ಣಪ್ಪ ತನ್ನೆದುರಿಗಿದ್ದವರನ್ನು ಆಶ್ಚರ್ಯಪಡುತ್ತ ನೋಡಿದ. ಸಾಲಾಗಿ ಮೇಜಿನ ಆಚೆ ಮೂವರು ಕೂತಿದ್ದರು. ನುಣ್ಣನೆಯ ಕ್ಷೌರ ಮಾಡಿದ ಮುಖಗಳು. ತಲೆಯ ಮೇಲೆ ಪಿಕ್ಯಾಪ್, ಗರಿ

ಗರಿ ಇಸ್ತ್ರಿ ಮಾಡಿದ ಖಾಕಿ ಸಮವಸ್ತ್ರ. ಮೂವರು ಹೂಗಳ ಚಿತ್ರವಿದ್ದ ಕಪ್‌ಸಾಸರುಗಳಲ್ಲಿ ಟೀ ಕುಡಿಯುತ್ತಿದ್ದರು. ಮೇಜಿನ ಮೇಲೆ ನೀಲಿ ಉಣ್ಣೆಯ ಬಟ್ಟೆ ಹೊದಿಸಿ ಅದರ ಮೇಲೆ ಗಾಜನ್ನಿಡಲಾಗಿತ್ತು. ಮೂವರಲ್ಲಿ ಮಧ್ಯ ಕೂತವನು ಸುಸಂಸ್ಕೃತನಾದ ವಿದ್ಯಾವಂತನಂತೆ ಕಾಣುತ್ತಿದ್ದ – ಅವನು ಹಾಕಿದ ಕನ್ನಡಕದಿಂದಾಗಿ, ಎಡಕ್ಕೆ ಕೂತವನು ಒಳ್ಳೆಯ ಆಟಗಾರನಂತಿದ್ದ. ಬಲಕ್ಕಿದ್ದವನ ಮೀಸೆ ಬೆಳ್ಳಗಾಗಿತ್ತು; ಹಣೆಯ ಮಧ್ಯೆ ಸಣ್ಣ ಕುಂಕುಮವಿತ್ತು.

ಮಧ್ಯ ಕೂತವನು ಇಂಗ್ಲಿಷಿನಲ್ಲಿ ತುಂಬ ಸೌಜನ್ಯದಿಂದ

‘ನಿಮಗೆ ಟೀ ತರಿಸಲೆ?’ ಎಂದ.

ಕೃಷ್ಣಪ್ಪ ಈ ಮೂವರ ಬೆನ್ನ ಹಿಂದೆ ತೂಗುಹಾಕಿದ್ದ ನೆಹರೂ ಮತ್ತು ರಾಜೇಂದ್ರಪ್ರಸಾದರ ಫೋಟೋಗಳನ್ನು ಗಮನಿಸುತ್ತ,

‘ಬೇಡ, ನೀವು ನನ್ನನ್ನು ಇಲ್ಲಿ ಅನ್ಯಾಯವಾಗಿ ಸೆರೆ ಇಟ್ಟಿದ್ದೀರಿ. ಇದನ್ನು ಪ್ರತಿಭಟಿಸಿ ನಾನು ಉಪವಾಸ ಮಾಡುತ್ತಿದ್ದೇನೆ’ ಎಂದ. ಇವರು ಮನುಷ್ಯರೆಂಬ ಆಸೆ ಹುಟ್ಟಿ ಪ್ರತಿಭಟನೆ ಮತ್ತೆ ಅವನಲ್ಲಿ ಅಂಕುರಿಸಿತು.

‘ನೀವು ನಿರಪರಾಧಿ ಎಂದು ಸಾಬೀತಾದರೆ ಒಂದೇ ಒಂದು ನಿಮಿಷ ನಿಮ್ಮನ್ನಿಲ್ಲಿ ನಾವು ಇಟ್ಟುಕೊಳ್ಳುವುದಿಲ್ಲ. ದಯಮಾಡಿ ನಿಮಗೆ ಪರಿಚಯದವನಾಗಿದ್ದ ಅಣ್ಣಾಜಿ ಅಸ್ತ್ರಗಳನ್ನೆಲ್ಲ ಎಲ್ಲಿ ಬಚ್ಚಿಟ್ಟಿದ್ದಾನೆ ಹೇಳಿ.’

‘ನನಗದೇನು ಗೊತ್ತಿಲ್ಲ’

‘ನೀವು ಮುಗ್ಧರಂತೆ ಕಾಣುತ್ತೀರಿ. ನಿಮ್ಮಂಥ ಆದರ್ಶವಾದಿಗಳನ್ನೆ ಹಿಡಿದು ಅಣ್ಣಾಜಿಯಂಥವರು ದೇಶಕ್ಕೆ ಘಾತಕವಾದ ಕೆಲಸ ಮಾಡುವುದು. ಈಗ ನೀವು ನಿಜ ಹೇಳಿದರೆ ನಾವು ನಿಮ್ಮನ್ನು ಬಿಟ್ಟುಬಿಡುತ್ತೇವೆ. ನೀವು ಓದಿ ಬೆಳೆದು ಮುಂದೆ ಬರಬೇಕೆಂಬುದೇ ನಮ್ಮ ಆಸೆ. ಈಗ ನಾನು ನೋಡಿ ಪೊಲಿಟಿಕಲ್ ಸೈನ್ಸ್‌ಎಂ. ಎ. ಮುಗಿಸಿ ಈ ಕೆಲಸಕ್ಕೆ ಬಂದದ್ದು, ನನ್ನ ಎಡಕ್ಕಿರುವ ಈ ಜಂಟಲ್‌ಮನ್‌ಕನ್ನಡಿಗರು. ವಾರಂಗಲ್‌ಕನ್ನಡಿಗರಿಗೆ ಹಿಸ್ಟಾರಿಕಲ್ಲಿ ಇಂಪಾರ್ಟೆಂಟ್ – ಗೊತ್ತಿದೆಯೆ – ರಾಮಪ್ಪ ಟೆಂಪಲ್ ವಿಷಯ ? ಈ ಇನ್ನೊಬ್ಬರು ಫೇಮಸ್‌ಕ್ರಿಕೆಟಿಯರ್ ಆಫ್‌ದಿಸ್‌ರೀಜನ್.’

ಈ ಮಾತುಗಳು ಕೃಷ್ಣಪ್ಪನಿಗೆ ಅತ್ಯಂತ ಹಿತವಾಗಿದ್ದವು. ಅವನು ರಾಮಪ್ಪ ದೇವಸ್ಥಾನದ ವಿಷಯವನ್ನು ಮಧ್ಯೆ ನುಗಿಸಿದ ರೀತಿಯಂತೂ ನಾನೂ ನಿನ್ನಂತೆ ಮನುಷ್ಯನೆಂದು ಗುಪ್ತ ಸನ್ನೆಯಲ್ಲಿ ಹೇಳಿದಂತಿತ್ತು. ಕೃಷ್ಣಪ್ಪ ಹೇಳಿದ:

‘ಅಣ್ಣಾಜಿಯನ್ನು ನಾನು ಪ್ರೀತಿಸುತ್ತಿದ್ದೆ. ಅವನನ್ನು ನಿಮ್ಮವರು ಕೊಂದಿದ್ದಾರೆ. ಅಣ್ಣಾಜಿ ಈ ನಾಗರೀಕತೆಯನ್ನು ಇನ್ನಷ್ಟು ಉಜ್ವಲಗೊಳಿಸುವ ಉದ್ದೇಶ ಇದ್ದವ. . . . .’ ಆಡಿದ ಮೇಲೆ ಇದರ ಸೌಜನ್ಯಕ್ಕೆ ಮರುಳಾಗಿ ನಾನು ಯಾಕೆ ಅಂತರಂಗದ ಮಾತನ್ನಾಡಿದೆನೆಂದು ಅವನಿಗೆ ಕಸಿವಿಸಿಯಾಯ್ತು.

‘ಅದು ನಿಮ್ಮ ಅಭಿಪ್ರಾಯವಾಯ್ತು ಮಿಸ್ಟರ್ ಗೌಡ’ ಕ್ರಿಕೆಟಿಯರ್ ಹೇಳಿದ.

ಕುಂಕುಮ ಹಚ್ಚಿದವನು ಆಕಳಿಸುತ್ತ ಇದೆಲ್ಲ ಅಂಥ ಮಹತ್ವದ ವಿಷಯವಲ್ಲ ರೂಟೀನ್‌ಅನ್ನುವಂತೆ ಆಪ್ತವಾಗಿ ಕನ್ನಡದಲ್ಲಿ ಹೇಳಿದ:

‘ನಾನು ಗುಲ್ಬರ್ಗ ಕಡೇವನು. ನೀವು ? ಶಿಮೊಗ್ಗ ಕಡೆಯವರ ? ಈ ನನ್ನ ಕಲೀಗರು ತುಂಬ ಒಳ್ಳೆಯವರು, ಅಣ್ಣಾಜಿಯ ಕಾಂಟ್ಯಾಕ್ಟ್ಸ್‌ಯಾರ್ಯಾರು ಇದ್ದರು, ಯಾರಿಗವರು ಕಾಗದ ಗೀಗದ ಬರೀತಿದ್ರು ಹೇಳಿಬಿಡಿ – ನಿಮ್ಮನ್ನ ಬಿಟ್ಟುಬಿಡ್ತಾರ್ರೀ’

ಅವನು ರಾಗವಾಗಿ ಮಾತು ಕೊನೆಮಾಡಿದ್ದ. ಕೃಷ್ಣಪ್ಪ ಮಾತಾಡದೆ ಸುಮ್ಮನಿರುವುದನ್ನು ಕಂಡು ಮಧ್ಯದವನು ಅಂದ – ತನ್ನ ಸುಶಿಕ್ಷಿತ ಇಂಗ್ಲಿಷಲಿ;

‘ಯಂಗ್‌ಮ್ಯಾನ್, ನಿಮ್ಮ ಹಿತಕ್ಕಾಗಿಯೇ ಹೇಳ್ತಿರೋದು. ಅವನು ಯಾರ್ಯಾರಿಗೆ ಕಾಗದ ಬರೀತ ಇದ್ದ ತಿಳಿಸಿಬಿಡಿಸಿ, ಅವನಿಗೆ ವಿಮೆನ್‌ಕಾಂಟ್ಯಾಕ್ಟ್ಸ್ ಇದ್ದರೂಂತ ನಮಗೆ ಗೊತ್ತು. . . . .’

‘ಇಲ್ಲ – ನನಗೆ ಗೊತ್ತಿಲ್ಲ’

‘ಸುಮ್ಮನ್ನೇ ನೀವು ಸಫರಿಂಗನ್ನ ಪ್ರೋಲಾಂಗ್‌ಮಾಡಿಕೋತೀರಿ. ಇಲ್ಲಿ ಬಾಯಿ ಬಿಡದೇ ಬಚವಾಗಿ ಹೋದವರು ಇಲ್ಲ. ನಮ್ಮ ಸ್ವಾರ್ಥಕ್ಕಾಗಿಯಲ್ಲ ನಾವು ನಿಮ್ಮನ್ನು ಕೇಳ್ತಿರೋದು. ಇದು ದೇಶದ ಕೆಲಸ. ಈ ದೇಶದ ಸುಭದ್ರತೇನ್ನ ಕಾಯೋ ಕೆಲಸ. ನೆಹರು ಏನು ಹೇಳಿದಾರೆ ?’

ಮಧ್ಯದವನು ಭಾಷಣ ಘನವಾದ ಧಾಟಿಯಲ್ಲಿ ಮಾತಾಡುವುದು ಕೇಳಿ ಕೃಷ್ಣಪ್ಪನಿಗೆ ಭರವಸೆ ಇನ್ನಷ್ಟು ಬೆಳೆಯಿತು. ಅವನನ್ನು ಕೋಪದಲ್ಲಿ ನೋಡುತ್ತ ವ್ಯಂಗ್ಯವಾಗಿ ಹೇಳಿದ:

‘ನಿಮ್ಮ ಪೋಲೀಸರು ನಿನ್ನೆ ರಾತ್ರೆ ನನ್ನ ರೂಮಿನ ಹೊರಗೆ ಏನು ಮಾಡಿದರು ಗೊತ್ತ ? ಗೊತ್ತ ?’

ಕೃಷ್ಣಪ್ಪನ ಗಂಟಲು ಬಿಗಿದು ಬಂತು. ಎದುರಿಗಿದ್ದ ಮೂವರಿಗೆ ಮನುಷ್ಯ ಭಾವನೆಗಳಿರಬಹುದು ಎಂದು ನಂಬಿಕೆ ಹುಟ್ಟಿಸುವಂತೆ ಇತ್ತು. ಅವರು ಮುಜುಗರದಿಂದ ಮುಖ ಚಿಕ್ಕದಾಗಿ ಮಾಡಿಕೊಂಡ ರೀತಿ. ಇದರಿಂದ ಆವೇಶಿತನಾಗಿ ಕೃಷ್ಣಪ್ಪ ಬಿಕ್ಕುತ್ತ ಹೇಳಿದ:

‘ಒಂದು ಹೆಂಗಸನ್ನ, ಬಡಪಾಯಿಯನ್ನ ನಿಮ್ಮ ಈ ರಾಕ್ಷಸರು ರಾತ್ರೆ ಎಳೆದು ತಂದು. . . .’

ಕೃಷ್ಣಪ್ಪ ಮುಂದೆ ಮಾತಾಡಲಾರದೆ ತಲೆ ತಗ್ಗಿಸಿದ. ಮಧ್ಯದವ ಹುಳಿಯಾಗಿ ನಕ್ಕು ಹೇಳಿದ:

'ಡೋಂಟ್‌ಗೆಟ್‌ಟೂ ಎಕ್ಸೈಟೆಡ್‌ಯಾಂಗ್‌ಮ್ಯಾನ್, ಬ್ರೂಟ್ಸಎಲ್ಲಾ ಕಡೆ ಇರ್ತಾರೆ. ಬ್ರೂಟ್‌ಜನರನ್ನ ಹದ್ದಿನಲ್ಲಿಡೋಕೆ ನಮ್ಮ ಜನವೂ ಬ್ರೂಟ್‌ಆಗಬೇಕಾಗುತ್ತೆ. ಈಗ ನೀವು ಹೇಳ್ತೀರೋ ಇಲ್ಲೊ ? ಥಾನ್ಸ್‌ಕಳ್ಕೋತಿದೀರಿ, ಉಳಿದವರು ನಮ್ಮ ಹಾಗಲ್ಲ. ಬಾಯಿ ಬಿಡ್ಸೋಕೆ ಥರ್ಡ್‌ಡಿಗ್ರಿಗಳನ್ನೆಲ್ಲ ಬಳಸ್ತಾರೆ. ನಾವೀಗ ಒಂದು ಕಾನ್ಫರೆನ್ಸಿಗೆ ಹೋಗಬೇಕು. ಆಲ್‌ರೈಟ್' ಎಂದು ಕಣ್ಸನ್ನೆ ಮಾಡಿದ. ಪೇದೆ ಬಂದು ಕೃಷ್ಣಪ್ಪನನ್ನು ರೂಮಿನ ಹೊರಗೆ ಕರೆದುಕೊಂಡು ಬಂದು ಮತ್ತೆ ಕಣ್ಣಿಗೆ ಬಟ್ಟೆ ಕಟ್ಟಿದ.

ಹತ್ತು ಹನ್ನೆರಡು ಅಡಿ ಎತ್ತರದ ಗೋಡೆಯಿಂದ ಆವೃತ್ತವಾದ ಒಂದು ಅಂಗಳದಲ್ಲಿ ಕೃಷ್ಣಪ್ಪನನ್ನು ನಿಲ್ಲಿಸಿ ಕಣ್ಣಿನ ಬಟ್ಟೆ ಬಿಚ್ಚಲಾಯಿತು. ಎದುರಿಗೆ ದಪ್ಪ ಮುಖದವನಿದ್ದ. ಅವನು ತನಗಾಗಿ ಕಾಯುತ್ತಿದ್ದಂತೆ ಇತ್ತು.

'ಅದೇನು ನಿನ್ನೆ ರಾತ್ರೆ ಬಾಗಿಲು ಬಡೀತ ಇದ್ದಿ ?'

ಕೃಷ್ಣಪ್ಪ ಸುಮ್ಮನಿದ್ದ.

'ನಿನ್ನ ಹತ್ತಿರ ಬಾಯಿ ಬಿಡಿಸೋದು ಹೇಗೆ ನನಗೆ ಗೊತ್ತು – ಏರೋಪ್ಲೇನ್‌ಗೊತ್ತ ? ಕಟ್ಟಿರೋ ಇವನ್ನ?' ಎಂದು ಸಿಗರೇಟ್‌ಹಚ್ಚಿ ಒಳಗೆ ಹೋದ.

ವರಾಂಡದಲ್ಲಿ ನಿಲ್ಲಿಸಿದ ಎರಡು ಗೂಟಗಳ ಮಧ್ಯೆ ಬಾವಿಗಿರುವಂತೆ ಒಂದು ದುಂಡನೆಯ ಕಬ್ಬಿಣದ ರಾಟೆಯಿತ್ತು. ಅದರಿಂದ ಇಳಿ ಬಿಟ್ಟ ಹಗ್ಗದ ಒಂದು ತುದಿಯಿಂದ ಕೃಷ್ಣಪ್ಪನ ಕೈಗಳನ್ನು ಬೆನ್ನಿನ ಹಿಂದೆ ತಂದು ಬಿಗಿಯಲಾಯಿತು. ಇನ್ನೊಂದು ತುದಿಯನ್ನು ಕೀರಲು ಧ್ವನಿಯ ಪೋಲೀಸ್‌ಪೇದೆ ಹಿಡಿದುಕೊಂಡು, 'ಸಾರ್' ಎಂದು ಕೂಗಿದ.

ದಪ್ಪ ಮೋರೆಯವ ಸಿಗರೇಟ್‌ಸೇದುತ್ತ ಹೊರಗೆ ಬಂದ. ದಫೇದಾರ ಹಿಡಿದಿದ್ದ ಲೆಜರ್‌ಗೆ ಸಹಿ ಹಾಕುತ್ತ – – 'ಎಸ್ – ಗೋ ಆನ್' ಎಂದ. ಕೀರಲು ಧ್ವನಿಯವ ಹಗ್ಗವನ್ನೆಳೆಯತೊಡಗಿದ. ಕೃಷ್ಣಪ್ಪನ ಹಿಂದಕ್ಕೆ ಕಟ್ಟಿದ ಕೈಗಳನ್ನು ಹಗ್ಗ ಮೇಲಕ್ಕೆ ಜಗ್ಗುತ್ತಿದ್ದಂತೆಯೆ ನಿಲ್ಲಿಸುವ ಸನ್ನೆ ಮಾಡಿ ದಪ್ಪ ಮುಖದವ –

'ಈಗಲೇ ಇಷ್ಟು ನೋವಾಗತ್ತೆ. ಇನ್ನೂ ಎಳೆದರೆ ನಿನ್ನ ಕಣ್ಣುಗಳು ಮಿಂಚು ಕಾಣುತ್ತವೆ' ಎಂದು ನಗುತ್ತ 'ಹೇಳಿ ಬಿಡು – ಪಾಪ ನೀನು ಊಟಾನೂ ಮಾಡಿಲ್ಲ' ಎಂದ.

ಕೃಷ್ಣಪ್ಪ ಮಾತಾಡಲಿಲ್ಲ.

ಅಧಿಕಾರಿಗೆ ಥಟ್ಟನೇ ಕಡುಕೋಪ ಬಂದಂತೆ ಕಂಡಿತು. 'ಎಳಿ' ಎಂದ ಉರ್ದುವಿನಲ್ಲಿ. ಕೈಗಳನ್ನು ಮೇಲಕ್ಕೆ ಮೇಲಕ್ಕೆ ಎಳೆದಂತೆ ಅವು ಮುರಿದು ಹೋಗುತ್ತಾವೆನ್ನಿಸಿತು. ಕಣ್ಣುಗಳು ಕತ್ತಲೆ ಕಟ್ಟಿ ಬಂದವು. ತಾನು ಕುಸಿಯುತ್ತಿದ್ದಂತೆ ಕೃಷ್ಣಪ್ಪನಿಗೆ ಅನ್ನಿಸಿತು.

ಎಳೆಯುತ್ತಿದ್ದ ಹಗ್ಗ ಸಡಿಲವಾಯಿತು. ಹಾಯೆನಿಸಿತು. ಕೃಷ್ಣಪ್ಪ ಕಣ್ಣು ಮುಚ್ಚಿ ಮುಂದೆ ಮತ್ತೆ ಎಳೆಯುವುದನ್ನು ನಿರೀಕ್ಷಿಸುತ್ತಿದ್ದಂತೆ ಭಯ ಮರುಕಳಿಸಿತು.

ನಿರೀಕ್ಷೆಯಲ್ಲಿ ಅತ್ಯಂತ ಅಸಹನೀಯವೆನ್ನಿಸುವ ನೋವು ವರ್ತಮಾನದಲ್ಲಿ ಅನುಭವಿಸುವಾಗ ಅಷ್ಟು ಅಸಹನೀಯವಲ್ಲವೆನ್ನುವುದು ನಿಧಾನವಾಗಿ ಕೃಷ್ಣಪ್ಪನಿಗೆ ಮನದಟ್ಟಾಗುತ್ತ ಹೋಯಿತು. ಮುಂದೆ ಬರುವ ನೋವುಗಳನ್ನು ನಿರೀಕ್ಷಿಸದೆ ಸದ್ಯದಲ್ಲೆ ಮನಸ್ಸನ್ನು ತೊಡಗಿಸಿಕೊಟ್ಟುಕೊಂಡಿರುವುದು ಹೇಗೆ ? ಮನಸ್ಸನ್ನು ತನ್ನ ಬಾಲ್ಯದ ದಿನಗಳಲ್ಲಿ ಹರಿಯಲು ಬಿಟ್ಟ. ತನಗೆ ಪ್ರಿಯವಾಗಿದ್ದ ಕೆಲವು ಮುಹೂರ್ತಗಳಲ್ಲಿ ಅದನ್ನು ನಿಲ್ಲಿಸಲು ನೋಡಿದ. . . . .

ದನ ಕರುಗಳು ಕೊರಳಿನ ಗಂಟೆ ಶಬ್ದ ಮಾಡುತ್ತ ಎದುರಿಗೆ ಮೇಯುತ್ತಿವೆ. ತಾನು ಒಂದು ದೊಡ್ಡ ಹಲಸಿನ ಮರದ ಬುಡದಲ್ಲಿ ಕೂತಿದ್ದೇನೆ – ಕಂಬಳಿಯ ಮೇಲೆ. ಪೊದೆಯಿಂದ ಒಂದು ಕೆಂಬೂತ ಪಕ್ಷಿ ಹೊರಬಂದು ಕುಪ್ಪಳಿಸಿ ಕಣ್ಮರೆಯಾಗುತ್ತದೆ. ಇದು ಕಂಡರೆ ಸಿಹಿ ತಿನ್ನುತ್ತೇವೆಂದು ಅರ್ಥ. ಕೊಳನ್ನೆತ್ತಿಕೊಳ್ಳುತ್ತಾನೆ. ಹಸಿವಾಗುತ್ತಿರುವ ಅನುಭವವಾಗುತ್ತದೆ. ಕೈಯಲ್ಲಿ ಕತ್ತಿ ಹಿಡಿದು ಗೊರಬು ಹಾಕಿಕೊಂಡು ತನ್ನ ತಾಯಿ ದೂರದಿಂದ ಬರುವುದು ಕಾಣುತ್ತದೆ. ಅಮ್ಮನನ್ನು ನೋಡುತ್ತಿದ್ದಂತೆ ಅವಳಿಗೆ ತನ್ನ ಹಸಿವನ್ನು ಹೇಳಿಕೊಳ್ಳಬೇಕೆಂದು ಆತುರವಾಗುತ್ತದೆ.

ಎದುರು ನಿಂತ ಅಮ್ಮ ಮುಗುಳ್ನಗುತ್ತ 'ಅದೆಂಥ ಹಸಿವೋ – ಬೆಳಗಿನ ಝಾವ ಗಂಜಿ ಊಟ ಮಾಡಿದ್ದಿಲ್ಲವ?' ಎಂದು ಸುಳ್ಳು ಕೋಪದಿಂದ ಬೈಯುತ್ತಾಳೆ. ಕೃಷ್ಣಪ್ಪ ಗೊಣಗುತ್ತಾನೆ: 'ಅದೆಂಥ ಗಂಜಿ ಅದರಲ್ಲಿ ಮಣ್ಣೆತ್ತು.' ತಾಯಿ ಎದುರಲ್ಲದೆ ಇನ್ನು ಯಾರ ಹತ್ತಿರ ಮಾವಯ್ಯನ ಹೆಂಡತಿ ಅತ್ತೆಯನ್ನು ಬಯ್ಯಲು ಸಾಧ್ಯ ? ಅವಳು ತನಗೊಂದು, ಸ್ವಂತ ಮಕ್ಕಳಿಗೆ ಇನ್ನೊಂದು ಮಾಡುತ್ತಿದ್ದಳು.

ತಾಯಿ ಕೊಟ್ಟಿಗೆಗೆ ಸೊಪ್ಪು ತರಲೆಂದು ಹೊರಟವಳು ಮಗನ ಹತ್ತಿರ ಆದಷ್ಟು ಕಾಲ ನಿಂತಿರಬೇಕೆಂಬ ಆಸೆಯಿಂದ ಬೇಕೆಂದೇ ಏನೇನೋ ಹೇಳುತ್ತ, ಮಗನ ಹಸಿವನ್ನು ಕಿಚಾಯಿಸುತ್ತ ನಿಲ್ಲುತ್ತಾಳೆ. ಕೃಷ್ಣಪ್ಪನೂ ಕಥದಲ್ಲಿ ಗೊಣಗುತ್ತಿದ್ದಂತೆ ತಾಯಿ ತನ್ನ ಮಡಿಲನ್ನು ಬಿಚ್ಚುತ್ತಾಳೆ. ಬಾಳೆಯ ಕೊಟ್ಟೆಯಲ್ಲಿ ಕಟ್ಟಿದ ಹಲಸಿನ ಹಣ್ಣಿನ ಕಡುಬಿನ ಚೂರೊಂದನ್ನು ತೆಗೆದು ಇಕೊ ಎಂದು ಕೊಡುತ್ತಾಳೆ. ಕಡುಬಿಗೆ ಧಾರಾಳವಾಗಿ ಎಮ್ಮೆಯ ಕಾಯಿಸಿದ ತುಪ್ಪ ಹಚ್ಚಿದೆ. ನಿನ್ನೆ ಮಾಡಿದ್ದ ಕಡುಬು. ಇವತ್ತು ಅದು ಇನ್ನಷ್ಟು ರುಚಿ. ಅವಳ ಪಾಲಿನಲ್ಲಿ ಒಂದಷ್ಟನ್ನು ಬಚ್ಚಿಟ್ಟು ತಾಯಿ ಏಕಾಂತದಲ್ಲಿ ಮಗನಿಗೆ ಅದನ್ನು ಮಾರನೇ ದಿನ ತಂದುಕೊಡುತ್ತಿದ್ದಾಳೆ. ಅತ್ತೆಯ ಕಣ್ಣಿಗೆ ಬೀಳದಂತೆ ಬಚ್ಚಿಟ್ಟು ತಂದ ಕಡುಬನ್ನು ಇಸಕೊಳ್ಳುವಾಗ ತನಗಾದ ಸಂತೋಷವನ್ನು ಕೃಷ್ಣಪ್ಪ ತೋರಿಸಿಕೊಳ್ಳುವುದಿಲ್ಲ. ಪಕ್ಕದಲ್ಲಿಟ್ಟು, 'ಹೂ, ಈ ಕಡಬು ಸಮಾ ಬೆಂದಿಲ್ಲ' ಅನ್ನುತ್ತಾನೆ. ತಾಯಿಗೆ ಮಗನ

ಬಡಿವಾರ ತಿಳಿಯುತ್ತದೆ. 'ಧಿಮಾಕು ಮಾಡಬೇಡ ತಿನ್ನು' ಎಂದು ಮಗನ ಕಣ್ಣುಗಳು ಕಡುಬು ತಿನ್ನುವಾಗ ಹೊಳೆಯುವುದನ್ನು ನೋಡುತ್ತ ಅಲ್ಲಿ ನಿಲ್ಲುತ್ತಾಳೆ.

ಕಡುಬನ್ನು ಮುಕ್ಕುತ್ತಲೇ 'ಹೋಯ್‌ಹೋಯ್' ಎಂದು ಕೂಗುತ್ತ ಕೃಷ್ಣಪ್ಪ ಆ ಹಾಳು ಜೋಯಿಸರ ಮನೆಯ ದನದ ಬೆನ್ನಿನ ಹಿಂದೆ ಓಡುತ್ತಾನೆ. ತುಡುಗು ದನ, ಕಂಡವರ ಹೊಲ ನುಗ್ಗುತ್ತದೆ.

ಜೋಯಿಸರು ಪ್ರೈಮರಿ ಸ್ಕೂಲ್‌ನಲ್ಲಿ ಉಪಾಧ್ಯಾಯರು. ಕೃಷ್ಣಪ್ಪ ದನಕಾಯಲು ಶುರುಮಾಡುವುದಕ್ಕಿಂತ ಮುಂಚೆ ಹನ್ನೊಂದೊ ವರ್ಷಗಳಾಗುವ ತನಕ ಅವರ ಸ್ಕೂಲಿಗೆ ಹೋಗುತ್ತಿದ್ದ. ಮಕ್ಕಳಿಲ್ಲದ ಜೋಯಿಸರ ಹೆಂಡತಿ ರುಕ್ಮಿಣಿಯಮ್ಮನಿಗೆ ಕೃಷ್ಣಪ್ಪನೆಂದರೆ ಅಕ್ಕರೆ. ಏನೋ ನೆವ ಹೂಡಿ ಸುಮ್ಮನೆ ಅವನನ್ನು ನಿಲ್ಲಿಸಿಕೊಂಡು ಅದೂ ಇದೂ ಮಾತಾಡುತ್ತ ಕಣ್ತುಂಬ ನೋಡುತ್ತ ನಿಲ್ಲುವರು. ಚಕ್ಕುಲಿ ಕೋಡಬಳೆ ಕೊಡವರು. ಕೃಷ್ಣಪ್ಪನ ತಾಯಿ ಅವರ ಹತ್ತಿರ ತನ್ನೆಲ್ಲ ಸುಖ ದುಃಖ ತೋಡಿಕೊಳ್ಳುವುದು – ಎಲೆಯಡಿಕೆ ಜಗಿಯುತ್ತ. ಸಾಯಂಕಾಲ ಜೋಯಿಸರು ರಾಗವಾಗಿ ಭಾರತ ಓದುವುದನ್ನು ಕೇಳಿಸಿಕೊಳ್ಳಲು ಯಾರಿಲ್ಲದಿದ್ದರೂ ಕೃಷ್ಣಪ್ಪ ಚಾವಡಿಯಲ್ಲಿ ಹಾಜರು. 'ನಿನ್ನ ಮಗನಿಗೆ ರಾಜಕಳೆಯಿದೆ' ಎನ್ನುವರು ಅವರು ಕೃಷ್ಣಪ್ಪನ ತಾಯಿಗೆ. ಕರ್ಣನ ವೃತ್ತಾಂತ ಕೇಳಿಸಿಕೊಳ್ಳುತ್ತಾ ಕೃಷ್ಣಪ್ಪನ ಕಣ್ಣುಗಳು ಒದ್ದೆಯಾಗುವುದನ್ನು ಜೋಯಿಸರು ಗಮನಿಸುವರು. 'ಏಕಲವ್ಯನ ಕಥೆ ಹೇಳಲೇನೋ' ಎಂದು ಕೇಳುವರು.

ರುಕ್ಮಿಣಿಯಮ್ಮನವರು ಅಸಾಧ್ಯ ಮಡಿ. ಅವನ ಒಡ್ಡಿದ ಕೈಮೇಲೆ ಅಷ್ಟೆತ್ತರದಿಂದ ಅವರು ಕೋಡುಬಳೆ ಹಾಕುವುದು. ಬೇಲಿಯ ಮೇಲೆ ಸೀರೆ ಒಣಗಿ ಹಾಕಿದ್ದರೆ, ದೂರದಿಂದಲೇ ಕೃಷ್ಣಪ್ಪನನ್ನ ನೋಡಿ 'ಏ ಕಿಟ್ಟ ಮಡಿ ಹರವಿದ್ದೇನೋ, ತೆಗೀತೀನಿ – ಬೇಲಿ ಮುಟ್ಟಬೇಡ' ಎಂದು ಕೂಗುತ್ತ ಬಂದು ಸೀರೆಯನ್ನು ಎತ್ತಿಕೊಳ್ಳುವರು. ಒಮ್ಮೆ ಮುಟ್ಟಿದರೇನಾಗುತ್ತದೆಂದು ಕೃಷ್ಣಪ್ಪ ಅದನ್ನು ಮುಟ್ಟಿಕೊಂಡೇ ಒಳಬಂದುದನ್ನು ಕಂಡ ರುಕ್ಮಿಣಿಯಮ್ಮ ಅವನನ್ನು ಹೊಡೆಯಲೆಂದು ಓಡಿಬಂದು, ಮುಟ್ಟಿದರೆ ತಾನು ಸಂಪೂರ್ಣ ಮೈಲಿಗೆಯಾಗಿಬಿಡುತ್ತೇನೆಂದು ಅರಿತು, 'ಘಟಿಂಗ' ಎಂದು ಎತ್ತಿದ ಕೈಯನ್ನು ಹಾಗೇ ಎತ್ತಿ ನಿಂತದ್ದನ್ನು ನೋಡಿ ಕೃಷ್ಣಪ್ಪ ನಗಲು ಪ್ರಾರಂಭಿಸಿದ್ದ. ರುಕ್ಮಿಣಿಯಮ್ಮ ತನ್ನ ನಗುವನ್ನು ತಡೆದುಕೊಂಡು ಹುಸಿ ಮುನಿಸಿನಿಂದ 'ಸಮಾ ಮಾಡಿಸ್ತೀನಿ ಇರು ನಿನ್ನ ಅಪ್ಪನಿಗೆ ಹೇಳಿ. ಮನೆಗೆ ಹೋಗುವಾಗ ಬೆನ್ನಿಗೆ ಹಾಳೆ ಕಟ್ಕೋಬೇಕಾಗುತ್ತೆ' ಎಂದು ಕೃಷ್ಣಪ್ಪನ ಕೈಯಲ್ಲಿ ಆ ಸೀರೆ ಎತ್ತಿಸಿ ಬಾವಿಕಟ್ಟೆ ಬುಡದಲ್ಲಿರಿಸಿ, ನೀರು ಸೇದಿ ಹೊಯ್ದು, ಹಿಂಡಿ ಮತ್ತೆ ಹರವಿದ್ದರು. . . . . . .

ಕೃಷ್ಣಪ್ಪ ಅಯ್ಯೋ ಎಂದು ಕೂಗಿ, ಇನ್ನೂ ಕೂಗಬೇಕೆನ್ನಿಸಿದ್ದನ್ನು ತಡೆದುಕೊಂಡ. ಕೈಗಳನ್ನ ಮತ್ತೆ ಹಗ್ಗ ಎಳೆದು ಮುರಿಯತೊಡಗಿತ್ತು. ಈ ನೋವು ಎಷ್ಟೋ ಕಾಲ ಮುಂದುವರಿಯುತ್ತಲೇ ಇರುತ್ತದೆ ಅನ್ನಿಸುತ್ತಿದ್ದಾಗ ಸರಕ್ಕನೆ ಹಗ್ಗ ಸಡಿಲವಾಯಿತು. ಕಣ್ಣು ಕತ್ತಲೆ ಕಟ್ಟಿ ಬಂದು ಕುಸಿದ. ಕೀರಲು ಧ್ವನಿಯ ಪೇದೆ ಬಾಯಿ ತೆರೆಸಿ ನೀರು ಹೋಯ್ಯುತ್ತಿದ್ದ.

ಅವನು ಚೇತರಿಸಿಕೊಳ್ಳಲು ತೊಡಗಿದಾಗ ಸಿನಿಮಾ ಸಂಗೀತದ ಅಲೆಯೊಂದು ಕಿವಿಯ ಮೇಲೆ ಬಿದ್ದು ಕೃಷ್ಣಪ್ಪ ಚಕಿತನಾದ. ಕಾಂಪೌಂಡು ಗೋಡೆಯಾಚೆಯೊಂದು ಹೋಟೇಲಿರಬೇಕು. ಅಲ್ಲಿಂದ ಈ ಸಿನಿಮಾ ಹಾಡು ಅಬ್ಬರಿಸಿ ಕೇಳುತ್ತಿದೆ. ಆವಾರಾ

ಹೂ, ಹೂ. . ಆವಾರಾ ಹೂ. . . ಎತ್ತಿನ ಬಂಡಿ ಚಲಿಸುವ ಶಬ್ದ. ಚಾವಟಿಯ ಏಟಿನ ಶಬ್ದ. ಹೊರಗೊಂದು ಜಗತ್ತು ಯಥಾಪ್ರಕಾರ ತನ್ನ ಚಲನೆಯಲ್ಲಿ ಮಗ್ನವಾಗಿದೆ. ಹೋಟೆಲಲ್ಲಿ ಕೂತು ಆರಾಮಾಗಿ ಕಾಫಿಗೆ ಆರ್ಡರ್ ಮಾಡಬಹುದು ಅಲ್ಲಿ. ಅಂಗಡಿಯಿಂದ ಬರ್ಕ್ಲೀ ಸಿಗರೇಟು ತರಿಸಿ ಹಚ್ಚಿ ಹೊಗೆ ಬಿಡಬಹುದು. ಎತ್ತಿನ ಬಂಡಿಯ ಶಬ್ದ ದೂರವಾಗುತ್ತಿದೆ. ಸಿಲೋನ್‌ನಿಂದ ಬರುವ ಹಾಡು ನಿಂತು ಆಸ್ಪ್ರೋ ಜಾಹೀರಾತು ಕೇಳುತ್ತಿದೆ.

ದಪ್ಪ ಮೋರೆಯವನು ಕಾಲುಗಳನ್ನು ಅಗಲಿಸಿ ನಿಂತು ಗಾಜಿನ ಲೋಟದಲ್ಲಿ ಕಾಫಿ ಕುಡಿಯುತ್ತಿದ್ದ. ಅದು ಮುಗಿಯುವುದನ್ನೇ ನೋಡುತ್ತಿದ್ದ ಪೇದೆಯೊಬ್ಬ ಕೈಗಳನ್ನು ಬಾಚಿ ತಯಾರಾಗಿದ್ದ. ಮುಗಿದ ಬಟ್ಟಲನ್ನು ಅನ್ಯಮನಸ್ಕನಾಗಿ ದಪ್ಪಮೋರೆಯವ ಎಡಗೈಯಲ್ಲಿ ಹಿಡಿದಾಗ ಬಲಭಾಗದಲ್ಲಿ ನಿಂತ ಪೇದೆ ಎಡಗಡೆ ಹೋಗಿ ಅದನ್ನು ಇಸಕೊಂಡು ಒಳಗೆ ಹೋದ. ತನ್ನ ಜೀವನವನ್ನು ಆಳುವ ಸರ್ವಶಕ್ತನಂತೆ ನಿಂತ ಅಧಿಕಾರಿಯನ್ನು ಕುಸಿದು ಕೂತ ಕೃಷ್ಣಪ್ಪ ಆಶ್ಚರ್ಯಪಡುತ್ತ ನೋಡಿದ. ಇವನಿಗೆ ತಾಯಿಯಿದ್ದಾಳ? ಇವನೂ ಒಮ್ಮೆ ಹುಡುಗನಾಗಿದ್ದನೆ? ಅನ್ಯಮನಸ್ಕನಾಗಿ ನಿಂತಿದ್ದ ಅಧಿಕಾರಿ ಸೊಂಟವನ್ನು ತುಸು ತಗ್ಗಿಸುತ್ತ ಹೂಸುಬಿಟ್ಟ. ಉರ್ದುವಿನಲ್ಲಿ ಏನೋ ಹೇಳಿ ಕೃಷ್ಣಪ್ಪನ ಕಡೆ ನೋಡದೆ ಹೊರಟು ಹೋದ. ಕೃಷ್ಣಪ್ಪನನ್ನು ಪೇದೆಯೊಬ್ಬ ಎಬ್ಬಿಸಿಕೊಂಡು ಹೋಗಿ ಎರಡು ಕುರ್ಚಿಗಳಿದ್ದ ಬರಿದಾದ ಒಂದು ರೂಮಿನಲ್ಲಿ ಒಂದು ಕುರ್ಚಿ ಮೇಲೆ ಕೂರಿಸಿದ. ಅಲ್ಯೂಮಿನಿಯಂ ತಟ್ಟೆಯಲ್ಲಿ ಉಪ್ಪಿಟ್ಟನ್ನೂ ಒಂದು ಲೋಟ ಕಾಫಿಯನ್ನು ಎದುರಿಗಿಟ್ಟು ಕಾಯುತ್ತ ನಿಂತ.

ಕೃಷ್ಣಪ್ಪನಿಗೆ ಅದನ್ನು ಕಂಡು ಹಸಿವು ಉಲ್ಬಣವಾಯಿತು. ಆದರೆ ತಾನು ಉಪವಾಸ ಮಾಡುತ್ತಿದ್ದೇನೆಂದು ಸುಸಂಸ್ಕೃತರಂತೆ ಕಂಡ ಅಧಿಕಾರಿಗಳ ಎದುರು ಹೇಳಿದ್ದರಿಂದ ಅದನ್ನು ತಿನ್ನುವಂತಿರಲಿಲ್ಲ. ಆಸೆಯನ್ನು ತಡೆದುಕೊಂಡು, ಅದು ಸಾಧ್ಯವಾದ್ದಕ್ಕೆ ಸಂತೋಷಪಡುತ್ತ ಕುರ್ಚಿಯ ಮೇಲೆ ಒರಗಿ ಕಣ್ಣು ಮುಚ್ಚಿದ. ಇನ್ನೇನು ಜೊಂಪು ಹತ್ತಬೇಕು ಆಗ ಪೇದೆ ಧಡಧಡನೆ ತನ್ನ ಬುಟ್ಸಿಗೆ ಹಾಕಿದ ಲಾಳದಿಂದ ಸಿಮೆಂಟ್‌ನೆಲವನ್ನು ಕುಟ್ಟಿದ. ಕೃಷ್ಣಪ್ಪ ಗಾಬರಿಯಿಂದ ಎಚ್ಚರಾದ. ಈ ಗಾಬರಿ ಅವನಿಗೆ ತಿಳಿಯಿತಲ್ಲ ಎಂದು ಅವಮಾನವಾಗಿ ತಾನು ನಿದ್ದೆ ಹೋಗಕೂಡದೆಂದು ಕಷ್ಟವಾಗಿ ಕಣ್ಣುಬಿಟ್ಟಕೊಂಡ ಕೂತ.

ಗೌರಿ ದೇಶಪಾಂಡೆಯನ್ನು ನೆನಪು ಮಾಡಿಕೊಂಡ. ಅವಳು ಸಡಿಲವಾಗಿ ಜಡೆ ಹಾಕಿದ್ದಾಳೆ. ಕಿವಿಗಳ ಮೇಲಿನಿಂದ ಅವಳ ಕಪ್ಪು ತಲೆಕೂದಲು ಇಳಿದು ಎದೆಯಮೇಲೆ ಚೆಲ್ಲಿದೆ. ಅವಳು ತಂಬೂರಿ ಹಿಡಿದು ಹಾಡುತ್ತಿದ್ದಾಳೆ. 'ಕಬೀರ ಹೇಳುತ್ತಾನೆ ಸಾಧುಗಳೆಲ್ಲ ಕೇಳಿರಿ' ಎಂಬ ಕೊನೆಯ ಸಾಲನ್ನು ಏರಿಕೆಯಲ್ಲಿ ಹೇಳುತ್ತಿದ್ದಾಳೆ. ಈಗ ಕೃಷ್ಣಪ್ಪನಿಗೆ ತನ್ನ ಆಸೆಯಿಂದ ನಾಚಿಕೆಯಾಗುವುದಿಲ್ಲ. ಎದ್ದು ಬಂದು ತನ್ನ ಪಕ್ಕ ಕೂತವಳನ್ನು ಮೃದುವಾಗಿ ತಡವುತ್ತಿದ್ದಾನೆ. ಆಮೇಲೆ ಅದನ್ನು ಅಣ್ಣಾಜಿಗೆ ಹೇಳುತ್ತಾನೆ. ಅವನಿಗೆ ಖುಷಿಯಾಗುತ್ತದೆ. ಈ ಸಿಸ್ಟಮ್ಮನ್ನು ಬದಲು ಮಾಡುವ ಥಿಯರಿ ಬಗ್ಗೆ ಮಾತಾಡುತ್ತಾನೆ. ಸಮಾಜ ಹಿಂಸೆಯ ಮೇಲೆ ನಿಂತಿದೆ. ಇವೆಲ್ಲ ಕೇಂದ್ರೀಕೃತವಾಗಿ ಪೋಲೀಸ್‌ಸಂಸ್ಥೆಯಾಗಿದೆ. ವೈಯಕ್ತಿಕವಾಗಿ ಈ ಪೋಲೀಸರನ್ನು ದ್ವೇಷಿಸಿ ಏನು ಪ್ರಯೋಜನ? ಸಿಸ್ಟಮ್‌ಹೇಗೆ ಕೆಲಸಮಾಡುತ್ತದೆಂದು ತಿಳಿದು ಅದನ್ನು ಬದಲು ಮಾಡಬೇಕು. ಹೀಗೆ ಬದಲು ಮಾಡುವವರು ರೈತರು, ಕೂಲಿಗಾರರು. ದಪ್ಪ ಮುಖದ ಅಧಿಕಾರಿ ಕೂಡ ಬರಿಯ ಒಂದು ಸಾಧನ. ಆದರೆ ಅವನು ರಾತ್ರೆ ಯಾವಳೋ ಹೆಣ್ಣನ್ನು ಬಲಾತ್ಕಾರವಾಗಿ ಸಂಭೋಗಿಸುವಾಗ ಕೇಳಿಸಿಕೊಂಡ ಭೀಕರ ಶಬ್ದಗಳು ನೆನಪಾಗುತ್ತವೆ. ಕೃಷ್ಣಪ್ಪನ ಕಣ್ಣುಗಳಿಂದ ನಿದ್ದೆ ಹಾರಿ ಕ್ರೂರವಾಗುತ್ತವೆ.

ಮಹೇಶ್ವರಯ್ಯ ಎಲ್ಲೋ ಹೊರಗೆ ತನ್ನನ್ನು ಇಲ್ಲಿಂದ ಪಾರು ಮಾಡುವ ಮಾರ್ಗಗಳನ್ನು ಹುಡುಕುತ್ತಿದ್ದಾರೆ. ಅವರಿಗೆ ಗೊತ್ತು ಏನು ಮಾಡಬೇಕೆಂದು.

ದೇಶದಲ್ಲಿ ಕ್ರಾಂತಿಯಾಗುತ್ತದೆ. ಈ ದಪ್ಪ ಮುಖದ ಅಧಿಕಾರಿಯನ್ನು ಶಿಕ್ಷಿಸುವ ಕ್ರಮಗಳನ್ನು ಯೋಚಿಸುತ್ತ ಕೃಷ್ಣಪ್ಪ ಸಂಕೀರ್ಣವಾದ ಒಂದು ಯಂತ್ರವನ್ನು ಸೃಷ್ಟಿಸುತ್ತ ಹೋಗುತ್ತಾನೆ. ಅದರಲ್ಲಿ ಒಂದರೊಳಗೊಂದು ಕಚ್ಚಿಕೊಂಡ ನೂರಾರು ಚಕ್ರಗಳು. ಬಗೆ ಬಗೆಯ ರೀತಿಯಲ್ಲಿ ಆ ಯಂತ್ರ ಈ ಅಧಿಕಾರಿಯನ್ನು ಹಿಡಿದು ಹಿಂಡುತ್ತದೆ. ಸಾಯಲು ಬಿಡದಂತೆ ಹಿಂಸಿಸುತ್ತದೆ. ಅದು ಗಾಣದಂತಿರುತ್ತದೆ. ಅಲೆಮನೆ ಜ್ಞಾಪಕವಾಯಿತು. ಧಾರಾಕಾರವಾಗಿ ಸುರಿಯುವ ಹಾಲು, ಅಡಿಕೆಯ ಸಪ್ಪೆಯಿಂದ ಬಣ್ಣ ಬಣ್ಣದ ಬೆಂಕಿ ಎದ್ದು ಕುದಿಸುತ್ತಿರುವ ಹಂಡೆ, ಈ ಹಂಡೆಯಿಂದ ಎತ್ತಿ ತಿನ್ನುವ ನೊರೆ ಬೆಲ್ಲ. . .

ಮತ್ತೆ ಶಬ್ದವಾಗುತ್ತದೆ. ಉಪ್ಪಿಟ್ಟನ್ನು ಪೇದೆಯೇ ತಿಂದು ಅಲ್ಯೂಮಿನಿಯಿಂ ತಟ್ಟೆಯನ್ನು ಎತ್ತಿ ಕೆಳಗೆ ಹಾಕಿದ್ದ. ಕೃಷ್ಣಪ್ಪನನ್ನು ನೋಡಿ ಈಡಿಯಟ್ಟಿನಂತೆ ನಗುತ್ತ ನಿಂತಿದ್ದ. ಅವನ ಹಲ್ಲುಗಳು ಹುಳುಕಾಗಿ ಕರ್ರಗಾಗಿದ್ದವು. ಕೃಷ್ಣಪ್ಪನೇ ಉಪ್ಪಿಟ್ಟನ್ನು ತಿಂದನೆಂದು ಮೇಲಿನವರು ಭಾವಿಸುವಂತೆ ಅವನು ಮಾಡಿದ್ದ.

ಏರೋಪ್ಲೇನ್‌ಹತ್ತಿಸಲು ಮತ್ತೆ ಕರೆದುಕೊಂಡು ಹೋಗಬಹುದು ಎನ್ನಿಸಿತು. ಕೈಗಳನ್ನು ಹಿಂದಕ್ಕೆ ಕಟ್ಟಿ ಎಳೆಯುವಾಗ ಸಹನೆಗೂ ಒಂದು ತುದಿಯಿದೆ, ಆ ತುದಿ ದಾಟುತ್ತಿದ್ದಂತೆ ಒಂದೊಂದು ಅಂಗುಲವೂ ನೋವನ್ನು ಏರಿಸುತ್ತ ಹೋಗುತ್ತದೆ. ಕೃಷ್ಣಪ್ಪ ಭಯದಿಂದ ನಡುಗುತ್ತ ಕೂತ. ಈ ಸಾರಿ ತಾನದನ್ನು ತಾಳಲಾರದೆ ಅಣ್ಣಾಜಿ ಹಣ ಕಳಿಸುತ್ತಿದ್ದವರ ಹೆಸರನ್ನೆಲ್ಲ ಹೇಳಿ ಬಿಡಬಹುದು.

ಬೂಟ್ಸಿನ ಸಪ್ಪಳ ಕೇಳಿಸಿತು.

ಹಣೆಯ ಮಧ್ಯ ಕುಂಕುಮವಿಟ್ಟಿದ್ದ ಹಣ್ಣು ಮೀಸೆಯ ಅಧಿಕಾರಿ ಒಳಗೆ ಬಂದು ಇನ್ನೊಂದು ಕುಚಿಯ ಮೆಲೆ ಕೂತ. ತನ್ನ ಪೀಕ್‌ಕ್ಯಾಪನ್ನು ತೆಗೆದು ಬೆವರುತ್ತಿದ್ದ ಹಣೆಯನ್ನು ಒರೆಸಿಕೊಂಡ. ಕುಂಕುಮವೂ ಒದ್ದೆಯಾಗಿ ಮೂಗಿನ ಕೆಳಗೆ ಇಳಿಯುತ್ತಿತ್ತು. ಆ ಕುಂಕುಮವನ್ನು ಅಳಿಸದಂತೆ ಮೂಗನ್ನೂ ಕೆನ್ನೆಯನ್ನೂ ಕತ್ತನ್ನೂ ಒರೆಸಿಕೊಂಡ:

‘ಈ ಹಾಳು ವಾರಂಗಲ್‌ಸುತ್ತ ಕಲ್ಲಿನ ಬೆಟ್ಟಗಳಿವೆ ನೋಡಿ. ಆದ್ರಿಂದ ಭಯಂಕರ ಸೆಖೇರಿ. ಕಾಫೀ ತರಿಸಲ?’ ಎಂದು ಕೇಳಿದ.

ಕೃಷ್ಣಪ್ಪ ಬೇಡವೆಂದು ತಲೆಯಾಡಿಸಿದ.

‘ಶರಬತ್’

ಕೃಷ್ಣಪ್ಪ ಬೇಡವೆಂದ.

‘ನೋಡ್ರಿ ನಾನಿಲ್ಲಿ ಬರಬಾರದು. ಇವೆಲ್ಲ ಲೋಯರ್ ಕೇಡರಿನ ಅಧಿಕಾರಿಗಳ ಕೆಲಸ. ಅವರ ಅಪ್ರೋಚ್‌ಬ್ರೂಟಲ್‌ಆಗಿರತ್ತೆ. . . . .’

ಕೃಷ್ಣಪ್ಪನ ಗಮನ ತನ್ನ ಮಾತಿನ ಮೇಲಿಲ್ಲವೆಂಬುದನ್ನು ಗಮನಿಸಿ ಆತ,

‘ನನ್ನ ಹೆಸರು ಗಜಾನನ ಜೋಷೀಂತಾರಿ’ ಎಂದ.

ಕೃಷ್ಣಪ್ಪ ತುಟಿ ಬಿಗಿದು ಕೂತೇ ಇದ್ದದ್ದು ನೋಡಿ,

‘ನಿಮ್ಮ ಹಿತೈಷಿಗಳಂತೆ – ಮಹೇಶ್ವರಯ್ಯ ಅಂತ ಮನೆಗೆ ಬಂದಿದ್ದರು. ಬೆಳಿಗ್ಗೆ ನಮ್ಮನೇಲೇ ಟಿಫನ್‌ತಗೊಂಡರು. ಅದಕ್ಕೆ ನಾನೇ ಬಂದೆ ನಿಮ್ಮನ್ನು ನೋಡುವ ಅಂತ.’

ಮಹೇಶ್ವರಯ್ಯನ ಹೆಸರು ಕೇಳಿ ಅಪ್ರಯತ್ನವಾಗಿ ಕೃಷ್ಣಪ್ಪ ನಿಟ್ಟುಸಿರಿಟ್ಟು ಆತುರದಿಂದ ಮುಂದಿನದಕ್ಕೆ ಕಾದ. ಜೋಷಿ ಇದನ್ನು ಗಮನಿಸಿ ತುಂಬ ಮೆದುವಾಗಿ ಹೇಳಿದ:

‘ನಮ್ಮ ಡಿಪಾರ್ಟಮೆಂಟೇ ಹೀಗೆ. ಯಾವಾಗ ರಿಟೈರ್ಡ್ ಆಗ್ತೀನೀಂತ ಕಾದಿದೀನಿ. ಆದರೆ ನೋಡ್ರಿ ಇವತ್ತಿಗೂ ನಾನು ಪೂಜೆ ಮಾಡದೆ ಮನೆ ಬಿಡಲ್ಲ.’

ಎಂದು ಮತ್ತೊಮ್ಮೆ ಕತ್ತನ್ನು ಒರೆಸಿಕೊಂಡು ಅಲ್ಲಿ ನಿಂತಿದ್ದ ಪೇದೆಗೆ ಹೋಗುವಂತೆ ಹೇಳಿ ಮುಂದುವರೆಸಿದ:

‘ಕ್ರಿಮಿನಲ್‌ಸ್‌ಜತೆ ಡೀಲ್‌ಮಾಡೀ ಮಾಡೀ ನಾವೂನೂ ಅದೇ ಟೆಂಪರಮೆಂಟ್‌ಸ್‌ರವರಾಗಿಬಿಡ್ತೀವೀಂತ ಕಾಣುತ್ತೆ. ನೊಡ್ರಿ ನಿಮ್ಮಂಥ ಒಬ್ಬ ಐಡಿಯಲಿಷ್ಟ್‌ಯಂಗ್‌ಮ್ಯಾನ್‌ಹತ್ರ ಡೀಲ್‌ಮಾಡೋದು ಹೇಗೇಂತ ನಮಗೆ ತಿಳಿಯೋದೇ ಇಲ್ಲರಿ. ದೇಶದಲ್ಲಿ ಭಾರಿ ಅನ್ಯಾಯ ನಡೀತ ಇಲ್ವ ಅಂತ ನೀವು ಕೇಳ್ತೀರಿ. ಎಸ್. ನಾನು ಒಪ್ಪಿಕೋತೀನಿ. ಇಲ್ಲಿ ಕ್ರಾಂತಿಯಾಗ ಬೇಕೂಂತ ನಿಮಗೆ ಅನ್ನಿಸಿದ್ರೆ ತಪ್ಪೆ? ಒಂದು ಸೇಯಿಂಗೇ ಇದೆಯಲ್ಲ – ಇಪ್ಪತ್ತೈದು ವರ್ಷದೊಳಗೆ ಒಬ್ಬ ಕಮ್ಯೂನಿಷ್ಟಆಗಿಲ್ಲದೇ ಇದ್ರೆ ಅವನು ಹಾರ್ಟಲೆಸ್‌ಇರಬೇಕು ಅಂತ. ಹಾಗೇನೇ ಇಪ್ಪತ್ತೈದು ವರ್ಷದ ಮೇಲೇನೂ ಅವನು ಕಮ್ಯೂನಿಸ್ಟಆಗಿ ಉಳಿದ್ರೆ ಅವನು ಈಡಿಯಟ್‌ಇರಬೇಕೂಂತ.’

ಜೋಷಿ ಗಹಗಹಿಸಿ ನಗುತ್ತ ಕೃಷ್ಣಪ್ಪನೂ ತನ್ನ ಜೊತೆ ನಗುತ್ತಿದ್ದಾನೆಂದೇ ಭಾವಿಸಿದವನ ಹಾಗೆ ತೊಡೆಗಳನ್ನು ತಟ್ಟಿಕೊಳ್ಳುತ್ತ ಕೂತ. ಕೃಷ್ಣಪ್ಪ ಅವನನ್ನು ದಿಟ್ಟಿಸಿ ನೋಡುತ್ತಲೇ ಇದ್ದ.

‘ನಿಮಗೆ ಈ ಸೇಯಿಂಗ್ ಹೊಸದಿರಲಾರದು – ಅಲ್ವೆ? ವೆರಿ ಫನ್ನಿ, ವೆರಿ ವೆರಿ ಫನ್ನಿ.’

ಜೋಷಿ ನಗು ನಿಲ್ಲಿಸಿ ಕಣ್ಣಲ್ಲಿ ಉಕ್ಕಿದ ನೀರನ್ನು ಒರೆಸಿಕೊಂಡು ಹೇಳಿದ:

‘ಗೌಡ್ – ನಿಮ್ಮ ಸ್ನೇಮ್‌ಅಲ್ಲೇನ್ರಿ? ಧಾರವಾಡದ ಕಡೆ ಬ್ರಾಹ್ಮಣ ಗೌಡರೂ ಇದಾರ್ರೀ. ನೀವೂ ಹಿಂದೊಂದು ಕಾಲದಲ್ಲಿ ಜೈನರಾಗಿದ್ದವರಂತೆ, ನಾಮಧಾರಿಗಳಂತೆ – ಮಹೇಶ್ವರಯ್ಯ ಎಲ್ಲ ಹೇಳಿದರು. ವೆರಿ ಇಂಟರೆಸ್ಟಿಂಗ್, ವೆರಿ ವರಿ ಇಂಟರೆಸ್ಟಿಂಗ್. ಈ ಪ್ರದೇಶ ನೋಡ್ರಿ ನೈಜಾಮ್‌ಆಳ್ವಿಕೇಲಿ ಇತ್ತಲ್ಲ ಹಾಗಾಗಿ ಇಲ್ಲಿನ ಪೋಲೀಸ್‌ಜನರೆಲ್ಲ ಶುದ್ಧ ಬ್ರೂಟ್‌ಗಳು. ಅದಕ್ಕಾಗಿ ನಾನೇ ಬಂದೇರಿ. ಮಹೇಶ್ವರಯ್ಯನಿಗೆ ಹೇಳಿದೆ: ಡೋಂಟ್‌ವರಿ. ಆ ಅಣ್ಣಾಜಿ ಇದ್ದನಲ್ಲ ಅವನಿಗೊಂದೆರಡು ಹೆಂಗಸರು ಕಾಂಟ್ಯಾಕ್ಸ್‌ಇದ್ದರಂತೆ ಮಹಾರಾಷ್ಟ್ರದಲ್ಲಿ. ಅವರ ಅಡ್ರೆಸ್‌ಗಳು ಸಿಕ್ಕರೆ ಸಾಕು ನಮಗೆ ಅಂತ.’

ಜೋಷಿ ಅಷ್ಟು ಮಾತಾಡಿ ಸುಮ್ಮನಾದ. ತೆಲುಗಿನಲ್ಲಿ ನೀರು ತರುವಂತೆ ಪೇದೆಯನ್ನು ಕೂಗಿದ. ಕೃಷ್ಣಪ್ಪನಿಗೆ ‘ನೀರಿಗೇನಂತೆ’ ಎಂದು ಒಂದು ಗ್ಲಾಸು ಹೂಜಿಯ ತಣ್ಣನೆಯ ನೀರು ಕೊಟ್ಟು ತಾನೂ ಕುಡಿದ.

‘ಈ ಇನ್‌ವೆಸ್ಟಿಗೇಶನ್‌ಗೆ ನಾನೇ ಮುಖ್ಯ ನೋಡ್ರಿ. ನಿಮ್ಮಿಂದ ಅಷ್ಟು ತಿಳಿದರೆ ಸಾಕು ಬಿಟ್ಟುಬಿಡ್ತೀವೀಂತ ಮಹೇಶ್ವರಯ್ಯನಿಗೆ ಹೇಳಿದೆ. ತುಂಬ ಇಂಟರೆಸ್ಟಿಂಗ್‌ಮನುಷ್ಯ. ಅಂಥವರು ಸಿಕ್ಕಿದ್ದರಿಂದ ಯೂ ಆರ್ ಲಕ್ಕಿ. ಪಾಪ – ಅದ್ಹೇಗೆ ಆ ಅಣ್ಣಾಜೀಂತಿರಲ್ಲ ಅವನು ನಿಮಗೆ ಗಂಟುಬಿದ್ದನೋ. ನಾನು ನನ್ನ ಮಗನಿಗೆ ಹೇಳ್ತೀನಿ. ಅಯ್ಯ ಏನೇ ಮಾಡು, ಪೋಲೀಸರ ಕೈಗೆ ಮಾತ್ರ ಸಿಕ್ಕಿಹಾಕಿಕೊಬೇಡ ಅಂತ.’

ಕೃಷ್ಣಪ್ಪ ಮೆದುವಾದ ಧ್ವನಿಯಲ್ಲಿ ಹೇಳಿದ – ಇದೇ ತನ್ನ ಕೊನೆಯ ಮಾತು ಎನ್ನುವಂತೆ

‘ನನಗೇನೂ ಗೊತ್ತಿಲ್ಲ.’

ಆಲ್‌ರೈಟ್‌ಎಂದು ಜೋಷಿ ಎದ್ದು ನಿಂತು ಅವನ ಪೀಕ್‌ಕ್ಯಾಪ್‌ಹಾಕಿಕೊಂಡ.

‘ಹೇಳಬೇಕು ಅನ್ನಿಸಿದಾಗ ನನಗೆ ಹೇಳಿ ಕಳಿಸಿ. ಬಾಯಿ ಬಿಡದೆ ಇಲ್ಲಿಂದ ಹೊರಗೆ ಹೋದವರು ಇಲ್ಲಾರಿ. ನಾನು ಹೇಳ್ತಿರೋದು ಫ್ಯಾಕ್ಟ. ನಿಮಗೆ ಹೆದರಿಸಕ್ಕಲ್ಲ’.

ಎಂದು ಅಂಗಿಯನ್ನು ಜಗ್ಗಿ ಸರಮಾಡಿಕೊಂಡು ಹೋದ. ಪೇದೆ ಬಂದು ಅವನನ್ನು ಎಬ್ಬಿಸಿಕೊಂಡು ಮತ್ತೆ ಏರೋಪ್ಲೇನ್‌ಏರಿಸುವ ಜಾಗಕ್ಕೆ ತಂದ. ಅಲ್ಲಿ ಒಬ್ಬನನ್ನು ಏರೋಪ್ಲೇನ್‌ಏರಿಸುತ್ತ ದಪ್ಪ ಮುಖದ ಅಧಿಕಾರಿ ನಿಂತಿದ್ದ. ಹರಿದ ಅಂಗಿ ತೊಟ್ಟು ಪ್ಯಾಂಟ್‌ಹಾಕಿದವನ ಕೈಗಳು ಏರುತ್ತಿದ್ದಂತೆ ಅವನು ಕಿರುಚಿಕೊಳ್ಳಲು ಶುರು ಮಾಡಿದ. ತೆಲುಗಿನಲ್ಲಿ

ಅವನು ಬಡಬಡಿಸುತ್ತಿದ್ದಾಗ ಅಧಿಕಾರಿ ಅವನನ್ನು ಇಳಿಸಿ ಅವನು ಹೇಳಿದ್ದನ್ನು ಗುರುತು ಮಾಡಿಕೊಂಡು ದಫೇದಾರನೊಬ್ಬನ ಜೊತೆ ಅವನನ್ನು ಕಳಿಸಿದ. ಈ ದೃಶ್ಯವನ್ನು ನೋಡಲು ಕೃಷ್ಣಪ್ಪನನ್ನು ನಿಲ್ಲಿಸಿಕೊಂಡಿದ್ದವ ನಂತರ ಅವನನ್ನು ಎಲ್ಲೆಲ್ಲೋ ಬಳಸಿ, ಮೆಟ್ಟಲುಗಳನ್ನು ಹತ್ತಿಸಿ ಇಳಿಸಿ ಹಲವು ರೂಂಗಳ ಮೂಲಕ ಕರೆದುಕೊಂಡು ಹೋದ. ಕೊನೆಗೊಂದು ಹಾಲಿನ ಮುಖಾಂತರ ಅವನನ್ನು ಕರೆದುಕೊಂಡು ಹೋಗುವಾಗ ಅಲ್ಲಿ ಸಾದಾ ಬಟ್ಟೆಗಳನ್ನು ತೊಟ್ಟವರು ಮೇಜಿನ ಎದುರು ಕೂತು ಬರೆಯುತ್ತಿದ್ದುದನ್ನು ಕೃಷ್ಣಪ್ಪ ಕಂಡ. ಎಲ್ಲ ಸಾಮಾನ್ಯ ಕಚೇರಿಗಳಂತೆಯೇ ಇದೂ ಇತ್ತು. ಹಣೆಗೆ ವಿಭೂತಿ ತೊಟ್ಟು ಬೆಳ್ಳನೆಯ ಟೋಪಿ ಹಾಕಿಕೊಂಡವನೊಬ್ಬ ನಡುವಿನ ಮೇಜಿನ ಎದುರು ಕೂತು ಬರೆಯುತ್ತಿದ್ದ. ಶಾಯಿ ಹತ್ತಿದ ಟೇಬಲ್‌ಕ್ಲಾತ್, ಒಂದು ಪಾತ್ರೆಯಲ್ಲಿ ಬೆಂದಿದ್ದ ಹಳಸಿದ ವಾಸನೆಯ ಹಿಟ್ಟಿನ ಗೊಂದು, ಅದರಲ್ಲಿ ಅದ್ದಿದ್ದ ದಪ್ಪನೆಯ ಕಡ್ಡಿ, ಗೋಡೆಯ ಮೇಲೆ ಬೋಸ್‌ನೆಹರೂ ಪಟಗಳು, ಮೂಲೆಗಳಲ್ಲಿ ಬೀಡಿ ಸೇದುತ್ತ ನಿಂತ ಜವಾನರು, ಬೀಡಿ ಆರಿಸುವಾಗ ಗೋಡೆಗೆ ಹತ್ತಿದ ಕರಿಯ ಗುರುತುಗಳು, ಮೂಲೆಯಲ್ಲಿ ಒಟ್ಟಿದ ಮರಳಿನ ಮೇಲೆ ಬಾಯಿ ತೆರೆದುಕೊಂಡಿದ್ದ ನೀರಿನ ಹೂಜಿಗಳು, ಎಲ್ಲರೂ ಸಣ್ಣದನಿಯಲ್ಲಿ ಮಾಡುತ್ತಿದ್ದ ಗಿಜಿ ಗಿಜಿ ಶಬ್ದ, ತೆರೆದ ಕಪಾಟುಗಳಲ್ಲಿ ಪೇರಿಸಿಟ್ಟು ಹಳದಿ ಬಣ್ಣಕ್ಕೆ ತಿರುಗಿದ ಫೈಲುಗಳು – ಇವುಗಳನ್ನೆಲ್ಲ ನೋಡುತ್ತ ಕೃಷ್ಣಪ್ಪ ನಿಧಾನವಾಗಿ ಈ ಲಯದಂತೆ ಉದ್ದವಾಗಿದ್ದ ಹಾಲಿನಲ್ಲಿ ಮೇಜುಗಳ ನಡುವೆ ದಾರಿ ಮಾಡಿಕೊಳ್ಳುತ್ತ ಚಲಿಸಿದ. ಇದೇ ಡಿಸ್ಟ್ರಿಕ್ಟಿನ ಮುಖ್ಯ ಠಾಣೆಯಿರಬೇಕು. ಜೋಷಿಯೂ ಇಲ್ಲೇ ಎಲ್ಲೋ ಇದ್ದಾನೆ.  ಮೇಲೆ ಎಷ್ಟೋ ರೂಮುಗಳಲ್ಲಿ ಅವನ ಮೇಲಿನವನೂ, ಮೇಲಿನವನ ಮೇಲಿನವನೂ ಇದ್ದಾರೆ. ಆ ರೂಮುಗಳಲ್ಲಿ ಫ್ಯಾನ್ ಇರುತ್ತವೆ. ಇದೇ ಕಟ್ಟಡದ ಒಂದು ರೂಮಲ್ಲಿ ತನ್ನ ವಿಚಾರಣೆಯನ್ನು ಮೂವರು ಅಧಿಕಾರಿಗಳು ಮಾಡಿದ್ದು. ಕ್ಷೌರ ಮಾಡಿದ ಮೂತಿಯನ್ನು ತಿರುವುತ್ತ, ಕನ್ನಡಕವನ್ನು ಮೂಗಿನ ಕೆಳಗೆ ಇಳಿಸಿಕೊಂಡು ಕಾಗದಗಳ ಮೇಲೆ ಲೇಖನಿಯಲ್ಲಿ ಏಕಾಗ್ರವಾಗಿ ಬರೆಯುತ್ತ ಕೂತ ಇವರೆಲ್ಲ' ಬಡಗೃಹಸ್ಥರಂತೆ ಕಾಣುತ್ತಾರೆ. ಈ ಬಿಲ್ಡಿಂಗ್‌ನಲ್ಲೇ ಎಲ್ಲೋ ಇನ್ನೊಂದು ಮೂಲೆಯಲ್ಲಿ ಆ ಅಂಗಳ ಇದೆ. ತನ್ನನ್ನು ಏರೋಪ್ಲೇನ್‌ಹತ್ತಿಸಿದ ಜಾಗ. ಅಲ್ಲಿಯ ಕಿರುಚಾಟ ಈ ಸದಗೃಹಸ್ಥರಂತೆ ತೋರುವ ಗುಮಾಸ್ತರ ಕಿವಿಗೆ ಬೀಳುವಂತೆ ಕಾಣುವುದಿಲ್ಲ. ಆದರೆ ಅಲ್ಲಿ ಹಿಂಸೆಯ ಮೂಲಕ ಪಡೆದ ವಿಷಯಗಳನ್ನು ಈ ಗುಮಾಸ್ತರೆಲ್ಲ ಸಾಲಾಗಿ ವಾಕ್ಯಗಳನ್ನಾಗಿ ಸಿದ್ಧಪಡಿಸುತ್ತಿರಬಹುದು – ನ್ಯಾಯಾಂಗದೆದುರು ಮಂಡಿಸಲು.

ಇಲ್ಲೆ ಎಲ್ಲೋ ಅಂಗಳವಿದೆ – ಆದರೆ ತನ್ನ ಕತ್ತಲಿನ ಕೋಣೆಯೆಲ್ಲಿದೆ? ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಮೊದಲಿನ ಹೆಜ್ಜೆ: ಈ ಬಿಲ್ಡಿಂಗಿನ ಪ್ಯಾಪನ್ನು ಸಿದ್ಧಪಡಿಸಿದರೆ ತಪ್ಪಿಸಿಕೊಂಡು ಹೋಗುವುದು ಸುಲಭವೆನ್ನುವ ಕಾರಣದಿಂದಲೇ ಮೊದಲ ಸಾರಿ ತನ್ನನ್ನು ಕರೆದುಕೊಂಡು ಹೋದಾಗ ಕಣ್ಣಿಗೆ ಬಟ್ಟೆ ಕಟ್ಟಿದ್ದು. ಇವತ್ತು ತಾನು ಜೋಷಿಯನ್ನು ನೋಡಿದ ರೂಮು, ನಂತರ ಬಂದ ಹಿಂಸೆಯ ಅಂಗಳ, ಅಲ್ಲಿಂದ ಹತ್ತಿ ಇಳಿದು ಹೊಕ್ಕ ರೂಂಗಳು, ಆಮೇಲಿಂದ ಹೊಕ್ಕ ಈ ಲಾಯದಂಥ ಹಾಲು – ಕೃಷ್ಣಪ್ಪನಿಗೆ ಗಜಿಬಿಜಿಯಾಗಿಬಿಟ್ಟವು. ಮುಂದಿನ ಸಾರಿ ಎಲ್ಲವನ್ನೂ ಸ್ಪಷ್ಟವಾಗಿ ನೆನಪಿಡುತ್ತ ಹೋಗಬೇಕೆಂದುಕೊಂಡ. ಲಾಯವನ್ನು ದಾಟುತ್ತಿದ್ದಂತೆ ಸ್ವಲ್ಪ ಆಕಾಶ ಕಂಡಿತು. ಈ ಆಕಾಶವನ್ನು ಒತ್ತಿಕೊಂಡು ಸುತ್ತಲೂ ನಿಂತ ಕಪ್ಪುಕಲ್ಲಿನ ಬೆಟ್ಟಗಳು ಕಂಡವು. ಈ ಕಲ್ಲುಗಳಿಂದ ಊರಿನ ಸೆಖೆ ಇಷ್ಟು ಅಸಹನೀಯವಾಗಿದೆ. ಪುರಾತನ ಕಾಲದ ದೇವಸ್ಥಾನವೆನ್ನುವ ರಾಮಪ್ಪ ದೇವಾಲಯಕ್ಕೆ ಈ ಬಂಡೆಗಳಿಂದಲೇ ಕಲ್ಲನ್ನು ಪಡೆದಿರಬಹುದು.

ಈ ಕಟ್ಟಡದ ಮುಂಭಾಗ ಚೂರು ಕಂಡಂತಾಗಿ ಕೃಷ್ಣಪ್ಪ ಚಕಿತನಾದ. ಇಷ್ಟೊಂದು ಕ್ಷುದ್ರವಾದ ಹಾಲುಗಳನ್ನೂ, ಚಿತ್ರಹಿಂಸೆಯ ಅಂಗಳವನ್ನೂ, ಬದುಕಿನ ಜಂಜಾಟದಲ್ಲಿ ಸುಸ್ತಾದವರಂತೆ ಕಾಣುವ ಗುಳಿಬಿದ್ದ ಕಣ್ಣುಗಳ ಬಡಕಲು ಗುಮಾಸ್ತರನ್ನೂ

ರಾಕ್ಷಸನಂತಿದ್ದ ದಪ್ಪ ಮುಖದ ಅಧಿಕಾರಿಯನ್ನೂ ಒಳಗೊಂಡ ಈ ಬೃಹತ್‌ಕಟ್ಟಡದ ಮುಂಭಾಗ ಸುಂದರವಾಗಿತ್ತು. ಇಷ್ಟೊಂದು ಧಗೆಯಲ್ಲೂ ಹಸಿರಾದ ಹಸಿಯಾದ ಲಾನ್‌ಇತ್ತು. ನೀರಿನ ಬುಗ್ಗೆಯಿತ್ತು. ಕೃತಕವಾಗಿ ಸೊಂಟವನ್ನು ಬಳುಕಿಸಿ ಕೊಡವೊಂದನ್ನು ಹಿಡಿದು ನಿಮತ ಹೆಣ್ಣಿನ ಶಿಲ್ಪವೊಂದರ ಮೆಲೆ ಈ ಬುಗ್ಗೆ ಚಿಮ್ಮುತ್ತಿತ್ತು. ಈ ಬಿಲ್ಡಿಂಗಿನ ಆಚೆ ಸೈಕಲ್‌ರಿಕ್ಷಾಗಳು ಸಾಲಾಗಿ ಕಾಯುತ್ತಿದ್ದವು. ಯಾವ ಭಯವೂ ಇಲ್ಲದೆ ಎಲೆಯಡಿಕೆ ಜಗಿಯುತ್ತ ರೈತರು, ಕಚ್ಚೆಪಂಚೆಯನ್ನು ಎತ್ತಿ ಹಿಡಿದ ಪೇಟೆಯವರು ಓಡಾಡುತ್ತಿದ್ದರು. ಕೃಷ್ಣಪ್ಪ ಬಿಲ್ಡಿಂಗಿನ ಮುಂಭಾಗದ ದಿಕ್ಕನ್ನೂ ಈಗ ಮಧ್ಯಾಹ್ನವೆಂಬುದನ್ನೂ ಮನಸ್ಸಲ್ಲಿ ಗುರುತು ಹಾಕಿಕೊಂಡ. ಮೊದಲನೇ ಪಾಠ: ಸದ್ಯದ ನೋವು ನಿರೀಕ್ಷಿಸಿದ್ದಕ್ಕಿಂತ ಸಹ್ಯವಾಗಿರುತ್ತದೆ. ಎರಡನೇ ಪಾಠ: ಆ ಕತ್ತಲಿನ ಕೋಣೆಯಲ್ಲಿ ಕಾಲ ದೇಶಗಳು ಮರೆಯುತ್ತ ಹೋಗಬಹುದಾದ್ದರಿಂದ, ಕಾಲ ಮತ್ತು ಅವಕಾಶಗಳಲ್ಲಿ ತಾನು ಎಲ್ಲಿದ್ದೇನೆ ಎಂಬ ಪರಿವೆ ತನ್ನಿಂದ ಮಾಯವಾಗದಂತೆ ನೋಡಿಕೊಳ್ಳಬೇಕು.

ಹಸಿವಿನಿಂದ ಕಾಲುಗಳಲ್ಲಿ ಶಕ್ತಿಯಿರಲಿಲ್ಲ. ಅವನ ಜೊತೆಗಿದ್ದ ಮೈಲೆಕಜ್ಜಿ ತೂತುಗಳು ಮುಖದ ಪೇದೆ ಕ್ರೂರಿಯಂತೆ ಕಾಣದ್ದರಿಂದ ಅವನಿಗೆ ನೀರು ಬೇಕೆಂದು ಸನ್ನೆ ಮಾಡಿದ. ತಣ್ಣಗಿದ್ದ ನೀರನ್ನು ಅಲ್ಲೆ ಮೂಲೆಯಲ್ಲಿದ್ದ ಹೂಜಿಯಿಂದ ಪೇದೆ ಕೊಟ್ಟ. ಕಟ್ಟಡದ ಮುಂಭಾಗವನ್ನು ಇನ್ನಷ್ಟು ನೋಡಿ ತಣಿಯಲು ನೀರು ಕುಡಿಯುವ ನೆವದಿಂದ ಅಲ್ಲೆ ನಿಂತಿದ್ದ. ಪೇದೆ ಅವಸರ ಮಾಡಿ ಹೊರಡಿಸಿದ. ಅವನು ಈಗ ಹೊಕ್ಕು ಹೊರಟ ರೂಮುಗಳು ಖಾಲಿಯಾಗಿದ್ದವು. ಮತ್ತೆ ತಾನೆಲ್ಲಿದ್ದೇನೆಂದು ಗಲಿಬಿಲಿಯಾಯಿತು. ಎಲ್ಲೆಲ್ಲೋ ನಡೆದು ಕೊನೆಗೆ ನಿಂತಿದ್ದಾಗ ಅವನೆದುರಿದ್ದ ಬಾಗಿಲು ತನ್ನ ಕೋಣೆಯದೆಂದು ಗೊತ್ತಾಯಿತು. ಪೇದೆ ಅವನನ್ನು ಒಳಗೆ ಬಿಟ್ಟು ಬಾಗಿಲು ಹಾಕಿಕೊಂಡ.

ತಗಣಿಗಳು ಮೈಯ ಮೇಲೆ ಹರಿದು ಕಚ್ಚಿದಾಗ ಆಶ್ಚರ್ಯವಾಗಲಿಲ್ಲ. ಮೈಯನ್ನು ಉಜ್ಜಿಕೊಳ್ಳುತ್ತ ಸಿಮೆಂಟ್‌ನ ಮಂಚದ ಮೇಲೆ ಕೂತ ಈ ತಗಣಿಗಳಿಂದಾದರೂ ಮೈಯ ಎಚ್ಚರ ಉಳಿಯುತ್ತದಲ್ಲ. ಊರಿನ ಹವಾಕ್ಕೆ ಒಗ್ಗಿರುವುದರಿಂದಲೋ ಏನೋ ಮೈ ಅಷ್ಟೇನೂ ಬೆವರುತ್ತಿಲ್ಲ. ಹಾಗೇ ಕೂತಿದ್ದಂತೆ ಕಣ್ಣುಗಳು ಬಾಡಿದವು. ಯಾರಾದರೂ ಥಟ್ಟನೆ ಎಬ್ಬಿಸಿ ಬಿಡುತ್ತಾರೆಂದು ದಿಗಿಲುಪಡುತ್ತ, ಅಷ್ಟರೊಳಗೆ ದೇಹಕ್ಕೆ ಬೇಕಾದ ನಿದ್ದೆಯನ್ನೆಲ್ಲ ಪಡೆದುಬಿಡಬೇಕೆಂದು ಏಕಾಗ್ರನಾಗುತ್ತ, ಕಣ್ಣುಗಳನ್ನು ಮುಚ್ಚಿ ಗೋಡೆಗೆ ಒರಗಿದ. ತಗಣಿಗಳು ಇವೆ. ಅವು ಕಚ್ಚುತ್ತಲೇ ಇರುತ್ತವೆ, ಇದು ಅನಿವಾರ್ಯ ಎಂದು ತಿಳಿಯಲು ಯತ್ನಿಸುತ್ತಿದ್ದಂತೆ ಕೃಷ್ಣಪ್ಪನಿಗೆ ಗಾಢವಾದ ನಿದ್ದೆ ಬಂತು.

ಎಚ್ಚರಾದಾಗ ಇದು ಅದೇ ದಿನವೋ, ಮೂರನೇ ದಿನವೋ, ಹಗಲೋ, ರಾತ್ರೆಯೋ ತಿಳಿಯದೇ ಕಸಿವಿಸಿಯಾಯಿತು. ಮೂಗಿನ ಎರಡು ಸೊಳ್ಳೆಗಳಿಗೂ ಮೂಗು ಬಟ್ಟೆಟ್ಟುಕೊಂಡು, ತಲೆಗೆ ಸಣ್ಣದೊಂದು ಗಂಟುಹಾಕಿ ಅದರಲ್ಲಿ ಸಂಪಿಗೆ ಮುಡಿದುಕೊಂಡು'ಮಡಿ ದೂರವಿರು' ಎನ್ನುತ್ತ ತನಗೆ ದೂರದಿಂದ ಕೋಡಬಳೆ ಎಸೆಯುತ್ತಿದ್ದ ರುಕ್ಮಿಣಿಯಮ್ಮನ ನೆನಪಾಗಿ ಅವರ ಜೊತೆ ನಡೆದ ನಗಬಲ್ಲಂಥ ಯಾವುದಾದರೊಂದು ಘಟನೆಗಾಗಿ ಹುಡುಕುತ್ತ ಕೂತ. ಅವನು ಯೋಚಿಸಲು ಇಚ್ಚೆಪಡದೇ ಇದ್ದುದೊಂದು ನೆನಪಾಗಿ ಅವನನ್ನು ಕಾಡಿತು.

ಕೃಷ್ಣಪ್ಪ ಹೊಟ್ಟೆಯಲ್ಲಿರುವಾಗಲೇ ಅವನ ಅಪ್ಪ ಸತ್ತಿದ್ದು, ಬಾಲಕನಾಗಿದ್ದಾಗ ಕೃಷ್ಣಪ್ಪ ತನ್ನ ಅಪ್ಪ ಎಲ್ಲರಂತೆಯೇ ಮುದುಕನಾಗಿ ಸತ್ತಿರಬೇಕೆಂದು ಭಾವಿಸಿದ್ದ. ಆದರೆ ಮಹೇಶ್ವರಯ್ಯ ತನ್ನನ್ನು ದನಕಾಯುವುದರಿಂದ ಬಿಡಿಸಿ ಸ್ಕೂಲಿಗೆ

ಸೇರಿಸಲು ಪೇಟೆಗೆ ಕರೆದುಕೊಂಡು ಹೋಗುವ ದಿನ ತಾಯಿ ಅವನನ್ನು ಊರ ಹೊರಗಿದ್ದ ಆಲದಮರದ ಕೆಳಗೆ ಕೂರಿಸಿಕೊಂಡು ಅಪ್ಪ ಸತ್ತದ್ದು ಹೇಗೆ ಎಂಬುದನ್ನು ಅಳುತ್ತ ವಿವರಿಸಿದ್ದಳು. ಅಪ್ಪ ಹಠಮಾರಿ. ಅವನಿಗೂ ದಾಯಾದಿಗಳಿಗೂ ಪಾಲಾಗಿದ್ದರೂ ಎಷ್ಟೋ ದಿನಗಳ ತನಕ ಒಂದು ಅಡಿಕೆ ತೋಟದ ಬಗ್ಗೆ ಜಗಳ ನಡದೇ ಇತ್ತು – ಅವನ ದೊಡ್ಡಪ್ಪನ ಮಗನ ಜೊತೆಗೆ. ಈ ಪುಟ್ಟಣ್ಣ ಗೌಡನಿಗೆ ತುಂಬ ಅಸೂಯೆ. ಹುಲ್ಲಿನ ಮೆದೆಗೆ ಬೆಂಕಿ ಹತ್ತಿಸುವುದು ಇತ್ಯಾದಿ ಕಿರುಕುಳ ಕೊಡುತ್ತಲೇ ಇದ್ದ.

ಅಪ್ಪ ಹಠಮಾರಿಯಾದ್ದರಿಂದ ಇದಕ್ಕೆಲ್ಲ ಜಗ್ಗಲಿಲ್ಲ. ಒಂದು ಕೋರ್ಟಿನಿಂದ ಇನ್ನೊಂದು ಕೋರ್ಟಿಗೆ ಅಲೆದೂ ಅಲೆದೂ ಅಂತೂ ಕೊನೆಗೆ ತೋಟದ ಹಕ್ಕು ತನ್ನದೆಂದು ಸ್ಥಾಪಿಸಿಕೊಂಡ ಅದಾದ ಮೂರನೇ ದಿನ ಅಪ್ಪ ಮನೆಗೆ ಬರಲಿಲ್ಲ. ದನಕಾಯುವ ಹುಡುಗನೊಬ್ಬ ಭಯಂಕರ ವಾದೊಂದು ಕಥೆಯನ್ನು ತಂದ. ಹೋಗಿ ನೋಡಿದರೆ ಬಿದಿರು ಮೆಳೆಯೊಂದರ ಬುಡದಲ್ಲಿ ಅಪ್ಪನನ್ನು ಕಡಿದು ಚೂರು ಚೂರು ಮಾಡಿ ಬಿಸಾಕಿದ್ದರು. ಪೋಲೀಸ್‌ಕೇಸಾಯಿತು. ಪುಟ್ಟಣ್ಣ ಗೌಡನಿಗೆ ಫಾಸಿಯಾಯಿತು. ಅದಾದ ಮೇಲೆಯೇ ಅವನ ಅಮ್ಮ ತನ್ನ ಅಣ್ಣನ ಮನೆ ಸೇರಿದ್ದು.

ಈ ಕಥೆ ಕೇಳಿದ ಮೇಲೆಯೇ ಕೃಷ್ಣಪ್ಪನಿಗೆ ಯಾಕೆ ಅತ್ತೆ ಸಿಟ್ಟು ಬಂದಾಗಲೆಲ್ಲ'ಅಪ್ಪನನ್ನು ತಿಂದು ಹುಟ್ಟಿದ ಶನಿ' ಎಂದು ತನ್ನನ್ನು ಬಯ್ಯುತ್ತಿದ್ದುದು ಎಂದು ತಿಳಿದಿದ್ದು.

ಈ ಘಟನೆ ತನ್ನನ್ನು ಭಾದಿಸದಂತೆ ನೋಡಿಕೊಂಡಿದ್ದ. ಯಾರಿಗೂ ತನ್ನ ಅಪ್ಪ ಕೊಲೆಯಾದ್ದನ್ನ ಹೇಳಿಕೊಳ್ಳಬೇಕೆಂದು ಅವನಿಗೆ ಅನ್ನಿಸಿದ್ದಿಲ್ಲ. ಮಹೇಶ್ವರಯ್ಯ ಕೂಡ ಅದನ್ನು ಕೇಳಿದ್ದಿಲ್ಲ – ಆದರೆ ತನ್ನ ಜೀವನವನ್ನು ಹುಟ್ಟಿದಾರಭ್ಯ ತಮಸ್ಸು ಕವಿದು ನಾಶ ಮಾಡಲು ಪ್ರಯತ್ನಿಸುತ್ತಿರುವುದಾಗಿಯೂ, ಅದನ್ನು ತಾನು ಛಲದಿಂದ ಗೆಲ್ಲುತ್ತ ಹೋಗಬೇಕೆಂದೂ ಅಸ್ಪಷ್ಟವಾಗಿ ಕೃಷ್ಣಪ್ಪನಿಗೆ ಅನ್ನಿಸಿದೆ.

ತನ್ನ ಅಪ್ಪನನ್ನು ಕೊಲ್ಲಬೇಕೆನ್ನಿಸುವಷ್ಟು ದ್ವೇಷ ಯಾಕೆ ಅವನ ದಾಯಾದಿಗೆ ಹುಟ್ಟಿತು ? ಇಂಥ ದ್ವೇಷವನ್ನು ಬೇರವರಲ್ಲಿ ತಾನೂ ಹುಟ್ಟುವಂತೆ ಮಾಡುತ್ತಿರಬಹುದು. ಕೆಲವರನ್ನು ನೋಡಿದಾಗ ತಾನು ಕ್ಷುಲ್ಲಕ, ಕ್ಷುದ್ರ, ತಮಸ್‌ಎಂದು ತಿಳಿದದ್ದೆಲ್ಲ ಅವರಲ್ಲಿ ಕ್ರೋಢೀಕರಿಸಿದಂತೆ ಕಾಣುತ್ತದೆ. ಹೀಗೆ ತಾನು ಕಂಡದ್ದೆಲ್ಲ ಇಲ್ಲಿ – ಈ ನೆಲದ ಧೂಳಿನಲ್ಲಿ, ಈ ಸೆಖೆಯಲ್ಲಿ, ಈ ತಗಣೆಗಳಲ್ಲಿ, ಈ ಗಾಳಿಯಿಲ್ಲದ ಕತ್ತಲಲ್ಲಿ – ಕೇಂದ್ರೀಕರಿಸಿದಂತೆ ಅನ್ನಿಸುತ್ತದೆ. ಇದನ್ನು ನಾನು ಗೆಲ್ಲಬಲ್ಲೆನೋ ಎಂದು ಕೃಷ್ಣಪ್ಪ ಅವಡು ಕಚ್ಚಿ ಎದ್ದು ನಿಂತ.

ಅಣ್ಣಾಜಿ ಹೇಳಿದ್ದ : ಕ್ಷುದ್ರತೇನ್ನ ಗೆಲ್ಲಬೇಕಾದ್ದು ನಿನ್ನ ಮನಸ್ಸಲ್ಲಿ ಅಲ್ಲ, ಹೊರಗಿನ ಪ್ರಪಂಚದಲ್ಲಿ. ಅದರ ಮೂಲ ಇರೋದು ಅಲ್ಲಿ. ಅವನು ಹೇಳಿದ್ದು ನಿಜವಿರಬಹುದು. ಆದರೆ ತಾನು ಈ ಸಧ್ಯದಲ್ಲಿ ತನ್ನ ಮನಸ್ಸು ಅದರಿಂದ ನಾಶವಾಗದಂತೆ ಮೀರಿ ನಿಲ್ಲುವ ಉಪಾಯಗಳನ್ನು ಹುಡುಕಲೇಬೇಕಾಗಿದೆ. ಇಲ್ಲೆ ತಾನು ಪ್ರಾಯಃ ಸಾಯಬೇಕಾಗಿ ಬಂದರೆ ಅವಡು ಕಚ್ಚಿಕೊಂಡೇ ಸಾಯಬೇಕು. ಕೊನೆ ಘಳಿಗೆ ತನಕ ತನ್ನ ಮನಸ್ಸನ್ನು ಈ ತಮಸ್ಸು ಆವರಿಸಿದಂತೆ ಕಾಯ್ದುಕೊಳ್ಳಬೇಕು.

ಮಹೇಶ್ವರಯ್ಯ ಹೇಳುವರು: ಅವಧಾನಿಯಾಗಬೇಕು. ಸಿಕ್ಕಿಬೀಳಬಾರದು. ಬಳುಕುವ ಶಕ್ತಿ ಕಳೆದುಕೊಳ್ಳಬಾರದು. ಒಳಗೂ ಇರಬೇಕು, ಹೊರಗೂ ಇರಬೇಕು. ಹಣ್ಣನ್ನು ತಿನ್ನಲೂ ಬೇಕು, ನೋಡುತ್ತಲೂ ಇರಬೇಕು. ಹಗುರಾದ ಮೈ, ಬಲವಾದ ರೆಕ್ಕೆ, ಹರಿತವಾದ ಉಗುರು, ಚೂಪಾದ ಆಕಾಶಕ್ಕೆತ್ತಿದ ಕೊಕ್ಕು, ಅಪಾಯ ಅಷ್ಟು ದೂರ ಇದ್ದಾಗಲೂ ಅದು ತಿಳಿಯುತ್ತೆ. ಒಡನಾಡಿಗೆ ಹಾತೊರೆಯುವುದಿಲ್ಲ, ತನ್ನಷ್ಟಕ್ಕೆ ಹಾಡಿಕೊಳ್ಳುತ್ತೆ.

ಹೀಗೆ ಯೋಚಿಸುತ್ತ ಸ್ವಲ್ಪ ಹೊತ್ತು ಕಳೆದ ಮೇಲೆ ಕಾಲದ ಪರಿವೆಯನ್ನು ತಾನು ಕಳೆದುಕೊಂಡೇ ಬಿಟ್ಟೆ ಎನ್ನಿಸಿತು. ಈ ರೂಮಿನ ಗೋಡೆಯ ಆಚೆ ಇನ್ನೊಂದು ರೂಮಿರಬೇಕು – ಬೀದಿಯಲ್ಲ. ಆ ಅಂಗಳದ ಆಚೆಯಿಂದ ಕೇಳುವಂತೆ ಇಲ್ಲಿಂದ ಏನೂ ಕೇಳಿಸುವುದಿಲ್ಲ. ಆ ದಪ್ಪ ಮೋರೆಯ ಅಧಿಕಾರಿ ತನ್ನನ್ನು ಮರೆತು ಬಿಟ್ಟಿರಬೇಕು. ಕಣ್ಣೆದುರಿಗೆ ಇದ್ದಾಗಲೇ ಇನ್ನೇನು ಅತ್ಯಂತ ಕ್ರೂರವಾಗಿ ಅವನು ಮೇಲೆರಗಬಹುದು ಅನ್ನಿಸುತ್ತಿದ್ದಂತೆಯೇ ಅವನು ತನ್ನನ್ನು ಅಲಕ್ಷಿಸಿ ಇನ್ನೆಲ್ಲೋ ಗಮನ ಹರಿಸಿದ್ದು ನೆನಪಿಗೆ ಬಂದು ದಿಗಿಲಾಯಿತು. ಅವನು, ಜೋಷಿ, ಮತ್ತೊಬ್ಬ ತನ್ನನ್ನು ಮರೆತುಬಿಟ್ಟು ಬೇರೆ ಯಾರನ್ನೋ ಹುಡುಕುತ್ತಲೋ ಶಿಕ್ಷಿಸುತ್ತಲೋ ಇರಬಹುದು. ತನ್ನಲ್ಲೇನು ಹುರುಳಿಲ್ಲದ್ದರಿಂದ ಬಿಡುಗಡೆ ಮಾಡಬೇಕೆಂದು ನಿಶ್ಚಯಿಸಿ, ಮಾಡಿದ್ದೇವೆಂದು ತಿಳಿದಿರಬಹುದು. ಇನ್ನೊಮ್ಮೆ ಶಿಕ್ಷಿಸಲು ತನ್ನನ್ನು ಹೊರಗೆ ಒಯ್ದಾರೆ ಎಂದು ಆಸೆಯಾಯಿತು.

ಎಷ್ಟು ಉಜ್ಜಿಕೊಂಡರೂ ಯಾವುದೋ ಮೂಲೆಯಿಂದ ತಗಣಿಗಳು ಕತ್ತಿನ ಪಟ್ಟಿ, ಕಂಕುಳ ಸಂದು, ತೊಡೆಯ ಸಂದುಗಳಲ್ಲಿ ಕಚ್ಚಿದುವು. ಈ ಕತ್ತಲಿನ ಕೋಣೆಯೊಂದು ಉದರವಿದ್ದಂತೆ, ಈ ಉದರದಲ್ಲಿ ತಾನು ಕ್ರಮೇಣ ಜೀರ್ಣವಾಗುತ್ತ ಹೋಗುತ್ತಿದ್ದಂತೆ ಭಾಸವಾಯಿತು.

ಈ ಬಗೆಯ ಯೋಚನೆ ಲೋಲುಪತ ಎಂದು ನಾಚಿಕೆಯಾಯಿತು. ಚಿತ್ರಹಿಂಸೆಗಳನ್ನು ಅತ್ಯಂತ ಸಂದಿಗ್ಧವಾಗಿ ನೆರವೇರಿಸುವ ಯಂತ್ರವನ್ನು ಕಲ್ಪಿಸುತ್ತ ಕೂತ. ಇದರಿಂದಲೂ ಸುಸ್ತಾಯಿತು. ಉಪವಾಸ ಮಾಡುತ್ತ ಎಷ್ಟು ದಿನಗಳಾದವೊ ? ಮೂರೊ ? ನಾಲ್ಕೊ ? ಬಾಯಾರಿಕೆ ಪ್ರಾರಂಭವಾಗಿತ್ತು. ಕತ್ತಲಿನಲ್ಲಿ ಪರದಾಡುತ್ತ ಹೋಗಿ ಬೋಗುಣಿಯಲ್ಲಿ ಉಳಿದಿದ್ದ ನೀರಿನಿಂದ ಬಾಯನ್ನು ಒದ್ದೆಮಾಡಿಕೊಂಡ.

ತಾನೇನು ಮಾಡುತ್ತಿದ್ದೇನೆಂಬುದು ಪತ್ತೆಯಾಗದಂತೆಯೇ ಕೈಯ ಬೆರಳಿಂದ ನೆಲದ ಮೇಲಿನ ಧೂಳಿನಲ್ಲಿ ಅವನು ಸಮಯ ಮತದ ಸೃಷ್ಟಿ ಕ್ರಮದಲ್ಲಿ ಚಕ್ರವನ್ನು ಬರೆಯತೊಡಗಿದ್ದ. ಮಹೇಶ್ವರಯ್ಯ ಎದುರೇ ಕೂತು ವಿವರಿಸುತ್ತಿದ್ದಂತೆ ಭಾಸವಾಗುತ್ತಿತ್ತು. ಪ್ರಾಯಃ ಹಿಂದೊಮ್ಮೆ ಆದಂತೆ ಬುದ್ಧಿ ಭ್ರಮಣೆ ಆಗುತ್ತಿದೆ; ನಾನು ದೇವರನ್ನು ನಂಬುವುದಿಲ್ಲ ಎಂದುಕೊಳ್ಳುತ್ತಲೇ ಚಕ್ರವನ್ನು ಸೃಷ್ಟಿ ಮಾಡುತ್ತ ತಗಣೆಗಳನ್ನು ಮೈಯಿಂದ ಉಜ್ಜಿ ಕೊಳ್ಳುತ್ತ ಕೂತ. ಮೂಡಲು ಮುಖದ ತ್ರಿಕೋಣ ಮೊದಲು. ಮಧ್ಯೆ ಬಿಂದು, ಅದರ ಮೇಲೆ ಮೊದಲಿನ ತ್ರಿಕೋಣದ ಮಧ್ಯವನ್ನು ಭೇದಿಸಿ ಮೂಡಲ ಮುಖದ ಇನ್ನೊಂದು ತ್ರಿಕೋಣ. ಮೊದಲ ತ್ರಿಕೋಣಾಗ್ರದಿಂದ ಪಡುವಲು ಮುಖವಾಗಿ ಮತ್ತೊಂದು ತ್ರಿಕೋಣ ಬರೆದು. . . . ಮಹೇಶ್ವರಯ್ಯನ ಕಣ್ಣುಗಳು ಏಕಾಗ್ರವಾಗಿ ಹೊಳೆಯುತ್ತಿದ್ದವು. ಹಣೆಯ ಮೇಲೆ ಅಗಲವಾದ ಕುಂಕುಮ, ಒದ್ದೆಯಾದ ಉದ್ದನೆಯ ಕೊದಲು ಬೆನ್ನಿನ ಮೇಲೆ. ಕೆಂಪು ಅಂಚಿನ ಪಂಚೆಯನ್ನು ಕಚ್ಚೆಹಾಕಿ ಉಟ್ಟು, ಬತ್ತಲಾದ ಎದೆಯ ಮೇಲೆ ರುದ್ರಾಕ್ಷಿ ತೊಟ್ಟಿರುತ್ತಿದ್ದರು.

ಸಮಯಿಗಳಿಗೆ ಹೃದಯ ಕಮಲದಲ್ಲಿಯೇ ಪೂಜೆ - ಎಂದು ಮಹೇಶ್ವರಯ್ಯ ಹೇಳಿದ್ದರು. ಅಂಥ ಪೂಜೆಗೆ ಕೃಷ್ಣಪ್ಪ ಅಣಿಯಾಗುತ್ತಲಿದ್ದಾಗ ಮಹೇಶ್ವರಯ್ಯ ಚಿಂತಾಮಣಿ ಗೃಹವನ್ನು ವರ್ಣಿಸಿದ್ದರು. ಇದಕ್ಕೆ ಎಂಟು ಧಾತುಮಯವಾದ ಪ್ರಾಕಾರ, ಹನ್ನೊಂದು ರತ್ನಮಯವಾದ ಪ್ರಾಕಾರ, ಆರು ತತ್ವಮಯವಾದ ಪ್ರಾಕಾರ. ಹೀಗೆ ಒಟ್ಟು ಇಪ್ಪತ್ತೈದು ಪ್ರಾಕಾರಗಳು. ಒಂದಕ್ಕಿಂತ ಇನ್ನೊಂದು ಎತ್ತರ. ಯಾವುದೇ ಪ್ರಾಕಾರದಲ್ಲಿ ಪ್ರವೇಶ ಕಷ್ಟ. . . . .

ತಾನು ಅಂಥ ಒಂದು ವ್ಯೂಹದಲ್ಲಿದ್ದೇನೆಂದು ಕೃಷ್ಣಪ್ಪ ಅರ್ಧ ಮತ್ತಿನಿಂದ ಅರ್ಧ ಹಾಸ್ಯದಿಂದ ಅಂದುಕೊಂಡ. ನಗಲು ಪ್ರಾರಂಭಿಸಿದ. ಮೂಲಾಧಾರ ಕಂದ ಮಧ್ಯದಲ್ಲಿ ಮದನಾಗಾರ ರೂಪವಾದ ತ್ರಿಕೋಣವಿದೆ. ಅಲ್ಲಿ ಊರ್ಧ್ವ ಮುಖವಾಗಿ ಸ್ವಯಂಭೂ ಲಿಂಗವಿದೆ. ಅದನ್ನು ಸರ್ಪಾಕಾರವಾಗಿ ಮೂರುವರೆ ಸುತ್ತಿಕೊಂಡು ಇಂಪಾಗಿಯೂ ಅಸ್ಫುಟವಾಗಿಯೂ ಕುಂಡಲಿನೀ ಶಕ್ತಿ ಶಬ್ದ ಮಾಡುತ್ತಿದೆ. ಅಂಥ ಶಬ್ದ ನಗುತ್ತ ಹೊಟ್ಟೆ ಕುಲುಕುವಾಗ ತನ್ನಿಂದ ಹೊರಡುತ್ತಿದೆ ಎನ್ನಿಸಿತು. ಪರಮಶಿವ ಕಾಮೇಶ್ವರ, ಪಾರ್ವತಿ ಕಾಮೇಶ್ವರಿ ಇವರನ್ನು ಸಮಭಾವದಲ್ಲಿ ಇನ್ನು ಪೂಜಿಸುವುದು ಎಂದು ಸಿದ್ಧನಾದ. ಹೇ ಭಗವತಿ, ನಿನ್ನೊಡನೆ ಕೂಡದಿದ್ದರೆ ಆ ಪರಶಿವನು ಚಲಿಸುವುದಕ್ಕೂ ಸಮರ್ಥನಲ್ಲ ಎಂದು ಧ್ಯಾನಿಸಿದ. ಸಮಯಿ ಎಂದು ದೇವಿಯನ್ನು ಕಣ್ಣೆದುರು ಕಟ್ಟಿಸಿಕೊಳ್ಳುತ್ತ ಹೋದ. ಮಹೇಶ್ವರಯ್ಯ ಬಾಯಿಪಾಠ ಮಾಡಿಸಿದ್ದ ಶ್ಲೋಕಗಳನ್ನು ಕಿರೀಟದಿಂದ ಕೆಳಗಿಳಿಯುತ್ತ ಗಟ್ಟಿಯಾಗಿ ಹಾಡತೊಡಗಿದ. ಹೊಳೆಯುವ ಕಿರೀಟ; ಅವಳ ಪಾರಿಜಾತ ಪುಷ್ಪದ ವಾಸನೆಯ ಕೂದಲು; ಮುಖದ ಕಾಂತಿ ಉಕ್ಕಿ ಹರಿಯುವುದಕ್ಕಾಗಿ ಇರುವ ದಾರಿಯಂತೆ ಕಾಣುವ ಅವಳ ಬೈತಲೆ; ಮನ್ಮಥನನ್ನು ಸುಟ್ಟ ಕಣ್ಣುಗಳು ತುಂಬಿಗಳಂತೆ ಮತ್ತವಾಗಿರುವ ಅವಳ ಮುಖಕಮಲ; ಮನ್ಮಥನ ಬಿಲ್ಲಿನಂತೆ ಹುಬ್ಬು; ಶೃಂಗಾರ - ವಿಸ್ಮಯ - ಭೀತಿ - ಹಾಸ್ಯಗಳನ್ನು ಮಿಂಚಬಲ್ಲ ಕಣ್ಣುಗಳು; ಅವಳ ಮೂಗುತ್ತಿ; ಅವಳ ಅಧರ; ನಾಲಿಗೆ ತಾಂಬೂಲ; ಕಂಠನಾಳ; ಕಂಠನಾಳದ ಮೂರು ರೇಖೆಗಳು; ಅವಳ ನಾಲ್ಕು ಕೈಗಳು; ಹಸ್ತ; ಸ್ತನ; ರೋಮಾವಳಿ; ಗಂಗಾನದಿಯ ಸ್ಥಿರವಾದ ಸುಳಿಯಂತಹ, ಶಿವನ ಕಣ್ಣಿಗೆ ತಪಸ್ಸಿನ ಸಿದ್ಧಿಯ ಬಿಲದ್ವಾರದಂತಿರುವ ಅವಳ ನಾಭಿ; ಅವಳ ಸ್ತನಭಾರದಿಂದ ಬಳಲಿದ ಮೆಲ್ಲಗೆ ಮುರಿಯುತ್ತಿದೆಯೋ ಎನ್ನುವಂತಿದ್ದ ನಡು; ಅದನ್ನು ರಕ್ಷಿಸಲಂತಿದ್ದ ತ್ರಿವಳಿ; ಲಘುವಾಗಿಯೂ ಅಗಲವಾಗಿಯೂ ಇರುವ ನಿತಂಬ; ಅವಳ ಪಾದಗಳು - ಎಲ್ಲವನ್ನೂ ನೆನೆಯುತ್ತ ಶ್ಲೋಕಗಳನ್ನು ನೆನಪು ಮಾಡಿಕೊಂಡು ಹಾಡುತ್ತ ಉನ್ಮತ್ತನಾಗಿ ಕೂತ. ಈ ತಗಣೆಗಳು, ಈ ಕತ್ತಲ ಕೋಣೆ, ಈ ಧೂಳು ಎಲ್ಲವನ್ನೂ ನಿಕೃಷ್ಟವಾಗಿ ಕಂಡು ತಾನು ಗೆಲ್ಲುತ್ತಿದ್ದೇನೆ ಎನ್ನಿಸಿತು. ತನ್ನಿಂದ ಹೊರಡುವ ನಾದ ಸರ್ಪಾಕಾರವಾದ ಕುಂಡಲಿನಿಯದು ಎಂದು ತಿಳಿಯಲು ಏಕಾಗ್ರನಾಗಿ ತನ್ನೊಳಗೆ ಚಿತ್ತವನ್ನು ನಿಲ್ಲಿಸಲು ನೋಡಿದ. ಇಲ್ಲ - ಇದು ಬುದ್ಧಿಭ್ರಮಣೆಯಲ್ಲ ಎಂದು ಮತ್ತೆ ಮತ್ತೆ ಅಂದುಕೊಳ್ಳುತ್ತ ರಗಳೆಯಾಗತೊಡಗಿದ್ದರಿಂದ ನಿಟ್ಟುಸಿರಿಟ್ಟು ಎದ್ದುನಿಂತ.

ಶ್ರೀಚಕ್ರದಲ್ಲಿ ಮೂರು ರೇಖೆ ಕೂಡಿದ ಇಪ್ಪತ್ತನಾಲ್ಕು ಮರ್ಮಸ್ಥಾನಗಳಾದರೆ ಎರಡು ರೇಖೆ ಕೂಡಿದ ಇಪ್ಪತ್ತನಾಲ್ಕು ಸಂಧಿ ಸ್ಥಾನಗಳು. ಅಲ್ಲದೆ ಸೃಷ್ಟಿಕ್ರಮ ಮತ್ತು ಸಂಹಾರ ಕ್ರಮವೆಂದು ಎರಡು ಪ್ರಕಾರಗಳಿವೆ. ಸಂಹಾರಕ್ರಮದಲ್ಲಿ ಬರೆಯುವುದು ವಾಮಾಚಾರಿಗಳಾದ ಕೌಲಮತದವರದ್ದು.

ನನ್ನದು ಸಮಯಮತವಾದರೆ ದಪ್ಪ ಮುಖದ ಅಧಿಕಾರಿಯದು ಕೌಲಮತವಿರಬಹುದು. ಸಂಭೋಗ ಯಕ್ಷಿಣೀ ಸಿದ್ಧಿ,

ಪರಸ್ತ್ರೀಗಮನೆ, ಮಕ್ಕಳ ನಾಲಿಗೆ ಕೊಯ್ಯುವ ಮಹಾ ಸಂಮೋಹನಾತಂತ್ರ ಇತ್ಯಾದಿ ವಾಮಮಾರ್ಗಗಳಿಂದ ದೇವಿಯನ್ನು ಪೂಜಿಸುತ್ತಿರುವ ಅವನು ಈ ತೆಲಗು ನಾಡಿನ ಪ್ರಸಿದ್ಧ ಕಾಪಾಲಿಕನಿರಬಹುದು. ಹೀಗೆ ಯೋಚಿಸುತ್ತ ಕೃಷ್ಣಪ್ಪನಿಗೆ ಮತ್ತೆ ನಗು ಉಕ್ಕಿ ಬಂತು. ಕತ್ತಲೆಯಲ್ಲಿ ಬಹುಬೇಗ ಸುಸ್ತಾಗಿ ಸಿಮೆಂಟ್ಹಾಸಿಗೆ ಮೇಲೆ ಕೂತು ಕಣ್ಣು ಮುಚ್ಚಿದ. ಬೆವರಿನಲ್ಲಿ ತೊಯ್ದು ತನ್ನ ಪಂಚೆ ಜುಬ್ಬಗಳು ಧೂಳಿನಲ್ಲಿ ಅಸಹ್ಯವಾಗಿದ್ದರಿಂದ ಅವುಗಳನ್ನು ಬಿಚ್ಚಿ ಎಸೆಯಬೇಕೆನ್ನಿಸಿತು. ಜುಬ್ಬವನ್ನು ಬಿಚ್ಚಿ ಅದನ್ನು ತಲೆಗಿಟ್ಟುಕೊಂಡು ಮಲಗಿದ. ತಳವಿಲ್ಲದ ಅಂತರಾಳದಲ್ಲಿ ತೇಲುತ್ತಿರುವಂತೆ ಅನ್ನಿಸಿತು.

***

ಮತ್ತೆ ಎಷ್ಟು ಹೊತ್ತಾಯಿತೋ. ಪೇದೆಯೊಬ್ಬ ಬಂದು ಕೈಯನ್ನೆಳೆಯುತ್ತಿದ್ದ. ಕೃಷ್ಣಪ್ಪ ಎದ್ದುಕೂತು ತಾನೆಲ್ಲಿದ್ದೇನೆಂದು ನೆನಪು ಮಾಡಿಕೊಂಡ. ಅವನು ಎಳೆಯುತ್ತಲೇ ಇದ್ದುದರಿಂದ ಅವನು ಎಳೆದ ದಿಕ್ಕಿನಲ್ಲಿ ಹೋದ. ಉರ್ದುವಿನಲ್ಲಿ ಏನೋ ಬಯ್ಯುತ್ತಿದ್ದ ಅವನು ಕೀರಲು ದನಿಯ ಪೇದೆಯೆಂಬುದನ್ನು ಗಮನಿಸಿದ.

ಕೋಣೆಯ ಹೊರಗೂ ಕತ್ತಲಿತ್ತು. ಆದರೆ ರಾತ್ರೆಯ ಗಾಳಿ ಹಿತವಾಗಿತ್ತು. ಯಥೇಚ್ಛ ಗಾಳಿಯನ್ನು ಹೀರುತ್ತ ಕೃಷ್ಣಪ್ಪ ನಡೆದ.

ದೀಪಗಳಿಂದ ಅಂಗಳ ಪ್ರಕಾಶಮಾನವಾಗಿತ್ತು. ಏರೋಪ್ಲೇನ್ಹತ್ತಿಸುವ ರಾಟೆಯಿಂದ ಇಳಿದಿದ್ದ ಹಗ್ಗ ಅಲ್ಲಾಡುತ್ತಿತ್ತು. ಒಂದು ಕುರ್ಚಿಯ ಮೇಲೆ ದಪ್ಪ ಮೋರೆಯ ಅಧಿಕಾರಿ ಕೂತು ಬಾಟಲಿನಿಂದ ರಮ್ಮನ್ನು ಗ್ಲಾಸಿಗೆ ಸುರಿದುಕೊಳ್ಳುತ್ತಿದ್ದ. ಅವನ ಕಾಲಿನ ಕೆಳಗೆ ಹೂಮೂಡಿದ್ದ ಇಬ್ಬರು ಹೆಂಗಸರು ಕೂತಿದ್ದರು. ಅವರ ಕೈಯಲ್ಲೂ ಗ್ಲಾಸುಗಳಿದ್ದುವು. ಇಬ್ಬರು ಉಟ್ಟಿದ್ದ ಸೀರೆಗಳೂ ದೀಪದಲ್ಲಿ ಮಿರುಗುತ್ತಿದ್ದುವು. ಅವರ ತುಟಿಗಳು ಕೆಂಪಾಗಿದ್ದವು. ಕಿವಿಯಲ್ಲಿ ಮಿರುಗುವ ಬೆಂಡೋಲೆಗಳಿದ್ದವು. ಕೈಗಳ ತುಂಬ ಹೈದರಾಬಾದಿನ ಪ್ರಸಿದ್ಧ ಕಲ್ಲಿನ ಬಳೆಗಳಿದ್ದುವು.

ಉರ್ದುವಿನಲ್ಲೇನೋ ಅವನು ಹೇಳಿ ಗಹಗಹಿಸಿ ನಕ್ಕ. ಇಬ್ಬರು ಹೆಂಗಸರೂ ಒಬ್ಬರನ್ನೊಬ್ಬರು ಚೂಟಿಕೊಂಡು ಮುಗುಳ್ನಕ್ಕರು. ತನ್ನನ್ನೂ ಒಂದು ಕುರ್ಚಿಯ ಮೇಲೆ ಪೇದೆ ಕೂರಿಸಿದನೆಂದು ಕೃಷ್ಣಪ್ಪನಿಗೆ ಆಶ್ಚರ್ಯವಾಯಿತು. ದಪ್ಪ ಮುಖದ ಅಧಿಕಾರಿ ಕಾಲುಗಳನ್ನು ಚಾಚಿ ಆರಾಮಾಗಿ ಕೂತಿದ್ದರಿಂದ ಮಾನವೀಯವಾಗಿ ಕೃಷ್ಣಪ್ಪನಿಗೆ ಕಂಡ. ಪ್ರಾಯಶಃ ಹಾಗೆಂದು ಅನ್ನಿಸಲು ಇನ್ನೊಂದು ಮುಖ್ಯ ಕಾರಣ ಅವನು ಈಗ ಕ್ಯಾಪ್ಧರಿಸಿದ್ದರಿಂದ ಸಣ್ಣದಾಗಿ ಕತ್ತರಿಸಿದ ಅವನ ತಲೆ ಗೋಟಾಗಿದೆ ಎಂದು ಕೃಷ್ಣಪ್ಪನಿಗೆ ಕಾಣಿಸಿದ್ದು. ಮಗುವಾಗಿದ್ದಾಗ ತಲೆದೆಸೆಯಲ್ಲಿ ಬಟ್ಟೆಯನ್ನು ಉರುಟಾಗಿ ಸುತ್ತಿ ಮಧ್ಯೆದಲ್ಲಿ ತೂತುಬಿಟ್ಟು ಮಲಗಿಸುತ್ತಾರೆ. – ತಲೆ ಹೀಗೆ ಗೋಟಾಗದಿರಲೆಂದು. ತನ್ನ ತಲೆ ಚೆಂದಾಗಿರುವ ಬಗ್ಗೆ ಅಮ್ಮ ಕೊಟ್ಟಿದ್ದ ವ್ಯಾಖ್ಯಾನ ಇದು.

‘ಕುಡೀತೀಯ ?’

ಇವನು ಕಾಪಾಲಿಕನೇ, ‘ಕುಡೀತೀಯ’ ಎಂದು ಕೇಳುತ್ತಿದ್ದಾನೆ ಎಂಬ ಯೋಚನೆ ಬಂದಿದ್ದರಿಂದ ತನ್ನ ಕಠಿಣವಾದ ಮುಖ

ಮೃದುವಾದ್ದನ್ನು ಅವನೂ ಗಮನಿಸಿರಬೇಕು.

‘ನೀನು ಅಡ್ರೆಸ್‌ಗಳನ್ನು ಕೊಡದೇ ಇದ್ದರೆ ನನಗೆ ಪೀಕಲಾಟ ಗೊತ್ತ ? ಆ ಜೋಷಿ ಇದಾನಲ್ಲ, ನನ್ನನ್ನ ಇನ್‌ಎಫಿಶಿಯಂಟ್‌ಅಂತ ಕಾನ್‌ಫಿಡೆನ್ಸಿಯಲ್ ರಿಪೋರ್ಟ್‌ನಲ್ಲಿ ಬರೆದು ಬಿಡ್ತಾರೆ.’

ತನ್ನ ಮಾತಿಂದ ಅಧಿಕಾರಿ ಈ ಖುಷಿಯಾಗಿದ್ದ ಸಂದರ್ಭದಲ್ಲಿ ತೃಪ್ತನಾಗಬಹುದೆಂದು, ಕೃಷ್ಣಪ್ಪ

‘ನನಗೇನೂ ಗೊತ್ತಿಲ್ಲ – ನಿಜವಾಗಿ’ ಎಂದ.

‘ಹಾಗಾದರೆ ಅವನೇನು ನಿನ್ನ ಅಕ್ಕನ ಗಂಡನ, ಅಥವಾ ಮಿಂಡನ? ಇಷ್ಟು ದೂರ ಬಂದಿರಿ ಅವನಿಗಾಗಿ?’

ಅಧಿಕಾರಿ ತನ್ನ ಕಾಲಿನ ಬುಡ ಕೂತವಳನ್ನು ಒದ್ದು ನಗತೊಡಗಿದ.

‘ಅವನಿಗೆ ಭಾರಿ ಹೆಂಗಸರ ಹುಚ್ಚೂಂತ ಕೇಳಿದೇನೆ. ಇಲ್ಲಿಯಂತೆ ನಿಮ್ಮಲ್ಲೂ ಗುರುಗಳಿಗೆ ಸಪ್ಲೈ ಮಾಡಬೇಕ? ನೀನ ಅವನಿಗೆ ಪಿಂಪ್‌ಕೆಲಸ ಮಾಡಿದೀಯ? ನನಗೇಂತ ತಂದಿದಾರೆ ನೋಡು ಈ ಇಬ್ರನ್ನ. ಫಸ್ಟ್‌ಕ್ಲಾಸ್‌ರಂಡೆಯರು ಇವರು. ಹೇಗೆ ಕಾಲೆತ್ತುತ್ತಾರೆ ಗೊತ್ತ? ನಿನ್ನ ಅಂಡು ಪಕ ಪಕ ಕುಣೀಬೇಕು – ಹಾಗೆ. ಇವರಲ್ಲಿ ಒಬ್ಬಳನ್ನು ತಗೊ – ನಂಗೆ ಅಡ್ರೆಸ್‌ಗಳನ್ನು ಕೊಡು. ಇಲ್ಲದಿದ್ರೆ ನನ್ನ ಪ್ರಮೋಶನ್‌ಗೆ ಸಂಚಕಾರವಾಗುತ್ತೆ. ನಿನಗೇನು ನನ್ನ ಕಷ್ಟ ಗೊತ್ತು? ನನಗೆ ಹತ್ತು ಮಕ್ಕಳು. ಟ್ವೆಂಟಿಫೋರ್ ಅವರ್ಸ್ ಡ್ಯೂಟಿ. ಆ ಜೋಷಿ ಕರೆದಾಗ ಇಲ್ಲಿ ಬಂದಿರಬೇಕು. ಜೋಷಿ ಮಂತ್ರಿಗಳಿಗೆ ಮಾತು ಕೊಟ್ಟಿದ್ದಾನೆ. ಆ ಮಂತ್ರಿ ದೊಡ್ಡ ದೈವಭಕ್ತ. ವಾರಕ್ಕೊಂದು ಸಾರಿ ತಿರುಪತಿಗೆ ಹೋಗ್ತಾನೆ. ಕಮ್ಯುನಿಸ್ಟರನ್ನ ನಿರ್ನಾಮ ಮಾಡ್ತೀನಿಂತ ಜೋಷಿ ಮಾತು ಕೊಟ್ಟು ಬಿಟ್ಟು ನೋಡು ನನಗೂ ನಿನಗೂ ಹೀಗೆ ಪಿಕಲಾಟಕ್ಕೆ ಬಂದಿದೆ. ತಗೋ ಇವಳನ್ನ – ಹೂ.’

ಅವನು ಬಾಗಿ ಹೆಂಗಸಿನ ಸೆರಗನ್ನು ಎಳೆದ. ರವುಕೆ ಬಿಚ್ಚಲು ಹೋದಾಗ ಅವಳು ಅವನನ್ನು ತಡೆದಳು. ಅವನು ತೂರಾಡುತ್ತ ಎದ್ದುನಿಂತ. ಕೃಷ್ಣಪ್ಪ ಕೆಕ್ಕರಿಸಿ ನೋಡುತ್ತಿದ್ದುದನ್ನು ಕಂಡು ಅವನು:

‘ನೋಡಿ ಈ ಬಡವ ಹೇಗೆ ರೋಫ್ ಹಾಕ್ತಿದಾನೆ – ಬಿಚ್ಚಿರೋ ಆ ಸುವರ್ ಬಟ್ಟೇನ್ನ’ ಎಂದ ಇದ್ದಕ್ಕಿದ್ದಂತೆ ಕೃಷ್ಣಪ್ಪ ಕೊಸರಿಕೊಂಡರೂ ಬಿಡದೆ ಇಬ್ಬರು ಪೇದೆಗಳು ಅವನ್ನು ಹಿಡಿದುಕೊಂಡು ಬಟ್ಟೆಯನ್ನು ಬಿಚ್ಚಿ ನಗ್ನಗೊಳಿಸಿದರು.

‘ಇವತ್ತು ನಿನ್ನಿಂದ ಹೇಗಾದರೂ ಪತ್ತೆಮಾಡು ಅಂದಿದಾನೆ ಜೋಷಿ. ನಾನು ನಿನಗೆ ಗೊತ್ತಿಲ್ಲ. . . .’

ಎಂದು ತೂರಾಡುತ್ತಾ ತನ್ನೆದುರು ಬಂದು ನಿಂತ. ಅವನ ಕೋಲಿನಿಂದ ಲಿಂಗವನ್ನು ಚುಚ್ಚುತ್ತ, ಹೆಂಗಸರ ಕಡೆ ನೋಡುತ್ತ

‘ತರಡನ್ನ ಒಡೆದುಬಿಡ್ತೀನಿ ಹುಷಾರ್’ ಎಂದು ಗಹಗಹಿಸಿ ನಕ್ಕ.

ಕೀರಲುದನಿಯ ಪೇದೆ ಓಡಿಹೋಗಿ ಗ್ಲಾಸಿಗೆ ಇನ್ನಷ್ಟು ರಮ್‌ಸುರಿದು ತಂದು ಅಧಿಕಾರಿಯನ್ನು ಮೆಲ್ಲನೆ ನಡೆಸಿಕೊಂಡು ಹೋಗಿ ಕುರ್ಚಿ ಮೇಲೆ ಕೂರಿಸಿದ. ತೇಗುತ್ತ ಕೂತ ಅಧಿಕಾರಿ ಗೆಲುವಿನ ಧ್ವನಿಯಲ್ಲಿ ‘ಏಯ್‌ಅವನ ಬಾಯಿಗೆ ಉಚ್ಚೆ ಹೊಯ್ಯೊ’ ಎಂದು ಇಂಗ್ಲಿಷಿನಲ್ಲಿ ಹೇಳಿದ. ಪೇದೆ ಸುಮ್ಮನೇ ನಿಂತದ್ದು ಕಂಡು ಊರ್ದುವಿನಲ್ಲಿ ಮತ್ತೆ ಕೂಗಿ ಹೇಳಿದ. ಒಬ್ಬ ಹೆಂಗಸು ಎದ್ದು ಬಂದು ಅವನ ತೊಡೆ ಮೇಲೆ ಕೂತು ಕೈಗಳಿಂದ ಅವನ ಕತ್ತು ಬಳಸಿ ಏನೋ ಹೇಳಿದಳು.

‘ಏಯ್’ – ಎಂದು ಅಧಿಕಾರಿ ಯಾರನ್ನೋ ಕರೆದ. ಮೈಕೈ ತುಂಬಿಕೊಂಡ ಹರೆಯದ ಒಬ್ಬ ಎದುರು ಬಂದು ನಿಂತ. ಅಧಿಕಾರಿ ನಗುತ್ತ ಏನೋ ಹೇಳಿದ. ಅವನು ಕೇಳದಿರಲು ತಾನೇ ಎದ್ದು ಹೋಗಿ ಮುದುಡಿ ಕೂತಿದ್ದ ಇನ್ನೊಬ್ಬಳನ್ನು ಎಬ್ಬಿಸಿ ಅವಳ ಬಟ್ಟೆಯನ್ನು ಬಿಚ್ಚಿದ. ಯುವಕನೂ ತನ್ನ ಬಟ್ಟೆಯನ್ನು ಬಿಚ್ಚಿದ. ಕೃಷ್ಣಪ್ಪ ಕಣ್ಣು ಮುಚ್ಚಿದ. ಓಡಲೆಂದು ಎದ್ದು ನಿಂತ. ಅಧಿಕಾರಿ ನುಗ್ಗಿ ಬಂದು ಕೃಷ್ಣಪ್ಪನನ್ನು ಹಿಡಿದುಕೊಂಡು ಅವನ ಕೈಕಾಲುಗಳನ್ನು ಕಟ್ಟಿಸಿ, ನೆಲದ ಮೇಲೆ ಮಲಗಿಸಿ, ತನ್ನ ಕೋಲಿನಿಂದ ಅವನ ಲಿಂಗವನ್ನು ಎತ್ತಿ ಹಿಡಿದು ‘ಫ್ಲಾಗ್‌ಹಾಯಿಸ್ಟ್‌ಮಾಡಿಸ್ತೀನಿ – ಸೆಲ್ಯೂಟ್’ ಎಂದು ಅಬ್ಬರಿಸಿದ. ಎಲ್ಲರೂ ನಗಲು ಖುಷಿಯಾಗಿ, ಬೆತ್ತಲೆಯಾಗಿದ್ದ ಯುವಕನ ಅಂಡನ್ನು ಸವರುತ್ತ ತಟ್ಟುತ್ತ ನಿಂತ. ಕೃಷ್ಣಪ್ಪ ಬಿಟ್ಟ ಕಣ್ಣುಗಳನ್ನು ಮತ್ತೆ ಮುಚ್ಚಿ. ಅಧಿಕಾರಿ ನಗುವುದನ್ನೂ ಹುರಿದುಂಬಿಸುವುದನ್ನೂ ಕೇಳಿಸಿಕೊಂಡ. ಅಧಿಕಾರಿ ಮತ್ತೆ ಕೀರಲು ದನಿಯ ಪೇದೆಯನ್ನು ಕೂಗಿ ಕರೆದು ಉಚ್ಚೆ ಹೊಯ್ಯುವಂತೆ ಹೇಳಿದ. ಕೃಷ್ಣಪ್ಪ ಗಾಬರಿಯಿಂದ ಕಣ್ಣು ಬಿಡಲು ಹೆಂಗಸಿನ ಮೇಲೆ ಬೆತ್ತಲೆ ಎಗರಿದ್ದ ತರುಣನೂ ಅವರನ್ನು ಬಗ್ಗಿ ನೋಡುತ್ತ ಕೇಕೆ ಹಾಕುತ್ತಿದ್ದ ಅಧಿಕಾರಿಯೂ ಕಂಡರು. ಅಧಿಕಾರಿ ಈ ದೃಶ್ಯ ನೋಡುತ್ತಲೇ ದೊಣ್ಣೆಯಿಂದ ಕೀರಲು ದನಿಯವನನ್ನು ನೂಕುತ್ತಿದ್ದ.

ಇಬ್ಬರು ಪೇದೆಗಳು ಬಂದು ಬಲಾತ್ಕಾರವಾಗಿ ಸಟ್ಟುಗ ಹಾಕಿ ತನ್ನ ಬಾಯಿ ಅಗಲಿಸಿದರು. ಅಧಿಕಾರಿಯ ಪ್ಯಾಂಟನ್ನು ಇನ್ನೊಬ್ಬಳು ಹೆಂಗಸು ಈಗ ಬಿಚ್ಚತೊಡಗಿದಳು. ಕೀರಲುದನಿಯವ ತನ್ನ ಖಾಕಿ ಚಡ್ಡಿಯ ಗುಂಡಿ ಬಿಚ್ಚಿ ತನ್ನಡೆಗೆ ಏನೋ ಶಪಿಸುತ್ತ ಬಂದ. ತನ್ನ ಎದೆಯ ಮೇಲೆ ಕುಕ್ಕುರು ಕೂತ. ಒದ್ದಾಡದಂತೆ ಇಬ್ಬರು ಪೇದೆಗಳು ಹಿಡಿದುಕೊಂಡದ್ದರಿಂದ ಕೃಷ್ಣಪ್ಪ ಸುಮ್ಮನಾದ. ಬಾಯಿಗೆ ಬೀಳಲಿರುವುದನ್ನು ನುಂಗದಂತೆ ಉಸಿರು ಕಟ್ಟಿದ.

ಅಧಿಕಾರಿ ಅಟ್ಟಹಾಸದಿಂದ ಕಿರುಚುತ್ತ, ಯುವಕನನ್ನು ಹುರಿದುಂಬಿಸುತ್ತ, ಬೆತ್ತಲಾಗಿ ನಿಂತ ಇನ್ನೊಬ್ಬ ಹೆಂಗಸನ್ನು ಹಿಸುಕುತ್ತಿದ್ದ, ‘ಆಯಿತಾ’ ಎಂದು ಕೀರಲು ದನಿಯ ಪೇದೆಯನ್ನು ಕರೆದು ಕೇಳಿದ. ಪೇದೆ ಆಯಿತು ಎಂದು ಎದ್ದು ನಿಂತು ಗುಂಡಿ ಹಾಕಿಕೊಂಡ. ಅವನು ಉಚ್ಚೆಯನ್ನು ಹೊಯ್ಯಲಿಲ್ಲವೆಂಬುದು ಕೃಷ್ಣಪ್ಪನಿಗೆ ಆಶ್ಚರ್ಯವನ್ನುಂಟುಮಾಡಿತು. ಇದಾದನಂತರ ಅಧಿಕಾರಿ ತನ್ನನ್ನು ಮರತೇಬಿಟ್ಟು ಬೆತ್ತಲೆ ಹೆಂಗಸರನ್ನು ಪಕ್ಕದಲ್ಲಿ ಕೂರಿಸಿಕೊಂಡು ಕುಡಿಯುತ್ತ ಕೂತ. ಕೃಷ್ಣಪ್ಪನಿಗೆ ಎಲ್ಲವೂ ಅಸ್ಪಷ್ಟವಾಗುತ್ತ ಹೋಯಿತು.

ಕಣ್ಣು ತೆರೆದಾಗ ಇಡೀ ಅಂಗಳದಲ್ಲಿ ಏನೋ ಮೃದುವಾಗಿ ಬಿರಿದುಕೊಳ್ಳಲು ಸಿದ್ಧತೆ ನಡೆಯುತ್ತಿದೆ ಎನ್ನಿಸುವಂತಿತ್ತು. ಕುರ್ಚಿ ಅಲ್ಲೇ ಇತ್ತು; ತ್ರೀ ಎಕ್ಸ್‌ರಮ್ಮಿನ ಬಾಟಲಿ ಗ್ಲಾಸುಗಳೂ ಇದ್ದವು. ದೀಪಗಳನ್ನೆಲ್ಲ ಆರಿಸಿದರೂ ಅವು ಅಸ್ಪಷ್ಟವಾಗಿ

ಕನಸಿನಲ್ಲಿ ಎಂಬಂತೆ ಕಾಣುತ್ತಿದ್ದವು. ಆಕಾಶದಲ್ಲಿ ಸ್ಫುಟವಾದ ನಕ್ಷತ್ರಗಳು ಮಂದವಾಗುತ್ತ ಹೋದವು. ಚಿಲಿಪಿಲಿ ಶಬ್ದ ; ಏನೋ ಫಲವತ್ತಾಗುತ್ತಿರುವುದರ ಸೂಚನೆ; ಕೃಷ್ಣಪ್ಪ ದೀರ್ಘವಾಗಿ ಉಸಿರೆಳೆದುಕೊಂಡ. ಒಂದು ದೊಡ್ಡ ಸುಖ ತನಗೀಗ ಸಿಗುತ್ತದೆ ಎಂಬ ಆಶ್ವಾಸನೆ ಕೊಡುವಂಥ ವಾಸನೆಯನ್ನು ಗಮನಿಸಿದ. ಈ ಅಂಗಳದಲ್ಲಿ ಬೆಳೆದಿದ್ದ ಒಂದು ಗುಂಪು ಚೆಂಡು ಹೂವಿನ ಗಿಡಗಳು ಕಂಡವು. ಅಂಗಳದಲ್ಲಿ ಬೆಳೆದುಕೊಂಡ ಒಂದೊಂದು ಕಾಡು ಗಿಡವನ್ನೂ ಕೃತಜ್ಞತೆಯಿಂದ ನೋಡುತ್ತ ಬಿರಿಯುವ ಮುಹೂರ್ತಕ್ಕಾಗಿ ಕಾದ. ಆಕಾಶ ಕೆಂಪಾಯಿತು. ಸೂರ್ಯನ ಕಿರಣಗಳು ಅಂಗಳ ಹೋಗುವುದನ್ನು ನಿರೀಕ್ಷಿಸಿದ. ತನ್ನ ಮೈಮೇಲೆ ಪಂಚೆ ಹೊದಿಸಿದ್ದರು – ಯಾರೊ – ಕೀರಲು ದನಿಯ ಪೇದೆಯಿದ್ದರೂ ಇರಬಹುದು, ಬೆಳಕು ಆಕಾಶವನ್ನೆಲ್ಲ ತೊಳೆಯುತ್ತ ಅರಳುತ್ತಿತ್ತು.

ಈ ಕ್ಷಣ ಆದಿ ಅಂತ್ಯವಿಲ್ಲದ್ದು; ಪ್ರಾಯಶ: ತಾನೀಗ ಸತ್ತಿರಬಹುದು ಎಂದು ಅನ್ನಿಸಿತು.

***

ಕತ್ತಲೆಯ ಕೋಣೆಗೆ ನೂಕಿದ ಮೇಲೆ, ಎಷ್ಟು ಹೊತ್ತಾಯಿತೆಂಬ ಪರಿವೆ ತನಗೆ ಮತ್ತೆ ಮರೆತು ಹೋಗಬಹುದೆಂದು ದಿಗಿಲಾಗಲು ಪ್ರಾರಂಭವಾದಾಗ, ಪೂರ್ವಸೂಚನೆಯಿಲ್ಲದೆ ಬಾಗಿಲು ತೆರೆಯಿತು. ಕೀರಲು ದನಿಯ ಪೇದೆ ಬಟ್ಟೆಗಳನ್ನು ಕೊಟ್ಟ. ಹೊರಗೆ ಕರೆದುಕೊಂಡು ಹೋದ. ಆಫೀಸಿನಲ್ಲಿ ಮಹೇಶ್ವರಯ್ಯ ಕಾದಿದ್ದರು. ಒಂದೂ ಮಾತಾಡದೆ ಅವರು ಕಾರಿನಲ್ಲಿ ಕೂರಿಸಿಕೊಂಡು ಹೋದರು. ಹೋಟೆಲೊಂದರ  ಎದುರು ಕಾರನ್ನು ನಿಲ್ಲಿಸಿ ರೂಮಿಗೆ ಅವನನ್ನು ಒಯ್ದರು. ಅಲ್ಲಿ ಅವರೇ ಸ್ನಾನ ಮಾಡಿಸಿ, ಹೊಸ ಅಂಗಿ ಪಂಚೆಗಳನ್ನು ಉಡಿಸಿ, ಕಿತ್ತಲೆ ರಸವನ್ನು ಕುಡಿಸಿದರು.

ನಿದ್ದೆ ಮಾಡಿ ಎದ್ದಾಗ ಸಂಜೆಯಾಗಿತ್ತು. ಮಹೇಶ್ವರಯ್ಯ ರೂಮಿಗೇ ಊಟ ತರಿಸಿದರು. ಗಾಜಿನ ಕಿಟಕಿಗಳ ಎದುರು ಕೂತು ಊರಿನ ಕ್ಷುದ್ರ ಬೀದಿಗಳನ್ನೂ, ಬಣ್ಣ ಕಳೆದುಕೊಂಡ ಕಟ್ಟಡಗಳನ್ನೂ ನೋಡುತ್ತ ಕೃಷ್ಣಪ್ಪ ಅನ್ನಕ್ಕಷ್ಟು ಮೊಸರು ಕಲಿಸಿಕೊಂಡು ತಿಂದ. ಮಹೇಶ್ವರಯ್ಯ ನಿಧಾನವಾಗಿ ತಮ್ಮ ಭಾವನೆಗಳನ್ನು ತೋರಗೊಡದಂತೆ ಕೃಷ್ಣಪ್ಪನ ಬಿಡುಗಡೆಯ ಕಥೆಯನ್ನು ಹೇಳಿದರು.

ಜೋಷಿಯಿಂದ ಪ್ರಯೋಜನವಿಲ್ಲೆಂದು ತಿಳಿದ ಮೇಲೆ ಮಹೇಶ್ವರಯ್ಯ ವಾರಂಗಲ್‌ನಲ್ಲಿ ನೆಲಸಿದ್ದ ಒಬ್ಬ ಪ್ರಸಿದ್ಧ ಕವಿಯ ಬಳಿ ಹೋದರು. ಮಹೇಶ್ವರ ಮತ್ತು ಪಾರ್ವತಿಯ ಲಗ್ನವನ್ನು ಕುರಿತು ಮಹಾಕಾವ್ಯ ಬರೆದಿದ್ದ ಈ ಕವಿ ತೆಲಗು ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾದವನಾಗಿದ್ದ. ಕೀರ್ತಿವಂತ ವೈದಿಕ ಮನೆತನದಲ್ಲಿ ಹುಟ್ಟಿದವ. ಅಷ್ಟಾವಧಾನಿಗಳೆಂದರೆ ಇವರು ಹೆಸರಲ್ಲಿ ಮಾತ್ರವಲ್ಲ – ನಿಜದಲ್ಲೂ. ಈ ಕವಿಯೂ ದೈವಭಕ್ತ, ದೇವಿಯ ಉಪಾಸಕ, ರಸಿಕ ಎಂಬುದಷ್ಟೇ ಮಹೇಶ್ವರಯ್ಯನ ಆಸಕ್ತಿಗೆ ಕಾರಣವಾಗಿರಲಿಲ್ಲ. ಗೃಹಮಂತ್ರಿಗೆ ಈ ಕವಿ ಅಚ್ಚುಮೆಚ್ಚು. ಪಾರ್ವತಿ ಪರಿಣಯವನ್ನು ಅವಧಾನಿ ಗೃಹಮಂತ್ರಿಗೆ ಅರ್ಪಿಸಿದ್ದ. ಮಂತ್ರಿ ಆ ಮಹಾಕಾವ್ಯಕ್ಕೆ ಅತ್ಯುಚ್ಚ ಬಹುಮಾನಗಳನ್ನು ಕೊಡಿಸಿದ್ದ.

ಅವಧಾನಿ ರಾತ್ರೆಯಾದ ಮೇಲೆ ನಡೆಸುತ್ತಿದ್ದ ದರ್ಬಾರಿಗೆ ಮಹೇಶ್ವರಯ್ಯ ಒಂದು ದೊಡ್ಡ ಬಾಟಲು ವಿಸ್ಕಿ ತೆಗೆದುಕೊಂಡು

ಹೋದರು. ಅವಧಾನಿ ಸುಶ್ರಾವ್ಯವಾಗಿ ತನ್ನ ಕವನಗಳನ್ನು ಪಠಿಸುತ್ತಿದ್ದ. ಸೇರಿದವರು ಮೆಚ್ಚುಗೆಯಿಂದ ತಲೆಹಾಕುತ್ತಿದ್ದರು. ತಾನು ಕರ್ನಾಟಕದಲ್ಲಿ ಅವಧಾನಿಯ ಅಭಿಮಾನಿಯೆಂದು ಹೇಳಿಕೊಂಡು ವಿಸ್ಕಿಯನ್ನು ಕೊಡಲಾಗಿ ಕವಿ ಹಸನ್ಮುಖಿಯಾಗಿ ಹೇಳಿದ;

‘ನನ್ನ ಸುರಾಪಾನದ ಕೀರ್ತಿಯೂ ಕರ್ನಾಟಕದ ತನಕ ಹಬ್ಬಿದೆ ಎನ್ನಿ.’

ಮಹೇಶ್ವರಯ್ಯನೂ ಆತನೂ ಬಹಳ ಹೊತ್ತು ಸರ್ವಜ್ಞ ವೇಮನರ ಬಗ್ಗೆ ಮಾತನ್ನಾಡಿದರು. ಅವಧಾನಿ ರಾತ್ರೆ ಬೆಳೆದಂತೆ ಹುರುಪಾಗುತ್ತಾ ಹೋದ. ತನಗೆ ತಿಳಿದ ತೆಲುಗು ಸಾಲದೇ ಹೋದಾಗ ಮಹೇಶ್ವರಯ್ಯ ಸಂಸ್ಕೃತದಲ್ಲಿ ಮಾತಾಡಲು ತೊಡಗಿದರು. ಸಂಸ್ಕೃತ ತಿಳಿಯದ ಅವಧಾನಿಯ ಉಳಿದ ಅಭಿಮಾನಿಗಳ ಬಳಗ ಈ ಇಬ್ಬರ ಸಂಸ್ಕೃತ ಸಂಭಾಷಣೆಯಿಂದ ಪುಳಕಿತರಾಗಿ ವಿಸ್ಕಿಯನ್ನು ಹೀರಿದರು. ಬಾಟಲು ಮುಗಿಯುತ್ತಿದ್ದಂತೆ ಅವರಲ್ಲಿ ದೊಡ್ಡ ವ್ಯಾಪಾರಿಯೂ ವೈಶ್ಯ ಜನಾಂಗದವನೂ ಆಗಿದ್ದ ವೆಂಕಟರಮಣಯ್ಯ ಎಂಬಾತ ಕಾರಿನಲ್ಲಿ ಹೋಗಿ ಇನ್ನೊಂದು ಬಾಟ್ಲಿಯನ್ನು ತಂದ. ಅವರಿಗೆಲ್ಲ ಇದೊಂದು ಮಹತ್ವದ ರಾತ್ರೆ ಎನ್ನಿಸಿತ್ತು. ಬಹಳ ಹೊತ್ತಾದ ಮೇಲೆ ಅವಧಾನಿ ಮಹೇಶ್ವರಯ್ಯನನ್ನು ಬಂದ ಕಾರಣ ವಿಚಾರಿಸಿದ. ಮಹೇಶ್ವರಯ್ಯ ಮುಗ್ಧನಾದ ಕೃಷ್ಣಪ್ಪನ ಬಂಧನ ಹೇಳಲಾಗಿ ಅವಧಾನಿಯು ಈಗಿಂದೀಗಲೇ ಗೃಹಮಂತ್ರಿಗೆ ಫೋನ್‌ಮಾಡುವ ನಿಶ್ಚಯ ಮಾಡಿ ಎದ್ದುನಿಂತ. ವೆಂಕಟರಮಣಯ್ಯ ತನ್ನ ಕಾರಿನಲ್ಲಿ ಇಬ್ಬರನ್ನೂ ಮನೆಗೆ ಒಯ್ದು ಗೃಹಮಂತ್ರಿಗೆ ಲೈಟನಿಂಗ್‌ಕಾಲ್‌ಬುಕ್‌ಮಾಡಿದ. ಅವಧಾನಿ ಫೋನೆತ್ತಿದ್ದಾಗ ಬಹಳ ವಿರಾಮವಾದ ಸಂಭಾಷಣೆ ಸುಮಾರು ಐದು ನಿಮಿಷ ನಡೆಯಿತು. ಗೃಹಮಂತ್ರಿ ಈಗೇನು ಬರೆಯುತ್ತಿದ್ದೀರೆಂದು ಅವಧಾನಿಯನ್ನು ಕೇಳಿರಬೇಕು. ಅವಧಾನಿ ಸುಶ್ರಾವ್ಯವಾದ ಧ್ವನಿಯಲ್ಲಿ ತನ್ನ ಈಚೀನ ಪದ್ಯವನ್ನು ಹಾಡುತ್ತಿದ್ದಾಗ ವೆಂಕಟರಮಣಯ್ಯ ಹಿಗ್ಗುತ್ತ ತುದಿಗಾಲಿನ ಮೇಲೆ ನಿಂತಿದ್ದ.

ಮಹೇಶ್ವರಯ್ಯನಿಗೆ ಗಾಬರಿ. ಎಲ್ಲಿ ಅವಧಾನಿ ಕೃಷ್ಣಪ್ಪನ ಬಗ್ಗೆ ಮರೆಯುವನೋ ಎಂದು. ಪದ್ಯ ಮುಗಿಯುತ್ತಿದ್ದಂತೆ ಅವಧಾನಿಯನ್ನು ಹಗುರವಾಗಿ ಮುಟ್ಟಿ ‘ಹೆಸರು ಕೃಷ್ಣಪ್ಪ ಗೌಡ ಅಂತ’ ಎಂದರು. ಅವಧಾನಿ ಇದೊಂದು ಸಾಮಾನ್ಯ ಸಂಗತಿ ಎನ್ನುವಂತೆ ಬಂಧನದ ವಿಷಯ ಹೇಳಿ ಏನನ್ನೋ ಕೇಳಿಸಿಕೊಳ್ಳುತ್ತ ತಾನು ಫೋನ್‌ಮಾಡುವ ನಂಬರನ್ನೂ, ಅದು ಗೃಹಮಂತ್ರಿಯ ಪರಮ ಅಭಿಮಾನಿಗಳಾದ ವೆಂಕಟರಮಣಯ್ಯನದೆಂದೂ ತಿಳಿಸಿದ. ವೆಂಕಟರಮಣಯ್ಯ ಇದರಿಂದ ಹಿರಿ ಹಿರಿ ಹಿಗ್ಗಿದಂತೆ ಕಂಡಿತು. ಅವಧಾನಿ ಫೋನನ್ನು ಕೆಳಗಿಟ್ಟು ಇನ್ನು ಹತ್ತು ನಿಮಿಷಗಳ ಒಳಗಾಗಿ ನಿಮ್ಮ ಕೆಲಸವಾಗುತ್ತೆ ಎಂದು ಮಹೇಶ್ವರಯ್ಯನಿಗೆ ಹೇಳಿದ. ವೆಂಕಟರಮಣಯ್ಯ ಕಪಾಟಿನಿಂದ ಸ್ಕಾಚನ್ನು ತೆಗೆದು ಮೂವರಿಗೂ ಸುರಿದ. ಈಗಾಗಲೇ ಮಧ್ಯ ರಾತ್ರೆ ಕಳೆದಿತ್ತು. ಇವೆಲ್ಲ ತನ್ನ ಪಾಲಿಗೆ ಭೀಕರವಾಗಿದ್ದ ರಾತ್ರೆ ಹೊತ್ತಲೆ ನಡೆದದ್ದೆಂದು ಕೃಷ್ಣಪ್ಪ ಆಶ್ಚರ್ಯಪಡುತ್ತ ಕೇಳಿಸಿಕೊಂಡ. ಹತ್ತು ನಿಮಿಷಗಳ ನಂತರ ಫೋನ್‌ಬಂತು. ಜೋಷಿ ಫೋನಲ್ಲಿ ಸಿಗುತ್ತಿಲ್ಲವೆಂದು ಬೆಳಗಾದೊಡನೆ ಮಂತ್ರಿಗಳೇ ಖುದ್ದು ಅವನಿಗೆ ಫೋನ್‌ಮಾಡುವುದಾಗಿಯೂ, ವೆಂಕಟರಮಣಯ್ಯನ ಮನೆಗೆ ಜೋಷಿಯಿಂದಲೇ ಫೋನ್‌ಬರುವುದೆಂದೂ ಮಂತ್ರಿಯ ಪಿ. ಎ. ತಿಳಿಸಿದ. ಮಹೇಶ್ವರಯ್ಯ ವೆಂಕಟರಮಣಯ್ಯ ಮನೆಯಲ್ಲೇ ರಾತ್ರೆ ಮಲಗಿದ್ದರು. ಬೆಳಗಾದ ಮೇಲೂ ಫೋನ್‌ಬರಲಿಲ್ಲ. ವೆಂಕಟರಮಣಯ್ಯ ಸ್ನಾನ ಮಾಡಿ ಅಂಗಡಿಗೆ ಹೊರಟು ಹೋದ. ಅವಧಾನಿ ಏಳುವುದು ಮಧ್ಯಾಹ್ನದ ಮೇಲೆ. ಮಹೇಶ್ವರಯ್ಯ ದೇವಿಯನ್ನು ಮನಸ್ಸಿನಲ್ಲೇ ಸ್ಮರಿಸುತ್ತ ಕಾದರು.

‘ಅಂತೂ ಕೊನೆಗೆ ಫೋನ್‌ಬಂತು. ನಿನ್ನ ಬಿಡುಗಡೆಯಾಯ್ತು. ನೋಡು ಕೃಷ್ಣಪ್ಪ ಯಾವತ್ತೂ ರಾಜನ ಕಣ್ಣಿಗೆ ಬೀಳದಂತೆ ಬದುಕಬೇಕು. . . . ಆದರೆ ಅದು ನಿನ್ನ ಜಾಯಮಾನಕ್ಕೆ ಸಾಧ್ಯವಿಲ್ಲ. ನಿನ್ನ ಹಣೆಯಬರಹ. . . ಬಿಡು – ಇನ್ನು ಆ ಮಾತೇ ಬೇಡ. ಸಂಜೆ ಹೋಗುವ’ ಎಂದು ನಿಟ್ಟುಸಿರಿಟ್ಟರು.

‘ನಾಗೇಶ – ನಾಗೇಶಾ’

ಹೊರಗೆ ಪೇಪರ್ ಓದುತ್ತ ಕೂತ ನಾಗೇಶ ಅವಸರವಾಗೆದ್ದು ಕೃಷ್ಣಪ್ಪ ಮಲಗಿದ ಕೋಣೆಗೆ ಬರುತ್ತಾನೆ. ತಾನು ಕರೆದರೇ ಖುಷಿಯಾಗುವ ನಾಗೇಶನನ್ನು ಕಂಡು ಕೃಷ್ಣಪ್ಪನಿಗೆ ಗೆಲುವಾಗುತ್ತದೆ. ಕಿಶೋರ ಕುಮಾರ ಹಾಸ್ಟೆಲಲ್ಲಿ ಹೀಗೇ ತನ್ನ ಸೇವೆ ಮಾಡಿದ್ದ – ಈಗ ಎಂಜಿನಿಯರ್ ಆಗಿದ್ದಾನೆ – ವರ್ಗ ಮಾಡಿಸಿಕೊಡಿರೆಂದು ಕೇಳಲು ಬಂದಿದ್ದ. ನಾಗೇಶ ಬಂದು ನಿಂತಾಗ ಯಾಕೆ ಕರೆದದ್ದು ಎಂಬುದೇ ಮರೆತು ಹೋಗುತ್ತದೆ. ಅವನೇ ಕೇಳುತ್ತಾನೆ:

‘ಪೇಪರ್ ಓದಬೇಕ ಗೌಡರೆ ? ಇವತ್ತೇನೂ ಮುಖ್ಯ ಸುದ್ದಿ ಇರುವಂತಿಲ್ಲ.’

‘ಈ ದೇಶದಲ್ಲಿ ಅದೇನು ಸುದ್ದಿ ಇರುತ್ತೊ ?’

ಕೃಷ್ಣಪ್ಪ ಕಿಟಕಿಯಾಚೆಗೆ ನೋಡುತ್ತ ಹೇಳಿದ. ತನ್ನಿಂದ ಪ್ರತಿಕ್ರಿಯೆ ಬಯಸಿ ಗೌಡರು ಮಾತಾಡಿಲ್ಲವೆಂದು ಅರಿತ ನಾಗೇಶ ಸುಮ್ಮನೆ ನಿಂತ. ಮಾತಿನ ಅಗತ್ಯ ಯಾವಾಗ ಇಲ್ಲವೆಂದು ತಿಳಿದ ಈ ನಾಗೇಶನಂಥವರು ರಾಜಕೀಯ ಕ್ಷೇತ್ರದಲ್ಲಿ ದುರ್ಲಭವೆಂದು ಕೃಷ್ಣಪ್ಪನಿಗೆ ಅವನೆಂದರೆ ಇಷ್ಟ.

‘ಸೀತ ಬ್ಯಾಂಕಿಗೆ ಹೋದಳೇನೊ ?

‘ಹೋದರು ಗೌಡರೆ, ವೀರಣ್ಣನವರು ಅವರಿಗೆ ಕಾರ್ ಕಳಿಸಿದ್ದರು. ಗೌರೀನೂ ನರ್ಸರಿಗೆ ಹೋದಳು.’

‘ಬೆಳಗಾತ ಅದೇನೋ ರಂಪ ಹಿಡಿದಿತ್ತು.’

‘ಸ್ಕೂಲಿಗೆ ಹೋಗಲ್ಲ ಅಂತ – ’

ಕೃಷ್ಣಪ್ಪನ ಮುಖ ಮೃದುವಾಯಿತು !

‘ನಂಗೂ ಅವಳ ವಯಸ್ಸಿನಲ್ಲಿ ಸ್ಕೂಲಿಗೆ ಹೋಗಲಿಕ್ಕೆ ಇಷ್ಟವಿರಲಿಲ್ಲ ಮಾರಾಯ. ಜೋಯಿಸರು ಭಾರತ ಓತ್ತೀನಿ ಕಣೊ

ಅಂತ ಪುಸಲಾಯಿಸಿ ಕರೆದುಕೊಂಡು ಹೋಗ್ತಿದ್ದರು.'

ನಾಗೇಶ ಕುರ್ಚಿಯನ್ನೆಳೆದು ಕೂತುಕೊಂಡ.

'ಹೇಳ್ತೀರ. ಬರಕೋತಿನಿ ಎಂದು ಒತ್ತಾಯವಿಲ್ಲದ ಧ್ವನಿಯಲ್ಲಿ ಕೇಳಿದ.

'ಬರಕೊಳ್ಳುವಿಯಂತೆ. ಇವತ್ತೇನೂ ಹೇಳಬೇಕೂಂತಲೆ ಅನ್ನಿಸಲ್ಲೊ ನಾಗೇಶ. ಕಾಲನ್ನ ಇನ್ನಷ್ಟು ಎತ್ತಬಹುದು ಅನ್ನಿಸ್ತು. ಪ್ರಯತ್ನ ಮಾಡಿದೆ. ಆಗತ್ತೆ ಭ್ರಮೆಯೋ ನಿಜವೋ ಅಂತ ನಿನ್ನ ಕೇಳಾಣ ಅಂತ ಕರೆದೆ – ನೋಡು.'

ಕೃಷ್ಣಪ್ಪ ಪಾದವನ್ನು ಎಳೆದುಕೊಳ್ಳಲು ಪ್ರಯತ್ನಿಸುತ್ತ ಏಕಾಗ್ರನಾದ.

'ನಿನ್ನೆಗಿಂತ ಹೆಚ್ಚು ಏಳಕೋತಿದೀನ ನಾಗೇಶ'

ಸುಳ್ಳು ಹೇಳಿದರೆ ಕೃಷ್ಣಪ್ಪನಿಗೆ ಪ್ರಿಯವಾಗುವುದಿಲ್ಲವೆಂದು ತಿಳಿದ ನಾಗೇಶ – 'ನನಗೆ ಹಾಗನ್ನಿಸಲ್ಲ ಗೌಡರೆ, ಕೈ ಹೇಗಿದೆ' ಎಂದ.

'ಕೈಯಿ' ಎಂದು ಕೃಷ್ಣಪ್ಪ ನಾಗೇಶ ಕೊಟ್ಟ ರಬ್ಬರ್ ಬಾಲಿನ ಸುತ್ತ ಬೆರಳುಗಳನ್ನೆಲ್ಲ ಮಡಿಸಲು ಪ್ರಯತ್ನಿಸಿದ. ತನ್ನ ಪ್ರಾಣವನ್ನೆಲ್ಲ ತೀವ್ರವಾಗಿ ಬೆರಳುಗಳಲ್ಲಿ ನೂಕುತ್ತ ಅವಡುಕಚ್ಚಿದ. ಬಾಲಿನ ತಂಪಾದ ನುಣುಪಾದ ಹೊರಮೈ ಸುತ್ತ ಬೆರಳುಗಳು ಮಡಚಿಕೊಂಡರು. ಮೃದುವಾಗಿ ಬಾಲನ್ನು ಅಮುಕುವ ಅಪೇಕ್ಷೆ ದೇಹದಲ್ಲೆಲ್ಲ ಹರಿಯಾಗಿ ಬೆರಳುಗಳಿಗೆ ಇಳಿಯಿತು. ಬಾಲು ಮುಷ್ಟಿಗೆ ದಕ್ಕುತ್ತಿದೆ ಎನ್ನಿಸಿ ಗೆಲುವಾಯಿತು. ಈ ಗೆಲುವು ನಾಗೇಶನ ಕಣ್ಣುಗಳಲ್ಲೂ ಮಿಂಚಿದ್ದರಿಂದ ಕೃಷ್ಣಪ್ಪನಿಗೆ ಹರ್ಷವಾಯಿತು. ಹಾಗೆ ಬಾಲನ್ನು ಹಿಡಿದು ತನ್ನ ಹಠಕ್ಕೆ ಅದರ ಮೃದುವಾದ ವಿರೋಧವನ್ನೂ ಒಪ್ಪಿಗೆಯನ್ನೂ ಸವಿಯುತ್ತ.

'ನಾನು ತುಂಬ ಚೆನ್ನಾಗಿ ಬುಗುರಿ ಬಿಡುತ್ತಿದ್ದೆ ಕಣೊ' ಎಂದ. ವಾರಂಗಲ್‌ನಿಂದ ಹಿಂದುರಿಗಿದ ಮೇಲೆ ಗದ್ದೆಯ ಕೆಸರಿನಲ್ಲಿ ಕೈಗಳನ್ನು ಹುಗಿದು ನೆಟ್ಟಿಯ ಸಮಯದಲ್ಲಿ ಭತ್ತದ ಸಸಿಯನ್ನು ನೆಡುತ್ತಿದ್ದುದ್ದು ನೆನಪಾಯಿತು. ಹಳ್ಳಿಗೆ ಹೋಗುವ ಮುಂಚೆ ಮಹೇಶ್ವರಯ್ಯನ ಜೊತೆ ಗೌರಿ ದೇಶಪಾಂಡೆಯನ್ನು ನೋಡಲು ಹೋಗಿದ್ದ. ಪರೀಕ್ಷೆಗೆಂದು ಓದುತ್ತಿದ್ದವಳು ಹೊರಗೆ ಬಂದು ಸ್ವಾಗತಿಸಿದಳು. ಅವಳ ತಲೆ ಬಾಚದೆ ಕೆದರಿಕೊಂಡಿತ್ತು. ಓದುತ್ತಿದ್ದುದರಿಂದ ಮುಖ ಬಾಡಿತ್ತು. ನಿಸ್ಸಹಾಯಕಳಾಗಿ ಸುಂದರಳಾಗಿ ಕಂಡಿದ್ದಳು. ನರಕದಿಂದ ಬಂದಿದ್ದ ಕೃಷ್ಣಪ್ಪ ಏನೂ ಮಾತಾಡಲಾರದೆ ಅವಳನ್ನು ನೋಡುತ್ತ ನಿಂತ. ತನ್ನ ಈಗಿನ ಅನುಭವಗಳಿಂದಾಗಿ ಅವಳಿಗೆ ಭಾರವಾಗುತ್ತೇನೆಂದು ಅನ್ನಿಸಿ ಮನಸ್ಸು ಕಲ್ಲಾಯಿತು.

'ಇವರು ಮಹೇಶ್ವರಯ್ಯ. ಹಳ್ಳಿಗೆ ಹೋಗೋ ಮುಂಚೆ ನಿಮ್ಮನ್ನು ಬಂದು ನೋಡಾಣ ಅನ್ನಿಸ್ತು' ಎಂದ.

ಅನಸೂಯಾಬಾಯಿ ಕಾಫಿಯನ್ನು ತಂದು ಉಪಚರಿಸಿದಳು. ಕೃಷ್ಣಪ್ಪ ಇಳಿದು ಕಂದಿದ್ದರ ಕಾರಣ ಕೇಳಿದರು. ಮಹೇಶ್ವರಯ್ಯನೇ ಕೃಷ್ಣಪ್ಪನಿಗೆ ಮುಜುಗರವಾಗದ ರೀತಿಯಲ್ಲಿ ಸೂಕ್ಷ್ಮವಾಗಿ ಆದದ್ದನ್ನು ವಿವರಿಸಿದರು. ತೇವವಾದ ಕಾತರವಾದ ಕಣ್ಣುಗಳಿಂದ ಗೌರಿ ತನ್ನನ್ನು ಆಗ ನೋಡುತ್ತ ಕೂತಿದ್ದಳಲ್ಲವೆ ?

'ಪರೀಕ್ಷೆ ಮುಗಿಸಿ ನಮ್ಮ ಹಳ್ಳಿಗೆ ಬಂದು ಹೋಗಿ'

ಕೃಷ್ಣಪ್ಪ ಉಪಚಾರದ ಧ್ವನಿಯಲ್ಲಿ ಹೇಳಿದ್ದ. ಯಾಕೆ ಒತ್ತಾಯಪೂರ್ವಕವಾಗಿ ಹೇಳಲಾಗಲಿಲ್ಲ ತನಗೆ ? ಗೌರಿ ತನ್ನ ಹಗುರಾದ ಮಾತಿನಿಂದ ನಿರಾಶಳಾದಂತೆ ಕಂಡಳು ಅಲ್ಲವೆ ? ಈ ಸೂಕ್ಷ್ಮಗಳೆಲ್ಲ ಈಗ ಕೃಷ್ಣಪ್ಪನನ್ನು ಬಾಧಿಸುತ್ತವೆ. ನನ್ನ ಜೀವನ ಹೊರಳಿಕೊಳ್ಳುವ ಸಮಯದಲ್ಲಿ ಎಲ್ಲ ಸಾಧ್ಯತೆಗಳಿಗೂ ತಾನು ಪೂರ್ಣ ಎಚ್ಚರದಿಂದ ತೆರೆದುಕೊಂಡಿದ್ದನೋ ಇಲ್ಲವೋ ಎಂದು ಅನುಮಾನವಾಗುತ್ತದೆ. ಯಾವ ಕಾರಣದಿಂದ ತಾನು ಆಗ ಆಡಬೇಕಾದ್ದನ್ನು ಆಡಲಾರದೆ ಹೋದೆ ? ನೀನು ಬೇಕು ಎಂದು ಹೇಳಿಕೊಳ್ಳಲಾಗದ ಗರ್ವವೆ ? ಒಡನಾಡಿಗಾಗಿ ಹಾತೊರೆಯಬಾರದೆಂಬ ತನ್ನ ನಿಷ್ಠುರ ವ್ರತವೆ ಅಥವಾ ವಾರಂಗಲ್‌ನ ಪೋಲೀಸ್ ಠಾಣೆಯ ನರಕದಿಂದ ಎದ್ದು ಬಂದ ತಾನು ಪ್ರೇತದಂತಿದ್ದೆ ಎಂದು ಅನ್ನಿಸಿದ್ದೆ ? ಹೌದು – ತನ್ನ ದೇಹ ಮಲಿನವಾಗಿದೆ ಎನ್ನಿಸಿತ್ತು – ಶುಭ್ರವಾದ ಕಾಂತಿಯ ಕೆದರಿದ ತಲೆಯ ಗೌರಿಯನ್ನು ನೋಡುತ್ತ ನಿಂತಂತೆ. ಅವಳು ಮೂಕವಾಗಿ ನಿಂತದ್ದು ನೋಡಿ,

'ನೀವೇನು ಮುಂದೆ ಮಾಡ್ತೀರಿ?'

ಎಂದು ಕೃಷ್ಣಪ್ಪ ಕೇಳಿದ್ದ. ಪ್ರಾಯಶಃ ತನ್ನ ಪ್ರಶ್ನೆಯ ಗತ್ತು ಲೋಕಾಭಿರಾಮವಾಗಿತ್ತೆಂದು ಗೌರಿಗೆ ದುಃಖವಾಗಿರಬೇಕು. ಅವಳೇನೂ ಅದಕ್ಕೆ ಉತ್ತರ ಕೊಡಲಿಲ್ಲ.

'ಯಾಕೋ ನಾಗೇಶ, ನಾವು ತೀವ್ರವಾಗಿ ಪ್ರೀತಿಸಿದ್ದನ್ನು ಪಡೆಯೋ ಧೈರ್ಯ ಮಾಡಲ್ಲ? ಪಡೆದ ಮೇಲೆ ಅದು ಅಷ್ಟೇ ಅಮೂಲ್ಯವಾಗಿ ಉಳಿಯಲ್ಲ ಅಂತ ಭಯವ ?'

ನಾಗೇಶನ ಅಳವಿಗೆ ಈ ಪ್ರಶ್ನೆ ಮೀರಿತ್ತು. ಆದರೆ ಕೃಷ್ಣಪ್ಪ ಏನು ಯೋಚಿಸುತ್ತಿರಬಹುದೆಂದು ಊಹಿಸಿ ಹೇಳಿದ.

'ಗೌರಿ ದೇಶಪಾಂಡೆಯವರಿಗೆ ಬರಲಿಕ್ಕೆ ಬರ್ದಿದೀನಿ ದೆಹಲಿ ವಿಳಾಸಕ್ಕೆ'

ಕೃಷ್ಣಪ್ಪ ಕಾತರವಾದ ಕಣ್ಣುಗಳಿಂದ ನಾಗೇಶನನ್ನೇ ನೋಡಿ ದೀರ್ಘವಾಗಿ ಉಸಿರಾಡಿದ. ಅವಳು ಬರುವ ಮುಂಚೆ ಕಾಲು ಕೈಗಳು ಇನ್ನಷ್ಟು ಚಲಿಸುವಂತಾದರೆ ಎಂದು ಆಸೆಯಾಯಿತು. ಚಲಿಸುವಂತಾದರೆ ಮತ್ತೆ ಹಳ್ಳಿಗೆ ಹೋಗುವೆ. ಕೆಸರಿನಲ್ಲಿ ಕಾಲನ್ನ ಹುಗಿದು ಮತ್ತೆ ಭತ್ತದ ಸಸಿಗಳನ್ನು ನೆಡುವೆ. ದನ ಮೇಯಿಸುತ್ತ ಕೂತಿರುತ್ತಿದ್ದ ಅಶ್ವತ್ಥದ ಮರದ ಬುಡದಲ್ಲಿ ಮತ್ತೆ

ಕೂರುವೆ. ಎದುರಿನ ಪೇರಳೆ ಮರಕ್ಕೆ ಮತ್ತೆ ಪಂಚವರ್ಣದ ಗಿಣಿಗಳು ಬುರುವುದಕ್ಕಾಗಿ ಕಾಯುವೆ.

‘ಮಹೇಶ್ವರಯ್ಯನು ಬಂದಿದ್ರೆ ಚೆನ್ನಾಗಿರ್ತಿತ್ತೊ’

‘ಬರೆಯೋಣ ಅಂದ್ರೆ ಅವರಿಗೆ ವಿಳಾಸವೇ ಇಲ್ವಲ್ಲ.’

‘ಅವರು ಹಾಗೇನೇ. ಇದ್ದಕ್ಕಿದ್ದಂತೆ ಬಂದು ಬಿಡ್ತಾರೆ. ಮಾರಾಯ್ರಿಗೆ ಈಗ ರೇಸಿನ ಹುಚ್ಚು ಹಿಡಿದು ಬಿಟ್ಟಿದೆ. ಬೆಂಗಳೂರಲ್ಲಿ ನಾಳೇಂದ ಸೀಸನ್‌ಅಲ್ವ – ಬಂದರೂ ಬಂದರೆ. . . . .’ ಎಂದು ಕೃಷ್ಣಪ್ಪ ಮಗ್ಗುಲಾಗಲು ಇಚ್ಛಿಸುತ್ತ ಮಲಗಿದ. ಯಾವತ್ತು ಹೊರಳುವಷ್ಟು ಶಕ್ತಿ ಈ ದೇಹಕ್ಕೆ ಬರುತ್ತದೊ? ಅಷ್ಟರಲ್ಲಿ ಇನ್ನೊಂದು ಸ್ಟ್ರೋಕ್‌ಹೊಡೆದು ಸಾಯಲೂ ಬಹುದು. ಎಲ್ಲೋ ಒಂದು ರಕ್ತದ ಬಿಂದು ಸಿಕ್ಕಿಬಿದ್ದಿದೆ. ಅದು ತಾನಾಗಿಯೇ ಚಲಿಸಲೂ ಬಹುದು, ಚಲಿಸದೆ ಅಲ್ಲೆ ನಿಂತು ಬಿಡಲೂ ಬಹುದು. ಪ್ರತಿಕ್ಷಣ ಪ್ರಜ್ಞಾಪೂರ್ವಕವಾಗಿ ಬದುಕುವುದಷ್ಟೇ ಈಗ ತನಗೆ ಉಳಿದದ್ದು. ಅನಾಮತ್ತಾಗಿ ಈ ದೇಹ ಈ ಸ್ಥಿತಿಗೆ ಬಂದಿದೆ. ಹೇಳದೆ ಕೇಳದೆ ಎಚ್ಚರಿಕೆ ಕೊಡದೆ.

ಕೃಷ್ಣಪ್ಪನ ಜೀವನದಲ್ಲಿ ಪ್ರವೇಶಿಸಿದ ಯಾರು ಇಡಿಯಾಗಿ ಉಳಿದಿದ್ದಾರೆ. ಯಾರು ಇಲ್ಲ – ಅವನಿಗೆ ತಿಳಿಯುವುದಿಲ್ಲ. ಬಾಹ್ಯದಲ್ಲಿ ನೋಡಿ ಯಾರು ಹೇಗೆ ಎಂದು ಹೇಳುವುದು ಶಕ್ಯವಿಲ್ಲ. ಉದಾಹರಣೆಗೆ ಉಮೆ ? ಅಣ್ಣಾಜಿಯ ಸಾವಿನಿಂದ ಅವಳಿಗೆ ಆದ ಆಘಾತ ಕೃಷ್ಣಪ್ಪನಿಗೆ ಮಾತ್ರ ಗೊತ್ತು. ಅವಳು ಯಾರಿಗೂ ಹೇಳಿಕೊಳ್ಳಲಾರದೆ ಆರೋಗ್ಯವಿಲ್ಲೆಂಬ ನೆವ ಹೂಡಿ ತವರಿಗೆ ಹೋಗಿದ್ದಳು. ಆಗ ಅವಳು ಬಸುರಿ. ಅಂದರೆ ಅಣ್ಣಾಜಿಯ ಮಗ ಈಗ ಬೆಳೆದಿದ್ದಾನೆ. ಮೋಟಾರ್ ಸೈಕಲ್‌ಮೇಲೆ ಹಿಪ್ಪಿಯ ಹಾಗೆ ಕೂದಲು ಬಿಟ್ಟು ಅವನು ವಿಜೃಂಭಿಸುವುದನ್ನು ಕೃಷ್ಣಪ್ಪ ಕಂಡಿದ್ದಾನೆ. ಅವನಾದ ಮೇಲೆ ಉಮೆಗೆ ಇನ್ನೆರಡು ಮಕ್ಕಳಾಗಿದ್ದಾವಂತೆ. ಅವಳ ಗುಟ್ಟನ್ನು ಇಷ್ಟು ದಿನ ಕೃಷ್ಣಪ್ಪ ಮುಚ್ಚಿಟ್ಟುಕೊಂಡಿದ್ದಾನೆ. ತನ್ನ ಜೀವನ ಚರಿತ್ರೆ ಬರೆಸುವಾಗ ಈ ಘಟನೆಯನ್ನು ನಾಗೇಶನಿಗೂ ಅವನು ಹೇಳಿಲ್ಲ. ಪ್ರಾಯಶಃ ಅಣ್ಣಾಜಿಯ ಮನಸ್ಸು ರಾಜಕೀಯದಿಂದ ವಿಮುಖವಾಗಿ ದಾಂಪತ್ಯದ ನೆಮ್ಮದಿಯನ್ನು ಬಯಸಿದ್ದಾಗ ಅವನನ್ನು ಕೊಂದರು. ಅವನ ಆಯ್ಕೆಯಾದರೂ ಪ್ರಜ್ಞಾಪೂರ್ವಕವಾಗಿತ್ತೆ ಎಂದು ಅನುಮಾನವಾಗುತ್ತದೆ. ಆದರೆ ಸತ್ತಿದ್ದರಿಂದ ಅವನು ತನ್ನ ಪ್ರಶ್ನೆ ಅನುಮಾನಗಳಿಗೆ ಅತೀತನಾಗಿ ನಿಂತಂತೆಯೂ ಅನ್ನಿಸುತ್ತದೆ. ತಾನು ಕಂಡ ಒಬ್ಬ ದೃಷ್ಟಾರನೆಂದರೆ ಅವನೇ. ಎಷ್ಟೊಂದು ಕ್ಷುಲ್ಲಕತೆಗೆ ಒಳಗಾಗಿದ್ದರೂ ಅವನ ಬುದ್ಧಿ ಮಾತ್ರ ಪ್ರಖರವಾಗಿ ಬೀರುತ್ತಿತ್ತು. ಅವನು ಬದುಕಿದ್ದಾಗ ಪ್ರಾಮಾಣಿಕತೆಯ ಪ್ರಶ್ನೆ ಕೃಷ್ಣಪ್ಪನನ್ನು ಬಾಧಿಸಿದ್ದರೂ ಈಗ ಅಣ್ಣಾಜಿ ತನಗೆ ಮೀರಿದ್ದಕ್ಕಾಗಿ ದುಡಿದು ಸತ್ತವನಂತೆ ಕಾಣುತ್ತಾನೆ. ಉಮೆ? ಅವಳು ತನಗೆ ಎದುರಾದ್ದನ್ನು ಒಪ್ಪಿಕೊಂಡು ಬದುಕಿದಂತಿದೆ.

ಇನ್ನು ಆ ಬೈರಾಗಿ. ಅವನ ಬಗ್ಗೆ ಮಾತ್ರ ಕೃಷ್ಣಪ್ಪನಿಗೆ ಈಗಲೂ ಅರ್ಥವಾಗುವುದಿಲ್ಲ. ಅವನ ಒಳ ಬಾಳು ಉಜ್ವಲವಾಗಿ ಉರಿಯುತ್ತಿತ್ತೋ, ಅಥವಾ ಅವನೊಂದು ಠೊಳ್ಳು ತಿರುಳಿನ ತರಕಾರಿಯಂತವನೋ ಹೇಳುವುದು ಹೇಗೆ ? ಜನ ಮಾತ್ರ ಅವನನ್ನು ಬಿಡಲಿಲ್ಲ. ಅವನು ಇದ್ದಲ್ಲಿ ಒಂದು ದೇವಸ್ಥಾನ ಕಟ್ಟಿದ್ದಾರೆ. ಕನಸಿನಲ್ಲಿ ಅವನು ಬಂದು ಪ್ರಶ್ನೆಗಳಿಗೆ ಉತ್ತರ ಹೇಳುವನೆಂದು ಪ್ರತೀತಿ ಹಬ್ಬಿ ಎಲ್ಲೆಲ್ಲಿಂದಲೋ ಜನರು ಬರತೊಡಗಿದ್ದಾರೆ. ಅವನು ಮಾತ್ರ ಯಾರ ಹತ್ತಿರವೂ ಮಾತಾಡುವುದಿಲ್ಲ. ನಿತ್ಯ ವಿಧಿಯಂತೆ ಬೆಳಿಗ್ಗೆ ಎದ್ದು ಅವನು ಬೀದಿ ತುದಿ ನಿಂತು ಭಗವದ್ಗೀತೆ ಹಾಡುತ್ತಾನೆ. ತನ್ನ ಆಹಾರ

ಸಂಪಾದಿಸಿ ಬೇಯಿಸಿಕೊಂಡು ತಿನ್ನುತ್ತಾನೆ. ಇದು ನಿಂತಿಲ್ಲ. ಆದರೆ ಇದು ಹಿಂದಿನಂತೆ ಸರಳವಾಗಿ ಉಳಿದಿಲ್ಲ. ಅವನು ಹೋಗುವ ಬೀದಿಗೆ ತೋರಣ ಕಟ್ಟಿರುತ್ತದೆ. ಅವನು ಗೀತೆಯನ್ನು ಓದಲು ನಿಲ್ಲುವ ಜಾಗದಲ್ಲಿ ಪ್ಲಾಟ್‌ಫಾರಂ ಹಾಕಿ ಮೈಕನ್ನು ಇಟ್ಟಿರುತ್ತಾರೆ. ಬೈರಾಗಿಯನ್ನು ಸಿದ್ದೇಶ್ವರ ಎಂದು ಕರೆಯುತ್ತಾರೆ. ಏನನ್ನೂ ಬೈರಾಗಿ ನಿರಾಕರಿಸುವುದಿಲ್ಲ. ಬೇಕೆಂದು ಕೇಳುವುದೂ ಇಲ್ಲ. ಆದರೆ ಜನರ ಅಗತ್ಯ ತನ್ನಿಂದ ಹೀಗೆ ಪೂರೈಕೆಯಾಗುತ್ತಿರುವುದಕ್ಕಾಗಿ ಅವನು ಸಂತೋಷ ಪಡುವಂತೆ ಕಾಣುತ್ತದಲ್ಲವೆ ? – ಅವನು ಮೈ ಕೈ ತುಂಬಿಕೊಳ್ಳುತ್ತ ಹೋದದ್ದನ್ನು ನೋಡಿದರೆ. ಇಕ್ಕಿದ್ದನ್ನು ಸ್ವೀಕರಿಸುವೆನೆಂಬ ಅವನ ವ್ರತವೇ ವಿಶೇಷವಾದ ಪೌಷ್ಟಿಕ ಆಹಾರ ಅವನಿಗೆ ದೊರೆಯುವಂತೆಯೂ ಮಾಡಿರಬೇಕು.

ಅವನಿಗೆ ಉತ್ತರ ಕೊಡಬೇಕೆನ್ನಿಸುವಂಥ ಪ್ರಶ್ನೆಯನ್ನು ಕೇಳಲು ತನಗೆ ಹೊಳೆಯಲೇ ಇಲ್ಲವೆಂದು ಬಹಳ ಸಾರಿ ಕೃಷ್ಣಪ್ಪ ತನ್ನ ಆಗಿನ ಮನಸ್ಥಿತಿಯ ಬಗ್ಗೆ ಸಂಶಯ ಪಡುವುದುಂಟು ಆಗ ವ್ಯಗ್ರನಾಗಿದ್ದದು ನಿಜ. ಆದರೆ ಅದಕ್ಕೆ ಕಾರಣವೆಂದು ತನಗೆ ಹೊಳೆಯುತ್ತಿದ್ದುದೆಲ್ಲ ಪೊಳ್ಳಿರಬಹುದು. ಆದ್ದರಿಂದಲೇ ಬೈರಾಗಿ ಹತ್ತಿರ ಪ್ರಶ್ನೆ ಕೇಳಲಾರದೆ ಹೋದೆ ಎಂದುಕೊಳ್ಳುತ್ತಾನೆ. ಬೈರಾಗಿ ಒಂದು ಬಗೆಯಲ್ಲಿ ಕೃಷ್ಣಪ್ಪನಿಗೆ ಹೀಗೆ ತನ್ನನ್ನು ಅಳೆಯುವ ಮಾನದಂಡವಾಗಿ ಕಂಡರೆ ಸರ್ಪ ಅವನ ಗುಹೆಯನ್ನು ಹೊಕ್ಕಾಗ ಅವನಿಗೆದುರಾದ ಹಿಂಸೆಯನ್ನು ಅವನು ತಾಳಲಾರದೇ ಹೋದ ಎಂಬುದು ಕೂರ್ಮ ರೂಪದ ಅವನ ತಪಸ್ಸಿನ ಬಗ್ಗೆ ಆಳವಾದ ಅನುಮಾನವನ್ನು ಹುಟ್ಟಿಸುತ್ತದೆ. ಎಲ್ಲ ಸಾಧ್ಯತೆಗಳಿಗೂ ಚುರುಕಾಗಿ ಸ್ಪಂದಿಸುತ್ತ ಬದುಕಬೇಕೆನ್ನುವ ಕೃಷ್ಣಪ್ಪನ ಆದರ್ಶಕ್ಕೆ ಅವನು ಕಂಡಿದ್ದರಲ್ಲಿ ಯಾವುದೂ ಸರಿಸಾಟಿಯಲ್ಲವೆನ್ನಿಸುತ್ತದೆ.

ತನ್ನಲ್ಲಿ ಬಿರುಕು ಎಲ್ಲಿ, ಹೇಗೆ ಕಾಣಿಸಿಕೊಂಡಿತು ? ಸಾಯುವ ಮುಂಚೆ ಇದನ್ನು ತಿಳಿಯಬೇಕು. ಅಷ್ಟೇ ಉಳಿದದ್ದು ನನ್ನ ಪಾಲಿಗೆಂದು ಯೋಚಿಸುತ್ತಲೆ ತನ್ನ ಪಾರ್ಶ್ವಕ್ಕೆ ಪ್ರಾಣ ಶಕ್ತಿಯನ್ನು ಹರಿಸಲು ಉದ್ಯುಕ್ತನಾಗುತ್ತಾನೆ.

‘ನಾಗೇಶ ನನ್ನ ಅಮ್ಮನನ್ನು ಕರಕೊಂಡು ಬರಕ್ಕೆ ಯಾರನ್ನಾದರು ಕಳಿಸಬೇಕಲ್ಲೋ – ’

‘ನಾನೇ ಹೋಗಿ ಬರಲು ಗೌಡರೆ ?’

‘ಬೇಡ ನೀನಿಲ್ಲಿ ಇರೋದು ಅಗತ್ಯ. ನಿನ್ನ ಸ್ನೇಹಿತರಲ್ಲಿ ಯಾರನ್ನಾದರೂ ಕಳಿಸು.’

ಮನೆಯ ಹೊರಗೆ ಕಾರು ಬಂದು ನಿಂತಿತು. ಅದರಿಂದ ವೀರಣ್ಣ ಇಳಿದ. ಖಾದಿ ಸಿಲ್ಕಿನ ಕ್ಲೋಸ್‌ಕಾಲರ್ ಕೋಟು ಪ್ಯಾಂಟು ತೊಟ್ಟ ವೀರಣ್ಣನಿಗೆ ಸುಮಾರು ಅರವತ್ತು ವರ್ಷಗಳಿರಬಹುದು. ಬೆಂಗಳೂರಿನ ಎರಡು ದೊಡ್ಡ ಹೋಟೆಲುಗಳ, ಮೂರು ಥಿಯೇಟರುಗಳ ಮಾಲೀಕ ಈ ವೀರಣ್ಣ. ಅವನ ತಂದೆ ಒಬ್ಬ ಸಣ್ಣ ಕಂಟ್ರ್ಯಾಕ್ಟರ್ ಆಗಿದ್ದವನು. ವೀರಣ್ಣ ತನ್ನ ಚಾಕಚಕ್ಯತೆಯಿಂದ ಲಕ್ಷಾಧೀಶನಾಗಿ ಬೆಳೆದಿದ್ದ. ತಿರುಪತಿಯ ವೆಂಕಟರಮಣನ ಪರಮಭಕ್ತನಾದ ವೀರಣ್ಣ ದೇಶ ವಿದೇಶಗಳಲ್ಲಿ ಅವನ ದೇವಾಲಯಗಳನ್ನು ಕಟ್ಟಿಸುವುದಕ್ಕೆ ಮುಂದಾಗಿದ್ದ. ಸೋಷಲಿಸ್ಟ್‌ನಾಯಕನೆಂದೂ, ಶ್ರೀಮಂತ ವರ್ಗದ ವಿರೋಧಿಯೆಂದೂ ಹೆಸರಾದ ಕೃಷ್ಣಪ್ಪನನ್ನು ಈ ವೀರಣ್ಣ ಆರಾಧಿಸುವುದನ್ನು ಕಂಡು ಎಲ್ಲರೂ ಬೆರಗಾಗಿದ್ದರು. ಎಂಥೆಂಥ ಮಂತ್ರಿಗಳೂ ವೀರಣ್ಣನ ಕೃಪೆಗೆ ಕೈಯೊಡ್ಡುವಾಗ, ಯಾವುದನ್ನೂ ಯಾರ ಹತ್ತಿರವೂ ಬೇಡದ ಗರ್ವಿಷ್ಠ, ಕೃಷ್ಣಪ್ಪನ

ಬಳಿ ಮಾತ್ರ ವೀರಣ್ಣ ಅತ್ಯಂತ ವಿನಯದಿಂದ ನಡೆದುಕೊಳ್ಳುವನು. ಕೃಷ್ಣಪ್ಪನಿಗೆ ಸ್ಟ್ರೋಕ್‌ಹೊಡೆದಾಗ ಅವನು ವಾಸವಾಗಿದ್ದುದು ಗಾಂಧೀ ಬಜಾರಿನ ಹತ್ತಿರವಿದ್ದ ಒಂದು ಹಳೆಯ ಮನೆಯಲ್ಲಿ. ರೆಂಟ್‌ಕಂಟ್ರೋಲಿಂದ ಪಡೆದಿದ್ದ ಮನೆ ಅದು. ತಿಂಗಳಿಗೆ ಒಂದುನೂರು ರೂಪಾಯಿ ಬಾಡಿಗೆ. ಮನೆಯಿಂದ ಹೊರಕ್ಕೆ ಕಕ್ಕಸು. ಕೃಷ್ಣಪ್ಪನಿಗೆ ಇದು ತೀರಾ ಅನಾನುಕೂಲವೆಂದು ವೀರಣ್ಣ ಸದಾಶಿವ ನಗರದಲ್ಲಿರುವ ತಾನು ಬಾಡಿಗೆಗೆ ಕೊಟ್ಟಿರುವ ಫ್ಲಾಟುಗಳಲ್ಲಿ ಒಂದನ್ನು ತೆಗೆದುಕೊಳ್ಳುವಂತೆ ಬೇಡಿಕೊಂಡ. ಕೃಷ್ಣಪ್ಪನ ಹೆಂಡತಿ ಸೀತೆಯೂ ಅದು ತನ್ನ ಬ್ಯಾಂಕಿಗೆ ಹತ್ತಿರವೆಂದು ವಾದಿಸಿದಳು. ಆದರೆ ತನಗೆ ಎಂ. ಎಲ್. ಎ. ಆಗಿ ಬರುವ ಸಂಬಳದಲ್ಲಿ ನೂರು ರೂಪಾಯಿಗಿಂತ ಹೆಚ್ಚಿನ ಬಾಡಿಗೆಯ ಮನೆಯಲ್ಲಿ ಇರುವುದು ಸಾಧ್ಯವೇ ಇಲ್ಲೆಂದು ಕೃಷ್ಣಪ್ಪ ನಿರಾಕರಿಸಿದಾಗ –

'ಹಾಗಾದರೆ ನೂರೇ ನನಗೆ ಬಾಡಿಗೆ ಕೊಡಿ – ಸಾಕು'

ಎಂದು ವೀರಣ್ಣ ಪ್ರಾರ್ಥಿಸಿದ.

'ಆದರೆ ಅದಕ್ಕೆಷ್ಟು ಬಾಡಿಗೆ? ಏಳುನೂರು ಅಲ್ವ ವೀರಣ್ಣ?'

'ನಾನೇನು ಮಾಡ್ಬೇಕಾಗಿದೆ ಅಷ್ಟು ದುಡ್ಡು ತಗೊಂಡು? ನಾನೇನು ನಿಮಗೆ ಪುಗಸಟ್ಟೆಗೆ ಕೊಡ್ತ ಇಲ್ವಲ್ಲ?'

ಕೃಷ್ಣಪ್ಪ ತಾನಿದ್ದ ಅಸಹಾಯಕ ದೈಹಿಕ ಪರಿಸ್ಥಿತೀಲಿ ಸದಾಶಿವ ನಗರದ ಫ್ಲಾಟಿಗೆ ಒಲ್ಲದ ಮನಸ್ಸಿಂದ ಬಂದಿದ್ದ. ಸೀತೆ ಪ್ರತಿನಿತ್ಯ ರಗಳೆ ಮಾಡುವುದು ತಪ್ಪುವುದಲ್ಲ ಎಂಬುದೂ ಹೀಗೆ ಬರಲು ಕಾರಣವಾಗಿತ್ತು. ಗೌರಿಗೆ ಹತ್ತಿರದಲ್ಲೆ ಇಂಗ್ಲೀಷ್‌ನರ್ಸರಿ ಬೇರೆ ಇತ್ತೆಂದು ಸೀತೆಗೆ ಸಂತೋಷವಾಗಿತ್ತು.

ಕೃಷ್ಣಪ್ಪನಿಗೆ ಸ್ಟ್ರೋಕ್‌ಹೊಡೆದಾಗ ದೇಶದಲ್ಲಿ ಅವನೆಷ್ಟು ದೊಡ್ಡ ಮನುಷ್ಯನೆಂಬುದು ಎಲ್ಲರಿಗೂ ಪ್ರತ್ಯಕ್ಷವಾಗಿ ಗೊತ್ತಾಗಿತ್ತು. ರಾಜ್ಯಪಾಲರೇ ಸ್ವತಃ ಹಾಸ್ಪಿಟಲ್‌ಗೆ ಬಂದು ಅವನನ್ನು ನೋಡಿದ್ದರು. ಕೃಷ್ಣಪ್ಪ ಅತ್ಯಂತ ಕಟುವಾಗಿ ಟೀಕಿಸುತ್ತಿದ್ದ ಮುಖ್ಯಮಂತ್ರಿ ಬೊಂಬಾಯಿಯಿಂದ ಒಬ್ಬ ಸ್ಪೇಶಲಿಸ್ಟನ್ನು ಕರೆಸಿದ್ದ. ದೇಶದ ಎಲ್ಲ ವಿ. ಐ. ಪಿ. ಗಳೂ ಅಸ್ಪತ್ರೆಗೆ ಬಂದು ಅವನನ್ನು ನೋಡಿದ್ದರು.

ತಾನು ಏನನ್ನೂ ಬೇಡದೆ ಎಲ್ಲವೂ ತನಗೆ ದಕ್ಕುತ್ತಿರುವುದನ್ನು ಕಂಡು ಕೃಷ್ಣಪ್ಪನೇ ಬೆರಗಾಗಿದ್ದ. ಯಾವ ಫಲಾಪೇಕ್ಷೆಯೂ ಇಲ್ಲದೆ ವೀರಣ್ಣ ತನ್ನ ಸೇವೆ ಮಾಡುತ್ತಿದ್ದಾನೆಂದು ಕೃಷ್ಣಪ್ಪ ತಿಳಿದ. ಅವನಿಗೆ ತಾನೇನು ಹೆಚ್ಚು ಮಾಡಬಲ್ಲೆ? ಅಲ್ಲದೆ ಕೃಷ್ಣಪ್ಪ ವಿರೋಧಿಸುತ್ತಿದ್ದುದು ವ್ಯವಸ್ಥೆಯನ್ನೇ ಹೊರತಾಗಿ ವ್ಯಕ್ತಿಗಳನ್ನಲ್ಲವಲ್ಲ. ವೀರಣ್ಣ ಕೂಡ ಈ ವ್ಯವಸ್ಥೆಯಲ್ಲಿ ಎಲ್ಲರಂತೆ ಒಬ್ಬನಲ್ಲವೆ?

ಆದರೆ ಹೀಗೆಲ್ಲ ತರ್ಕ ಹೂಡಿಕೊಂಡು ತಾನು ವೀರಣ್ಣನನ್ನು ಒಪ್ಪಿಕೊಳ್ಳತೊಡಗಿದ್ದೆ ಎಂಬುದೇ ಕೃಷ್ಣಪ್ಪನನ್ನು ಆಗೀಗ

ಬಾಧಿಸುವುದುಂಟು. ಅವನ ವಿನಯ ಧೂರ್ತ ಲಕ್ಷಣ ಎಂದು ಅನುಮಾನಿಸುವನು. ಅವನ ಕ್ಷೌರ ಮಾಡಿದ ನುಣುಪಾದ ಮುಖ, ಕಿವಿಯ ಮೇಲಿನ ಕೂದಲು, ಮೂಗಿನ ಮೇಲೆ ಕೂಡಿಕೊಂಡ ಪೊದೆ ಹುಬ್ಬು, ದಪ್ಪವಾದ ಕತ್ತು, ಹತ್ತಿರ ಹತ್ತಿರ ಹೆಜ್ಜೆಯಿಡುತ್ತ ತನ್ನ ಸುತ್ತಲೂ ಅವನು ನಡೆದಾಡುವ ರೀತಿ, 'ಅಮ್ಮ' 'ಅಮ್ಮ' ಎಂದು ಸೀತೆಯನ್ನು ಕರೆದು ಅವಳಿಗೆ ತಾನು ಮಾರ್ಕೇಟ್ಟಿಂದ ಕಟ್ಟಿಸಿ ತಂದ ತರಕಾರಿ ಬುಟ್ಟಿಯನ್ನು ಕೊಡುತ್ತ ಅವಳ ಮೆಚ್ಚುಗೆ ಪಡೆಯುವ ಮತಿನ ಸೇಳೆ – ಎಲ್ಲವೂ ಕೃಷ್ಣಪ್ಪನಿಗೆ ಕಿರಿಕಿರಯನ್ನುಂಟುಮಾಡುವುದು. ತನ್ನ ಕ್ರಾಂತಿಕಾರೀ ವ್ಯಕ್ತಿತ್ವಕ್ಕೆ ಒಲಿದ ನಾಗೇಶನಂಥ ಯುವಕರು ತನ್ನ ಬಳಿ ಇದ್ದಾಗ ಪರಮಾಪ್ತನಂತೆ ಬಂದು ವೀರಣ್ಣ ನಡೆದುಕೊಳ್ಳುವುದು ಕೃಷ್ಣಪ್ಪನಿಗೆ ತುಂಬ ಮುಜುಗರವಾಗಿಬಿಡುವುದು.

'ಹೇಗಿದೀರಿ ಗೌಡರೆ' ಎನ್ನುತ್ತ ವೀರಣ್ಣ ಒಳಗೆ ಬಂದು 'ದಿನೇ ದಿನೇ ಇಂಪ್ರೂವ್‌ಆಗ್ತಿದೀರಿ ನಮ್ಮ ದೇಶದ ಪುಣ್ಯ' ಎಂದು ಕುರ್ಚಿಯನ್ನೆಳೆದು ಕೂತ. ತನ್ನ ದೇಹಸ್ಥಿತಿ ಬಗ್ಗೆ ಬಂದವರೆಲ್ಲ ಸಾಮಾನ್ಯವಾಗಿ ಸುಳ್ಳನ್ನೇ ಹೇಳುತ್ತಿದ್ದರು. ಕೃಷ್ಣಪ್ಪ ಇಂಥ ಔಪಚಾರಿಕ ಮಾತಿಗೆ ಉತ್ತರ ಕೊಡುವುದಿಲ್ಲ.

'ಸುಮ್ಮನೇ ನೋಡಿ ಹೋಗೋಣ ಅಂತ ಬಂದೆ ಗೌಡರೆ, ಇವತ್ತು ಮಧ್ಯಾಹ್ನ ದೆಹಲೀಂದ ಒಬ್ಬರು ಸ್ಪೆಷಲಿಸ್ಟ್ ಬಂದಿದ್ದಾರೆ – ಅವರನ್ನ ಕರಕೊಂಡು ಬಂದು ನಿಮ್ಮನ್ನ ತೋರಿಸ್ತಿದೀನಿ – ಎಕ್ಸ್‌ಪರ್ಟ್‌ಒಪೀನಿಯನ್‌ಗೆ. ಅಮ್ಮಾವರಿಗೆ ಕಷ್ಟವಾಗ್ತಿದೇಂತ ನಾಳೇಂದ ಒಬ್ಬಳು ನರ್ಸಮ್ಮ ಬಂದು ನಿಮ್ಮನ್ನ ನೋಡ್ಕಂಡು ಹೋಗ್ತಾರೆ ಈಗ ನಾನು ಹೋಗಲ?'

ವೀರಣ್ಣ ಎದ್ದು ನಿಂತು ಹೊರಟ. ರೂಮಿಂದ ಹೊರಗೆ ಹೋದವನು ಏನೋ ನೆನಸಿಕೊಂಡು ಹಿಂದಕ್ಕೆ ಬಂದ.

'ಮರತೇ ಬಟ್ಟೆ ಗೌಡರೆ. ನಿಮಗೊಂದು ಕಾರು ಬೇಕೆ ಬೇಕು. ಅಮ್ಮಾವ್ರಿಗೆ ಮನೆಕೆಲಸ ಮುಗಿಸಿ ಬ್ಯಾಂಕಿಗೆ ಹೋಗಬೇಕು. ಅಸೆಂಬ್ಲಿ ಶುರುವಾದ ಮೇಲೆ ನಿಮ್ಮನ್ನ ಕರಕೊಂಡು ಹೋಗ್ಲಿಕ್ಕೆ ಬೇಕು. ಟ್ಯಾಕ್ಸಿಗೆ ತುಂಬ ಖರ್ಚಾಗತ್ತೆ, ನನ್ನ ಕಾರಿದೆ ಅನ್ನಿ. ಆದರೆ ಸಮಯಕ್ಕದು ಇರಬೇಕಲ್ಲ? ಆದ್ರಿಂದ ಈ ಫಾರಂಗೆ ಒಂದು ಸೈನ್‌ಮಾಡಿ. ನಿಮಗೊಂದು ಫಿಯಟ್ಟನ್ನ ಸರ್ಕಾರ ಕೂಡ್ಲೆ ಮಂಜೂರು ಮಾಡಬೇಕು. ಎಂ. ಎಲ್. ಎ. ಆಗಿ ನಿಮ್ಮ ಹಕ್ಕು ಅದು . . . . . . . .'

ವೀರಣ್ಣ ಭರ್ತಿ ಮಾಡಿದ್ದ ಅಪ್ಲಿಕೇಶನ್ನನ್ನು ಪೆನ್ನನ್ನು ರೆಡಿಮಾಡಿಕೊಂಡು ಕೃಷ್ಣಪ್ಪನ ಸಹಿ ತೆಗೆದುಕೊಳ್ಳಲು ಅವನ ಮಂಚದ ಮೇಲ್ಭಾಗವನ್ನು ಎತ್ತಲು ಹೋದ.

'ಬೇಡ ವೀರಣ್ಣನೋರೆ. ಕಾರು ತಗೊಳ್ಳುವಷ್ಟು ದುಡ್ಡು ನನ್ನ ಹತ್ರ ಇಲ್ಲ.'

'ಅಯ್ಯೋ ದುಡ್ಡು ದುಡ್ಡು. ಯಾಕೆ ಯಾವಾಗ್ಲೂ ದುಡ್ಡಿನ ವಿಷ್ಯ ಮಾತಾಡ್ತೀರಿ? ಅದನ್ನ ನನಗೆ ಬಿಡಿ.'

'ಅದೆಲ್ಲ ಸಾಧ್ಯವಿಲ್ಲ. ಸಾಲ ಮಾಡೋಕೆ ನನಗೆ ಇಷ್ಟವಿಲ್ಲ.'

‘ಬ್ಯಾಡ. ಸಾಲ ಮಾಡೋದು ಬ್ಯಾಡ. ನಿಮ್ಮ ಕಾರನ್ನ ನಾನೇ ಕೊಂಡಿಟ್ಟುಕೋತೇನೆ. ನನ್ನ ಮಗನೂ ಒಂದು ಫಿಯಟ್‌ಬೇಕೂಂತ ಸತಾಯಿಸ್ತ ಇದಾನೆ. ಅಷ್ಟುಪಕಾರ ನೀವು ಮಾಡಿದ್ದಕ್ಕೆ ನಾನು ಬೇಕಾದಾಗ ನಿಮಗೆ ಉಪಯೋಗಿಸಿಕೊಳ್ಳಕ್ಕೆ ಕಾರನ್ನ ಕೊಡಬಹುದಲ್ಲ. . . . .’

ನಾಗೇಶ ರೂಮಿಂದ ಎದ್ದು ಹೋದ. ತನ್ನ ಮನಸ್ಸು ಈ ವೀರಣ್ಣನ ಉಪಕಾರಕ್ಕೆ ಕೃತಜ್ಞತೆಯಲ್ಲಿ ದುರ್ಬಲವಾಗೋದನ್ನ ಅವನು ಗಮನಿಸಿದ್ದಾನೆ. ತನಗೆ ಸುಲಭವಾಗಲೆಂದು ಅವನು ಹೊರಗೆ ಹೋಗಿದ್ದಾನೆ.

ಕೃಷ್ಣಪ್ಪ ಬೇಡವೇ ಬೇಡ ಎಂದು ತಲೆಯಲ್ಲಾಡಿಸುತ್ತ ವೀರಣ್ಣನಿಗೆ ಹೇಳಿದ.

‘ಹೋಗಿಲಿ ನಿಮಗೆ ಬೇಡ, ಆದರೆ ನನಗೊಂದು ಉಪಕಾರ ಮಾಡಬಹುದಲ್ಲ ನೀವು?’

ಲಕ್ಷಾಧೀಶನಾದ ವೀರಣ್ಣನಿಗೆ ಹತ್ತೋ ಹನ್ನೆರಡೊ ಸಾವಿರ ಹೆಚ್ಚು ಕೊಟ್ಟು ಒಂದು ಫಿಯಟನ್ನ ಕೊಳ್ಳುವುದು ಕಷ್ಟವೆ? ಅಷ್ಟಕ್ಕಾಗಿ ಅವನು ತನಗೆ ಕೈಯೊಡ್ಡುವ ಮನುಷ್ಯನೆ? ಆದರೂ ಉಪಕಾರ ಮಾಡಿ ಎನ್ನುವ ರೀತಿಯಲ್ಲಿ ಬೇಡುತ್ತಿದ್ದಾನೆ ಎಂದು ಕೃಷ್ಣಪ್ಪ, ಮೃದುವಾಗಿ, ಫಾರಂಗೆ ಸೈನ್‌ಮಾಡಿದ. ವೀರಣ್ಣ ಹೊರಟುಹೋದ ಮೆಲೆ ನಾಗೇಶ ಒಳಗೆ ಬಂದ.

‘ಇದೂ ಕೂಡ ಕರೆಪ್ಷನ್‌ಕಣೋ ನಾಗೇಶ. ವೀರಣ್ಣ ಹತ್ತು ಸಾವಿರವಾದ್ರೂ ಈ ಕಾರಿಂದ ಲಾಭ ಮಾಡಿಕೋತಿದಾನೆ. ನನಗೋಸ್ಕರ ಕೊಳ್ತಿದೀನಿ ಅಂತಾನೆ. ನಿಜವಿದ್ರೂ ಇರಬಹುದು. . . . . . . .’

‘ಬಿಡಿ ಗೌಡರೆ. ಆ ಕಾರೇನು ಅವನಿಗೆ ದೊಡ್ಡದ? ನಿಮ್ಮ ಅಗತ್ಯಕ್ಕೇಂತ ಕೊಳ್ತಿದಾನೆ. ಅಂಥವರು ಮಾಡಬೇಕಾದ ಡ್ಯೂಟಿ ಅದು.’

ನಾಗೇಶನ ಮಾತಿನಿಂದ ಕೃಷ್ಣಪ್ಪನಿಗೆ ಸಮಾಧಾನವಾಯಿತು. ಆದ್ದರಿಂದಲೇ ಕಟುವಾಗಿ ಮಾತಾಡುವುದು ಅವನಿಗೆ ಸುಲಭವಾಯಿತು.

‘ನಿಂಗಿನ್ನೂ ಅನುಭವ ಸಾಲದು ನಾಗೇಶ. ನಾನು ಮೆತ್ತಗಾಗ್ತ ಆಗ್ತ ಬಂದಿದೀನಿ. ಒಳಗಿಂದ ಕೊಳೀತ ಇದೀನಿ. ಹತ್ತು ವರ್ಷದ ಕೆಳಗೆ ಇಂಥವರ ನೆರಳೂ ನನ್ನ ಹತ್ರ ಸುಳೀತ ಇರಲಿಲ್ಲ.’

ಈ ಮಾತಿಂದ ನಾಗೇಶನ ಮೆಚ್ಚುಗೆ ಇನ್ನಷ್ಟು ಹೆಚ್ಚಿದ್ದು ಕಂಡು ತನ್ನ ಬಗ್ಗೆ ಹೇಸಿಗೆ ಪಡುತ್ತ ಕೃಷ್ಣಪ್ಪ ಕಣ್ಣು ಮುಚ್ಚಿ –

‘ನನ್ನ ವೀಲ್‌ಚೇರಿನ ಮೇಲೆ ಕೂರಿಸ್ತಿಯಾ ನಾಗೇಶ. ಹೊರಗ್ಯಾರೋ ಇದಾರೆ ಅವರನ್ನೂ ಕರಕೊ ಸಹಾಯಕ್ಕೆ’ ಎಂದು.

***

ಅಕ್ಟೋಬರ್ ತಿಂಗಳಿನ ಹವೆ ಬೆಂಗಳೂರಿನಲ್ಲಿ ಹಿತವಾಗಿತ್ತು. ಸಿಮೆಂಟಿನ ಅಂಗಳದ ಬಿಸಿಲಲ್ಲಿ ಬರಿದಾದ ಕಾಲನ್ನೂ ಕೈಗಳನ್ನೂ ಕಾಯಿಸಿಕೊಳ್ಳುತ್ತ ಅವುಗಳಲ್ಲಿ ರಕ್ತ ಹರಿಯುವುದನ್ನು ಕಲ್ಪನೆಯಲ್ಲಿ ಅನುಭವಿಸಲು ಯತ್ನಿಸುತ್ತ ಕೃಷ್ಣಪ್ಪ ಕೂತ.

ವಾರಂಗಲ್‌ನಿಂದ ಹಳ್ಳಿಗೆ ಹಿಂದಕ್ಕೆ ಬಂದ ಮೇಲೆ ಸಣ್ಣದೊಂದು ಗುಡಿಸಲು ಕಟ್ಟಿಕೊಂಡು ಮಾವನಿಂದ ತನ್ನ ತಂದೆಗೆ ಸೇರಿದ್ದ ಗದ್ದೆಗಳನ್ನು ಬಿಡಿಸಿಕೊಂಡು ತಾಯಿಯ ಜೊತೆ ಸಂಸಾರ ಹೂಡಿದ್ದ. ಕೊಟ್ಟಿಗೆಯಲ್ಲಿ ಹಾಲು ಕರೆಯುವ ಎರಡು ದನಗಳಿದ್ದುವು. ಹೊತ್ತಾರೆ ಎದ್ದು ಕೃಷ್ಣಪ್ಪನೇ ಹಾಲು ಕರೆಯುವುದು. ಈಗ ಜೀವವಿಲ್ಲದಂತಿರುವ ಬೆರಳುಗಳು ಆಗ ದನದ ಮೊಲೆಗಳನ್ನು ಪುಸಲಾಯಿಸಿ ಹಾಲಿಳಿಸಿಕೊಂಡು, ಮೇಲಿನಿಂದ ಕೆಳಕ್ಕೆ ಎರಡೂ ಕೈಗಳಲ್ಲೂ ಎರಡು ಮೊಲೆಗಳನ್ನೂ ಲಯಬದ್ಧವಾಗಿ ಒತ್ತಾಯಪೂರ್ವಕವಾಗಿ, ಆದರೆ ಮೃದುವಾಗಿ ಜಗ್ಗುತ್ತಿದ್ದುದು, ಮೊದಮೊದಲು ಕೈ ಬೇಗ ಬತ್ತುತ್ತಿತ್ತು. ಕ್ರಮೇಣ ಕಪ್ಪು ಬಿಳಿ ಚುಕ್ಕೆಗಳ ಕಾವೇರಿ ಹಿಂಗಾಲನ್ನು ಅಗಲಿಸಿ ನಿಂತು ತನ್ನ ಕೆಚ್ಚಲಿನ ಭಾರ ಕೃಷ್ಣಪ್ಪನ ಲಯಬದ್ಧವಾದ ಎಳೆತಕ್ಕೆ ಧಾರೆ ಧಾರೆ ಇಳಿಯುವುದನ್ನು ಸುಖಿಸುತ್ತ ದೀರ್ಘವಾಗಿ ಉಸಿರಾಡುತ್ತಿತ್ತು. ಒತ್ತುವಾಗ ಕ್ರಮೇಣ ಮೃದುವಾಗುತ್ತಾ ಹಲ್ಲಿನಿಂದ ಸೆಟೆದೂ ತರಿತರಿಯಾಗಿಯೂ ಇರುತ್ತಿದ್ದ ಕೆಚ್ಚಲು. ತಾಯಿ ಕಾಯಿಸಿಕೊಟ್ಟ ಹಾಲು ಕುಡಿದು ಕೃಷ್ಣಪ್ಪ ಗದ್ದೆಗೆ ಹೋಗುವನು. ಬೇಸಗೆಯಲ್ಲಿ ಬಾವಿ ಬತ್ತಿ ಕಾಲು ಮುಳುಗುವಷ್ಟು ಮಾತ್ರ ನೀರಿದ್ದಾಗ ಬಾವಿಗೆ ಇಳಿಯುವನು. ಕೆಸರನ್ನು ಬಾಚಿ ಬಾಚಿ ಬಕೆಟ್ಟಿನಲ್ಲಿ ತುಂಬಿದರೆ ಮೇಲಿನಿಂದ ಶೇಷಪ್ಪ ಹಗ್ಗದಲ್ಲದನ್ನು ಎತ್ತಿಕೊಳ್ಳುವನು. ಉಸಿರುಕಟ್ಟಿದ ಚಿಲುಮೆಗಳನ್ನು ಮುಟ್ಟಿ ಎಬ್ಬಿಸಲು ಕೈಗಳು ಕೆಸರು ಬಾಚುತ್ತ ಬಾಚುತ್ತ ಹೊತೊರೆಯುವುವು. ಮೊರಿಗೆಯಿಂದ ಹೀಗೆ ಕೆಸರು ನೀರು ಎತ್ತುವಾಗ ತಣ್ಣನೆಯ ನೀರಿನ ಚಿಲುಮೆ ಥಟ್ಟನೆ ಪುಟಿದು ಬೆರಳ ತುದಿಗಳಿಗೆ ತಾಕಿ ಇಡೀ ದೇಹವನ್ನು ರೋಮಾಂಚಗೊಳಿಸುವುದು.

'ಯಾಕ್ರೋ ಈ ಕಲ್ಲುಕುಟಕನ ಪೂಜೆ ಮಾಡ್ಕೊಂಡು ಮಂಕಾಗಿ ಕೂತಿದೀರಿ. ಅದೊಂದು ಕಲ್ಲು ಅಲ್ವ? ಎತ್ತಿ ಬಿಸಾಕಿ, ನಿಮ್ಮನ್ನು ಕಾಡೋ ದೆವ್ವ ಏಜೆಂಟ್‌ನರಸಿಂಹ ಭಟ್ಟ. ನೀವು ಗೆಯ್ದಿದ್ದನೆಲ್ಲ ಬಂದು ತಗೊಂಡು ಹೋಗ್ತಾನೆ.'

ಕೃಷ್ಣಪ್ಪ ತನ್ನ ಸುತ್ತಲಿನ ರೈತರಿಗೆ ಹೇಳುವನು. ಇದು ಜೋಯಿಸರ ಕಿವಿ ಮುಟ್ಟುವುದು.

'ಕಿಟ್ಟಪ್ಪ' ಎಂದು ಬಾಲೆಲೆ ಕೇಳುವ ನೆಪದಲ್ಲಿ ಜೋಯಿಸರು ಬಂದು ಚಾವಡಿಯ ಮೇಲೆ ಕೂತು, ಕೃಷ್ಣಪ್ಪ ಕೊಟ್ಟ ಹಾಲು ಕುಡಿದು ಅದೂ ಇದೂ ಮಾತಾಡುತ್ತ, 'ಏನೋ ಕಿಟ್ಟಪ್ಪ? ಕಲ್ಲುಕುಟಕ ಬರೀ ಕಲ್ಲು, ಎಸೀರಿ ಅಂದಿಯಂತೆ ಹೌದ?' ಎನ್ನುವರು.

ಜೋಯಿಸರ ಕೃಶವಾದ ಮೈಯನ್ನೂ, ಅವರ ಕುರುಚಲು ಬಿಳಿಗಡ್ಡ ದೊಡ್ಡ ಜುಟ್ಟುಗಳ ಮುಖದಲ್ಲಿ ಯಾವಾಗಲೂ ಸೌಮ್ಯವಾಗಿರುವ ಕಣ್ಣುಗಳನ್ನೂ ನೋಡುತ್ತ ಕೃಷ್ಣಪ್ಪ ನಿಧಾನವಾಗಿ ಹೇಳುವನು. ಜೋಯಿಸರು ಬಂದರೆಂದು ಎಲೆಯಡಿಕೆ ಮೆಲ್ಲುತ್ತ ತಾಯಿಯೂ ಚಾವಡಿಯಲ್ಲಿ ಕೂತಿರುವಳು.

‘ನೀವು ನರಸಿಂಹ ದೇವರ ಒಕ್ಕಲಾಗಿದ್ದಿರಿ ಅಲ್ವ? ಅದು ಹೇಗೆ ನಿಮ್ಮ ತೋಟ ಕಳಕೊಂಡಿರಿ ಹೇಳಿ, ಯಾರು ಅದಕ್ಕೆ ಕಾರಣ?’

‘ಇರೋದು ನಾನು ನನ್ನ ಹೆಂಡತಿ. ಒಂದಷ್ಟು ಪೆನ್‌ಶನ್‌ಸಿಗುತ್ತೆ. ನಿನ್ನ ಮಾವ ಮತ್ತೆ ನಾಲ್ಕೈದು ಗೌಡರ ಮನೇವ್ರು ಏನೋ ಜೋತಿಷ್ಯ ಹೇಳ್ತಾನಲ್ಲ, ಊರಲ್ಲೊಬ್ಬ ಬ್ರಾಹ್ಮಣ ಇರಲಿ ಅಂತ ಮನೇಗೆ ಬೇಕಾದ ಸೌದೆ, ಅಕ್ಕಿ, ತರಕಾರಿ, ಬಾಳೆಲೆ, ಹಣ್ಣು ಹಂಪಲು ಒದಗಿಸ್ತೀರಿ. ನಂಗೆ ಯಾಕೆ ತೋಟ ಬೇಕು ಹೇಳು?’.

‘ಸರಿ ಜೋಯಿಸ್ರೆ. ನರಸಿಂಹ ದೇವರ ಮಠದ ಏಜೆಂಟ್‌ಭಟ್ಟ ಇದಾನಲ್ಲ ಅವ ಅಲ್ವ ನಿಮ್ಮನ್ನ ತೋಟದಿಂದ ಬಿಡಿಸಿ ತನ್ನ ಸ್ವಂತ ಸಾಗುವಳಿಗೇಂತ ಇಟ್ಕೊಂಡದ್ದು?’

‘ಗೇಣಿ ಸಂದಾಯ ಆಗ್ಲಿಲ್ಲಾಂತ ಇಟ್ಕೊಂಡ ಸರಿ. ಅದನ್ನ ತಪ್ಪಿಸಕ್ಕಾಗತ್ತ?’

‘ಆಗತ್ತೆ ಜೋಯಿಸ್ರೆ’

‘ಈಗಿನ ಕಾನೂನುಗಳು ನನಗೆ ಗೊತ್ತಿಲ್ಲಪ್ಪ. ಆದರೆ ಕೋರ್ಟು ಮೆಟ್ಟಿಲು ಹತ್ತಿ ಉದ್ಧಾರವಾದವ್ರನ್ನ ನಾನು ಕಾಣೆ. ಹೋಗಲಿ ಬಿಡು. ನಾನು ಕೇಳಿದ ಪ್ರಶ್ನೆಗೂ ನಿನ್ನ ಈ ಪಾಟೀ ಸವಾಲಿಗೂ ಯಾಕೋ ನನಗೆ ಸಂಬಂಧಾನೇ ಹೊಳೀಲಿಲ್ಲ.’

‘ಸಂಬಂಧ ಇದೆ’

‘ಹಾಗಾದರೆ ಹೇಳು ಮಾರಾಯ. ಶಿಷ್ಯಾದಿಚ್ಛೇತ್‌ಪರಾಜಯಮ್‌ಅಂತಾರೆ.’

‘ಹೇಗೇಂದ್ರೆ ಜೋಯಿಸರೆ – ಈಗ ನೋಡಿ ಕಲ್ಲುಕುಟಕನ್ನ ನಂಬಿಕೊಂಡು ಈ ನಮ್ಮ ಮೂರ್ಖ ಶೂದ್ರ ಜನ ಆ ನರಸಿಂಹ ಭಟ್ಟನಿಗೆ ಹೆದರ್ತಾರೆ. ತಮ್ಮ ಐಹಿಕ ಪಾಡಿನಲ್ಲಿ ಏನೂ ಮಾರ್ಪಾಟಾಗಲಿಕ್ಕೆ ಸಾಧ್ಯವಿಲ್ಲ ಅಂದುಕೋತಾರೆ. ಆ ಕುರಿ ಕೋಳೀ ತಿನ್ನೊ ಕಲ್ಲುಕುಟಕನೇ ತಮ್ಮನ್ನ ಉದ್ಧಾರ ಮಾಡಬೇಕೂಂತ ತಿಳೀತಾರೆ.’

‘ನಿಮ್ಮ ಜನಾನೂ ನಿರಾಕಾರ ನಿರ್ಗುಣ ಬ್ರಹ್ಮನನ್ನು ಅರಿಯೋ ಮಟ್ಟಕ್ಕೆ ಬರಬೇಕೂಂತ ಅನ್ನೋದನ್ನ ನಾನೂ ಒಪ್ತೀನೋ ಕಿಟ್ಟಣ್ಣ. ಧರ್ಮಕರ್ಮಗಳ ಮುಖೇನ ಅವರು ಮೇಲಕ್ಕೆ ಬರಬೇಕೇ ವಿನಹ – ’

‘ಅದಲ್ಲ ನಾನು ಹೇಳ್ತಿರೋದು ಜೋಯಿಸ್ರೆ – ಕೇಳಿ, ನರಸಿಂಹಭಟ್ರನ್ನ ಎದುರಿಸಿ ಅವರು ತನ್ನ ಐಹಿಕ ಬದುಕನ್ನು ಊರ್ಜಿತಗೊಳಿಸಿಕೊಂಡರೆ ಕ್ರಮೇಣ ಈ ಕುರಿಕೋಳಿ ತಿನ್ನೊ ದೆವ್ವಗಳ ಪೂಜೇಂದ ಮುಕ್ತರಾಗ್ತಾರೆ. ಆದ್ರೆ ನರಸಿಂಹಭಟ್ಟನನ್ನ

ಧಿಕ್ಕರಿಸಿ ನಡಕೊಳ್ಳೋಕೆ ಈ ಕಲ್ಕುಟುಕನಲ್ಲಿರೋ ನಂಬಿಕೆ ಅಡ್ಡಬರತ್ತಲ್ಲ ಹೇಳಿ. ಆದ್ರಿಂದ ನಂಗೆ ಎದ್ದಿರೋ ಪ್ರಶ್ನೆ ಕಲ್ಕುಟಕನನ್ನ ಅವರು ಕಿತ್ತೆಸೆದು, ಅದ್ರಿಂದ ಬಂದ ಧೈರ್ಯದಿಂದ ನರಸಿಂಹ ಭಟ್ಟನ ಡೊಳ್ಳು ಹೊಟ್ಟೇನ ಕರಗಿಸಬೇಕೋ, ಅಥವಾ ಎರಡನೇದನ್ನ ಮೊದಲು ಮಾಡಿ ಕಲ್ಕುಟಕನ್ನ ಪೂಜಿಸೋ ಸ್ಥಿತೀಂದ ಮೇಲೇಳಬೇಕೋ. . . . . .'

ನರಸಿಂಹ ಭಟ್ಟನನ್ನ ಏಕವಚನದಲ್ಲಿ ತಾನು ಹೀಯಾಳಿಸದ್ದರಿಂದ ಬ್ರಾಹ್ಮಣರಾದ ಜೋಯಿಸರಿಗೆ ಖೇದವಾದದ್ದನ್ನ ಕೃಷ್ಣಪ್ಪ ಗಮನಿಸುತ್ತಾನೆ. ಜೋಯಿಸರೇ ಸ್ವತಃ ನರಸಿಂಹ ಭಟ್ಟನ ಲೋಭವನ್ನ ಬೇಸರದಿಂದ ಜರೆಯಹುತ್ತ ಮಠವೇ ಧರ್ಮದ ದಾರಿಬಿಟ್ಟ ಮೆಲೆ ಏನು ಗತಿಯೆಂದು ಕೃಷ್ಣಪ್ಪನ ಎದುರು ನಿಟ್ಟುಸಿರಿಟ್ಟಿದ್ದಿದೆ. ಮಠದ ಸ್ವಾಮಿ ಸೂಳೆಯನ್ನಿಟ್ಟುಕೊಂಡು, ವ್ಯವಹಾರವನ್ನು ತನ್ನ ತಮ್ಮನಾದ ಈ ಭಟ್ಟನ ಕೈಯಲ್ಲಿ ಕೊಟ್ಟು ಜೋಯಿಸರಂಥ ಧರ್ಮಭೀರುಗಳಿಗೆ ಅಸಹ್ಯವಾಗುವಂತೆ ಮಾಡಿದ್ದ. ಅಣ್ಣಾಜಿ ತನ್ನಲ್ಲಿ ಬಿತ್ತಿದ ವಿಚಾರಗಳನ್ನಾಗಲೀ, ಅಥವಾ ತಾನು ವಾರಂಗಲ್‌ಠಾಣೆಯಲ್ಲಿ ಕಂಡಿದ್ದ ನರಕವನ್ನಾಗಲೀ ಈ ಬ್ರಾಹ್ಮಣನೆದುರು ಹೇಳಿ ಅವರಿಗೆ ಮನದಟ್ಟು ಮಾಡುವುದು ಅಸಾಧ್ಯವೆಂದು ಕೃಷ್ಣಪ್ಪ ಕೈಬಿಟ್ಟಿದ್ದ. ಆದರೂ ಜೋಯಿಸರು ಮತ್ತು ಅವರ ಹೆಂಡತಿ ಕೃಷ್ಣಪ್ಪನಲ್ಲಿ ತನ್ನವರು ಎಂಬ ಭಾವನೆ ಹುಟ್ಟಿಸುವರು. ಹಳ್ಳಿಗೆ ಬಂದ ಪ್ರಾರಂಭದಲ್ಲಿ ಜೋಯಿಸರು ಚಳಿಯಲ್ಲಿ ಬರೀ ಪಂಚೆಯುಟ್ಟು ಧೋತ್ರ ಹೊದ್ದಿರುವುದನ್ನು ಕಂಡು ಕೃಷ್ಣಪ್ಪ ಅವರಿಗೊಂದು ಉಣ್ಣೆಯ ಶಾಲು ತಂದುಕೊಟ್ಟು ರುಕ್ಮೀಣಿಯಮ್ಮನ ಕಣ್ಣುಗಳಲ್ಲಿ ಬೆಳಕನ್ನೂ ನೀರನ್ನೂ ಉಕ್ಕುವಂತೆ ಮಾಡಿದ್ದ.

ಮಾಂಸ ತಿನ್ನದ್ದರಿಂದ ಕೃಷ್ಣಪ್ಪ ಜೋಯಸರಿಗೆ ಇನ್ನಷ್ಟು ಆತ್ಮೀಯನಾಗಿದ್ದ. ಈ ಲೋಕದಲ್ಲಿ ಈಗಲೂ ಮಳೆ ಬೆಳೆಯಾಗುತ್ತಿರುವುದು ಕೆಲವೋ ಕೆಲವು ಬ್ರಾಹ್ಮಣರಾದರೂ ತ್ರಿಕಾಲ ಸ್ನಾನ ಸಂಧ್ಯಾವಂದನೆ ಮಾಡುತ್ತಿರುವುದರಿಂದ ಎಂಬ ಜೋಯಿಸರ ತಿಳುವಳಿಕೆಯನ್ನು ಪ್ರೀತಿಯಿಂದ ಕೃಷ್ಣಪ್ಪ ಸಹಿಸಿಕೊಳ್ಳುವನು. ತನ್ನ ಜಪತಪಾದಿಗಳಿಂದ ಕೃಷ್ಣಪ್ಪ ಶ್ರೇಯೋವಂತನಾಗುತ್ತಿದ್ದಾನೆ ಎಂದು ಜೋಯಿಸರು ತಿಳಿದಿದ್ದಾರೆಂದು ಕೃಷ್ಣಪ್ಪನಿಗೆ ಗೊತ್ತು. ಅದನ್ನೂ ಅವನು ಸಹಿಸಿಕೊಳ್ಳುವನು. ಅವರ ಜಪತಪದ ಫಲವಾದ ಈ ತಾನು ನರಸಿಂಹ ಭಟ್ಟ ಎಷ್ಟೇ ಕೊಳಕನಾದರೂ ಅವನಿಗೆ ಪೂರ್ವಜನ್ಮದ ಪುಣ್ಯದಿಂದ ಲಭಿಸಿದ ಬ್ರಾಹ್ಮಣ್ಯಕ್ಕೆ ಚೂರು ಮರ್ಯಾದೆ ಕೊಡದೇ ಇರುವುದು ಜೋಯಿಸರಿಗೆ ಸಮಸ್ಯೆಯಾಗಿದೆ ಎಂದೂ ಅವನಿಗೆ ಗೊತ್ತಿದೆ.

ವಸೂಲಿಯ ಕಾಲ ಬಂತೆಂದರೆ ನರಸಿಂಹ ಭಟ್ಟ, ಅವನ ಕಡೆ ಅಮೀನ, ಅವನ ಶಾನುಭೋಗ ಹಳ್ಳಿಯ ರೈತರಿಗೆ ಸಿಂಹಸ್ವಪ್ನವಾಗಿ ಬಿಡುವರು. ಈ ಸಾರಿ ಒಂದು ಘಟನೆ ನಡೆಯಿತು. ಸಂದಾಯವಾಗಬೇಕಿದ್ದ ಗೇಣಿಯನ್ನು ಕೊಡಲಿಲ್ಲೆಂದು ಬೀರೇಗೌಡ ಎಂಬ ರೈತನ ಮನೆಯನ್ನು ನರಸಿಂಹಭಟ್ಟ ತನ್ನ ಜವಾನರ ಜೊತೆ ಸ್ವತಃ ನುಗ್ಗಿದ. ಬೀರೇಗೌಡನ ಮಗುವಿಗೆ ಜ್ವರ ಬಂದಿತ್ತು. ಅವನ ಹೆಂಡತಿ ಮಗುವಿಗೆಂದು ಕಂಚಿನ ಪಾತ್ರೆಯಲ್ಲಿ ಹಾಲನ್ನು ಕಾಯಿಸುತ್ತಿದ್ದಳು. ಒಳಗೆಲ್ಲೋ ಅಡಿಕೆಯನ್ನು ಬೀರೇಗೌಡ ಬಚ್ಚಿಟ್ಟಿದ್ದಾನೆ ಎಂಬ ಗುಮಾನಿಯಿಂದ ಒಳಗೆ ನುಗ್ಗಿದ ಭಟ್ಟನಿಗೆ ಬರಿದಾದ ಮನೆ ಕಂಡು ಕಡುಕೋಪ ಬಂತು. ಇನ್ನೆಲ್ಲೋ ಅಡಿಕೆಯನ್ನು ಈ ಗೌಡ ಸಾಗಿಸಿದ್ದಾನೆ ಎಂದು ಕಟಕಟನೆ ಹಲ್ಲು ಕಡಿಯುತ್ತ ಭಟ್ಟ ಒಳಗಿದ್ದುದನ್ನೆಲ್ಲ ಅಂಗಳಕ್ಕೆ ಎಸೆಯಲು ಜವಾನರಿಗೆ ಹೇಳಿ, ಗೌಡನ ಹೆಂಡತಿ ಕಾಲು ಹಿಡಿದುಕೊಂಡರೂ ಕರಗದೆ, ಒಲೆಯ ಮೇಲಿದ್ದ ಹಾಲನ್ನೂ ಎತ್ತಿಸಿ ಅಂಗಳದಲ್ಲಿ ಚೆಲ್ಲಿಸಿದ್ದ. ಈ ಘಟನೆ ಹಳ್ಳಿಯ ಜನರನ್ನು ಅವಾಗಕ್ಕಾಗಿಸಿತ್ತು. ಕಿವಿಯಲ್ಲಿ ಒಂಟಿ ತೊಟ್ಟು, ಹಣೆಗೆ ವಿಭೂತಿಯಿಟ್ಟು, ಕಚ್ಚೆ ಪಂಚೆಯ ಮೇಲೆ ಕರಿಯ ಸರ್ಜಕೋಟನ್ನು ಹಾಕಿಕೊಂಡು ಕೈಯಲ್ಲಿ ದೊಣ್ಣೆ ಹಿಡಿದು

ನಿಂತ ಉಬ್ಬು ಹಲ್ಲಿನ ಕಡುಕಪ್ಪು ಬಣ್ಣದ ಈ ಭಟ್ಟ ಬೀರೇಗೌಡನಿಗೆ ಯಮನಂತೆ ಕಂಡಿದ್ದ. ಅವತ್ತು ಸಂಜೆಯೇ ಜ್ವರ ಬಂದಿದ್ದ ಮಗು ಸತ್ತಿತು ಬೇರೆ.

ವಾರಂಗಲ್‌ಠಾಣೆಯ ಹಿಂಸೆಯ ಬೇರುಗಳನ್ನು ತನ್ನ ಸುತ್ತುಮುತ್ತಲೆಲ್ಲ ಕಂಡಿದ್ದ ಕೃಷ್ಣಪ್ಪ ಬೀರೇಗೌಡನ ಮಗುವನ್ನು ಹೂಳಲು ತಾನೇ ಹೋದ. ಅಲ್ಲಿ ನೆರೆದಿದ್ದ ರೈತರಿಗೆ ಹೇಳಿದ: ಮಠದ ಭಟ್ಟ ಪ್ರತಿವರ್ಷ ಹೆಚ್ಚು ಹೆಚ್ಚು ಗೇಣಿಯನ್ನು ಪಡೆಯುತ್ತಿದ್ದಾನೆ. ಅವನು ಗೇಣಿ ಅಳೆಯಲು ತರುತ್ತಿರುವ ಕೊಳಗ ವರ್ಷೇ ವರ್ಷೇ ದೊಡ್ಡದಾಗುತ್ತ ಹೋಗಿದೆ. ಹಿಂದಿನ ಕೊಳಗದಲ್ಲಿ ಮಾತ್ರ ನೀವು ಗೇಣಿ ಅಳೆಯುತ್ತೀರೆಂದು ಹಠಮಾಡಿ. ಅವನು ಹಿಂಸೆ ಮಾಡಲು ಬರುತ್ತಾನೆ. ಮೊದಲೇ ನಿಮ್ಮ ಮನೆ ಹೆಂಗಸರಿಗೆ ಒಂದು ಪಾತ್ರೆಯಲ್ಲಷ್ಟು ಸಗಣಿ ನೀರನ್ನು ಬೆರಸಿ ಅದರಲ್ಲಿ ಪೊರಕೆಯನ್ನು ಅದ್ದಿಡಲು ಹೇಳಿ. ಭಟ್ಟ ಒಳನುಗ್ಗಿದರೆ ಪೊರಕೆಯಲ್ಲಿ ಅವನಿಗೆ ಹೊಡೆಯಿರಿ. ಬ್ರಾಹ್ಮಣ ಇದರಿಂದ ಕಂಗಾಲಾಗುತ್ತಾನೆ.

ಮಾರನೇ ದಿನವೇ ಒಬ್ಬ ಬಡಗೌಡನ ಮನೆಯಲ್ಲಿ ಭಟ್ಟನ ಬಿಳಿ ಅಂಗಿ ಸರ್ಜ್‌ಕೋಟಿನ ಮೇಲೆ ಸಗಣಿ ನೀರಲ್ಲದ್ದಿದ ಪೊರಕೆಯ ಪ್ರಕ್ಷಾಳನ ನಡೆಯಿತು. ಈ ಸುದ್ದಿ ತಾಲ್ಲೂಕಿನಲ್ಲೆಲ್ಲಾ ಹಬ್ಬಿತು. ಈ ಘಟನೆಯಿಂದ ಅನೇಕ ಬೆಳವಣಿಗೆಗಳಾದುವು.

ಪೋಲೀಸ್‌ಸಹಾಯ ಪಡೆದು ಭಟ್ಟ ಒಕ್ಕಲೆಬ್ಬಿಸಲು ಶುರುಮಾಡಿದ. ರೈತರು ಸಂಘಟಿತರಾಗಿ ತಮ್ಮ ಹೊಲದಲ್ಲಿ ಉಳಲು ಹೋದರು. ಅವರನ್ನು ಕಾನೂನಿನ ಪ್ರಕಾರ ಬಂಧಿಸಲಾಯಿತು. ಈ ಸುದ್ದಿ ಹರಡಿ ದೇಶದ ಅನೇಕ ಕಡೆಗಳಿಂದ ಸಮಾಜವಾದಿಗಳು ಬಂದು ಕೃಷ್ಣಪ್ಪನ ಹುಲಿಯೂರಲ್ಲಿ ದಸ್ತಗಿರಿಯಾಗತೊಡಗಿದರು. ಹುಲಿಯೂರು ಇಂಡಿಯಾದಲ್ಲೆಲ್ಲ ಈ ಘಟನೆಯಿಂದ ಕರ್ನಾಟಕದ ತೆಲಂಗಾಣವೆಂದು ಪ್ರಸಿದ್ಧವಾಯಿತು.

ರೈತರು ತಮ್ಮ ಹೋರಾಟದಲ್ಲಿ ಸಂಪೂರ್ಣ ಗೆಲ್ಲದಿದ್ದರೂ ಮಠ ಸ್ವಲ್ಪ ತಣ್ಣಗಾಯಿತು. ಕೊಳಗದ ಗಾತ್ರ ಹಿಗ್ಗುವುದು ನಿಂತು ಐದು ವರ್ಷಗಳ ಹಿಂದಿನ ತನ್ನ ಗಾತ್ರಕ್ಕೆ ಮರಳಿತು. ಈ ಘಟನೆ ಮೂಲಕ ರೈತರೆಲ್ಲರೂ ಸಂಘಟಿತರಾದರು. ಜನರ ಒತ್ತಾಯಕ್ಕೆ ಸಿಕ್ಕಿಬಿದ್ದು, ಕೃಷ್ಣಪ್ಪ ಚುನಾವಣೆಗೆ ನಿಂತು ಗೆದ್ದು ಬಂದ. ಇದು ಮೂರನೇ ಬಾರಿ ಅವನು ಅಸೆಂಬ್ಲಿಗೆ ಆಯ್ಕೆಯಾಗಿರುವುದು. ಇಷ್ಟಿಷ್ಟೇ ರೈತರ ಸಮಸ್ಯೆಗಳು ಬಗೆ ಹರಿಯುತ್ತ ಬಂದಿದ್ದರಲ್ಲಿ ಕೃಷ್ಣಪ್ಪನ ಪಾತ್ರ ಮಹತ್ತ್ವದ್ದೆಂದು ದೇಶದಲ್ಲಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಮೊದಲು ಬ್ರಾಹ್ಮಣರ ವಿರುದ್ಧವಿದ್ದ ಸರ್ಕಾರ ಇನಾಂದಾರಿಯನ್ನು ರದ್ದು ಮಾಡಿತು. ಆದರೆ ಜಮೀಂದಾರ ವರ್ಗವಾದ ಒಕ್ಕಲಿಗ ಲಿಂಗಾಯರು ಅಧಿಕಾರದಲ್ಲಿದ್ದುದರಿಂದ ಭೂ ಹಿಡುವಳಿಗೆ ಸೀಲಿಂಗ್‌ಹಾಕುವ ಹೋರಾಟ ಉಗ್ರವಾಗುತ್ತ ಹೋಗಬೇಕಾಯಿತು. ಉಳುವವನೇ ಹೊಲದೊಡೆಯ ಎಂಬ ಸ್ಲೋಗನನ್ನು ಮಾತಿನ ಮಟ್ಟದಲ್ಲಾದರೂ ಸರ್ಕಾರ ಈಗ ಒಪ್ಪಿಕೊಳ್ಳುತ್ತಿದೆ. ಆದರೆ ಎಲ್ಲಾ ಉಳುವವರೂ ಹೊಲದೊಡೆಯರಾಗಿಲ್ಲ. ಈಚೀಚೆಗೆ ಆದವರು ಉಳಿದವರು ಆಗುವುದನ್ನು ಇಷ್ಟಪಡುವುದಿಲ್ಲ.

ಮನುಷ್ಯನ ಸ್ವಾಭಿಮಾನ ಬೆಳೆಯಲು ಈ ಆಸ್ತಿಯ ಹೋರಾಟ ಅಗತ್ಯವೆಂದು ಅಣ್ಣಾಜಿ ಹೇಳಿದ್ದು ಕೃಷ್ಣಪ್ಪ ಗೌಡನ ಅನುಭವಕ್ಕೆ ಬಂದಿದೆ. ಆದರೆ ತಾನು ಮುಳುಗಿರುವ ರಾಜಕೀಯ ಹೋರಾಟ ಕ್ರಮೇಣವಾಗಿ ಮನುಷ್ಯನನ್ನು ಕ್ಷುಲ್ಲಕವಾದ್ದರಿಂದ ಬಿಡುಗಡೆ ಮಾಡುತ್ತೆಂಬುದರಲ್ಲಿ ಅವನಿಗಿನ್ನೂ ಅನುಮಾನ ಉಳಿದಿದೆ. ಮೂರು ಹೊತ್ತೂ ಜನರ

ಮಧ್ಯವಿದ್ದು ಅವನ ಉಪದ್ವ್ಯಾಪಗಳನ್ನು ಕೇಳಿಸಿಕೊಳ್ಳುತ್ತಲೇ ಇರುವದರಿಂದ ಅವನಿಗೆ ಸುಸ್ತಾಗುತ್ತದೆ. ಒಂಟಿಯಾಗಿರಬೇಕೆಂಬ ಆಸೆ ಮೊಳೆಯುತ್ತದೆ. ಸದಾ ಹೋರಾಟದಲ್ಲಿ ಮಗ್ನವಾಗಿರುವ ತನಗೆ ಪ್ರತಿಕ್ಷಣವೂ ಎಲ್ಲೆಲ್ಲೋ ಸದಾ ಫಲಿಸುತ್ತಲೇ ಇರುವ ಜೀವನದ ಸಣ್ಣ ಖುಷಿಗಳು ಕಾಣದೇ ಹೋಗುತ್ತಿವೆ ಎಂದು ಆತಂಕವಾಗುತ್ತದೆ. ಅವನು ಬಾಡಿಗೆಗಿದ್ದ ಗಾಂಧೀ ಬಜಾರಿನ ಬಿಡಾವಣೆಯಲ್ಲಿ ಯಾವತ್ತಾದರೂ ಸಂಜೆ ಒಂಟಿಯಾಗಿರುವುದು ಸಾಧ್ಯವಾದಾಗ ಹೊರಗೆ ಕಾಂಪೌಂಡಿನಲ್ಲಿ ಕೂತು ನೋಡುತ್ತಾನೆ. ಉದ್ದೇಶರಹಿತ ಸಂಭ್ರಮದಲ್ಲಿ ಉದ್ದ ಲಂಗ ಉಟ್ಟ ಹುಡುಗಿಯರು ಓಡಾಡುವುದು ಕಂಡು ಅಸೂಯೆಯಾಗುತ್ತದೆ. ಜೀವನದಲ್ಲಿ ಮುಂದೆ ಬರುವ ಸಂದಿಗ್ಧಗಳು, ಮಧ್ಯಮವರ್ಗದ ತಾಯಿತಂದೆಯರ ಆತಂಕಗಳು ಅವರನ್ನು ಬಾಧಿಸುವಂತೆ ಕಾಣುವುದಿಲ್ಲ. ಜಡೆಗಳಿಗೆ ಮಲ್ಲಿಗೆ ಮುಡಿದು ಗುಂಪಾಗಿ ಗಲಿಬಿಲಿಮಾಡುತ್ತ ದೀಪಗಳ ಕೆಳಗೆ ಮರಗಳ ಕೆಳಗೆ ಅವರ ಒಯ್ಯಾರದ ಅರ್ಧ ತಾಸನ್ನು ಕೃಷ್ಣಪ್ಪ ಅಕ್ಕರೆಯಿಂದ ಗಮನಿಸುತ್ತಾನೆ. ಹುಡುಗರನ್ನು ಕಂಡರೆ ನಾಚುವ ಹುಡುಗಿಯರು ಹಲವರಾದರೆ, ಅವರನ್ನು ಚುಡಾಯಿಸುವವರೂ ಕೆಲವರು. ಕೃಷ್ಣಪ್ಪನನ್ನೆ ಅವನ ಜೊತೆ ಹುಡುಗಿಯರು ಆಫ್ರಿಕನ್ ಪ್ರಿನ್ಸ್ಎನ್ನುತ್ತಿರಲಿಲ್ಲವೆ? ಆದರೆ ಯಾವತ್ತೂ ತಾನು ಮಾತ್ರ ಬಿಗಿ.

ಗೌರಿ ದೇಶಪಾಂಡೆ ಫಿಲಡೆಲ್ಫಿಯಾದಲ್ಲಿ ಏನು ಮಾಡುತ್ತಿರಬಹುದೆಂದು ಯೋಚಿಸುತ್ತಾನೆ. ಅವಳಿಂದ ಕಾಗದವಿಲ್ಲದೆ, ತಾನು ಬರೆಯದೆ ಬಹಳ ದಿನಗಳಾದವು. ಅವಳೂ ಈಚೆಗೆ ರಾಜಕೀಯದಲ್ಲಿ ಆಸಕ್ತಳಾಗಿದ್ದಾಳಂತೆ. ಅವಳ ಜೊತೆಗಾರ ಮಾರ್ಕ್ಸ್ವಾದಿ ಸೋಶಿಯಾಲಜಿಸ್ಟಂತೆ. ಪಾರ್ಲಿಮೆಂಟರಿ ರಾಜಕೀಯದಿಂದ ಇಂಡಿಯಾಕ್ಕೆ ಸುಖವಿಲ್ಲವೆಂದು ಅವಳು ವಾದಿಸುತ್ತಾಳೆ. ಗೌರಿ ಹಿಂದೆ ಹೀಗಿರಲಿಲ್ಲ. ಈಗಿನ ನಿಲುವು ಅವಳು ಕಡ ಪಡೆದದ್ದೋ ಅಥವಾ ನಿಜವೋ ತಿಳಿಯುವುದಿಲ್ಲ. ಅಂತೂ ಅವಳನ್ನು ಮದುವೆಯಾಗೆಂದು ನಾನು ಕೇಳಲೇ ಇಲ್ಲ ಎಂದು ನೋವಾಗುತ್ತದೆ. ತಾನು ಮದುವೆಯಾಗೆಂದು ಕೇಳಿದ ಲೂಸಿನಾ ಅದನ್ನು ಗಂಭೀರವಾಗಿ ಮನಸ್ಸಿಗೆ ತೆಗೆದುಕೊಳ್ಳಲೇ ಇಲ್ಲ. ಆದರೆ ಈ ನೋವುಗಳೂ ಈಗ ತೀವ್ರವಾಗಿ ಉಳಿದಿಲ್ಲ. ಖಾಸಗಿ ವ್ಯಕ್ತಿಯಾಗಿ ತಾನು ಖಾಲಿಯಾಗುತ್ತ ಹೋಗುತ್ತಿದ್ದೇನೆಂದು ಭಯವಾಗುತ್ತದೆ. ಇಲ್ಲವಾದಲ್ಲಿ ನನಗೊಂದು ಒಳಬಾಳು ಇದೆ ಎಂಬುದನ್ನೂ ಚೂರು ಅರಿಯಲಾರದ ಸೀತೆಯನ್ನು ಮದುವೆ ಮಾಡಿಕೊಳ್ಳುತ್ತಿದ್ದೇನೆ ಎಂದು ಕಸಿವಿಸಿಯಾಗುತ್ತದೆ. ಗೋಪಾಲ ರೆಡ್ಡಿ ಸತ್ತ ಮೇಲೆ ಒಂಟಿಯಾಗಿರುವುದು ಅಸಾಧ್ಯವೆನ್ನಿಸಿ ಮದುವೆ ಆದದ್ದಲ್ಲವೆ? ಅವನ ಹಿತೈಷಿಗಳು ಊಟ ಉಪಚಾರಗಳನ್ನು ನೋಡಿಕೊಳ್ಳಬಲ್ಲ ಹೆಣ್ಣೆಂದು ಸೀತೆಯನ್ನು ಮದುವೆ ಮಾಡಿಕೊ ಎಂದಾಗ ಅಷ್ಟಕ್ಕೇ ಲಾಯಕ್ಕಾದವಳನ್ನು ಮಾಡಿಕೊಳ್ಳುವುದನ್ನು ಅವನು ಕೂಡ ಬಯಸಿದ್ದ. ಅಂದರೆ ಹೆಣ್ಣಿನ ಸಂಗದಲ್ಲಿ ತೀವ್ರತೆಗೆ ಹೆದರಿ ಸೀತೆಯಂಥವಳನ್ನು ಮದುವೆಯಾಗಿ, ಆಮೇಲೆ ತೀವ್ರತೆ ಬೇಕೆಂದು ಬಯಸುವ ತನ್ನ ವ್ಯಕ್ತಿತ್ವದಲ್ಲಿ ಎಲ್ಲೋ ಕೊರೆಯಿರಲೇಬೇಕು. ಪ್ರಾಯಶಃ ಅಣ್ಣಾಜಿ ಹೇಳಿದಂತೆ ನಾನು ಫ್ಯೂಡಲ್, ಮದುವೆಯ ಅಗತ್ಯವಿಲ್ಲೆಂದು ಕಂಡದ್ದರಿಂದಲೇ ಲೂಸಿನಾ ಜೊತೆ ತೀವ್ರವಾದ ಪ್ರಣಯ ತನಗೆ ಸಾಧ್ಯವಾಗಿದ್ದಿರಬಹುದು. ಮದುವೆಯಲ್ಲಿ ತೊತ್ತನ್ನು ಬಯಸಿದೆನೇ ವಿನಹ ಸಖಿಯನ್ನಲ್ಲ, ಆದ್ದರಿಂದಲೇ ಬಹುಶಃ ಗೌರಿಯನ್ನು ಕಳಕೊಂಡೆ ಎಂದು ಸಿಗರೇಟ್ ಹತ್ತಿಸುತ್ತಾನೆ. ಹುಡುಗರು ಹುಡುಗಿಯರೆಲ್ಲ ಬೀದಿಯಿಂದ ಮರೆಯಾಗುತ್ತಾರೆ. ಪಕ್ಕದ ಮನೆಯಲ್ಲಿ ಮಗು ಮಗ್ಗಿ ಕಲಿಯುತ್ತಿದೆ. ಒಳಗೆ ಸೀತೆ ಏನೋ ಪರಚಿಕೊಳ್ಳುತ್ತಿದ್ದಾಳೆ, ಗಂಡ ಒಂಟಿಯಾಗಿ ಸಿಗೋದೇ ದುರ್ಲಭವಾದ್ದರಿಂದ ಸಿಕ್ಕಿದ ಈ ಸಮಯದಲ್ಲಿ ತನ್ನ ಸಿಟ್ಟನ್ನೆಲ್ಲ ಅವನ ಕಿವಿಗೆ ತಲ್ಪಿಸುತ್ತಿದ್ದಾಳೆ. ಕೃಷ್ಣಪ್ಪ ಒಳಗೆ ಹೋಗಿ ಪ್ರತಿ ಸಂಜೆ ತಾನು ಕುಡಿಯುವ ಕ್ವಾರ್ಟರ್ ವ್ಹಿಸ್ಕಿಯನ್ನು ಎದುರಿಗಿಟ್ಟುಕೊಂಡು ಮೇಜಿನ ಎದುರು ಕೂರುತ್ತಾನೆ.

ಇವತ್ತಾದ್ದು ನಾಳೆ ನೆನಪಿರುವುದಿಲ್ಲ. ದಿನಗಳ ಮೇಲೆ ದಿನಗಳು ಉರುಳುತ್ತವೆ. ಅಸೆಂಬ್ಲಿಯಲ್ಲಿ ಉಗ್ರಭಾಷಣ, ಹೊರಗೆ ಉಗ್ರಭಾಷಣ, ಅದರ ವಿರುದ್ಧ ಇದರ ವಿರುದ್ಧ ಸಹಿ, ಇದನ್ನು ಸಮರ್ಥಿಸಿ ಸಹಿ – ತೇಯುತ್ತಾ ಹೋಗುತ್ತಾನೆ. ಈ ಮಧ್ಯೆ ಕೃಷ್ಣಪ್ಪನಿಗೆ ಆಗರ್ಭ ಶ್ರೀಮಂತನೊಬ್ಬ ಸ್ನೇಹಿತನಾಗಿದ್ದ. ಕೋಲಾರದ ಕಡೆಯಿಂದ ಆಯ್ಕೆಯಾದ ಈ ಗೋಪಾಲರೆಡ್ಡಿ ಶ್ರೀಮಂತನಾದರೂ ಮಾರ್ಕ್ಸ್‌ವಾದಿ. ಶುಭ್ರವಾದ ಬಿಳಿಪಂಚೆಯನ್ನು ಕಚ್ಚೆಹಾಕಿ ಉಟ್ಟು, ತೆಳುವಾದ ಜುಬ್ಬ ತೊಟ್ಟು ಬೆನ್‌ಸ್‌ಕಾರಲ್ಲಿ ಓಡಾಡಿಕೊಂಡಿದ್ದ ಸಪುರ ಮೈ ನೀಳವಾದ ಮುಖಗಳ ಈ ಮಾರ್ಕ್ಸವಾದಿ ತನ್ನ ವರ್ಗದ ನಾಶವನ್ನು ಬಯಸುವ ಉತ್ಕಟತೆಗೆ ಕೃಷ್ಣಪ್ಪ ಮಾರುಹೋಗಿದ್ದ. ಗೋಪಾಲರೆಡ್ಡಿ ಒಮ್ಮೆ ತನ್ನ ಸಂಗಡ ಜೈಲಿನಲ್ಲಿದ್ದಾಗ ಅವನ ಲವಲವಿಕೆ ಕಷ್ಟಸಹಿಷ್ಣುತೆ ಗಮನಿಸಿ ಚಕಿತನಾಗಿದ್ದ. ಹಣ, ಆಸ್ತಿ, ಸ್ಥಾನಗಳನ್ನು ಅಸಡ್ಡೆಯಿಂದ ಕಾಣುವ ಗೋಪಾಲರೆಡ್ಡಿ ಸಿನಿಮಾ, ಸಂಗೀತ, ಸಾಹಿತ್ಯ ಎಲ್ಲದರಲ್ಲೂ ಅತ್ಯುತ್ಕೃಷ್ಟವಾದದ್ದನ್ನು ಬೆನ್ನು ಹತ್ತಿದವ. ಕಲ್ಕತ್ತದಲ್ಲಿ ಆಲಿ ಅಕ್ಬರನ ಕಛೇರಿಯಿದೆ ಎಂದು ಪೇಪರಿನಲ್ಲಿ ಓದಿ ಕೃಷ್ಣಪ್ಪನನ್ನು ವಿಮಾನದಲ್ಲಿ ಕಲ್ಕತ್ತೆಗೆ ಕರೆದುಕೊಂಡು ಹೋದಂಥ ಹುಚ್ಚು ಅವನದು. ಬೊಂಬಾಯಿಯ ತಾಜ್‌ನಲ್ಲಿರುವಷ್ಟೇ ಸಲೀಸಾಗಿ ಸುಖವಾಗಿ ಗುಡಿಸಲಲ್ಲೂ, ಜೈಲಲ್ಲೂ ಅವನು ಇರಬಲ್ಲ, ಹಚ್ಚಿಕೊಳ್ಳದಂತೆ ಭೋಗಿಸಬಲ್ಲ. ಬೈನೆ ಮರದ ಹೆಂಡ ಮೆಣಸಿನಕಾಯಿ ಬೋಂಡಗಳು ಸ್ಕಾಚ್‌ಮತ್ತು ಚೀಸಿನಷ್ಟೇ ಅವನಿಗೆ ಪ್ರಿಯ. ಅಪಾರವಾದ ಐಶ್ವರ್ಯ ಬದುಕಿಗಷ್ಟು ಮೆರಗು ಮಾತ್ರ ತರುತ್ತದೆ ಎಂಬ ಕೃಷ್ಣಪ್ಪನ ಅಭಿಪ್ರಾಯ ಗೋಪಾಲರೆಡ್ಡಿಯ ಸಹವಾಸದಲ್ಲಿ ಬದಲಾಯ್ತು – ಐಶ್ವರ್ಯವಿದ್ದಲ್ಲಿ ಜೀವನದ ಗುಣಲಕ್ಷಣಗಳೇ ಭಿನ್ನವಾಗಿರುತ್ತವೆ ಎಂಬುದನ್ನು ಕಂಡ. ಕೃಷ್ಣಪ್ಪನ ಚುನಾವಣೆಗೆ ಹುಲಿಯೂರಿಗೆ ಬಂದು ಯುವ ರೈತನ ಚಾವಡಿಯಲ್ಲಾದರೂ ಮಲಗಿ, ಬೆಳಿಗ್ಗೆ ಬಾಳೆಲೆ ಮೇಲೆ ಬಡಿಸಿದ ಗಂಜಿಗೆ ಮಾವಿನ ಮಿಡಿ ಉಪ್ಪಿನಕಾಯನ್ನು ಬಡಿಸಿಕೊಂಡು ಅತ್ಯಂತ ರುಚಿಯಿಂದ ತಿನ್ನಬಲ್ಲ ಕೌಶಲ ಅವನದು. ಹುಲ್ಲಿನ ಚಾಪೆ, ಹಾಳೆಯ ಟೊಪ್ಪಿ, ಗೊರಬು, ಹಲಸಿನ ಹಣ್ಣಿನ ಕಡಬು, ಬಿದಿರಿನ ಉಣಗೋಲು – ದೈನಿಕದಲ್ಲಿ ನಿಕೃಷ್ಟವೆನ್ನಿಸಿದ್ದೆಲ್ಲವೂ ಅವನ ನಿರ್ಲಿಪ್ತ ಮೆಚ್ಚುಗೆಯಲ್ಲಿ ಹಾಡುತ್ತಿದ್ದುವು – ಅವನು ಭೋಗಿಸುವ ಹೆಣ್ಣಿನ ದೇಹ ಹಾಡಿದಂತೆ.

ಗೋಪಾಲರೆಡ್ಡಿಯ ಊರಿಗೇ ಹೋದಾಗ ಮಾತ್ರ ಕೃಷ್ಣಪ್ಪ ತನ್ನ ಗೆಳೆಯನ ಮಿತಿಯನ್ನು ಕಂಡದ್ದು. ಅಲ್ಲಿ ಅವನು ಧಣಿ. ಅವನ ಅಪ್ಪ ಟ್ರೈರೆಂಟ್. ಜವಾನರು ಬೆನ್ನು ತೋರಿಸಿ ನಡೆಯುವುದಿಲ್ಲ. ಅರಮನೆಯಂಥ ಅವನ ಮನೆಯಲ್ಲಿ ಮಕ್ಕಳು ಅಳುವುದು ಕೇಳುವಿದಲ್ಲ. ಹೆಂಗಸರು ನಗುವುದು ಕೇಳುವಿದಿಲ್ಲ. ರೆಡ್ಡಿಯ ಅಪ್ಪ ನಿಂತಲ್ಲಿ ಕೂತಲ್ಲಿ ಎಲ್ಲವೂ ಸ್ತಬ್ಧವಾಗಿರುತ್ತಿತ್ತು. ಗೋಪಾಲರೆಡ್ಡಿ ತುಂಬ ಮುಜುಗರದಿಂದ ಕೃಷ್ಣಪ್ಪನನ್ನು ಒಂದು ದಿನ ಮಾತ್ರ ಅಲ್ಲಿರಿಸಿಕೊಂಡಿದ್ದ ಅಷ್ಟೆ. ತನ್ನ ಶ್ರೀಮಂತಿಕೆಯಿಂದ ಕೃಷ್ಣಪ್ಪ ಹೇಸಿದ್ದು ಕಂಡು ಗೋಪಾಲರೆಡ್ಡಿಗೆ ಅವನ ಮೇಲಿನ ಅಭಿಮಾನ ಹೆಚ್ಚಿತು. ಇಂಥದನ್ನು ರಕ್ಷಿಸಲೆಂದೇ ವಾರಂಗಲ್‌ನಲ್ಲಿ ಕಂಡಂಥ ಪೋಲೀಸ್‌ಠಾಣೆಗಳು ಇದ್ದಾವೆಂಬುದು ಗೋಪಾಲರೆಡ್ಡಿಗೂ ತಿಳಿಯದ ವಿಚಾರವೆ?

ಗೋಪಾಲರೆಡ್ಡಿಯ ವ್ಯಾಪಕವಾದ ಅಭಿಮಾನದಲ್ಲಿ ಕೃಷ್ಣಪ್ಪ ಸಡಿಲವಾದ, ಹಿಗ್ಗಿದ; ತೇಲಿದ. ಕುಡಿಯುವುದನ್ನು ಕಲಿತ. ಹುಡುಗಿಯರ ಜೊತೆ ಮಲಗಿದ. ದೇಹದ ಬೆವರಿನಂತೆ ವ್ಯಕ್ತವಾಗುತ್ತಿದ್ದ ಕೃಷ್ಣಪ್ಪನ ವ್ಯವಸ್ಥೆಯ ವಿರುದ್ಧದ ಕೋಪ, ಅದರ ಮೊದಲಿನ ತೀವ್ರತೆ, ಮಿತಿಗಳನ್ನು ಕಳೆದುಕೊಂಡು ಇಡಿಯಾಗಿ ಕಾಣಬಲ್ಲ ವಿಚಾರಗಳಾದವು. ಗೋಪಾರೆಡ್ಡಿ ಸದಾ ಕೃಷ್ಣಪ್ಪನ ವಿಪ್ಲವಕಾರಕ ಆರ್ತತೆಗೆ ತನ್ನ ಚುರುಕಾದ ವಿಚಾರವನ್ನೂ ಬೆಸೆಯುತ್ತಿದ್ದುದರಿಂದ, ಒಂದು ಇನ್ನೊಂದರಿಂದ ಕುಮ್ಮಕ್ಕು ಪಡೆದು ಬೆಳೆಯುತ್ತ ಹೋತ್ತಿದ್ದುದರಿಂದ ಹೆಣ್ಣು, ವ್ಹಿಸ್ಕಿ, ಸಂಗೀತ ಕಛೇರಿಗಳು, ವಿಮಾನ ಸಂಚಾರಗಳೂ ಕೃಷ್ಣಪ್ಪನನ್ನು

ನೈತಿಕವಾಗಿ ಬಾಧಿಸಲಿಲ್ಲ. ಕ್ಷುಲ್ಲಕ ವಿಷಯಗಳಿಂದ ಅಬಾಧಿತನಾಗಿರುವುದು, ಹಣಕ್ಕಾಗಿ ಪರದಾಡುದಿರುವುದು, ನಿಷ್ಠುರವಾಗಿ ಮಾತಾಡುವುದು, ದೇಹವನ್ನು ಹೆಣ್ಣು ಊಟ ವ್ಹಿಸ್ಕಿಗಳಿಂದ ತಣಿಸಿಕೊಳ್ಳುವುದು, ಹಾತೊರೆಯದೆ ಬೇಕೆನ್ನಿಸಿದ್ದನ್ನ ಪಡೆಯುವುದು – ಎಲ್ಲವೂ ಒಟ್ಟಿಗೇ ಏಕಕಾಲದಲ್ಲೇ ಸಿಕ್ಕಿದ್ದರಿಂದ ಕೃಷ್ಣಪ್ಪ ತೇಲಿದ. ತಾನು ಅತ್ಯುನ್ನತ ಶಿಖರದಲ್ಲಿದ್ದೇನೆಂದು ಭಾವಿಸಿದ. ನಿನ್ನೆ ಯಾವ ಹುಡುಗಿಯ ಜೊತೆ ರಮಿಸಿದ್ದು ಎಂಬುದು ಇವತ್ತು ಮರೆಯುವುದೂ ಇತ್ತು. ಅಚ್ಚಳಿಯದೆ ಉಳಿದಿರುವುದೆಂದರೆ ಚಿರತೆಯ ಸೌಂದರ್ಯವನ್ನು ನೆನಪಿಗೆ ತರುವ ಲೂಸಿನಾ ಮಾತ್ರ. ಆಗೀಗ ವಾರಂಗಲ್‌ಠಾಣೆಯಲ್ಲಿ ಕಳೆದ ಹಗಲು ರಾತ್ರೆಗಳು ನೆನಪಾಗುವುದಿತ್ತು. ಆದರೆ ಜೀವನವನ್ನು ಕಳೆಗುಂದಿಸುವ ಕ್ಷುಲ್ಲಕ ವಿಷಯಗಳನ್ನು ಅಪಾರವಾದ ಐಶ್ವರ್ಯ ಮತ್ತು ಔದಾರ್ಯಗಳ ಸಹಾಯದಿಂದ ಸುಡಬಲ್ಲ ಕೌಶಲ ಗೋಪಾಲರೆಡ್ಡಿಗೆ ಸಾಧಿಸತ್ತಲ್ಲವೆ? ಆಸ್ತಿಪಸ್ತಿಗಳಿಂದ ಅಬಾಧಿತವಾದ ತನ್ನ ಕನಸಿನ ಭವಿಷ್ಯದ ಹೊಸ ಬದುಕು ಅದರ ದೈನಿಕ ಸ್ವರೂಪದಲ್ಲಿ ಹೀಗೆ ನಿರಂಬಳವಾಗಿತ್ತುದೆಂದು ಕೃಷ್ಣಪ್ಪ ಭಾವಿಸಿದ.

ಮಹೇಶ್ವರಯ್ಯ ಒಮ್ಮೆ ಬಂದವರು ಇಬ್ಬರನ್ನು ಒಟ್ಟಿಗೇ ಕಂಡು ಏನನ್ನೊ ನುಂಗಿಕೊಂಡಂತೆ ಅನ್ನಿಸಿತು. ಹೆಣ್ಣೆಂದರೆ ಲಂಪಟಪಡುವ ಅವರು ತಾನು ಪಡುತಿದ್ದ ಸುಖವನ್ನು ಜರೆದಿರಲಾರರು. ಹಾಗಾದರೆ ಮತ್ತೇನೆಂದು ಅವರನ್ನು ಪೀಡಿಸಲು, 'ಕೃಷ್ಣಪ್ಪ ಇದು ಬಹಳ ಕಾಲ ಉಳಿಯಲ್ಲೊ – ನಿನಗೆ ಮತ್ತೆ ಅಶ್ವತ್ಥಮರದ ಕೆಳಗೆ ದನಗಳನ್ನು ಕಾಯುತ್ತ ಕೂರಬೇಕೆನ್ನಿಸುತ್ತೋ' ಎಂದಿದ್ದರು. ಹೌದು ಅವರೆಂದಂತೆ ಇದು ಉಳಿಯಲಿಲ್ಲ. ಗೋಪಾಲರೆಡ್ಡಿ ಕ್ಯಾನ್ಸರ್ ಆಗಿ ಸತ್ರ. ಆಮೇಲೆ ಕೃಷ್ಣಪ್ಪ ಬಹಳ ದಿನ ಮಂಕಾಗಿದ್ದು ಹಿತೈಷಿಗಳ ಒತ್ತಾಯಕ್ಕೆ ಒಪ್ಪಿ ಸೀತೆಯನ್ನು ಮದುವೆಯಾದ್ದು.

ಗೋಪಾಲರೆಡ್ಡಿಯಿಂದ ಪಡೆದ ಸಖ್ಯ ಈಗ ಭ್ರಮೆಯೆನ್ನಿಸುತ್ತದೆ. ತನಗಿಂಗ ಹೆಚ್ಚು ಓದಿದ್ದ ಜ್ಞಾನಿ ಅವನು. ಒಳ್ಳೆಯ ಆಟಗಾರ. ಸಂಗೀತದಲ್ಲಿ ಸೂಕ್ಷ್ಮವಾದ ಅಭಿರುಚಿಯಿದ್ದವ. ಜೊತೆಗಿರುವ ಹೆಣ್ಣು ದುಡ್ಡು ಕೊಟ್ಟು ಪಡೆದವಳು ಎಂಬುದು ಹೆಣ್ಣಿಗೇ ಮರೆಯುವಂತೆ ಮಾಡಬಲ್ಲ ಕೌಶಲಿ. ಅವನ ಶ್ರೀಮಂತಿಕೆಗೆ ತಾನು ಅವಕ್ಕಾಗುವಂಥವನಲ್ಲೆಂದು ಗೊತ್ತಾದ್ದರಿಂದಲೇ ಅವನು ತನ್ನ ಸಖ್ಯ ಬಯಸಿದ್ದಿರಬೇಕು. ತನ್ನಂಥವನ ಸಾಕ್ಷಿಯಲ್ಲಿ ಅವನಿಗೆ ಹಣವನ್ನು ಯಃಕಶ್ಚಿತ್ ಆಗಿ ಕಂಡು ಸುಡುವುದರಲ್ಲಿ ತೀವ್ರವಾದ ಬಿಡುಗಡೆಯ ಸುಖ ಸಿಕ್ಕಿರಬೇಕು. ಸಖನಾಗಿದ್ದೂ ತನ್ನನ್ನು ಅವನು ಒಂದು ಬಗೆಯ ಆರಾಧನಾಭಾವದಿಂದ ಕಾಣುತ್ತಿದ್ದ. ತನ್ನ ಬಿಗಿಗಳು ಸಡಿಲವಾಗಲು ಅಂಥ ಕಣ್ಣುಗಳು ಅಗತ್ಯವಾಗಿದ್ದುವು. ಮಹೇಶ್ವರಯ್ಯ, ಅಣ್ಣಾಜಿ, ಗೌರಿಯರಂತೆಯೇ ಇವನೂ ತನ್ನಲ್ಲಿ ಏನೋ ದಿವ್ಯವಾದ್ದಿದೆ ಎಂದು ಕಂಡಿದ್ದ. ಒಳಗೇ ಉಜ್ಜಿ ತನ್ನಲ್ಲಿ ಉರಿಯುತ್ತಿದ್ದುದರಲ್ಲಿ ಅವನು ಮೈಕಾಯಿಸಿಕೊಂಡಿದ್ದ. ಅಮುಕುತ್ತಿದ್ದ ತನ್ನ ತೀವ್ರತೆಯ ಬಾಧೆಗಳನ್ನು ಅವನ ಸಖ್ಯದಲ್ಲಿ ಹಾಡುವಂತೆ ಮಾಡಿದ್ದ. ಇದರಿಂದ ಕೃಷ್ಣಪ್ಪನಿಗೆ ತನ್ನ ಒಳ ಬಾಳಿನಲ್ಲಿ ತನಗೇ ಹೊಮ್ಮುತ್ತಿದ್ದ ಚೊಗರಿನಂಥ ಒಂದು ವಿಶೇಷವಾದ ರುಚಿ – ಅದರ ಅಸಹನೀಯ ಉತ್ಕಟ ರುಚಿ – ಕಡಿಮೆಯಾಗುತ್ತ ಹೋಯಿತು. ಗೋಪಾಲರೆಡ್ಡಿ ಸತ್ತಿದ್ದೇ ತಾನು ತಬ್ಬಲಿಯಾದೆನೆನ್ನಿಸಿತು.

'ನಾಗೇಶಾ'

ತನ್ನನ್ನು ಬಿಸಿಲಿನಲ್ಲಿ ಬಿಟ್ಟು ಒಳಗೆ ಕೂತಿದ್ದ ನಾಗೇಶ ಬಂದು ನಿಂತ.

‘ಒಳಗೆ ಹೋಗೋಣ ಬಿಸಿಲು ಹೆಚ್ಚಾಯ್ತು’

ನಾಗೇಶ ತಳ್ಳಿಕೊಂಡು ರೂಮಿಗೆ ಕರೆದುಕೊಂಡು ಹೋದ.

‘ಡ್ರಾನಲ್ಲಿ ಪರ್ಸಿದೆ ಕೊಡು’

ನಾಗೇಶ ಎತ್ತಿಕೊಟ್ಟ ಪರ್ಸಿನಿಂದ ಇನ್ನೂರು ರೂಪಾಯನ್ನು ತೆಗೆದು ಅವನಿಗೆ ಕೊಟ್ಟ. ನಾಗೇಶ ಅರ್ಥವಾಗದ ಕೃಷ್ಣಪ್ಪನ ಮುಖ ನೋಡಲು,

‘ನಿನ್ನ ಹತ್ತಿರ ಇನ್ನೊಂದು ಜತೆ ಬಟ್ಟೆ ಇರೋ ಹಾಗೆ ಕಾಣೆಸಿಲ್ಲ. ಹೊಲಿಸಕೋ’ ಎಂದ.

‘ಬೇಡ ಗೌಡರೆ’

‘ತಗಳ್ಳೊ. ನನ್ನ ಹತ್ತಿರ ಬಡಿವಾರ ಮಾಡಬೇಡ.’

‘ನಿಮ್ಮ ಪರ್ಸಲ್ಲಿ ಇಷ್ಟೇ ಇರೋದು.’

‘ನೋಡು ನಾಗೇಶ. ಬಲಗೈ ಇನ್ನೂ ಚಲಿಸ್ತ ಇದೆ. ಅದಕ್ಕೂ ಸ್ಟ್ರೋಕ್‌ಹೊಡಿಯೋ ಮುಂಚೆ. . . . . .’

ತಾನು ನಗುತ್ತ ಹೇಳಿದ ಈ ಮಾತಿನಿಂದ ನಾಗೇಶ ಖಿನ್ನನಾದ್ದು ಕಂಡು –

‘ಹುಚ್ಚಪ್ಪ – ನಿಂಗೊತ್ತಿಲ್ಲ. ನನ್ನ ಹೆಂಡತಿ ಇದಾಳಲ್ಲ, ಮಹಾ ಜಿಪುಣಿ, ನನ್ನ ಸಂಬಳದಲ್ಲಿ ಉಳಿಸೀ ಉಳಿಸೀ ಬ್ಯಾಂಕಲ್ಲಿ ಹತ್ತು ಸಾವಿರ ಕೂಡಿಟ್ಟಿದ್ದಾಳೆ. ತಗೋ ಈ ಹಣಾನ್ನ ನೀನು ಬಾಯಿ ಮುಚ್ಚಿಕೊಂಡು’ ಎಂದ.

ಕೃಷ್ಣಪ್ಪನಿಗೆ ನಾಗೇಶನ ಹಿನ್ನೆಲೆ ಗೊತ್ತಿತ್ತು. ಬಡ ಬ್ರಾಹ್ಮಣ ಕುಟುಂಬ. ಅಪ್ಪ ಸದಾ ವ್ಯಗ್ರನಾಗಿರುತ್ತಿದ್ದ ಗುಮಾಸ್ತ. ಅಣ್ಣನೊಬ್ಬ ಎಂಜಿನಿಯರ್. ಅವನ ಹೆಂಡತಿ ಜಿಪುಣೆಯಾದ್ದರಿಂದ ಅವನಿಂದಾಗುವ ಸಹಾಯ ಅಷ್ಟಕ್ಕಷ್ಟೇ. ಆರು ಮದುವೆಯಾಗದ ಅಕ್ಕತಂಗಿಯರು. ಮಗ ಅರ್ಧಕ್ಕೆ ಓದು ನಿಲ್ಲಿಸಿ, ಮೆರವಣಿಗೆ ಮಣ್ಣು ಮಸೀ ಅಂತ ರಾಜಕೀಯದಲ್ಲಿ ಕಾಲ ಕಳೀತಾನೇಂತ ತಾಯಿಗೆ ದುಗುಡ. ನಾಗೇಶ ಮಲಗೋದು ಪಾರ್ಟಿ ಆಫೀಸಲ್ಲಿ. ಉಣ್ಣೋದು ಅಲ್ಲಿ ಇಲ್ಲಿ. ಕಾಫಿಗೆ ಸಿಗರೇಟಿಗೆ ಕಾಸಾದರೆ ಸಾಕು ಅವನಿಗೆ. ಬರಲಿರುವ ಸಮತಾ ವ್ಯವಸ್ಥೇಲಿ ತನ್ನ ಪಾಡು ಸುಧಾರಿಸುತ್ತದೆ ಎಂದು ಅವನು ಕನಸು ಕಟ್ಟುತ್ತಾನೆ. ಕಾಲಹರಣ ಮಾಡೋದು ಅವನಿಗೆ ಒಗ್ಗಿಹೋಗಿದೆ. ಎಚ್. ಎಂ. ಟೀಲಿ ಕೆಲಸ ಕೊಡಿಸಲೇನಯ್ಯ ಎಂದು ಕೇಳಿದರೆ

ಬೇಡವೆನ್ನುತ್ತಾನೆ. ಹಾಗೆ ಕೇಳಿದ್ದರಿಂದ ಅವಮಾನವಾಗಿ ಸಿಟ್ಟಾಗುತ್ತಾನೆ; ಎಲ್ಲರಂತೆ ಉದ್ಯೋಗಿಯಾಗಿ ಬದುಕೋದು ಕಳಪೇಂತ ಅವನ ಅಭಿಪ್ರಾಯ. ಅಂಥ ಪ್ರತಿಭಾಶಾಲಿಯೂ ಅಲ್ಲ. ಆದರೆ ಕೃಷ್ಣಪ್ಪನ ವ್ಯಕ್ತಿತ್ವದ ಪ್ರಭೆಗೆ ಮರುಳಾದ ಯುವಕರಲ್ಲಿ ಇವನೂ ಒಬ್ಬ. ತನ್ನ ರಾಜಕೀಯ ವಿಚಾರ, ಜೀವನ ಕ್ರಮ ಇಂಥ ಮೋಡಿಯಲ್ಲಿ ಹಲವು ಯುವಕರನ್ನು ಸಿಕ್ಕಿಸಿದೆ ಎಂದು ಕೃಷ್ಣಪ್ಪನಿಗೆ ಪಶ್ಚಾತ್ತಾಪವಾಗುತ್ತದೆ. ಇಂಥವರಿಗೆ ವಯಸ್ಸಾಗುವುದನ್ನು ನೆನೆದರೆ ಹೆದರಿಕೆಯಾಗುತ್ತದೆ.

‘ನಾಗೇಶ ನಿಂಗೊಂದು ಕಥೆ ಹೇಳ್ತೇನೆ’ ಎಂದು ಜೋಯಿಸರ ವಿಷಯ ಥಟ್ಟನೆ ನೆನಪಿಗೆ ಬಂದ ಕೃಷ್ಣಪ್ಪ ಶುರು ಮಾಡುತ್ತಾನೆ. ನಾಗೇಶ ನೋಟ್‌ಬುಕ್‌ಇಟ್ಟುಕೊಂಡು ಇವನ್ನೆಲ್ಲ ಗುರುತು ಮಾಡಿಕೊಳ್ಳುತ್ತ ಹೋಗುತ್ತಾನೆ.

ಹುಲಿಯೂರಿನ ರೈತರು ಪೊರಕೇನ್ನ ಸಗಣೆಯಲ್ಲದ್ದಿ ಭಟ್ಟನನ್ನು ಅಟ್ಟಲು ಶುರುಮಾಡಿದಾಗ ಪ್ರತಿದಿನ ಅವನು ಜನಿವಾರ ಬದಲಾಯಿಸಬೇಕಾಗಿ ಬಂತು. ಬ್ರಾಹ್ಮಣನ ಮೇಲೆ ಇಂಥ ಹಲ್ಲೆ ಮಾಡುವುದನ್ನು ತಾಳಲಾರದೆ ದುಃಖಿತರಾದ ಜೋಯಿಸರಿಗೆ, ‘ನೀವು ಮಾಡೋ ಜನಿವಾರ ಈಗ ಹೆಚ್ಚು ಮಾರಾಟವಾಗ್ತಾ ಇದೆಯಲ್ಲ – ನೀವು ಯಾಕೆ ದುಃಖ ಪಡಬೇಕು’ ಎಂದು ಗೇಲಿ ಮಾಡಬೇಕೆನ್ನಿಸಿದ್ದನ್ನು ಕೃಷ್ಣಪ್ಪ ತಡೆದುಕೊಂಡ. ಕೃಷ್ಣಪ್ಪನ ತಾಯಿಯೂ ಇದರಿಂದ ಭಯಪಟ್ಟಿದ್ದರಿಂದ ಕೃಷ್ಣಪ್ಪ ನಿಧಾನವಾಗಿ ಕೇಳಿದ:

‘ನಾನು ನಿಮ್ಮ ಮಗ ಇದ್ದ ಹಾಗೆ ಅಂತ ನೀವು ತಿಳಿದಿದ್ದೀರಿ ಅಲ್ಲವ ಜೋಯಿಸ್ರೆ – ’

‘ಅದೆಂಥ ಪ್ರಶ್ನೆ ನೀನು ಕೇಳೋದು ? ಇಲ್ದಿದ್ರೆ ನಾನು ನಿನಗೆ ಬುದ್ಧಿವಾದ ಹೇಳಕ್ಕೆ ಬರ್ತಿದ್ನ ?’

‘ಸಾಯ್ತಾ ಇರೋ ಮಗೂಗೇಂತ ಇಟ್ಟ ಹಾಲನ್ನ ಎಸೆಯೋದು ಹೆಚ್ಚು ತಪ್ಪೋ, ಅಥವಾ ಅಂಥ ಬ್ರಾಹ್ಮಣನನ್ನ ಪೊರಕೇಲಿ ಹೊಡೆಯೋದೋ ?’

‘ಎರಡೂ ತಪ್ಪು, ಭಟ್ಟ ಅವನು ಮಾಡಿದ ಪಾಪಕ್ಕೆ ನರಕಕ್ಕೆ ಹೋಗ್ತಾನೆ. ಆದರೆ ಅದು ಬ್ರಾಹ್ಮಣ ಜನ್ಮವಲ್ಲ ? ಅವನನ್ನ ಪೊರಕೇಲಿ ಹೊಡೆಸಿ ನೀನು ಯಾಕೆ ಪಾಪ ಕಟ್ಟಿಕೋಬೇಕು ?’

ಕೃಷ್ಣಪ್ಪನ ತಾಯಿಯೂ ಜೋಯಿಸರ ಮಾತು ಕೇಳಿಸಿಕೊಳ್ಳುತ್ತ ಹೊಗೆಸೊಪ್ಪಿಗೆ ಸುಣ್ಣ ಹಚ್ಚಿ ಬಾಯಿಗೆ ಹಾಕಿಕೊಂಡು ಆತಂಕದಿಂದ ತನ್ನ ಒಪ್ಪಿಗೆ ಸೂಚಿಸಿದಳು. ಇವರ ಹತ್ತಿರ ಮಾತು ಅಸಾಧ್ಯವೆನ್ನಿಸಿತ್ತು. ಉಪನಿಷತ್ತುಗಳನ್ನೆಲ್ಲ ಓದಿದ್ದ ಈ ಕಡು ಬಡವ ಬ್ರಾಹ್ಮಣನೂ ಎಷ್ಟು ಮೂರ್ಖನಾಗಬಲ್ಲನೆಂದು ಕೃಷ್ಣಪ್ಪನಿಗೆ ದುಃಖವಾಗಿತ್ತು.

‘ನೀವೂನೂ ಜಾತಿ ಅನ್ನೋ ಕಾರಣಕ್ಕೆ ಭಟ್ಟನ ಪರವಾಗಿ ಮಾತಾಡೋದು ಕಂಡ್ರೆ ದುಃಖವಾಗತ್ತೆ ಜೋಯಿಸ್ರೆ’

ಕೃಷ್ಣಪ್ಪ ನಿಜವಾಗಿ ವ್ಯಥೆಯಿಂದ ಮಾತಾಡಿದ್ದು ಕೇಳಿ ಜೋಯಿಸರು ತಬ್ಬಿಬ್ಬಾಗಿದ್ದರು.

‘ಈ ಮಾಯಾ ಪ್ರಪಂಚದಲ್ಲಿ ಸಿಕ್ಕಿರೋ ತನಕ ಜಾತಿ ಗೀತಿ ಎಲ್ಲ ನಿಜವೇ ಅಲ್ವೇನಪ್ಪ?’

‘ಹಾಗಾದರೆ ನಾನೇನು ಪಾಪಮಾಡಿ ಶೂದ್ರನಾಗಿ ಹುಟ್ಟಿದೇಂತ ನಿಮ್ಮ ಭಾವನೆಯೋ? ನನ್ನ ಕಂಡರೆ ನಿಮಗೂ ದೊಡ್ಡವ್ವನಿಗೂ ಯಾಕೆ ಮಗಾಂತ ಅನ್ನಿಸತ್ತೆ ಹೇಳಿ – ’

ರುಕ್ಮಿಣಿಯಮ್ಮ ನನ್ನ ಕೃಷ್ಣಪ್ಪ ದೊಡ್ಡವ್ವ ಅನ್ನೋದು.

‘ಭಟ್ಟನಂಥ ಪಾಷಂಡಿಗಳಿಂದ ನಮ್ಮ ಪೂರ್ವಜರು ಮಾಡಿದ ಪುಣ್ಯವೆಲ್ಲ ನೀರಲ್ಲಿ ಹೋಮಮಾಡಿದಂತಾಯ್ತು. ನಿನ್ನನ್ನ ಅಂದೇನು ಪ್ರಯೋಜನ ಹೇಳು? ಸ್ವತಃ ಆದಿ ಶಂಕರರೇ ಕಾಲಟಿಯಿಂದ ಬದರಿಗೆ ಹೋಗೋ ಮಾರ್ಗದಲ್ಲಿ ದಿವ್ಯವಾದ್ದೊಂದು ಪ್ರಭೆಯನ್ನು ಕಂಡು ಈ ನರಸಿಂಹದೇವರನ್ನ ಸ್ಥಾಪಿಸಿದರು ಅಂತ ಐತಿಹ್ಯ ಇದೆ. ಹೇಗಿದ್ದ ಮಠ ಈಗ ಹೇಗಾಗಿ ಬಿಡ್ತು? ಮೂಕ ಪಶು ಪಕ್ಷಿಗಳನ್ನೂ ಹಿಂಸೆ ಮಾಡಬಾರ್ದು ಅಂತ ವೈದಿಕ ಧರ್ಮ ಹೇಳುತ್ತೆ. . . . . .’

ಜೋಯಿಸರ ಕಣ್ಣುಗಳು ಒದ್ದೆಯಾದವು. ಅವರು ರುದ್ರಾಕ್ಷಿ ಧರಿಸಿದ ಎಲುಬುಗಳು ಕಾಣುವ ಎದೆಯನ್ನು ನೋಡುತ್ತ ಕೃಷ್ಣಪ್ಪನ ಮನಸ್ಸು ಕರಗಿತು.

‘ದೂರದಿಂದ ನೋಡಿದಾಗ ಹಿಂಸೆಯಷ್ಟೇ ಪ್ರತಿಹಿಂಸೇನೂ ಕೊಳಕಾಗಿ ಕಾಣತ್ತೆ ಜೋಯಿಸರೆ. ಆದರೆ ಪೊರಕೇಲಿ ಹೊಡೆಯೋಕ್ಕೂ ತಯಾರಾದಾಗ ಅವರಲ್ಲೆಷ್ಟು ಸ್ವಾಭಿಮಾನ ಬೆಳದಿರತ್ತೆ ನಿಮಗೆ ಕಾಣಿಸ್ತ ಇಲ್ಲ. ಅವರೆಲ್ಲ ಹುಳಗಳಂತೆ ಸಹಿಸ್ತ ಇದ್ದಿದ್ರಿಂದ್ಲೇನೇ ಮಠಾನೂ ಕೊಳೀತ ಬಂತು, ನಿಮ್ಮ ಭಟ್ಟಾನೂ ಸಣ್ಣ ಹುಳಾನ ತಿನ್ನೋ ದೊಡ್ಡ ಹುಳ ಆಗೋದು ಸಾಧ್ಯ ಆಯ್ತು’

ಜೋಯಿಸರು ಮಂಕಾಗಿ ಎದ್ದು ನಿಂತರು. ಕೃಷ್ಣಪ್ಪ ಹಾಸ್ಯದ ಧಾಟಿಯಲ್ಲಿ ಅವರನ್ನು ಒಲಿಸಲು ಪ್ರಯತ್ನಿಸಿದ.

‘ಬ್ರಾಹ್ಮಣರು ಅಂದ್ರೆ ನಮ್ಮ ಜನಕ್ಕೆ ಇನ್ನೂ ಗೌರವ ಉಳಿದಿದೆ ಜೋಯಿಸ್ರೆ. ಪೊರಕೇಲಿ ಹೊಡಿತಾರೆ ನಿಜ. ಆದ್ರೆ ಒಳಗೆ ಮನಸ್ಸಲ್ಲೆ ಕಲ್ಕುಟಕನಿಗೆ ತಪ್ಪು ಕಾಣಿಕೇನೂ ಕಟ್ತಾರೆ. . . .’

‘ನೀನು ಧರ್ಮಿಷ್ಠಾಂತ ನನಗೆ ಗೊತ್ತಪ್ಪ. ಆ ಭಟ್ಟ ಎಲ್ಲಿ – ನೀನೆಲ್ಲಿ ? ಆದರೆ. . . .’

ಜೋಯಿಸರಿಗೆ ಮಾತು ಹೊಳೆಯದೆ ಎದ್ದು ಹೋಗಿದ್ದರು. ಕೃಷ್ಣಪ್ಪ ಈ ಘಟನೆಯನ್ನು ಮರೆಯಲಾರ. ತನ್ನ ಆರೋಗ್ಯಕ್ಕಾಗಿ ಊರಿನ ಜನ ಕಲ್ಕುಟಕನಿಗೆ ಕೋಲ ಕಟ್ಟಿಸುವ ಹರಕೆ ಹೊತ್ತ ಸುದ್ದಿ ಕೇಳಿ ಪ್ರಾಯಶಃ ತನಗೆ ಇವತ್ತು ಎಲ್ಲ ನೆನಪಾಗುತ್ತಿರಬಹುದು.

ನಾಗೇಶ ಹೇಳಿದ:

‘ಇನ್ನಷ್ಟು ಓದೀಬೇಕು ಗೌಡರೆ ಬ್ರಾಹ್ಮಣರನ್ನ, ಆಗಲೇ ಈ ಜಾತಿ ವ್ಯವಸ್ಥೇನ್ನ ನಾಶಮಾಡೋದು ಸಾಧ್ಯ.’

ಕೃಷ್ಣಪ್ಪ ನಗತೊಡಗಿದ. ನಾಗೇಶ ತಬ್ಬಿಬಾಗಿ ಯಾಕೆಂದು ಕೇಳಿದ:

‘ಹಂದಿ ಕುರಿ ತಿನ್ನೋ ನಮ್ಮ ಗೌಡರು ನಿನ್ನಂಥ ಒಬ್ಬ ಪುಳಚಾರು ತಿನ್ನೊ ಬಡಪಾಯಿಯನ್ನು ಓದೀಬೇಕೂಂತ ಅಂತೀಯಲ್ಲ – ಅದನ್ನು ಕಲ್ಪಿಸಿಕೊಂಡು ನಗು ಬಂತು. ನಮ್ಮ ಜಾತಿ ಜಮೀಂದಾರರೇನು ಯೋಗ್ಯರು ಅಂತ ನೀನು ತಿಳ್ದಿರೋದ?’

‘ಏ ನಾಗೇಶ – ಈ ಸಾರಿಯ ಇಲ್ಲಸ್ಟ್ರೇಟಡ್‌ವೀಕ್ಲಿ ಆಫ್‌ಇಂಡಿಯಾ ಓದಿದ್ದಿಯ?’

ಕೃಷ್ಣಪ್ಪ ಸಂಭ್ರಮದಿಂದ ಕೇಳುತ್ತಾನೆ. ಸಾಯಂಕಾಲದ ಹೊತ್ತಲ್ಲಿ ಕೃಷ್ಣಪ್ಪನನ್ನು ನೋಡಲೆಂದು ಬಂದ ಅವನ ಪಕ್ಷದ ಇಪ್ಪತ್ತು ಎಂ. ಎಲ್. ಎ. ಗಳ ಮಾತುಗಳನ್ನು ಕೇಳಿಸಿಕೊಳ್ಳುತ್ತ ವರಾಂಡದಲ್ಲಿ ಕೂತ ನಾಗೇಶ ‘ಯಾಕೆ ಗೌಡರೆ’ ಎಂದು ಕೋಣೆಯೊಳಗೆ ಬರುತ್ತಾನೆ.

‘ನೋಡು’ ಎಂದು ಮಾಡಿಸಿದ ವೀಕ್ಲಿಯನ್ನು ಕೊಡುತ್ತಾನೆ. ಕೃಷ್ಣಪ್ಪನ ಮುಖ ಮೋಜಿನಿಂದ ಹಿಗ್ಗಿದ್ದನ್ನು ನಾಗೇಶ ಗಮನಿಸಿ ಓದಲು ಶುರುಮಾಡುತ್ತಾನೆ.

ಕೌಪೀನಧಾರಿಯಾದ ಬೈರಾಗಿಯ ದೊಡ್ಡದೊಂದು ಚಿತ್ರದ ಕೆಳಗೆ ಸರ್ಪ ಸಿದ್ದೇಶ್ವರಾನಂದನೆಂದು ಬರೆದಿತ್ತು. ಬೈರಾಗಿಗೆ ಉದ್ದವಾದ ಬಿಳಿ ಗಡ್ಡ ಜಡೆಗಳು ಬೆಳೆದಿದ್ದವು. ಅವನು ಈ ಚಿತ್ರದಲ್ಲಿ ನಗುತ್ತಿದ್ದ. ಇನ್ನೊಂದು ಚಿತ್ರವಿತ್ತು – ಅದರಲ್ಲಿ ಬೈರಾಗಿ ಮರದ ಕೊಂಬೆಯೊಂದರ ಮೇಲೆ ಕೂತು ಮೈ ಕೆರೆದುಕೊಳ್ಳುವ ಕಪಿಯಂತಿದ್ದ. ಹಲ್ಲುಬಿದ್ದ ಬಾಯನ್ನು ಇಷ್ಟಗಲ ತೆಗೆದು ಪರಮ ಸಖಿಯಂತೆ ಕಾಣುತ್ತಿದ್ದ.

‘ನಾನು ಹೇಳ್ತ ಇದ್ದನಲ್ಲ – ನಮ್ಮ ಜಿಲ್ಲೆಯ ಭೈರಾಗಿ, ಮೌನಿ ಇವನೇ. ಗಟ್ಟಿಯಾಗಿ ಓದು.’

ಬರೆದವನು ಉಪ್ಪು ಖಾರ ಬೆರೆಸಿರಬಹುದೆಂದು ಸಂಶಯವಾದರೂ ಲೇಖನ ಕೃಷ್ಣಪ್ಪನನ್ನು ಆಕರ್ಷಿಸಿತು. ಗೀತಾ ಪಠನಕ್ಕಾಗಿ ಮಾತ್ರ ತನ್ನ ಮೌನವನ್ನು ಮುರಿಯುತ್ತಿದ್ದ ಬೈರಾಗಿ ಕ್ರಮೇಣ ಪ್ರಸಿದ್ದನಾದ ಕಥೆ ಲೇಖನದಲ್ಲಿತ್ತು. ಭಕ್ತರ ಕನಸಿನಲ್ಲಿ ಕಾಣಿಸಿಕೊಂಡು ಮಾತಾಡುವನೆಂಬ ಪ್ರತೀತಿ ಹುಟ್ಟಿ ಜನ ಜಮಾಯಿಸುವುದು ಹೆಚ್ಚಾದಂತೆ ಒಂದು ದಿನ ಬೈರಾಗಿ ಗುಹೆ ಸೇರಿಬಿಟ್ಟ. ಹೊರಕ್ಕೆ ಬರಲೇ ಇಲ್ಲ. ಎರಡು ಮೂರು ದಿನಗಳಾದ ಮೇಲೆ ಬೆಟ್ಟದಲ್ಲಿ ನೆರೆದಿದ್ದ ಜನಸಮೂಹದಲ್ಲಿ ಒಬ್ಬಾತ ಈ ಮಹಿಮರೇನು ಮಾಡುತ್ತಿದ್ದಾರೆಂದು ನೋಡಲು ಗುಹೆಯಲ್ಲಿ ಇಣುಕಿದ. ಸರ್ಪದೋಪಾದಿಯಲ್ಲಿ ಬುಸ್ಸೆನ್ನುವ ಶಬ್ದ

ಗುಹೆಯಿಂದ ಕೇಳಿಸಿತು. ಮಹಾತ್ಮರು ಈಶ್ವರನ ಶಿರಸ್ಸಿನ ಮೇಲಿನ ಸರ್ಪದ ಭಾವ ತಾಳಿ ತಪಸ್ಸಿನಲ್ಲಿದ್ದಾರೆಂದು ಅವನು ನೆರೆದಿದ್ದ ಜನರಿಗೆ ಸಾರಿದ. ಪ್ರತಿದಿನ ಅವರು ನೈವೇದ್ಯವನ್ನು ಗುಹೆಯ ಬಾಯಲ್ಲಿ ತಳ್ಳಿ ಕಾಯುವರು. ಒಂದಷ್ಟನ್ನು ತಿಂದು ಉಳಿದಿದ್ದನ್ನು ಬೈರಾಗಿ ಹೊರಗಸೆಯುವನು. ಆ ಪ್ರಸಾದವನ್ನು ಭಕ್ತರೆಲ್ಲ ಒಂದೊಂದು ಅಗಳಾಗಿ ಹಂಚಿಕೊಳ್ಳುವರು. ಕೆಲವು ದಿನ ನೈವೇದ್ಯವನ್ನು ಬೈರಾಗಿ ಸ್ವೀಕರಿಸುತ್ತಿಲ್ಲವೆಂಬುದನ್ನು ಕಂಡ ಜನ ಗುಹೆಯ ಬಾಯಿಗೆ ಹೋಗಿ ಇಣುಕಿದರು. ಕತ್ತಲಲ್ಲಿ ಏನೂ ಕಾಣಲಿಲ್ಲ. ಆದರೆ ಬುಸ್ಸೆಂಬ ಶಬ್ದ ಜೋರಾಗಿ ಬಂತು – ಸಿಟ್ಟಿನಲ್ಲಿ ಇಣುಕಿದವರನ್ನು ಅಟ್ಟುವ ಥರ. ಮಹಾತ್ಮರು ಈಗ ಸರ್ಪವೇ ಆಗಿದ್ದಾರೆಂದು ಭಕ್ತಾದಿಗಳೆಲ್ಲ ತಿಳಿದರು. ಆಮೇಲಿಂದ ಹಾಲನ್ನಿಡಲು ಶುರುಮಾಡಿದರು.

ಹೀಗೆ ಮೂರು ಪಕ್ಷಗಳು ಕಳೆದ ಮೇಲೆ ಗುಹೆಯಿಂದ ಉಜ್ವಲವಾದ ಪ್ರಕಾಶದ ಮಹಿಮರು ಹೊರಗೆ ಬಂದರು. ಈಗವರು ಗೀತೆಯನ್ನು ಓದುವುದಿಲ್ಲ. ಮಾತೂ ಆಡುವುದಿಲ್ಲ. ಒಮ್ಮೊಮ್ಮೆ ಗಹಗಹಿಸಿ ನಗುವುದುಂಟು. ಅಥವಾ ಮರಹತ್ತಿ ಕೂತಿರುತ್ತಾರೆ.

ಸಹಸ್ರ ಸಂಖ್ಯೆಯಲ್ಲಿ ಪ್ರತಿನಿತ್ಯ ಈ ಸರ್ಪಸಿದ್ದೇಶ್ವರಾನಂದರ ದರ್ಶನ ಪಡೆಯಲು ದೇಶಾದ್ಯಂತ ಜನ ನೆರೆಯುತ್ತಿದ್ದಾರೆ. ಇಲ್ಲಿ ಅನೇಕ ಪವಾಡಗಳು ನಡೆಯುತ್ತಾವೆಂಬ ಕಥೆಗಳಿವೆ. ಕೆಲವು ಸಾರಿ ಸರ್ಪಸಿದ್ದೇಶ್ವರಾನಂದರು ಮತ್ತೆ ಗುಹೆ ಸೇರಿಬಿಡತ್ತಾರೆ – ತಮ್ಮ ಸರ್ಪಸ್ವರೂಪಕ್ಕ ಮರಳಲೆಂದು. ಸರ್ಪರೂಪದಲ್ಲಿರುವ ಅವರನ್ನು ನೋಡಕೂಡದೆಂದೂ ನೋಡಿದರೆ ಸಾವು ಖಂಡಿತವೆಂದೂ ಜನರ ತಿಳಿವಳಿಕೆ. ಕೆಲವು ದಿನ ಕಳೆದ ಮೇಲೆ ಮಹಿಮರೇ ಹೊರಬರುತ್ತಾರೆ – ನಗುತ್ತಾರೆ. ಮರ ಹತ್ತಿ ಕೂರುತ್ತಾರೆ.

‘ಏನನ್ನಿಸತ್ತೊ ನಿಂಗೆ?’

ಕೃಷ್ಣಪ್ಪ ಕುತೂಹಲದಿಂದ ಕೇಳುತ್ತಾನೆ.

‘ಮೂಡನಂಬಿಕೆ ಅಷ್ಟೆ’

‘ಈ ಬೈರಾಗಿ ಹುಚ್ಚನೂ ಇರಬಹುದು. ದೊಡ್ಡ ದ್ರಷ್ಟಾರನೂ ಇರಬಹುದು ಅಂತ ಅನುಮಾನ ನಿನಗಾಗಲ್ಲ, ನಾಗೇಶ?’

‘ಇಂಥದನ್ನು ನಂಬಿಕೊಂಡೇ ನಮ್ಮ ದೇಶ ಹೀಗಾಗಿದ್ದು.’

‘ಸರಿ’

‘ನಮಗೆ ಬೇಕಾಗಿರೋದು ಅನ್ನ – ಆಧ್ಯಾತ್ಮ ಅಲ್ಲ.’

ಕೃಷ್ಣಪ್ಪ ಸುಮ್ಮನಾದ್ದು ಕಂಡು ನಾಗೇಶ ಅವನನ್ನು ಹಾಸ್ಯ ಮಾಡುವ ಧೈರ್ಯ ತೋರಿಸುವನು!

'ಯಾಕೋ ಇತ್ತೀಚೆಗೆ ಗೌಡರು ಹಾಸಿಗೆ ಹಿಡಿದ ಮೇಲೆ ಈ ಮುಟ್ಠಾಳ ಫಾಂಭಿಕರನ್ನು ನಂಬೋ ಹಾಗೆ ಕಾಣತ್ತೆ.'

'ಅಣ್ಣಾಜೀನೂ ಹಾಗೇ ಹೇಳ್ತ ಇದ್ದ ಕಣಯ್ಯ.'

ಕೃಷ್ಣಪ್ಪ ಆಲೋಚನೆಯಲ್ಲಿ ಮಗ್ನನಾಗಿದ್ದು, ಮೆಲ್ಲಗೆ ಹೇಳುವನು:

'ನೋಡು ನಾಗೇಶ, ದೇವರು ಇದ್ದೇ ಇದಾನೆ ಅಂತ ಒಬ್ಬನಿಗೆ ಗೊತ್ತು ಅನ್ನು, ನಂಬಿಕೆಯಲ್ಲ ನಾನು ಹೇಳೋದು – ನಿಶ್ಚಯವಾಗಿ ಗೊತ್ತು ಅನ್ನು, ಹಾಗೆ ಗೊತ್ತಿರೋದು ಸಾಧ್ಯವಿದ್ದರೆ ಅಂಥವರು ರಿಲಿಜಸ್‌ಆಗೋದು ದೊಡ್ಡ ವಿಷಯ ಅಲ್ಲವೋ. ಬ್ಯಾಂಕಲ್ಲಿ ದುಡ್ಡಿಟ್ಟ ಹಾಗೆ ಅದು – ಬಡ್ಡಿ ಗ್ಯಾರಂಟಿ. ಆದರೆ ದೇವರು ಇದಾನೊ ಇಲ್ವೊ ಅನ್ನುವ ಆತಂಕದಲ್ಲೂ ದೇವರನ್ನ ನಂಬೋ ನಿರ್ಧಾರ ಮಾಡೋದಿದೆ ನೋಡು – ಅದು ನಿಜವಾದ ಶೌರ್ಯ. ಹಾಗೇನೇ ರಾಜಕೀಯದಲ್ಲಿ ನಮ್ಮ ಹೋರಾಟದಿಂದ ಪ್ರಗತಿಯಾಗತ್ತೆ, ಈ ಪ್ರಗತೀಂದ ಎಲ್ಲ ಒಳ್ಳೆದೇನೆ ಸಲೀಸಾಗಿ ಆಗ್ತಾ ಆಗ್ತಾ ಹೋಗತ್ತೆ ಅಂತ ತಿಳಿದು ಬಡವರ ಪರ ನಿಂತು ಕ್ರಾಂತಿಗೆ ಕೆಲಸಮಾಡೋದು ಒಂದು ವಿಧ. ಬಹಳ ಜನರ ಮಾರ್ಗ ಅದು. ಆದರೆ ನಾನು ವಾರಂಗಲ್‌ನಿಂದ ಹಿಂದೆ ಬಂದ ಮೇಲೆ ರಾಜಕೀಯಕ್ಕೆ ಧುಮುಕೋ ಮೊಚೆ ನಾವು ತರೋ ಪ್ರಗತಿಯೆಲ್ಲ ಒಳ್ಳೇದನ್ನೇ ಮಾಡ್ತಾ ಹೋಗತ್ತೆ ಅಂತ ನಿಶ್ಚಯವಾಗಿ ತಿಳಿಯೋದು ನನಗೆ ಸಾಧ್ಯವಾಗ್ತಿರ್ಲಿಲ್ಲ. ಈಗಲೂ ಸಾಧ್ಯವಾಗ್ತಿಲ್ಲ. ಆದರೆ ಸುತ್ತಮುತ್ತಲಿನ ಕ್ಷುದ್ರತೆ, ದುಃಖ ಕಂಡಾಗ ಇದರ ವಿರುದ್ಧ ಹೋರಾಡೋದು ಅಗತ್ಯ ಅನ್ನೋದು ಮಾತ್ರ ನನಗೆ ಸ್ವಯಂಸಿದ್ದ. ದೈನಿಕ ಜೀವನವೇ ಹೊಳೀಬೇಕು ಅಂತ ನನಗಿದ್ದ ಆಸೆ ಮಾತ್ರ ಸಫಲವಾಗಿಲ್ಲ. ನನ್ನ ಪ್ರಯತ್ನದಿಂದ ಅವತ್ತು ಒದೆಸಿಕೋತಿದ್ದ ಬೀರೇಗೌಡ ಇವತ್ತು ಇನ್ನೊಬ್ಬನನ್ನ ಒದೀತಿದಾನೆ. ಆದರೆ ಈ ಮಾತನ್ನ ಹೇಳೋವಾಗ ಸಮಾಜ ಚಲಿಸೋದರಲ್ಲಿ ಏನೂ ಅರ್ಥವಿಲ್ಲ ಅನ್ನೋ ಧ್ವನಿ ಹೊರಟರೆ ಅದೂ ಕೂಡ ಬಹಳ ಸುಲಭವಾದ ಸಲೀಸಾದ ಮಾತಾಗಿಬಿಡುತ್ತೆ. ಏನನ್ನೂ ಕ್ರೂರಿಯೂ ಇದೇ ಮಾತಾಡ್ತಾನೆ ಅಲ್ವ? ಅಂದ್ರೆ ನಾನು ಹೇಳಬೇಕೂಂತಿರೋದು ನಾಗೇಶ. . . .'

ನಾಗೇಶ ಅರ್ಥವಾಗದೆ ಕೃಷ್ಣಪ್ಪನನ್ನು ನೋಡುತ್ತಾನೆ. ಬರಕೊಳ್ಳಲು ಪೆನ್ಸಿಲ್ ಎತ್ತಿಕೊಂಡದ್ದು ನೋಡಿ ಕೃಷ್ಣಪ್ಪ ಕಣ್ಣಿಂದ ಅದನ್ನು ತಡೆದು ಹೇಳುತ್ತಾನೆ:

'ಅಪಾರ್ಥಕ್ಕೆ ಎಡೆಗೊಡದೆ ನಾನು ಹೇಳಬೇಕೂಂತ ಇರೋದನ್ನ ಹೇಳಕ್ಕೇ ಆಗಲ್ವೊ ನಾಗೇಶ. ಹುಟ್ಟಿದ ಮೇಲೆ ಕರ್ಮದಲ್ಲಿ ತೊಡಗಲೇಬೇಕು, ಹೋರಾಡಲೇ ಬೇಕು. ಜೀವನಾನ್ನ ಕ್ಷುದ್ರಗೊಳಿಸೋ ತಮಸ್ಸನ್ನ ನೂಕತಾನೇ ಇರಬೇಕು. ಅಂದರೆ ನಮ್ಮ ಕ್ರಿಯೆಗಳ ಪರಿಣಾಮ ಹೀಗೂ ಆಗಬಹುದು ಹಾಗೂ ಆಗಬಹುದು ಅನ್ನೋ ಆತಂಕಾನ ಕಳಕೊಳ್ಳದಂತೆ. . . . .'

ಕೃಷ್ಣಪ್ಪ ಮಾತು ಮುಗಿಸದೆ ಮುಖ ತಿರುಗಿಸಿ,

‘ಹೊರಕೂತವರನ್ನ ಬರಹೇಳು’ ಅನ್ನುತ್ತಾನೆ.

ಸದ್ಯದಲ್ಲೇ ಆಗಬಹುದಾದ ಪಕ್ಷಾಂತರದ ಗಲಿಬಿಲಿಯಲ್ಲಿ ತಾವು ಯಾವ ಪಾತ್ರ ವಹಿಸಬೇಕೆಂದು ಚರ್ಚಿಸಲು ಅವನ ಪಕ್ಷದ ಎಂ.ಎಲ್.ಎ.ಗಳು ಬಂದಿದ್ದರು. ಅವರಲ್ಲಿ ಕೆಲವರು ಆಳುವ ಪಕ್ಷದಲ್ಲಿರುವ ಒಡಕು ತಮಗೆ ಅಸಂಬದ್ಧವೆಂದೂ, ತಮ್ಮ ಕ್ರಾಂತಿಯ ಹಾದಿಯಲ್ಲಿ ಯಾರನ್ನೂ ಜೊತೆಗೆ ಕಟ್ಟಿಕೊಳ್ಳದೆ ಸಾಗಬೇಕೆಂದೂ ವಾದಿಸುವ ಉಗ್ರ ಧೋರಣೆಯವರು. ಹಲವರು ಆಳುವ ಪಕ್ಷದ ಒಡಕನ್ನು ಉಪಯೋಗಿಸಿಕೊಂಡು ಬೇರೊಂದು ಮಂತ್ರಿಮಂಡಲದ ರಚನೆಗೆ ತಾವು ಬೆಂಬಲ ಕೊಡಬೇಕೆಂದೂ ಹೀಗೆ ಬೆಂಬಲಿಸುವಾಗ ಒಂದು ಟೈಮ್‌ಬೌಂಡ್‌ಮಿನಿಮಮ್‌ಪ್ರೋಗ್ರಾಂಗೆ ಬದ್ಧರಾಗಬೇಕೆಂದು ವಾದಿಸುವವರು. ಇವರಲ್ಲೂ ಈಗಿರುವ ಮುಖ್ಯಮಂತ್ರಿಗೇ ಬೆಂಬಲ ಕೊಡಬೇಕೆಂದು ಕೆಲವರ ವಾದ. ಮುಖ್ಯಮಂತ್ರಿಯ ಪ್ರತಿಸ್ಪರ್ಧಿಗೆ ಬೆಂಬಲಕೊಡಬೇಕೆಂದು ಉಳಿದವರ ವಾದ. ಮುಖ್ಯಮಂತ್ರಿಯ ಜೊತೆ ಈಗಾಗಲೇ ಮಾತಾಡಿರಬೇಕೆಂದು ಉಳಿದವರ ವಾದ. ಮುಖ್ಯಮಂತ್ರಿಯ ಜೊತೆ ಈಗಾಗಲೇ ಮಾತಾಡಿರಬೇಕೆಂದು ‘ಆ’ ಗುಂಪಿನ ಮೇಲೆ ‘ಈ’ ಗುಂಪಿಗೆ ಸಂಶಯವಾದರೆ, ಭಯಂಕರ ದುಡ್ಡು ಚೆಲ್ಲುತ್ತಿರುವ ಪ್ರತಿಸ್ಪರ್ಧಿಯ ಜೊತೆ ಒಪ್ಪಂದವಾಗಿರಬೇಕೆಂದು ‘ಈ’ ಗುಂಪಿನ ಮೇಲೆ ‘ಆ’ ಗುಂಪಿನ ಸಂಶಯ. ವೀರಣ್ಣ ಕೃಷ್ಣಪ್ಪನ ಮೇಲೆ ತನಗಿರುವ ಪ್ರಭಾವ ಉಪಯೋಗಿಸಿ ‘ಆ’ ಗುಂಪಿಗೆ ಬೆಂಬಲ ಕೊಡುವಂತೆ ಮಾಡಲು ಪ್ರಯತ್ನಿಸುತ್ತಿದ್ದ. ಈ ರಾಜಕೀಯವೇ ಅಸಂಬದ್ಧ ಎನ್ನುವ ಉಗ್ರರು ಹೆಚ್ಚಾಗಿ ಮಾತಿನ ಚಟದವರು. ಆ ಪಕ್ಷ ಯುವಕರು, ಆದರೆ ಆದರ್ಶವಾದಿಗಳು; ಉಳಿದವರು ಜನಹಿತಕ್ಕಾಗಿ ನಿಜವಾಗಿ ದುಡಿದವರು. ದುಡಿದು ಸುಸ್ತಾದವರು; ಖದೀಮರು. ಕ್ರಾಂತಿಯ ಅಸ್ಫೋಟದಲ್ಲಿ ಮಾತ್ರ ಬದಲಾವಣೆ ಸಾಧ್ಯವೆಂದು ಒಬ್ಬರ ವಾದವಾದರೆ, ಆಡಳಿತದಲ್ಲಿ ಭಾಗವಹಿಸುವದರ ಮೂಲಕ ಜನರನ್ನು ಕ್ರಾಂತಿಯ ದಿಕ್ಕಲ್ಲಿ ಹಚ್ಚಬಹುದೆಂದು ಇನ್ನೊಬ್ಬರ ವಾದ.

ಇವತ್ತು ಕೃಷ್ಣಪ್ಪನಲ್ಲಿ ಈ ವಾದ ವಿವಾದದಲ್ಲಿ ಭಾಗವಹಿಸುವ ಉಮೇದಿಲ್ಲದಿದ್ದರೂ ಅವರ ಜೊತೆ ಚರ್ಚಿಸಲು ಸನ್ನದ್ಧನಾದ.

***

ಸಹದ್ಯೋಗಿಗಳಲ್ಲಿ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ತನ್ನ ಮಾತು ಅವರು ಮೀರುವುದಿಲ್ಲವೆಂದು ಕೃಷ್ಣಪ್ಪನಿಗೆ ಸಮಾಧಾನವಾಗಿತ್ತು. ಬದುಕು ಮತ್ತು ಸಾವಿನ ಹೊಸ್ತಿಲಲ್ಲಿದ್ದೂ ತನ್ನ ವರ್ಚಸ್ಸು ಕುಗ್ಗಿರಲಿಲ್ಲ. ದೆಹಲಿಯ ಡಾಕ್ಟರ್ ಪರೀಕ್ಷೆ ಮಾಡಿ ಎಕ್‌ಸ್‌ಟೆಂನ್ಸಿವ್‌ಡ್ಯಾಮೇಜ್ ಆಗಿಲ್ಲ – ಫಿಸಿಯೋಥೆರಪಿ ಈಗ ಮುಖ್ಯ ಎಂದಿದ್ದರು. ಕೃಷ್ಣಪ್ಪ ಒಟ್ಟಿನಲ್ಲಿ ಈ ಎಲ್ಲದರಿಂದ ಗೆಲುವಾಗಿದ್ದಾಗ ರಾತ್ರೆ ಗೌರಿ ದೇಶಪಾಂಡೆಯ ಟೆಲಿಗ್ರಾ ಬಂತು – ನಾಡಿದ್ದು ಭಾನುವಾರ ಸಂಜೆ ವಿಮಾನದಲ್ಲಿ ಬರುತ್ತಿದ್ದೇನೆಂದು. ಅವಳು ದೆಹಲಿಗೆ ಅಮೇರಿಕಾದಿಂದ ಬಂದು ಆರು ತಿಂಗಳು ಮೇಲಾಗಿತ್ತು. ಅವಳನ್ನು ನೋಡಿ ಎಷ್ಟೋ ವರ್ಷಗಳಾಗಿಬಿಟ್ಟಿದ್ದವು. ಈಗ ಹೇಗೆ ಕಾಣುವಳೊ. ದೆಹಲಿಗೆ ಬಂದವಳೇ ತನ್ನನ್ನು ನೋಡುವಳೆಂದು ಆಸೆಪಟ್ಟಿದ್ದ. ಬರಲಿಲ್ಲವಾದ್ದರಿಂದ ಅವಳು ತನ್ನ ಬಗ್ಗೆ ತಣ್ಣಗಾಗಿರಬಹುದೆಂದು ಭಾವಿಸಿದ್ದ. ಈಗ ಬರುತ್ತಿದ್ದಾಳೆ; ಎರಡು ದಿನ ಕಳೆದು. ಅಂದರೆ ಅವಸರಪಡದೆ, ಖಾಯಿಲೆ ಹಿಡಿದು ಮಲಗಿದ ಮೇಲೆ ನನ್ನ ಆತ್ಮರತಿ ಉಲ್ಬಣವಾಗಿದ್ದರಿಂದ ಹೀಗೆ ಯೋಚಿಸುತ್ತಿದ್ದೀನಲ್ಲವೆ ಎಂದು ಹೇಸಿಗೆ ಪಟ್ಟ.

ಸೀತೆ ತಂದಿಟ್ಟ ಪ್ಯಾನ್‌ನಲ್ಲಿ ಬೆಳಗಿನ ತನ್ನ ವಿಸರ್ಜನೆಗಳಲ್ಲಿ ತೊಡಗಿದ್ದಾಗ ಮಹೇಶ್ವರಯ್ಯ ಬಂದುಬಿಟ್ಟರು. ಕೃಷ್ಣಪ್ಪ ಆವೇಗದಿಂದ ಉಸಿರಾಡುತ್ತ ಹೊರಗೆ ಅವರು ಮಾತಾಡುವುದನ್ನು ಕೇಳಿಸಿಕೊಂಡ. ನಾಗೇಶ ಖಾಹಿಲೆ ವಿಷಯ ಹೇಳುತ್ತಿದ್ದಾನೆ. ಮಹೇಶ್ವರಯ್ಯ ಮಾತಾಡುವುದೇ ಇಲ್ಲ. ತನ್ನ ಭಾವವನ್ನು ತೋರಿಸಿಕೊಳ್ಳುವ ಮನುಷ್ಯನೂ ಅಲ್ಲ ಅವರು, ಅವರಿಗಾಗಿರುವ ಆಘಾತ ಊಹಿಸುತ್ತ ಕೃಷ್ಣಪ್ಪನಿಗೆ ಸಂಕಟವಾಯಿತು. ಎಪ್ಪತ್ತರ ಅವರ ವಯಸ್ಸಲ್ಲಿ ತನ್ನಿಂದ ಈ ದುಃಖ ಅವರಿಗಾಗಬಾರದಿತ್ತು.

ಬಿಸಿನೀರಿನಲ್ಲಿ ಒದ್ದೆ ಮಾಡಿದ ಬಟ್ಟೆಯಿಂದ ಸೀತೆ ಕೃಷ್ಣಪ್ಪನ ಮೈಯನ್ನು ಒರೆಸುತ್ತಿದ್ದಳು. ನಾಳೆಯಿಂದ ಈ ಕೆಲಸ ಮಾಡಲು ನರ್ಸ್‌ಬರುತ್ತಾಳೆ. ಕಿರಿಕಿರಿಪಡುತ್ತ ಬ್ಯಾಂಕಿಗೆ ಹೋಗುವ ಅವಸರದಲ್ಲಿ ಸೀತೆ ಮಾಡುವ ಸೇವೆ ಕೃಷ್ಣಪ್ಪನಿಗೆ ಇಷ್ಟವಾಗುವುದಿಲ್ಲ. ಇವತ್ತು ಅವಳ ಮುಖದಲ್ಲಿ ಉರಿಯುವಂತೆ ಕಂಡ ದುಗುಡಕ್ಕೆ ಬೇರೆ ಕಾರಣವಿದೆ. ತನಗೆ ತುಂಬ ಪ್ರಿಯರಾದವರು ಯಾರು ಮನೆಗೆ ಬಂದರೂ ಅವಳಿಗೆ ಕರೆಕರೆ – ಅಭದ್ರ ಭಾವನೆ.

‘ಕುದುರೆ ಬಾಲಾನ ಅಟ್ಟಿಕೊಂಡು ಬಂದಿರ್ಬೇಕು. ಈವಯ್ಯನ ಮುಖ ಕಂಡು ವರ್ಷ ಮೇಲಾಯ್ತು’ ಬೆನ್ನನ್ನು ಒರೆಸುತ್ತ ಸೀತೆ ಹೇಳುತ್ತಾಳೆ.

ಕೃಷ್ಣಪ್ಪನಿಗೆ ರುಮ್ಮನೆ ಸಿಟ್ಟು ಬಂತು. ತಾನೇನು ಮಾಡುತ್ತಿದ್ದೇನೆಂದು ತಿಳಿಯೋದರ ಒಳಗೆ ಇನ್ನೂ ಶಕ್ತಿಯಿಂದ ತನ್ನ ಬಲಗೈಯಿಂದ ಅವಳನ್ನು ಗುದ್ದಿದ. ಅವಳು ಆದ ನೋವಿಗಿಂತ ಹೆಚ್ಚು ಸಂಕಟಪಡುತ್ತ’ಅಯ್ಯೋ’ ಎಂದು ಕೂತು ಅಳತೊಡಗಿದಳು. ಕೃಷ್ಣಪ್ಪನಿಗೆ ತನ್ನ ಬಗ್ಗೆ ಅವಳ ಬಗ್ಗೆ ಅತ್ಯಂತ ಹೇಸಿಗೆಯಾಗಿ ಸತ್ತುಬಿಡಬೇಕೆನ್ನಿಸಿತು. ‘ಹೆಣ್ಣು ಹೆಂಗಸಿನ ಮೇಲೆ ಕೈ ಮಾಡೋ ಇವರು ಕ್ರಾಂತಿಮಾಡ್ತಾರಂತೆ’ – ಶುರುವಾಯಿತು ಸೀತೆಯ ಗೋಣಗಾಟ. ಹೊಡೆದ ಮೇಲೆ ಅವನಿಗೆ ಕುಡ ಹಾಗೆನ್ನಿಸುವುದರಿಂದ ಮಂಕಾಗಿ ಕೂತು ಕಾದ. ಅವಳೇ ಬಟ್ಟೆ ತೊಡಿಸಬೇಕು ಇನ್ನು. ಅವನ ಒಂದು ತಿಂಗಳ ಬಿಳಿಕಪ್ಪು ಮಿಶ್ರವಾದ ಗಡ್ಡದಲ್ಲಿ ಬಲಗೈಯ ಬೆರಳಾಡಿಸುತ್ತ ಸುಮ್ಮನೆ ಕೂರುತ್ತಾನೆ. ಸ್ಟ್ರೋಕ್‌ಹೊಡೆದ ಮೇಲೆ ಬೆಳೆದ ಗಡ್ಡ ಇದು. ಈ ಗಡ್ಡ ಮೆಚ್ಚಿಗೆಯಾಗಿರೋದು ತನ್ನನ್ನು ಲೆನಿನ್ನಾಗಿ ನೋಡಲು ಬಯಸುವ ನಾಗೇಶನೊಬ್ಬನಿಗೇ. ಹೀಗೆ ಏನೇನೋ ಯೋಚಿಸುತ್ತ ಮೂಗನ್ನು ಸೀನಿಕೊಂಡು ಅಳುತ್ತ ಕೂತ ಸೀತೆಯನ್ನು ಮರೆಯಲು ಪ್ರಯತ್ನಿಸುತ್ತಾನೆ. ಆಗಲ್ಲ. ಅವಳು ಗೊಣಗುತ್ತ ಪಂಚೆಯುಡಿಸಿ ಜುಬ್ಬ ಹಾಕಿ ತಲೆ ಬಾಚಿಕೊಳ್ಳಲು ಬಾಚಣಿಗೆಯನ್ನು ಬಲಗೈಯಲ್ಲಿ ಇಡುತ್ತಾಳೆ. ಅವನು ಕೂತಿದ್ದ ವೀಲ್‌ಚೇರನ್ನು ರೂಮಿಗೆ ತಳ್ಳಿ ಗೊಣಗುತ್ತಲೇ ಅಡಿಗೆ ಮನೆಗೆ ಹೋಗುತ್ತಾಳೆ. ಅಡಿಗೆ ಮನೆಯಲ್ಲಿ ಮಗಳು ಗೌರಿ ವರಾತ ಹಿಡಿದ್ದಾಳೆ. ಈಗ ಅವಳಿಗೆ ದಬದಬನೆ ಏಟು ಬೀಳುವುದಿದೆ.

ಮಹೇಶ್ವರಯ್ಯ ಒಳಗೆ ಬಂದು ಕೂತರು. ಮಾತಾಡಲಿಲ್ಲ. ಒಂದು ವರ್ಷದಲ್ಲೇ ಎಷ್ಟು ಮುದಿಯಾಗಿಬಿಟ್ಟಿದ್ದಾರೆಂದು ಅವರ ಮುಖವನ್ನೆ ದಿಟ್ಟಿಸಿದ. ಅವರ ನಡಿಗೆಯಲ್ಲಿ ಮುಖದಲ್ಲಿ ಹಿಂದಿದ್ದ ದೃಢತೆ ಇರಲಿಲ್ಲ. ಕಣ್ಣಿನ ಕೆಳಗೆ ಗಲ್ಲದ ಬಳಿ ಚರ್ಮ ಜೋತು ಬಿದ್ದಿತ್ತು. ಉಟ್ಟಬಟ್ಟೆಯಲ್ಲಿ ಹಿಂದಿನ ಶುಚಿ ಇರಲಿಲ್ಲ, ಹಣೆಯ ಮೇಲೆ ಕುಂಕುಮವಿರಲಿಲ್ಲ.

‘ಎಲ್ಲಿ ಉಳ್ಕೊಂಡಿದೀರಿ?’

‘ಅದೇ ನಿನ್ನ ಹಿಂದಿನ ಮನೆ – ಗಾಂಧೀ ಬಜಾರಿನಲ್ಲಿ ಇದ್ದದ್ದು – ಅಲ್ಲಿಗೆ ಹೋದೆ. ಅಲ್ಲಿಂದ ನೀನು ಬಿಟ್ಟದ್ದು ತಿಳಿದು ದಾರೀಲಿ ಸಿಕ್ಕ ಒಂದು ಹೋಟೆಲಲ್ಲಿ ಟ್ರಂಕನ್ನಿಟ್ಟು ಸ್ನಾನ ಮಾಡಿ ಬಂದೆ’ ಎಂದು ಕೃಷ್ಣಪ್ಪನನ್ನು ಅಕ್ಕರೆಯಿಂದ ನೋಡಿದರು.

‘ಆದರೆ ಅಲ್ಲಿ ಬರ್ತಿದ್ದವರು ಯಾರೂ ಇಲ್ಲಿಗೆ ಬರಲ್ಲ. ರೈತಾಪಿ ಜನಕ್ಕೆ ಇಲ್ಲಿಗೆ ಬರೋದಕ್ಕೆ ಬಸ್ಸಿನ ಸೌಕರ್ಯ ಸಾಲದು. ದೊಡ್ಡ ಜನರಿರೋ ಜಾಗವಲ್ವ? ಬಂದರೂ ದಂಗು ಬಡಿದು ನಿಲ್ಲುತ್ತಾರೆ. ಹಿಂದಿನಂತೆ ನೆಲದ ಮೇಲೆ ಕೂತು ಮಾತಾಡಲ್ಲ. . . . . .’

ಕೃಷ್ಣಪ್ಪ ಕೊರಗುತ್ತ ಮಾತಾಡಿದ್ದನ್ನು ಕೇಳಿಸಿಕೊಳ್ಳುತ್ತ ಮೇಶ್ವರಯ್ಯ,

‘ಈಗ ನಿನಗೆ ಇಷ್ಟಾದರೂ ಸೌಕರ್ಯ ಬೇಡವೆ ?’ ಎಂದು ಅವನ ಮಾತನ್ನು ತಳ್ಳಿಹಾಕಿದರು. ಮತ್ತೆ ಇಬ್ಬರೂ ಮೌನವಾಗಿ ಕೂತರು. ಗೌರಿ ದೊಡ್ಡದಾಗಿ ಅಳುತ್ತ ಕೋಣೆಗೆ ಓಡಿ ಬಂದು ಅಲ್ಲಿ ಮಹೇಶ್ವರಯ್ಯನನ್ನು ಕಂಡು ಅಳು ನಿಲ್ಲಿಸಿ ಅಪ್ಪನ ಪಕ್ಕದಲ್ಲಿ ನಿಂತು ಬಿಕ್ಕಿದಳು: ಮಹೇಶ್ವರಯ್ಯ ಕೈಚೀಲದಿಂದ ದೊಡ್ಡದೊಂದು ಚಾಕಲೇಟುಗಳನ್ನು ಕಟ್ಟಿದ ಪೊಟ್ಟಣವನ್ನು ಅವಳ ಕೈಯಲ್ಲಿತ್ತು, ‘ಅಮ್ಮನ ಹತ್ತಿರ ಕೊಡು. ಈಗ ನೀನೊಂದು ತಿನ್ನು’ ಎಂದು ಒಂದು ಚಾಕಲೇಟನ್ನು ಸುಲಿದು ಅವಳ ಬಾಯಲ್ಲಿಟ್ಟರು.

ಮಹೇಶ್ವರಯ್ಯ ಏನನ್ನೋ ಹೇಳಲು ಪ್ರಯತ್ನಿಸುತ್ತಿರುವಂತೆ ಕಂಡಿತು. ಅವರು ನಿಶ್ಚಲವಾಗಿ ಕೂತು ಯಾವುದಾದರೊಂದು ವಸ್ತುವನ್ನು ದುರುಗಟ್ಟಿ ನೋಡತೊಡಗಿದರೆ ಏನನ್ನೋ ಹೇಳಲು ಸಿದ್ದರಾಗುತ್ತಿದ್ದಾರೆ ಎಂದು ಅರ್ಥ. ಈಗ ಏನನ್ನಾದರೂ ಹೇಳಬೇಕಾದ ತನ್ನ ಒತ್ತಾಯ ಅವರ ಮೇಲಿಲ್ಲವೆಂದು ಸೂಚಿಸಲು ಕೃಷ್ಣಪ್ಪ ಬೆಳಗಿನ ಪತ್ರಿಕೆಯನ್ನು ಓದುತ್ತ ಕೂತ. ಕೈಕಾಲುಗಳನ್ನು ಎತ್ತಲು ಪ್ರಯತ್ನಿಸುವ ವ್ಯಾಯಾಮ ಕೂಡ ಅವರ ಏಕಾಗ್ರತೆಗೆ ಭಂಗ ತರುವಂತೆ ವಾತಾವರಣದಲ್ಲಿ ಒತ್ತಡವನ್ನುಂಟು ಮಾಡೀತು.

ಮೈಯೆಲ್ಲ ಕಿವಿ ಕಣ್ಣುಗಳಾಗಿ ಕೂರುವ ಹಕ್ಕಿಯನ್ನು ತೋರಿಸಿ ಮಹೇಶ್ವರಯ್ಯ ಅನ್ನುತ್ತಿದ್ದರು – ‘ಹಾಗಿರಬೇಕು ನಾನು’ ‘ಪ್ರಪಂಚ ನಮ್ಮ ಕಣ್ಣೆದುರಿಗಿರುತ್ತೆ. ಆದರೆ ಏನನ್ನೋ ನೋಡಲ್ಪೋ ನಾವು, ನೋಡೋದೂಂದ್ರೆ ಪ್ರವೇಶ – ಹಿಡಿಯೋದು – ಗಪ್ಪಂತ ಹಿಡಿಯೋದು.’ ಪೇಪರ್ ಓದುತ್ತ ಮಹೇಶ್ವರಯ್ಯ ಅಂದಿದ್ದ ಮಾತುಗಳನ್ನು ನೆನೆಯುತ್ತಿದ್ದಂತೆ ಯಾರೋ ಕೋಣೆಯೊಳಗೆ ‘ನಮಸ್ಕಾರ ಗೌಡರಿಗೆ’ ಎಂದು ದೊಡ್ಡದಾಗಿ ಮಾತಾಡುತ್ತಾ ವಕ್ಕರಿಸಿದರು. ಮಹೇಶ್ವರಯ್ಯ ಕೃಷ್ಣಪ್ಪ ಬೆಚ್ಚಿ ನೋಡಲು ಎದುರು ಪಂಚಲಿಂಗಯ್ಯ ನಿಂತಿದ್ದರು. ಚಿಕ್ಕಮಗಳೂರಿನಲ್ಲಿ ಕಾಫಿ ತೋಟದ ಮಾಲೀಕರು.

‘ಏನು ಗೌಡರೆ – ಛೇ ಛೇ ಇದೇನು ನಿಮಗಾಗಿದ್ದು? ಎಷ್ಟು ಗಟ್ಟಿಮುಟ್ಟಾಗಿ ಇದ್ದಿರಿ? ಕೃಷ್ಣಪ್ಪ ಕುಗ್ಗುತ್ತ ಕೂತ.

‘ಇಲ್ಲೊಬ್ರು ಸ್ಪೆಶಲಿಸ್ಟ್ ನಂಗೆ ಗುರ್ತಿದಾರೆ. ಕಾರಲ್ಲಿ ಹೋಗಿ ಕರ್ಕೊಂಬರ್ತಿನಿ’. ಪಂಚಲಿಂಗಯ್ಯನ ಒತ್ತಾಯವನ್ನು ತಳ್ಳುತ್ತ ‘ಬೇಡಿ – ಪರೀಕ್ಷೆ ಮಾಡಿಸಿಕೊಂಡಿದೀನಿ. ಏನು ಬಂದರಲ್ಲ ?’ ಎಂದು ಕೃಷ್ಣಪ್ಪ ಕೇಳಿದ.

‘ಉಡುಪೀಲೊಂದು ಮೆಡಿಕಲ್ ಕಾಲೇಜಿದೆಯಲ್ಲ – ಅದನ್ನ ನಡೆಸೋರ್‍ಗೆ ನೀವೊಂದ್ರೆ ಭಾರಿ ಗೌರವವಂತೆ. ಎಷ್ಟು ಡೊನೇಶನ್ ಕೇಳಿದರೂ ಕೊಡ್ತೀನಿ ಮಾರಾಯ್ರೆ – ಅದ್ರೂ ನಿಮ್ದೂ ಒಂದು ಮಾತು ಬೇಕು ನೋಡಿ ನನ್ನ ಮಗನಿಗೆ ಸೀಟ್ ಸಿಗಾಕೆ. ಎಲ್ಲ ಹೇಳ್ತಾರೆ – ಗೌಡರು ಜಪ್ಪಯ್ಯಾಂದ್ರೂ ಹೇಳಲ್ಲ ಅಂತ. ಅದಕ್ಕೇ ನಿಮ್ಮ ಮಾತಿಗಷ್ಟು ಬೆಲೆ ನೋಡಿ. . . ಹೌದ ? ಒಂದು ಸುದ್ದಿ ಕೇಳಿ ಬಾಳ ಸಂತೋಷ ಆತು. ಆದರೆ ನೀವು ಹೀಗೆ ಮಲಗಿ ಬಿಟ್ಟಿದ್ದೀರಲ್ಲ ?’

ಕೃಷ್ಣಪ್ಪ ಅವರ ಮಾತು ತನಗರ್ಥವಾಗಲಿಲ್ಲೆಂದು ಪ್ರಶ್ನಾರ್ಥಕವಾಗಿ ನೋಡಿದ. ಪಂಚಲಿಂಗಯ್ಯ ನಕ್ಕರು. ತಮ್ಮ ಹಿಂದೆ ನಿಂತ ಮಗನನ್ನು ತೋರಿಸಿ – ‘ಇವನೇ ಫಸ್ಟಲಂಟೆಂಪ್ಟಲ್ಲೇ ಪಾಸಾಗಿದ್ದಾನೆ. ಪರೀಕ್ಷೇಲಿ ಸ್ವಲ್ಪ ಮೈ ಸರಿಯಿರಲಿಲ್ಲ. ಇಲ್ದಿದ್ರೆ ಫಸ್ಟ್‌ಕ್ಲಾಸ್‌ತಗೋತಿದ್ದ. ನನ್ನ ಹತ್ತಿರ ಇರೋ ದುಡ್ಡನ್ನ ಕಟ್ಟಿಕೊಂಡು ಸಾಯಲಾ ನಾನು ? ಇರೋನು ಒಬ್ಬನೇ ಮಗ. ಫಾರಿನ್‌ಗೂ ಹೋಗಬೇಕೂಂತ ಆಸೆ. ಮೆಡಿಕಲ್ ಮೆಡಿಕಲ್ ಅಂತ ದುಂಬಾಲು ಬಿದ್ದಿದ್ದಾನೆ. ಏನು ಮಾಡಬೇಕು ಹೇಳಿ ದುಡ್ಡನ್ನ ? ನಿಮ್ಮಂಥೋರು ಮಾಡೋ ಒಳ್ಳೇ ಕೆಲಸಕ್ಕೋ ವಿದ್ಯೆಗೋ ಅದನ್ನೆಲ್ಲ ಚೆಲ್ಲೋದೂಂತ ಮನಸ್ಸು ಮಾಡಿದೀನಿ. . . . ಹೌದ ? ನಿಮಗೆ ಗೊತ್ತೇ ಇಲ್ಲವ ? ಇಡೀ ಬೆಂಗಳೂರೇ ಮಾತಾಡ್ಕೋತಿದೆ. ನಿನ್ನೆ ಗಾಲ್ಫ್‌ಕ್ಲಬ್ಬಲ್ಲಿ ಅದೇ ಮಾತು. ನಿಮಗೇ ಗೊತ್ತಿಲ್ಲಾಂದ್ರೆ ಆಶ್ಚರ್ಯ ಮಾರಾಯ್ರು. ನೀವೇ ಮುಖ್ಯಮಂತ್ರಿ ಆಗ್ತೀರೀಂತ ಸುದ್ದಿ ಇದೆ. ಸಂತೋಷ. ಆದರೆ ನಿಮ್ಮನ್ನ ಆಮೇಲೆ ಹಿಂಗೆ ಮಾತಾಡಿಸಾಕೆ ಸಾಧ್ಯವೆ ಇಲ್ಲ. . . . ಏನೋ ಮಾತಾಡ್ತ ಇದ್ರಿ. ಸಾಯಂಕಾಲ ಬಂದು ನೋಡ್ತೀನಿ. ಈಗ ನೀವು ಹೂಂತ್ಲೂ ಅನ್ನಬೇಡಿ ಉಹೂಂತ್ಲೂ ಅನ್ನಬೇಡಿ. ನೀವೇ ಖುದ್ದು ಹೇಳೋದೂ ಕೂಡದು. ಚೀಪಾಗಿ ಬಿಡ್ತದೆ – ನಂಗೊತ್ತು. ಅದಕ್ಕೊಂದು ಬೇರೆ ಮಾರ್ಗ ಇದೆ. ವೀರಣ್ಣನ ಹತ್ರ ಮಾತಾಡ್ತೀನಿ – ಸಾಯಂಕಾಲ ನೋಡಾನ. . . . ಬಾಳ ಒಳ್ಳೆ ಡಾಕ್ಟ್ರು ಅವರು ಮಾರಾಯ್ರು. ಸಾಯಂಕಾಲ ಕರ್ಕೊಂಬರ್ತೀನ್ರಿ. . . .’ ಎಂದು ಪಂಚಲಿಂಗಯ್ಯ ನಮಸ್ಕಾರ ಮಾಡಿ ನಗುತ್ತ ಮಗನ ಜೊತೆ ಕೋಣೆಯಿಂದ ಹೊರಬಿದ್ದರು.

‘ನೋಡಿ ಇಂಥವ್ರೆ ನನ್ನ ಹತ್ರ ಬರೋದು ಈಗ’

ಕೃಷ್ಣಪ್ಪ ದುಃಖದಿಂದ ಮಾತಾಡಿದ್ದು ಕೇಳಿ ಮಹೇಶ್ವರಯ್ಯ,

‘ನನಗೆ ಈಚೆಗೆ ಮನಸ್ಸನ್ನು ಒಂದು ಕಡೆ ನಿಲ್ಲಿಸೋಕೇ ಸಾಧ್ಯ ಆಗ್ತಾ ಇಲ್ಲ ಕಣಯ್ಯ. ಕಚ್ಚೆ ಹರಕನಂತೆ ಸುಮ್ಮನೆ ಅಲೆಯುತ್ತೆ ದರಿದ್ರದ್ದು’ ಎಂದು ನಕ್ಕರು. ಕ್ಷಣ ಮೌನವಾಗಿದ್ದು,

‘ನಿಂಗೆ ಮತ್ತೆ ಆ ಮರದ ಕೆಳಗೆ ಕೂತಿರಬೇಕೂಂತ ಅನ್ನಿಸತ್ತೆ ಕಣ್ಣಯ್ಯ. ಪೇರಳೇ ಗಿಡದ ಮೇಲೆ ಬರೋ ಹಕ್ಕಿಗಳಿಗಾಗಿ ಕಾಯ್ತಾ ಕೂತಿರಬೇಕೂಂತ ಹಂಬಲಿಸಕ್ಕೆ ಶುರುಮಾಡ್ತಿ ನೀನು. ಅದೇನು ಹೇಳಬೇಕೂಂತ ಇದ್ದೆ ಗೊತ್ತಾ ? ಹೀಗೇ ನಾನು ಯೋಚಿಸ್ತಾ ಇದ್ದೆ ! ನಿನಗೆ ಸ್ಟ್ರೋಕ್ ಆದಾಗ ನನಗೆ ಏನಾದರೂ ಅನ್ನಿಸಬೇಕಿತ್ತಲ್ಲ ಅಂತ. ಆದರೆ ನೋಡು ಈಗ ನನ್ನ

ಮನಸ್ಸಿಗೆ ಕುದುರೆ ಚಪಲ ಹತ್ತಿಕೊಂಡಿದೆ. ಯಾವಾಗಲೂ ಏನಾರೂ ಉದ್ರೇಕಬೇಕು ಅನ್ನಿಸತ್ತೆ. ಕುಡೀಲಿಕ್ಕೆ ಶುರುಮಾಡಿದ್ರೆ ದಿನವಿಡೀ ಕುಡೀತ ಕೂತಿರ್ತೀನಿ. ಇಲ್ಲ ಹೀಗೆ ಅಲೀಲಿಕ್ಕೆ ಶುರುಮಾಡ್ತೀನಿ. ನೋಡು – ಈಗ್ಲೇ ನೋಡು ನನ್ನ – ಹೇಗೆ ಮನಸ್ಸು ಅಲೀತಿದೆ ಅಂತ. ಈಗ ಯೋಚಿಸ್ತ ಯೋಚಿಸ್ತ ಏನೋ ಹೇಳಬೇಕೂಂತಿದ್ದಾಗ ಆ ನಾಲ್ಕು ಬೆರಳಿಗೂ ಉಂಗುರ ಹಾಕ್ಕೊಂಡವರು ಬಂದು ಬಿಟ್ರು. . . . ಅದೇನಿಲ್ಲ – ನೀನು ಹುಷಾರಾಗ್ತಿ ಅಂತ ಕಾಣಿಸುತ್ತೆ ನಂಗೆ – ಅದನ್ನೇ ಹೇಳಲಿಕ್ಕೆ ಹೋಗಿದ್ದೆ.'

ಕೊನೆಯ ವಾಕ್ಯವನ್ನು ಸಪ್ಪೆಯಾದ ಧ್ವನಿಯಲ್ಲಿ ಹೇಳಿದರು.

'ನನ್ನ ಸಮಾಧಾನಕ್ಕಲ್ಲವಲ್ಲ ನೀವು ಹೇಳೋದು ?'

ಮಹೇಶ್ವರಯ್ಯ ಕೃಷ್ಣಪ್ಪನನ್ನು ನೋಡುತ್ತ ಗಂಭೀರವಾಗಿ 'ಅಲ್ಲ' ಎಂದರು. ಸ್ವಲ್ಪ ತಡೆದು ಗೆಲುವಾಗಿ 'ನೋಡಯ್ಯಾ ಈ ಕುದುರೆ ವ್ಯವಹಾರದಲ್ಲಿ ಮಾತ್ರ ನಂದೇ – ನನಗೆ ಕಾಣಿಸಲ್ಲ: ಏನೂಂದ್ರೇ ಏನೂ ಕಾಣಿಸಲ್ಲ. ಒಟ್ಟಿನಲ್ಲಿ ಬುದ್ಧಿ ತೆಳಗಾಗಿಬಿಟ್ಟಿದೆ. ಈಗ ಆದ್ದು ಮುಂದಿನ ಕ್ಷಣ ಮರೆತು ಹೋಗಿರುತ್ತೆ.'

'ನೀವು ಇಲ್ಲೆ ಬಂದಿರಿ – '

'ನಿನ್ನ ಹೆಂಡತಿಗೆ ತೊಂದರೆಯಾಗಬಹುದು ಕಣೊ'

'ಬನ್ನಿ'

ಆಗಲೆಂದು ಮಹೇಶ್ವರಯ್ಯ ನಿಂತು –

'ಇವತ್ತು ನನ್ನ ಅದೃಷ್ಟ ಪರೀಕ್ಷೆ ಮಾಡ್ಕೋತಿದೀನಿ. ರಾತ್ರೆ ಬರ್ತೀನಿ' ಎಂದು ಹೋದರು.

ಕೃಷ್ಣಪ್ಪನಲ್ಲಿ ತುಂಬ ಲವಲವಿಕೆ ಮೂಡಿತು. ಖುಷಿಯಿಂದ 'ನಾಗೇಶಾ' ಎಂದು ಕರೆದ. ನಾಗೇಶ ಸಪ್ಪಗಿರೋದು ಕಂಡು 'ಯಾಕೋ' ಎಂದ. 'ಯಾಕಿಲ್ಲ ಗೌಡರೆ' ಎಂದದ್ದಕ್ಕೆ'ಹೇಳೋ' ಎಂದು ಒತ್ತಾಯ ಮಾಡಿದ.

'ಅದೇ ನನ್ನ ಅಕ್ಕ ಕ್ಲಾರ್ಕ್‍ಆಗಿದ್ದಳಲ್ಲ ಅವಳ ಕೆಲಸ ಹೋಯ್ತಂತೆ'

'ಅದಕ್ಯಾಕೆ ಯೋಚಿಸ್ತಿ. ವೀರಣ್ಣನಿಗೆ ಹೇಳಿ ಅವರ ಥಿಯೇಟರಿನಲ್ಲಿ ಕೊಡಿಸ್ತೀನಿ'

‘ನಿಮ್ಮ ಹತ್ರ ಇಂಥ ಕೆಲಸ ಮಾಡಿಸೋಕೆ ಇಷ್ಟವಿಲ್ಲ ನಂಗೆ ಗೌಡ್ರೆ’

‘ಭೇಷ್ ನಿಂಗೊಬ್ಬನಿಗಾದ್ರೂ ಹಾಗನ್ನಿಸತ್ತಲ್ಲ. ಗೌರಿ ದೇಶಪಾಂಡೆ ನಾಳೆ ರಾತ್ರೆ ಬರೋದು ಅಲ್ವೇನೊ?

‘ಹೌದು’

‘ಅವಳನ್ನೆಲ್ಲಿ ಇಳಿಸುವುದೆಂದು ಚಿಂತೆಯಾಯ್ತು. ಮನೆಯಲ್ಲೆ ಇಳಿಸಬಹುದು. ಅದರೆ ಸೀತೆ ರಂಪ ಮಾಡಿಯಾಳು. ಹೋಟಲಲ್ಲಿ ಒಬ್ಬಳೇ ಇರೂಂತ ಹೇಗೆ ಹೇಳೋದು? ಎಲ್ಲಿ ಇಳಿಸೋದು ಅವಳನ್ನ?’

‘ವೀರಣ್ಣನೋರ ಗೆಸ್ಟ್‌ಹೌಸ್‌ಇದೆಯಲ್ಲ ಗೌಡರೆ’

‘ನೋಡಿದೆಯಾ ಹೇಗೆ ಕ್ರಮೇಣ ನಾನು ವೀರಣ್ಣನೋರ ಬಲೇಲಿ ಸಿಕ್ಕಿಹಾಕಿಕೋತಿದೀನಿ ಅಂತ’.

‘ನಿಮ್ಮನ್ನ ಯಾರಿಗೆ ಕಟ್ಟಿಹಾಕಲಿಕ್ಕೆ ಸಾಧ್ಯ?’

‘ನಿಂಗೊತ್ತಿಲ್ಲ ಅಷ್ಟೆ - ಇವೆಲ್ಲ ನನ್ನ ಅವನತಿಯ ಚಿಹ್ನೆಗಳು.’

ನರ್ಸ್‌ಬಂದಳು. ವೀರಣ್ಣ ಒಬ್ಬಳು ಮೃದುವಾದ ಕಣ್ಣುಗಳ ಹುಡುಗಿಯನ್ನೇ ಗೊತ್ತು ಮಾಡಿದ್ದ. ಅವಳು ಸದ್ದುಗದ್ದಲವಿಲ್ಲದೆ ಕ್ಯಾನ್‌ವಾಸ್‌ಶೂಸಿನ ಮೇಲೆ ಓಡಾಡುತ್ತಾ ಕೃಷ್ಣಪ್ಪನ ಎಡಗೈ ಎಡಗಾಲುಗಳನ್ನು ನಾನಾ ವಿಧದಲ್ಲಿ ತಿಕ್ಕಿದಳು. ಪೆಟ್ಟಾಗದಂತೆ ಮೇಲಿಂದ ಕೆಳಕ್ಕೆ ಕೆಳಗಿನಿಂದ ಮೇಲಕ್ಕೆ ತಾಡನ ಮಾಡಿದಳು. ವೀಲ್‌ಚೇರನ್ನು ತಳ್ಳುತ್ತ ಎಷ್ಟು ಬೇಕೋ ಅಷ್ಟು ಮಾತಾಡಿ ನೆಮ್ಮದಿಯಾಗುವಂತೆ ಮಾಡಿದಳು.

ಕೃಷ್ಣಪ್ಪನಿಗೆ ಗೋಪಾಲರೆಡ್ಡಿಯ ಸಖ್ಯದಲ್ಲಿ ತನಗೆ ಒಂದಿಡೀ ವರ್ಷ ಜೊತೆಗಾತಿಯಾಗಿದ್ದ ಲೂಸಿನಾಳ ನೆನಪಾಗುತ್ತದೆ - ಮತ್ತೆ, ಮತ್ತೆ. ಲೂಸಿನಾ ದೆಹಲಿಯಲ್ಲಿ ನರ್ಸ್‌ಶಿಕ್ಷಣ ಪಡೆಯುತ್ತಿದ್ದಳು. ಅವಳ ಕಥೆ ದಾರುಣವಾಗಿತ್ತು. ಮಧ್ಯಮವರ್ಗದ ಮನೆ ಹುಡುಗಿ ಅವಳು. ವರ್ತಕನ ಮಗನೊಬ್ಬ ಅವಳನ್ನು ನಂಬಿಸಿ ಕಲ್ಕತ್ತದಿಂದ ದೆಹಲಿಗೆ ಕರೆದುಕೊಂಡು ಬಂದು ಮದುವೆಯಾಗುವೆನೆಂದು ಮೋಸಮಾಡಿ ತನ್ನ ಗೆಳೆಯರಲ್ಲಿ ಅವಳನ್ನು ಹಂಚಿಕೊಳ್ಳಲು ಪ್ರಯತ್ನಿಸಿದ್ದ. ಇದನ್ನು ಕೆಲವು ದಿನ ಸಹಿಸಿ, ಅದು ಅತಿರೇಕಕ್ಕೆ ಹೋದಾಗ ಅವನ ಬಂಧನದಲ್ಲಿದ್ದ ಲೂಸಿನಾ ಒಂದು ರಾತ್ರಿ ತಪ್ಪಿಸಿಕೊಂಡು ಎಲ್ಲಿ ಹೋಗುವುದೆಂದು ತಿಳಿಯದೆ ಪಾರ್ಲಿಮೆಂಟ್ ಸದಸ್ಯರ ನಿವಾಸವೊಂದರಲ್ಲಿ ಇಳಿದುಕೊಂಡಿದ್ದ ಗೋಪಾಲರೆಡ್ಡಿ ಕೃಷ್ಣಪ್ಪರ ಬಾಗಿಲು ತಟ್ಟಿದಳು. ಭೀತಳಾಗಿ ನಿಂತ ಹುಡುಗಿಯನ್ನು ಸಮಾಧಾನ ಪಡಿಸಿ ತಾವಿದ್ದ ಬಂಗಲೆಯ ರೂಮೊಂದರಲ್ಲಿ ಮಲಗುವಂತೆ ಹೇಳಿದ. ಲೂಸಿನಾ ಇಡೀ ರಾತ್ರೆ ಇಬ್ಬರಲ್ಲಿ ಒಬ್ಬ ತನ್ನ ಕೋಣೆಗೆ ಬರಬಹುದೆಂದು ಹೆದರಿಕೊಂಡು ಕಾದಿದ್ದಳು. ಬೆಳಗಾಯಿತು. ಅವಳು ಕೃತಜ್ಞಳಾಗಿ ಇವರನ್ನು ಹುಡುಕಿಕೊಂಡು ಡೈನಿಂಗ್ ಹಾಲಿಗೆ ಬಂದು ಅತ್ತಳು. ರಡ್ಡಿ

ಅವಳನ್ನು ನರ್ಸಿಂಗ್ ಕಾಲೇಜಿಗೆ ಸೇರಿಸಿದ. ಕ್ರಮೇಣ ಅವಳಿಗೆ ಕೃಷ್ಣಪ್ಪನ ಮೇಲೆ ಮನಸ್ಸಾಯಿತು. ಕೃಷ್ಣಪ್ಪನಿಗೂ ಅವಳೆಂದರೆ ಇಷ್ಟವಾಯಿತು. ಆದರೆ ರೆಡ್ಡಿಯ ಋಣದಲ್ಲಿದ್ದೇನೆಂಬ ಕಾರಣಕ್ಕಾಗಿ ಅವಳು ತನ್ನನ್ನು ಇಷ್ಟಪಡುವುದೊ ಎಂದು ಸಂಕೋಚವಾಗಿ ಅವನು ಆಕೆಯನ್ನು ದೂರವಿರಿಸುತ್ತಲೇ ಇದ್ದ. ರಜೆಯಲ್ಲಿ ಒಮ್ಮೆ ಅವಳು ಅವನಿಗೆ ಬರೆದು ಬೆಂಗಳೂರಿಗೆ ಬಂದಳು. ರೆಡ್ಡಿಯ ಬಂಗಲೆಯಲ್ಲಿ ಆಗ ಕೃಷ್ಣಪ್ಪ ವಾಸವಾಗಿದ್ದುದು. ಒಂದು ರಾತ್ರೆ ಲೂಸಿನಾ ಬಾಗಿಲನ್ನು ಮೆತ್ತಗೆ ತೆರೆದು ಕೃಷ್ಣಪ್ಪನ ಮಗ್ಗುಲಲ್ಲಿ ಬಂದು ಮಲಗಿದಳು.

'ಯಾಕಿದನ್ನ ನೀನು ಮಾಡ್ತಿದಿ?' ಎಂದು ಕೇಳಿದ.

'ನಿನ್ನ ಮೇಲೆ ಇಷ್ಟ ನನಗೆ. ಅಷ್ಟೂ ನಿನಗೆ ಗೊತ್ತಾಗಲ್ವಲ್ಲ?'

'ನನ್ನ ಮದುವೆಯಾಗ್ತೀಯೇನು ಹಾಗಾರೆ?'

'ಮುಂದೆ ಓದಕ್ಕೆ ಇಂಗ್ಲೆಂಡಿಗೆ ಹೋಗೋ ಆಸೆ ನನಗೆ. ನೀನು ಒತ್ತಾಯ ಮಾಡಿದ್ರೆ ಆಗ್ತೀನಿ.'

ಅವಳನ್ನು ತಬ್ಬಿಕೊಂಡ ಕೃಷ್ಣಪ್ಪನಿಗೆ ನಗು ಬಂತು.

'ಬೇರೆ ಹುಡುಗಿಯರ ಜೊತೆ ನಾನು ಮಲಗ್ತೀನಿಂತ ನಿನಗೆ ಗೊತ್ತಲ್ವ?'

'ಗೊತ್ತು, ಆದ್ರೆ ನಿನ್ನೆ ಬಂದಿದ್ದಳಲ್ಲ – ಅವಳೇನು ಚೆನ್ನಾಗಿದಾಳೇಂತ ನೀನು ಅವಳ ಜೊತೆ ಮಲಗಿದ್ದು?' ಮುನಿಸಿನಿಂದ ಲೂಸಿನಾ ಅವನ ಕೆನ್ನೆಗೆ ಹೊಡೆದಳು.

'ನೀನು ಮಹಡಿ ಮೇಲೆ ಮಲಗಿದ್ದೀಯಲ್ಲ – ನಿಂಗೆ ಗೊತ್ತಿರಲಿಲ್ಲ ಅಂತ ತಿಳ್ಕೊಂಡಿದ್ದೆ. ಇಷ್ಟು ಸಲಿಗೆಯಿಂದ ಯಾವ ಹುಡುಗಿಯೂ ಅವನನ್ನು ಮಾತಾಡಿಸಿದ್ದಿಲ್ಲ.

'ನಾನೇನೂ ಪೆದ್ದಲ್ಲ. ಈಗ ನಾನಿಲ್ಲಿ ಇರೋ ತನಕ ನೀನು ಯಾರನ್ನೂ ಹತ್ತಿರ ಸೇರಿಸ್ಬಾರ್ದು. ನಾನು ನರ್ಸಿಂಗ್ ಸೇರಿದ ಮೇಲೆ ನಿನ್ನ ಮೇಲೆ ಆಸೆಯಾದ ದಿನದಿಂದ ಯಾರನ್ನೂ ನನ್ನ ಹತ್ತಿರ ಸೇರಿಸಿಲ್ಲ. ಗೊತ್ತ?'

'ಗೊತ್ತು'

ಅವಳೂ ತನ್ನಿಂದ ಸುಖಪಡುವುದನ್ನು ಕಂಡಿದ್ದರಿಂದ ಅವನನ್ನು ಪಾಪಭಾವನೆ ಭಾಧಿಸಲಿಲ್ಲ. ಹಿಂದೆ ಹೆಣ್ಣಿನ ಸಂಗಕ್ಕೆ ಮುಂಚೆ ಅವನು ಚೆನ್ನಾಗಿ ಕುಡಿದಿರುತ್ತಿದ್ದ. ಮತ್ತಿನಲ್ಲಿ ತನ್ನ ದೇಹದ ಬಯಕೆಯನ್ನು ಕಳೆದುಕೊಂಡು ಬೆಳಿಗ್ಗೆ ರಾತ್ರಿಯ ವ್ಯಭಿಚಾರವನ್ನು

ಮರೆಯಲೆಂದೇ ತೀವ್ರವಾಗಿ ರೆಡ್ಡಿಯ ಜೊತೆ ಏನೇನೋ ಅಮೂರ್ತ ವಿಷಯಗಳನ್ನು ಚರ್ಚಿಸಲು ಪ್ರಯತ್ನಿಸುತ್ತಿದ್ದ. ಆದರೆ ಲೂಸಿನಾ ಬರಿ ಇರುವುದೇ ಸುಖವೆನ್ನಿಸಿದ್ದಳು. ತನ್ನ ಗಾಂಭೀರ್ಯವನ್ನು ಸಂಭೋಗದಲ್ಲೂ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಹಿಂದಿನ ತಾನು ಎಂಥ ಹಾಸ್ಯಾಸ್ಪದ ವ್ಯಕ್ತಿಯೆಂದು ಈಗ ತಿಳಿಯತೊಡಗಿತು. ಅವಳ ಮೃದುವಾದ ಬೆಚ್ಚಗಿನ ಯೋನಿ, ಪುಟ್ಟಗಿದ್ದರೂ ದೃಢವಾಗಿದ್ದ ಮೊಲೆಗಳು, ಸ್ವಲ್ಪ ದಪ್ಪವಾದ ತುಟಿಗಳು, ಎಣ್ಣೆಗೆಂಪು ಬಣ್ಣದ ಚರ್ಮ, ಅವಳ ಅಂಡಿನ ಮೇಲಿದ್ದ ಮಚ್ಚೆ, ಅವಳ ಪ್ರಶಾಂತ ಕಣ್ಣುಗಳು, ಬೆನ್ನಿಡೀ ಚೆಲ್ಲುವಷ್ಟು ಉದ್ದದ ಅವಳ ಕಪ್ಪು ಕೂದಲು – ಎಲ್ಲವನ್ನೂ ವಾರಂಗಲ್ ಠಾಣೆಯಲ್ಲಿ ಅವನು ಧ್ಯಾನಮಾಡುತ್ತಿದ್ದ ದೇವಿಯ ನಖಶಿಖಾಂತದ ವರ್ಣನೆಯ ಜೊತೆ ಹೋಲಿಸುವನು. ಸಂಸ್ಕೃತದ ಆ ಶ್ಲೋಕಗಳನ್ನು ಮೃದುವಾಗಿ ಹಾಡಿ ಅವಳಿಗೆ ಮೋಜೆನ್ನಿಸುವಂತೆ ಮಾಡುವನು. ಸಂಭೋಗವೆಂದರೆ ಅವಸರದ ವಿಸರ್ಜನೆಯೆಂದು ತಿಳಿದಿದ್ದ ಕೃಷ್ಣಪ್ಪನಿಗೆ ದೇಹದ ಎಲ್ಲ ಭಾಗಗಳೂ ಅಪೇಕ್ಷೆ, ಉದ್ರೇಕ, ತಣಿವುಗಳ ಬುಗ್ಗೆಯೆಂಬುದನ್ನು ಲೂಸಿನಾ ಕಲಿಸಿದಳು. ಸಂಭೋಗ ಮೈಥುನಾವಾಯಿತು. ಎಷ್ಟೆಂದರೆ ಅಷ್ಟು ವಿಸ್ತರಿಸುವ ಹಾಡಾಯಿತು.

ಆದರೆ ಕ್ರಮೇಣ ಅವಳನ್ನು ತಾನು ಬಿಟ್ಟಿರಲಾರೆ ಎಂಬ ವ್ಯಾಮೋಹ ಹುಟ್ಟಿಕೊಂಡಿತು. ಅದರಿಂದ ಅವನ ಹಿಗ್ಗಿನ ತೀವ್ರತೆಯೂ ಇಳಿಯುತ್ತ ಬಂತು. ಅವಳು ಯಾಕೆ ತನ್ನ ತಂದೆಯನ್ನು ದ್ವೇಷಿಸುತ್ತಾಳೆಂದು ಅವನು ಕುತೂಹಲ ಬೆಳೆಯುತ್ತ ಹೋದಂತೆ ಇದರಿಂದ ಅವಳಿಗೆ ಕರಕರೆಯಾಗುವುದನ್ನು ಗಮನಿಸಿದ. ಒಂದು ದಿನ ಅವಳು ತನ್ನ ತಂದೆಯೇ ತನ್ನನ್ನು ಬಯಸುತ್ತಿದ್ದ ಅದರಿಂದಾಗಿ ತಾಯಿ ತನ್ನನ್ನು ದ್ವೇಷಿಸುತ್ತಿದ್ದಳು – ಮನೆ ನರಕವಾಗತೊಡಗಿತ್ತು ತನಗೆ ಎಂದು ಹೇಳಿದಳು. ಅವಳ ತಂದೆ ಹಾಗಾದರೆ ಅವಳ ಜೊತೆ ಮಲಗಿದ್ದನೊ? ಅದನ್ನು ಕೇಳುವುದು ಹೇಗೆ? ಈ ಬಗೆಯಲ್ಲಿ ಕೃಷ್ಣಪ್ಪ ಕೊರಗುವುದು ಕಂಡು ಲೂಸಿನಾ,

‘ನೀನು ಬೇರೆ ಥರದ ಗಂಡಸೂಂತ ತಿಳಿದಿದ್ದೆ’ ಎಂದು ನಿರಾಶೆಯಲ್ಲಿ ಒಮ್ಮೆ ಹೇಳಿದಳು.

‘ಬೇರೆ ಥರಾ ಅಂದ್ರೆ. . . .’

‘ಈ ಕ್ಷಣ ನಿನಗೆ ಸಾಲದ? ನನ್ನ ಭೂತ ಯಾಕೆ ನಿನಗೆ?’

‘ನಿನ್ನ ನಾನು ಮದುವೆಯಾಗಬೇಕು – ಅದಕ್ಕೇ’

‘ನಾನು ಮದುವೇಂದ್ರೆ ದ್ವೇಷಿಸುತ್ತೇನೆ’

‘ಗೌರಿನೂ ಹೀಗೇ ಹೇಳ್ತ ಇದ್ದಳು’, ಕೃಷ್ಣಪ್ಪ ಚಿಂತಾಕ್ರಾಂತನಾಗಿ ಮಾತಾಡಿದರೆ ಲೂಸಿನಾ ಇನ್ನೇನೋ ಭಾವಿಸುವಳು.

‘ಅವಳಿಗೆ ಹೀಗೆಲ್ಲಾ ನಿನ್ನ ಜೊತೆ ಮಾಡ್ಲಿಕ್ಕೆ ಬರ್ತಿತ್ತ?’

ಲೂಸಿನಾಳ ಮೊಗ್ಗಿನಂತಹ ಮೊಲೆಗಳಿಗೆ ಮುತ್ತಿಡುತ್ತ ಕೃಷ್ಣಪ್ಪ ಅವಳ ಮಾತಿನ ಧಾಟಿಯಲ್ಲಿದ್ದ ತುಂಟತನವನ್ನು ಕಂಡು,

‘ನೀನು ಗೌರಿ ಹಾಗೇನೇ. ಆದರೆ ಅವಳು ಸೀರಿಯಸ್ಸಾಗಿಯೂ ಇರ್ತ ಇದ್ದಳು. ನೀನು ಮಾತ್ರ ಚೆಲ್ಲು ಹುಡುಗಿ’ ತನಗಾಗಿದ್ದ ನಿರಾಶೆಯನ್ನು ಮರೆಯಲು ಕೃಷ್ಣಪ್ಪ ಪ್ರಯತ್ನಿಸುತ್ತಿದ್ದ.

‘ಇದನ್ನೆಲ್ಲ ಮಾಡ್ತಾ ರಾಜಕೀಯಾನ್ನೂ ಚರ್ಚಿಸೋ ಹುಡುಗಿ ನಿನಗೆ ಬೇಕ?’

‘ನಾನು ಹೇಳೋದು ನಿನಗೆ ಅರ್ಥವಾಗಲ್ಲ.’

ಈ ಲೂಸಿನಾ ಇದನ್ನೆಲ್ಲ ಎಲ್ಲಿ ಕಲಿತಳೆಂದು ಕೃಷ್ಣಪ್ಪನಿಗೆ ಅಸೂಯೆಯಾಗುತ್ತದೆ ಯಾವ ಗಂಡು ಇವಳಿಗಿದನ್ನು ಕಲಿಸಿದ?

‘ಮದುವೆ ಮಾತು ನೀನು ಶುರುಮಾಡಿದ ಮೇಲೆ ನಿನ್ನ ದೇಹದಲ್ಲಿದ್ದ ಪುಳಕವೆಲ್ಲ ಬತ್ತಿ ಹೋಯ್ತು, ನಂದೂ ಹೋಯ್ತು.’

ಲೂಸಿನಾ ಎದ್ದು ಶವರ್ ತೆಗೆದುಕೊಳ್ಳಲು ಹೋಗುವಳು. ಕೃಷ್ಣಪ್ಪನೂ ಅವಳ ಹಿಂದೆ ಹೋಗಿ ಅವಳ ಜೊತೆ ಶವರ್ನ ತಂಪಾದ ನೀರಲ್ಲಿ ನಿಂತು ಅವಳ ಮೈಗೆ ಸೋಪನ್ನು ಬಳಿಯುವನು. ಮತ್ತೆ ಚುರುಕಾಗುವನು. ಇವಳ ನಿಸ್ಸಹಾಯಕತೆಯನ್ನು ತಾನು ದುರುಪಯೋಗಪಡಿಸಿಕೊಳ್ಳುತ್ತಿದ್ದೇನೆಯೆ ಎಂಬ ಸಂಶಯವನ್ನು ತಳ್ಳಲು ಅವಳನ್ನು ಮುತ್ತಿಡುತ್ತ ಆರಾಧಿಸುವನು. ಈ ಹೆಣ್ಣು ಗಂಡಿನ ಸಂಬಂಧದಲ್ಲಿ ಸಮತೋಲ ಸಾಧ್ಯವೇ ಇಲ್ಲವೆ ಎಂದು ಯೋಚಿಸುತ್ತ, ಅಣ್ಣಾಜಿಯ ವಿವರಣೆಯನ್ನು ನೆನೆಯುವನು. ತನ್ನನ್ನು ಪ್ರವೇಶಿಸಿದ ಕೃಷ್ಣಪ್ಪ ಬೇರೇನೋ ಯೋಚಿಸುತ್ತಿರುವುದು ಕಂಡು ಲೂಸಿನಾ ಸಿಟ್ಟಾಗುವಳು. ಈ ಪ್ರೀತಿಯನ್ನು ಮೀರಿದ್ದು ತನ್ನಲ್ಲಿದೆ ಎಂದು ಲೂಸಿನಾಗೆ ತಿಳಿಯುವಂತೆ ಮಾಡುವ ದಾರಿ ಕಾಣದೆ ಕೃಷ್ಣಪ್ಪ ತಬ್ಬಿಬ್ಬಾಗುವನು.

ನಾನು ಅಣ್ಣಾಜಿಗೆ ಈಗ ನಿಜವಾಗಿ ಹತ್ತಿರವಾದೆ ಎಂದು ಕೃಷ್ಣಪ್ಪನಿಗೆ ಆ ದಿನಗಳಲ್ಲಿ ಖುಷಿಯೂ ಇತ್ತು. ಆದರೆ ಲೂಸಿನಾ ಎಷ್ಟು ಸಂಭ್ರಮದಲ್ಲಿ ತನ್ನ ದೇಹವನ್ನು ಹಾಡಿಸಿದ್ದಳೊ ಅಷ್ಟೇ ಸಂಭ್ರಮದಲ್ಲಿ ಇಂಗ್ಲೆಂಡಿಗೆ ಹೋದಳು. ಒಂದು ವರ್ಷದ ನಂತರ ತಾನು ಮದುವೆಯಾಗಿರುವುದಾಗಿ ಬರೆದು ತಮ್ಮಿಬ್ಬರ ಸಂಬಂಧಗೊತ್ತಿದ್ದ ತಾನು ಮದುವೆಯಾದ ಡಾಕ್ಟರ್ ಎಡ್ಡಿಗ್ರೀನೋ ಎಷ್ಟು ಉದಾರಿಯೆಂದು ಹೊಗಳಿದಳು. ಕೃಷ್ಣಪ್ಪ ಇದನ್ನೆಲ್ಲ ನೆನೆಯುತ್ತ ಚಕಿತನಾಗಿ ಶುದ್ಧ ಪ್ರತಿವ್ರತೆಯಾದ ಸೀತೆ ಎಷ್ಟು ಬರಡೆಂದು ಕೊರಗುತ್ತಾನೆ. ಪ್ರಾಯಶಃ ಮದುವೆಯಾಗಿದ್ದರೆ ಲೂಸಿನಾಳೂ ಹೀಗೆ ಆಗುತ್ತಿದ್ದಳೊ ಏನೊ – ಹೇಳುವುದು ಹೇಗೆ?

ನರ್ಸಿನ ಕಡೆ ನೋಡುತ್ತ’ನಿಮ್ಮ ಹೆಸರು? ಮರತೇಬಿಟ್ಟೆ’ ಎನ್ನುತ್ತಾನೆ.

‘ಜ್ಯೋತಿ’ – ಅವಳು ಮುಗುಳ್ನಗುತ್ತ ಹೇಳುತ್ತಾಳೆ.

‘ನಿಮಗೆ ಮದುವೆಯಾಗಿದೆಯೇ? ನನ್ನ ಕುತೂಹಲವನ್ನ ಕ್ಷಮಿಸಿ’

ಹೀಗೆ ಹೆಣ್ಣಿನ ಹತ್ತಿರ ಸಭ್ಯವಾಗಿ ಮಾತಾಡುವ ಕಲೆಯನ್ನು ಕೃಷ್ಣಪ್ಪ ಗೋಪಾಲರೆಡ್ಡಿಯಿಂದ ಕಲಿತಿದ್ದು. ಸಭ್ಯತನದಲ್ಲಿ ತೀವ್ರತೆ ಕುಗ್ಗುತ್ತದೆ ಎಂಬ ಅವನ ಭಾವನೆಯನ್ನು ಹಾಸ್ಯಮಾಡಿ ಮಾಡಿ ಗೋಪಾಲರೆಡ್ಡಿ ಹೆಚ್ಚು ಕಮ್ಮಿ ಹೋಗಲಾಡಿಸಿದ್ದ.

‘ಇಲ್ಲ ಆಗಬೇಕೂಂತ ಇದೀನಿ, ನನ್ನ ಬಾಯ್‌ಫ್ರೆಂಡ್ ಎಂಜಿನಿಯರ್ ಪರೀಕ್ಷೆ ಮುಗಿಸಿ ಎರಡು ವರ್ಷಗಳಿಂದ ಕೆಲಸಕ್ಕಾಗಿ ಅಲೀತ ಇದಾನೆ. ಐದು ವರ್ಷಗಳಿಂದ ನಾವು ಕಾದಿದ್ದೇವೆ. ಕೆಲಸ ಸಿಕ್ಕದೆ ಮದುವೆಯಾಗಲ್ಲ ಅಂತಾನೆ ಅವನು.’

ಹೆಣ್ಣು ಎಷ್ಟೊಂದು ಬೇರೆ ಬೇರೆ ರೀತಿಯಲ್ಲಿ ಈ ದೇಹಕ್ಕೆ ಜೀವ ಸಂಚಾರ ತರುತ್ತಾಳೆಂದು ಆಶ್ಚರ್ಯಪಡುತ್ತ ಕೃಷ್ಣಪ್ಪ ಜ್ಯೋತಿಯ ಚಿಕಿತ್ಸಕ ಸ್ಪರ್ಶಕ್ಕೆ ಮೈಯನ್ನು ಒಡ್ಡುತ್ತಾನೆ.

‘ನಾನು ಅವನಿಗೆ ಕೆಲಸ ಕೊಡಿಸಲಿಕ್ಕೆ ಪ್ರಯತ್ನ ಮಾಡಲ?’

ಬೆರಳುಗಳನ್ನು ಮೃದುವಾಗಿ ಮಡಿಸಲು ಕಲಿಸುತ್ತಿದ್ದ ಜ್ಯೋತಿಯ ಮುಖ ಖುಷಿಯಿಂದ ಅರಳಿದ್ದನ್ನು ಕಂಡು ಕೃಷ್ಣಪ್ಪನಿಗೆ ಅವಳ ಬಗ್ಗೆ ತೀವ್ರವಾದ ವಾತ್ಸಲ್ಯ ಮೂಡುತ್ತದೆ.

‘ವೀರಣ್ಣ ಅಂತ ಒಬ್ಬ ದೊಡ್ಡ ಕಾಂಟ್ರಾಕ್ಟರ್ ನನ್ನ ಸ್ನೇಹಿತರಿದ್ದಾರೆ. ಅವರೇ ನಿಮ್ಮನ್ನ ಗೊತ್ತು ಮಾಡಿದ್ದು. ಅವರ ಹತ್ರಾನೇ ನಿಮ್ಮ ಬಾಯ್‌ಫ್ರೆಂಡಿಗೆ ಕೆಲಸ ಕೊಡಿಸ್ತೇನೆ – ಆಗಬಹುದ’

ಜ್ಯೋತಿಯ ಕಣ್ಣುಗಳು ಒದ್ದೆಯಾಗುತ್ತವೆ!

‘ಅವನ ಕಾನ್ಫಿಡೆನ್ಸೇ ಹೊರಟು ಹೋಗಿದೆ ಗೊತ್ತ ಕೆಲಸ ಸಿಗ್ದೆ? ತಿಂಗಳಿಗೆ ಮುನ್ನೂರಾದರೂ ಸಾಕು ನಮಗೆ, ದಯವಿಟ್ಟು. . . .’

ಕೃಷ್ಣಪ್ಪ ಅವಳ ಮುಂದಿನ ಮಾತನ್ನು ತಡೆಯುತ್ತಾನೆ.

ನಿನ್ನ ಸಂಗದಲ್ಲಿ ಅವನ ದೇಹ ಅರಳುವಂತಾಗಲಿ ಎಂದು ಮನಸ್ಸಲ್ಲೇ ಹಾರೈಸುತ್ತಾನೆ. ಕಾಮದ ಸಂದರ್ಭದಲ್ಲಿ ಇನ್ನೊಬ್ಬ ಗಂಡೂ ಸುಖಪಡಬೇಕೆಂದು ತನಗೀತ ಹಠಾತ್ತನೆ ಅನ್ನಿಸಿದ್ದಕ್ಕಾಗಿ ಚಕಿತನಾಗುತ್ತಾನೆ. ಈ ತನಕ ಅವನು ಬೇರೊಬ್ಬ ಕಾಮದಲ್ಲಿ ಸಾರ್ಥಕವಾಗಬೇಕೆಂಬ ಆಸೆ ಮೂಡಲಾರದಂಥ ಅಸೂಯೆ ತನ್ನಲ್ಲಿನ್ನೂ ಉಳಿದಿರಬಹುದು ಎಂದುಕೊಂಡಿದ್ದ. ಆದರೆ ಈಗ ತನ್ನ ಎದುರು ಸುಂದರವಾಗಿ ನಿಂತ ಹೆಣ್ಣು ಇನ್ನೊಬ್ಬನಿಂದ ಸುಖಪಡಲೆಂದು ಆಸೆ ತನ್ನಲ್ಲಿ ಉಕ್ಕಿತೆಂದು ಸಂತೋಷಪಟ್ಟ.

***

ಅವತ್ತು ರಾತ್ರೆ ಮಹೇಶ್ವರಯ್ಯ ಮನೆಗೆ ಬಂದವರು ಊಟ ಬೇಡವೆಂದು ಮುಸುಕು ಹೊದ್ದು ಮಲಗಿದ್ದರು. ನಾಗೇಶನಿಂದ ವೀಲ್‌ಚೇರನ್ನು ತಳ್ಳಿಸಿಕೊಂಡು ಅವರನ್ನು ಎಬ್ಬಿಸಿದ. ಮಹೇಶ್ವರಯ್ಯ ಕುಡಿದಿದ್ದರು. ಅವರ ಕಣ್ಣುಗಳು ಕೆಂಪಾಗಿದ್ದವು. ಮುಖ ಕಳೆಗುಂದಿತ್ತು. ಬೆಳಿಗ್ಗೆಯೇ ಅವರ ಕೈಗಳು ನಡುಗುವುದನ್ನು ಕೃಷ್ಣಪ್ಪ ಗಮನಿಸಿದ್ದ.

'ಏನು ವಿಷಯ? ಯಾಕೆ ಹೀಗಾಗಿದ್ದೀರಿ ನೀವು?' ಎಂದ.

ಅವರಿಗೆ ಕೇಳಿದ ಪ್ರಶ್ನೆ ತಾನೇ ಕೇಳಿಕೊಂಡ ಪ್ರಶ್ನೆ ಎನ್ನಿಸುವಂಥ ದಾಟಿಯಲ್ಲಿ ಕೃಷ್ಣಪ್ಪ ಮಾತಾಡಿದ್ದ. ಸಹಾನುಭೂತಿ ಕನಿಕರಗಳ ಧಾಟಿಯಲ್ಲಿ ಅವರ ಜೊತೆ ಮಾತಾಡುವುದು ಕೃಷ್ಣಪ್ಪನಿಗೆ ಸಾಧ್ಯವೇ ಇರಲಿಲ್ಲ. ಅಂಥ ಭಾವನೆಗಳನ್ನು ತನ್ನಲ್ಲಿ ಉಂಟುಮಾಡುತ್ತಿದ್ದೇನೆಂದು ಮಹೇಶ್ವರಯ್ಯ ತಿಳಿದರೆ ಅವರಿಗೆ ನೋವಾಗುತ್ತದೆಂದು ಕೃಷ್ಣಪ್ಪನಿಗೆ ಗೊತ್ತು. ತನ್ನೆದುರು ಅವರು ಇದರಿಂದ ಸಣ್ಣವರಾದಂತೆ ಎಂಬುದೂ ಅಲ್ಲ ಇದಕ್ಕೆ ಕಾರಣ. ತನಗಿರುವಂತೆ ಮಹೇಶ್ವರಯ್ಯನಿಗೆ ತಾನು ಯಾವಾಗಲೂ ಗಟ್ಟಿ. ದೃಢ ಎಂದು ತೋರಿಸಿಕೊಳ್ಳುವ ಅಗತ್ಯವಿರಲಿಲ್ಲ. 'ಬೆಟ್ಟದಡಿ ಹುಲ್ಲಾಗು' ಎನ್ನುವ ಮಂಕುತಿಮ್ಮನ ಕಗ್ಗದ ಸಾಲು ಅವರಿಗೆ ತುಂಬ ಪ್ರಿಯವೆಂದು ಕೃಷ್ಣಪ್ಪನಿಗೆ ಗೊತ್ತು. ಯಾರ ಕಣ್ಣಿಗೂ ಬೀಳದಂತೆ ಪುಟ್ಟಗೆ, ಸಣ್ಣಗೆ, ಯಾವ ಸ್ಪಷ್ಟ ಬಣ್ಣವೂ ಇಲ್ಲದೆ ತನ್ನೊಳಗೇ ಹಾಡಿಕೊಳ್ಳುತ್ತ ಇರುವ ಹಕ್ಕಿಯಂತೆ ಇರಬೇಕೆಂಬುದು ಅವರ ನಿಲುವು. ಯಕ್ಷಗಾನದ ಕೋಡಂಗಿಯಂತೆ ಬಳಕುತ್ತ, ಬಾಗುತ್ತ, ಲಾಗ ಹಾಕಿ ನಗಿಸುತ್ತ ಕೊಬ್ಬಿದವನ ಎದುರು ಕಣ್ ಕಣ್ ಬಿಡುತ್ತ ತನ್ನ ಬಳಗನ್ನು ರಕ್ಷಿಸಿಕೊಳ್ಳಬೇಕೆಂಬ ಜೀವನ ಕಲೆಯ ತತ್ತ್ವ ಅವರದು. ವಾರಂಗಲ್ ಠಾಣೆಯಲ್ಲಿ ದಪ್ಪಮೋರೆಯ ಅಧಿಕಾರಿ ಕೃಷ್ಣಪ್ಪನ ಬಿಡುಗಡೆಯನ್ನು ಮುಂದೂಡಲು ಏನೇನೋ ನೆವಗಳನ್ನೊಡ್ಡಿದಾಗ ಅವನಿಗೆ ಹ್ಯಾಪಮೋರೆಯಲ್ಲಿ ಕೈಮುಗಿದು ತಾನೊಬ್ಬ ಕ್ಷುದ್ರಜಂತು ಎಂಬ ಭಾವನೆ ಹುಟ್ಟಿಸಿ ಅವನನ್ನಿಷ್ಟು ಕೊಬ್ಬಿಸಿ ತೃಪ್ತಿಪಡಿಸಿ ಕೃಷ್ಣಪ್ಪನನ್ನು ಬಿಡಿಸಿಕೊಂಡಿದ್ದರಂತೆ. ಠಾಣೆಯ ಅನುಭವ ಕೃಷ್ಣಪ್ಪನನ್ನು ಮಂಕಾಗಿಸಿದ್ದ ದಿನಗಳಲ್ಲ ದಪ್ಪಮೋರೆಯ ಅಧಿಕಾರಿಯನ್ನು ರಾಕ್ಷಸನನ್ನಾಗಿಯೂ, ತನ್ನನ್ನು ವಿದೂಷಕನನ್ನಾಗಿಯೂ ಮಾಡಿಕೊಂಡು ತಾನು ಉಪಾಯದಲ್ಲಿ ಅವನನ್ನು ಗೆದ್ದುದನ್ನು ಯಕ್ಷಗಾನದ ರೀತಿಯಲ್ಲಿ ಅಭಿನಯಿಸಿ ತೋರಿಸಿ ಕೃಷ್ಣಪ್ಪನನ್ನು ನಗಿಸಿದ್ದರು. ಕೃಷ್ಣಪ್ಪನ ಮೂಲದಲ್ಲಿ ಆತ್ಮಾಭಿಮಾನವನ್ನು ನಾಶಮಾಡಲು ಪ್ರಯತ್ನಿಸಿದ್ದ ಕ್ರೌರ್ಯ ಮಹೇಶ್ವರಯ್ಯನ ಅಭಿಪ್ರಾಯದಲ್ಲಿ ಕಾಲಾನುಕಾಲದಿಂದಲೂ ಉಬ್ಬುತ್ತ ಹೋಗುವುದರಿಂದಲೇ ಒಡೆಯುವ ಒಂದು ರಾಕ್ಷಸ ಬಣ್ಣದ ವೇಷವಾಗಿ ಮಾತ್ರ ಕಂಡು, ಕೃಷ್ಣಪ್ಪ ತನ್ನ ಜೀವದ ಸೂಕ್ಷ್ಮ ಬೇರುಗಳಿಗಾಗಿದ್ದ ಆಘಾತದಿಂದ ಚೇತರಿಸಿಕೊಂಡಿದ್ದ. ಮಹೇಶ್ವರಯ್ಯ ಉಮೇದು ಬಂದಾಗ ಮಾಡುವ ಈ ವಿದೂಷಕ ಅಭಿನಯ ಕಂಡು ಗೋಪಾಲರೆಡ್ಡಿ ಕೃಷ್ಣಪ್ಪನಿಗೆ ಹೇಳಿದ್ದ: 'ಕೋಡಂಗಿ ನೋಡು – ಹೇಗೆ ನೀನು ಹೇಳೋ ಒಳಗೆ ಉರಿಯೋ ದೀಪಾನ ಉಳಿಸಿಕೋತಾನೆ! ಅಂದ ಹಾಗೆ ನಮ್ಮೂರಿನ ರೈತರಲ್ಲೂ ಈ ಗುಣ ಕಂಡಿದೀನಿ ನಾನು. ನನ್ನ ಅಪ್ಪನ ಕಣ್ಣಿಗೇ ಬೀಳದಂತೆ ಇದ್ದು ಬಿಡ್ತಾರೆ. ಬಿದ್ದರೂ ತಾವು ಅಲ್ಪರು ಅನ್ನೋ ಹಾಗೆ ನಟಿಸ್ತಾರೆ. . . .' ಕೃಷ್ಣಪ್ಪ ಈ ವಿಧಾನವನ್ನು ಒಪ್ಪುವುದಿಲ್ಲ. ಅವನ ಮನೋಧರ್ಮಕ್ಕೆ ಅದು ವಿರುದ್ಧವಾದ್ದು.

ಮಹೇಶ್ವರಯ್ಯ ಸೋಲುವರಲ್ಲ ಎಂದು ಕೃಷ್ಣಪ್ಪ ತಿಳಿದಿದ್ದ. ಖಾಹಿಲೆಯಿಂದ ಮಲಗಿದ ಮೇಲೆ ತನ್ನ ಹಾದಿ

ದುರ್ಗಮವೆನ್ನಿಸತೊಡಗಿದ್ದರಿಂದ ಮಹೇಶ್ವರಯ್ಯನೂ ಹೀಗೆ ಕಳೆಗುಂದಿರುವುದು ಅವನಿಗೆ ಸಮಸ್ಯೆಯಾಗಿತ್ತು. ಆದ್ದರಿಂದ ಮಹೇಶ್ವರಯ್ಯನನ್ನು ಅವನು ಪ್ರಶ್ನಿಸಿದಾಗ ಅವರಿಗೆ ತಮ್ಮ ಸ್ಥಿತಿಯ ಮೇಲೆ ಇನ್ನೂ ಪೂರ್ಣ ಸ್ವಾಮ್ಯವಿದೆಯೆಂದು ತಿಳಿದಿದ್ದ.

ಮಹೇಶ್ವರಯ್ಯ ಎದ್ದು ಕೂತು ಸ್ವಲ್ಪ ಯೋಚಿಸಿ ಹೇಳಿದರು.

'ಬೇಡ ನಿನಗೆ ಹೇಳಬಾರದು ನಾನು. ನಿನಗದರಿಂದ ತೊಂದರೆಯುಂಟು.'

ಕೃಷ್ಣಪ್ಪನಿಗೆ ಥಟ್ಟನೇ ಮಹೇಶ್ವರಯ್ಯ ಅಸಹಾಯಕರಾಗಿದ್ದರೆಂದು ಗೊತ್ತಾಯಿತು. ತನ್ನ ಸಹಾಯ ಅವರಿಗೆ ಅಗತ್ಯವಿದ್ದರೂ ಕೇಳುತ್ತಿಲ್ಲ. ಇದರಿಂದ ಅವನಿಗೆ ಅವಮಾನವಾದಂತೆ ಎನ್ನಿಸಿತು. ಸಿಟ್ಟುಬಂತು.

'ನನಗೆ ಅವಮಾನವಾಗುವಂತೆ ಮಾಡ್ತಿದೀರಿ ನೀವು'

ಮಹೇಶ್ವರಯ್ಯ ತಲೆಯಲ್ಲಾಡಿಸುತ್ತ ಕನಿಕರದಿಂದ ಅವನನ್ನು ನೋಡುತ್ತ ಹೇಳಿಕೊಂಡರು.

ಈಚೀಚೆಗೆ ಅವರಿಗೆ ಜೂಜಿನ ಉದ್ರೇಕವಿಲ್ಲದೆ ಬದುಕುವುದೇ ಸಾಧ್ಯವಾಗುತ್ತಿರಲಿಲ್ಲ. ದೇವಿಯ ಪೂಜೆಗೆ ಎಷ್ಟೋ ಬಾರಿ ಕೂತು ನೋಡಿದರು. ಓಡುವ ಕುದುರೆಯೇ ಅವರಿಗೆ ಕಾಣುವುದು. ತಮಗಿದ್ದ ಆಸ್ತಿಯೆಲ್ಲ ಇದರಿಂದ ಕರಗಿತು. ಜೀವನ ದುಸ್ತರವಾಗುತ್ತ ಹೋಯಿತು. ಮೊನ್ನೆ ಯಾರ್ಯಾರೋ ಮಿತ್ರರಿಂದ ಹತ್ತುಸಾವಿರ ರೂಪಾಯಿ ಸಾಲ ಪಡೆದು ಬಂದರು. ತಾನು ಕಳಕೊಂಡದ್ದನ್ನೆಲ್ಲ ಗೆಲ್ಲುವೆನೆಂದು ಖಾತ್ರಿಯಾಗಿ ನಂಬಿ ಜೂಜಾಡಲು ಬಂದಿದ್ದರು. ಆದರೆ ತಂದಿದ್ದ ಹಣವನ್ನೆಲ್ಲ ಕಳೆದುಕೊಂಡರು.

'ಅಷ್ಟೇನಾ ? ನಿಮಗೆ ಆ ಹತ್ತು ಸಾವಿರ ನಾನು ಕೊಡ್ತೇನೆ ?'

ಕೃಷ್ಣಪ್ಪನಿಗೆ ತಾನಿಷ್ಟು ಮಾಡಬಹುದೆಂದು ತುಂಬ ಖುಷಿಯಾಗಿತ್ತು. ಮಹೇಶ್ವರಯ್ಯ ತನ್ನ ಮೇಲೆ ಸುರಿದ ಹಣಕ್ಕೆ ಲೆಕ್ಕವಿರಲಿಲ್ಲ. ಅವನು ಈ ತನಕ ಅವರಿಗೆ ಒಂದೇ ಒಂದು ಕಾಸು ಕೊಟ್ಟಿರಲಿಲ್ಲ.

'ಕೊಡ್ತೀಯಾಂತ ನನಗೆ ಗೊತ್ತು. ಆದರೆ ಈ ಹಣಾನ್ನೂ ನಾನು ನಾಳೆ ಜೂಜಾಡ್ತೀನಲ್ಲ ?'

'ಆಡಿ. ನೀವು ಗೆಲ್ಲಲೂಬಹುದಲ್ಲ ?'

ಮಹೇಶ್ವರಯ್ಯನ ಕಣ್ಣುಗಳು ಭರವಸೆಯಲ್ಲಿ ಹೊಳೆದವು!

‘ಹೌದು. ಆದರೆ ಸೋಲಲೂಬಹುದು – ’

‘ಸೋಲಿ – ’ ಕೃಷ್ಣಪ್ಪ ನಗುತ್ತ ಹೇಳಿದ.

‘ಇಲ್ಲ – ಧಾರವಾಡದ ಹತ್ತಿರ ಒಂದು ಹಳ್ಳೀಲಿ ನನಗೆ ಸ್ವಲ್ಪ ತೋಟವಿದೆ. ಒಂದು ಗುಡಿಸಲಿದೆ. ಅಲ್ಲಿ ತನ್ನ ಉಳಿದ ಕಾಲವನ್ನು ಕಳೆಯೋಣ, ಈ ಜೂಜನ್ನು ಬಿಟ್ಟುಬಿಡೋಣ ಅಂತಿದ್ದೆ – ’

‘ನಾಳೆ ಸೋತರೆ ಹಾಗೇ ಮಾಡಿ – ’

ಮಹೇಶ್ವರಯ್ಯ ತುಂಬ ಗೆಲುವಾಗಿಬಿಟ್ಟಿದ್ದು ಕಂಡು ಕೃಷ್ಣಪ್ಪನಿಗೆ ಸಂತೋಷವಾಯಿತು. ಇಬ್ಬರೂ ಹಿಂದಿನಂತೆಯೇ ಪರಸ್ಪರ ನೋಡಿ ನಕ್ಕರು. ಆದರೆ ಕ್ಷಣ ಕಳೆದು ಮಹೇಶ್ವರಯ್ಯ ಚಿಂತಾಕ್ರಾಂತರಾಗಿ ‘ಭೋ’ ಎಂದು,

‘ನಿನಗೆ ಇದರಿಂದ ತೊಂದರೆಯುಂಟು’ ಎಂದು ಎದುರಿಗಿದ್ದ ಬಾಗಿಲನ್ನು ದುರುಗುಟ್ಟಿದರು.

‘ಇರಲಿ ಬಿಡಿ’ ಎಂದು ಕೃಷ್ಣಪ್ಪ ನಾಗೇಶಾ ಎಂದು ಕರೆದು ತನ್ನ ವೀಲ್‌ಚೇರನ್ನು ರೂಮಿಗೆ ತಳ್ಳಿಸಿಕೊಂಡು ಹೋಗಿ ಹೆಂಡತಿಯನ್ನು ಬರಹೇಳಿದ. ಬಾಗಿಲು ಮುಚ್ಚುವಂತೆ ಹೇಳಿ,

‘ಸೀತ ಬ್ಯಾಂಕಲ್ಲಿ ನಿನ್ನ ಹೆಸರಲ್ಲಿ ಹತ್ತು ಸಾವಿರ ಇದೆಯಲ್ಲ – ಅದು ನಾಳೆ ಬೆಳಿಗ್ಗೆ ನನಗೆ ಬೇಕು’.

ಹೆಂಡತಿಯನ್ನು ಹೆಸರು ಹಿಡಿದು ಕೃಷ್ಣಪ್ಪ ಕರೆಯುವವನಲ್ಲ. ಅವಳಿಗೆ ಆಶ್ಚರ್ಯವಾಗಿತ್ತು.

‘ಯಾಕೆ?’ ಎಂದಳು.

‘ಮಹೇಶ್ವರಯ್ಯನಿಗೆ ಕೊಡಬೇಕಿತ್ತು.’

‘ನೀವು ಸೋಷಲಿಸ್ಟ್ ಆಗಿ ಕುದುರೆ ಬಾಲಕ್ಕೆ ಹಣ ಕಟ್ಟೋದನ್ನ. . . .’

‘ಅದೆಲ್ಲ ಬೇಡ ಕೊಡು’ ಕೃಷ್ಣಪ್ಪ ಗುಡುಗಿದ.

‘ಇಲ್ಲ – ಕೋಡೋಕೆ ದುಡ್ಡಿಲ್ಲ’

ಕೃಷ್ಣಪ್ಪ ಕೈಎತ್ತಿದ್ದು ಕಂಡು ದೂರ ಸರಿದಳು.

‘ಇದೆ – ಕೊಡು’

ಅವನ ಮನಸ್ಸು ನೆಗೆದು ಅವಳ ಕೈ ಹಿಡಿದು ಜಗ್ಗುವ ಸನ್ನಾಹ ಮಾಡಿತು. ಆದರೆ ದೇಹ ಹಂದಲಿಲ್ಲ. ಕೃಷ್ಣಪ್ಪನ ಕಣ್ಣುಗಳಲ್ಲಿ ನೀರು ಉಕ್ಕಿ ತುಟಿಗಳು ಅದುರತೊಡಗಿದುವು.

ಸೀತ ಮೆತ್ತಗಾಗಿ ಹೇಳಿದಳು:

‘ಜಯಮಹಲ್‌ಬಡಾವಣೆಯಲ್ಲಿ ಟ್ರಸ್ಟ್‌ಬೋರ್ಡು ನನಗೊಂದು ಸೈಟ್ ಸ್ಯಾಂಕ್ಷನ್ ಮಾಡಿದೆ. ಅದನ್ನ ಕೊಳ್ಳೋಕೆ ಆ ಹಣ ಇಟ್ಟಿದೀನಿ. . . .’

ಕೃಷ್ಣಪ್ಪನ ಕಣ್ಣುಗಳಲ್ಲಿ ನೀರಿಳಿದುವು. ಬಲಗೈಯಿಂದ ಒರೆಸಿಕೊಳ್ಳುತ್ತ –

‘ಯಾವ ಸೈಟು ?’ ಎಂದು ಬಿಕ್ಕಿದ.

‘ವೀರಣ್ಣ ಅಪ್ಲಿಕೇಷನ್ ಹಾಕ್ಸಿದ್ದು. ಸ್ಯಾಂಕ್ಷನ್ ಆಯ್ತು.’

ಸೀತೆ ಮೃದುವಾಗಿ ಹೇಳಿ ತಲೆ ತಗ್ಗಿಸಿದಳು. ಈ ಜಯಮಹಲ್ ಸೈಟುಗಳ ಬಗ್ಗೆ ಅಸೆಂಬ್ಲಿಯಲ್ಲಿ ಕೃಷ್ಣಪ್ಪ ಗಲಾಟೆ ಮಾಡಿದ್ದ. ಓಪನ್ ಮಾರ್ಕೆಟ್ಟಲ್ಲಿ ನಲವತ್ತು ಐವತ್ತು ಸಾವಿರ ಬೆಲೆಬಾಳುವ ಸೈಟುಗಳನ್ನು ಮಂತ್ರಿಗಳು ತಮ್ಮಲ್ಲಿ ತಮ್ಮ ಬಳಗದವರಲ್ಲಿ ಹಂಚಿಕೊಳ್ಳಬಹುದೆಂದು ಗುಮಾನಿ ಪಟ್ಟಿದ್ದ. ಈಗ ಮಂತ್ರಿ ಮಂಡಳ ತನ್ನ ಹೆಂಡತಿಗೂ ಒಂದು ಸೈಟ್ ಕೊಟ್ಟು, ತನ್ನ ಬಾಯಿ ಮುಚ್ಚಿಸಲು ಪ್ರಯತ್ನಿಸಿದೆ. ತನ್ನ ಉಮ್ಮಳವನ್ನು ಹತ್ತಿಕ್ಕಿಕೊಂಡು ಕೃಷ್ಣಪ್ಪ ಹೇಳಿದ.

‘ಸೀತ – ನೀನು ಈ ಸೈಟನ್ನು ಕೊಂಡುಕೋಬಾರದು.’

‘ಯಾಕೆ ? ನೀವೇನೂ ನನಗೆ ಮಾಡಬೇಡಿ. ಆದರೆ ಸೈಟ್‌ಕೊಳ್ಳೋದು ನನ್ನ ಹಕ್ಕು. ಅದಕ್ಕೆ ಅಡ್ಡ ಬರಬೇಡಿ.’

‘ಸೀತ, ಈ ಸೈಟು ನಮಗೆ ಬೇಡ. ನಾನು ಬೇರೆ ನಿನಗೆ ಕೊಂಡುಕೊಡ್ತೀನಿ’ ಕೃಷ್ಣಪ್ಪ ಸಮಾಧಾನದಿಂದ ಹೇಳಿದ.

‘ಕೊಡ್ತೀರಿ. ಕೊಡ್ತೀರಿ. ನಾಳೆ ನಿಮಗೇನಾದ್ರೂ ಆದ್ರೆ ನಾನು ನಿಮ್ಮ ಮಗಳು ಬಾಯಿಗೆ ಮಣ್ಣು ಹಾಕಿಕೊ ಬೇಕ ?’

ಕೃಷ್ಣಪ್ಪ ಕಣ್ಣುಗಳನ್ನು ಮುಚ್ಚಿದ.

‘ಹೋಗು, ಹೋಗು, ನನ್ನ ಹತ್ತಿರ ಸುಳೀಬೇಡ ಹೋಗು’ ಎಂದು ಸಣ್ಣ ದನಿಯಲ್ಲಿ ಕರ್ಕಶವಾಗಿ ಕಿರುಚಿದ.

ಅವಳು ಹೋದ ಮೇಲೆ ನಾಗೇಶ ಎಂದು ಕೂಗಿದ. ಕಣ್ಣುಗಳನ್ನು ಮುಚ್ಚಿದ್ದೇ ಹೇಳಿದ. ‘ಈಗಲೇ ಹೋಗಿ ವೀರಣ್ಣನ ಹತ್ತಿರ ಹತ್ತು ಸಾವಿರ ಬೇಕೂಂತ ಕೇಳಿ ತಗೊಂಬಾ. ಆಟೋ ಮಾಡಿಕೊಂಡು ಹೋಗು. ಪರ್ಸ್‌ನಲ್ಲಿ ದುಡ್ಡಿರಬೇಕು ತಗೋ.’

ನಾಗೇಶ ತನ್ನಲ್ಲೇ ಹಣವಿದೆಯೆಂದು ಹೋದ. ಮುಕ್ಕಾಲು ಗಂಟೆಯಲ್ಲಿ ಹಿಂದಕ್ಕೆ ಬಂದು ದೊಡ್ಡದೊಂದು ಕವರನ್ನು ಕೃಷ್ಣಪ್ಪನಿಗೆ ಕೊಟ್ಟ. ವೀರಣ್ಣ ದುಡ್ಡಿನ ಜೊತೆ ಒಂದು ಚೀಟಿಯಿಟ್ಟಿದ್ದ.

‘ಇದರಲ್ಲಿ ಹದಿನೈದು ಸಾವಿರವಿದೆ. ಹೆಚ್ಚು ಬೇಕಾದರೆ ನಾಳೆ ಬೆಳಿಗ್ಗೆ ಹೇಳಿಕಳಿಸಿ. ತಮ್ಮ ವಿಧೇಯ ವೀರಣ್ಣ.’

‘ತಳ್ಳು ಎಂದು ಮಹೇಶ್ವರಯ್ಯನ ಕೋಣೆಗೆ ಹೋದ. ಅವರು ಎದ್ದು ಕೂತು ತಾನು ಬರುವ ಮುಂಚೆ ಧ್ಯಾನದಲ್ಲಿದ್ದಂತೆ ಕಂಡಿತು.

‘ಹದಿನೈದು ಸಾವಿರ ಇದೆ. ನಾಳೆ ಬೇಕಾದರೆ ಇನ್ನಷ್ಟು ಕೊಡ್ತೇನೆ’ ಎಂದು ಅವರ ಉತ್ತರಕ್ಕೆ ಕಾಯದೆ ನಾಗೇಶನಿಂದ ತಳ್ಳಿಸಿಕೊಂಡು ರೂಮಿಗೆ ಹೋಗಿ ಮಲಗಿದ.

***

ಕೃಷ್ಣಪ್ಪ ಸೀತೆಯ ಜೊತೆ ಜಗಳವಾಡಿದಾಗ್ಗೆಲ್ಲ ಮಗುವಿಗೆ ಹೋಗೋ ಅದು ಗೊತ್ತಾಗಿಬಿಡುವುದು. ಮಗಳು ತುಟಿಪಿಟಿಕ್ಕೆನ್ನದೆ ಕೊಟ್ಟದ್ದನ್ನು ತಿಂದು, ತಾಯಿ ತಲೆಯ ಸಿಕ್ಕು ಬಿಡಿಸುತ್ತ ಬಾಚಣಿಗೆಯಿಂದ ಅವಸರದಲ್ಲಿ ಜಗ್ಗುವಾಗ ಚೂರೂ ಪ್ರತಿಭಟಿಸದೆ ಮಂಕಾಗಿ ಕೂತಿದ್ದನ್ನು ಕಂಡು ಕೃಷ್ಣಪ್ಪನಿಗೆ ದುಃಖವಾಯಿತು. ನೀಟಾಗಿ, ಎರಡು ಜಡೆ ಹಾಕಿಕೊಂಡು ಯುನಿಫಾರಂ ಧರಿಸಿ ಸ್ಕೂಲಿಗೆ ಹೊರಟ ಗೌರಿಯನ್ನು ‘ಗೌರಾ’ ಎಂದು ಕರೆದ. ತನ್ನ ಹತ್ತಿರ ಬರಲು ಮಗಳು ಅಂಜುತ್ತಿದ್ದಾಳೆಂದು ಅನುಮಾನವಾಯಿತು. ಇನ್ನೊಮ್ಮೆ ಕರೆದ. ಹತ್ತಿರ ಬಂದು ನಿಂತಳು. ಅವಳ ಬೆನ್ನಿನ ಮೇಲೆ ಕೈಯಿಟ್ಟು ತಡವಿದ. ತಿರುಗಿಸಿ ನಿಲ್ಲಿಸಿಕೊಂಡು ಅವಳ ಮುಖ ನೋಡಿದ. ತನ್ನ ಕಣ್ಣುಗಳು – ಆದರೆ ತಾಯಿಯ ಗುಜ್ಜು ಮೂಗು, ತಾಯಿ ಕೋಪದಲ್ಲಿ ಹರಿದು ಬಾತುಕೊಂಡಿದ್ದ ತುಟಿ ಈಗ ಸರಿಹೋಗಿದೆ. ಮೂಗಿನಲ್ಲಿ ಸಿಂಬಳ ಸುರಿಯುತ್ತಿಲ್ಲ. ನಿರ್ಭಾವದಲ್ಲಿ ನಿಂತ ಎಳೆ ಮಗುವಿನ ಮುಖದಲ್ಲಿ ವಯಸ್ಸಿಗೆ ಮೀರಿದ ಪ್ರಬುದ್ಧತೆ ಮೂಡಿದಂತೆ ಕಂಡು ಅವನಿಗೆ ಕಸಿವಿಸಿಯಾಯಿತು. ಮಗು ಒಂಟಿಕಾಲಿನಲ್ಲಿ ಕುಣಿಯುತ್ತಲೋ ಬೀರುವಿನಲ್ಲಿದ್ದುದನ್ನು ಎಳೆದು ಬೀಳಿಸಿ ತಾಯಿಯಿಂದ ಬೈಸಿಕೊಂಡು ಎಗ್ಗಿಲ್ಲದೆ ಓಡುತ್ತಲೋ ಇರುವುದನ್ನು ಕಂಡು ಬಹಳ ದಿನಗಳಾದವು ಎನ್ನಿಸಿತು.

ಗೌರಿ ಸ್ಕೂಲಿಗೆ ಹೋದ ಮೇಲೆ ಶುಭ್ರವಾದ ಸಿಲ್ಕ್ ಜುಬ್ಬ ಧರಿಸಿ ಹಣೆಗೆ ವಿಭೂತಿಯಿಟ್ಟು ಬಂದು ವೀರಣ್ಣ ಅದೊಂದು ಸಾಮಾನ್ಯ ಪ್ರಶ್ನೆ ಎನ್ನುವಂತೆ

'ಇನ್ನಷ್ಟು ಬೇಕ' ಎಂದ.

ಬೇಡವೆಂದ ಕೃಷ್ಣಪ್ಪ, ಅವತ್ತು ರಾತ್ರೆ ಬರುವ ಗೌರಿ ದೇಶಪಾಂಡೆಯನ್ನು ನಿಲ್ದಾಣದಿಂದ ಕರೆತಂದು ಅವರ ಗೆಸ್ಟ್‌ಹೌಸಲ್ಲಿ ಇಳಿಸಬೇಕೆಂದೂ, ಜ್ಯೋತಿಯ ಬಾಯ್‌ಫ್ರೆಂಡಿಗೂ ನಾಗೇಶನ ಅಕ್ಕನಿಗೂ ಕೆಲಸದ ವ್ಯವಸ್ಥೆ ಮಾಡಬೇಕೆಂದೂ ಹೇಳಿದ. ಅದೇನು ಮಹತ್ವದ ವಿಷಯವಲ್ಲವೆನ್ನುವಂತೆ'ಆಗಲಿ' ಎಂದ ವೀರಣ್ಣ. ಪಂಚಲಿಂಗಯ್ಯ ಬಂದಿದ್ದರೆಂದೂ ಗೌಡರ ಹತ್ತಿರ ಅಂಥ ಕೆಲಸ ಮಾಡಿಸಕೂಡದೆಂದು ಹೇಳಿ ತಾನೇ ಸೀಟಿಗೆ ವ್ಯವಸ್ಥೆ ಮಾಡುತ್ತೇನೆಂದು ಹೇಳಿದ್ದಾಗಿಯೂ ತಿಳಿಸಿ,

'ನೀವು ಬೇಗ ಗುಣವಾಗಬೇಕು'

ಎಂದ. ಹೇಳಿದ ಮಾತು ಸಾಮಾನ್ಯವಾದರೂ ಹೇಳಿದ ರೀತಿ ಅರ್ಥಗರ್ಭಿತವಾಗಿತ್ತು.

ಕೃಷ್ಣಪ್ಪ ಹೇಳಿದ:

'ನೀವು ಮನಸ್ಸಲ್ಲೇನೋ ವಿಶೇಷವಿದೆ. ಹೇಳಿ.'

'ನಿಮ್ಮ ತಲೆಕೆಡಿಸಬಾರದೆಂದು ನಿಮ್ಮ ಹತ್ತಿರ ಹೇಳ್ತಾ ಇಲ್ಲ. ನೀವು ತುಂಬ ದೊಡ್ಡ ಜವಾಬ್ದಾರಿ ಹೊರೋ ಕಾಲ ಬಹಳ ದೂರವೇನೂ ಇಲ್ಲ.'

'ನಾನೂ ಅದನ್ನ ಕೇಳಿಸಿಕೊಂಡೆ. ಆದರೆ ಪಕ್ಷಾಂತರ ಮಾಡೋವ್ರ ಜೊತೆ ನಾನು ಸೇರಲ್ವಲ್ಲ'

'ಸೇರಬೇಡಿ. ನೀವೇ ಮಂತ್ರಿಮಂಡಳ ರಚಿಸಿ. ನಿಮಗೆ ಹೊಸ ಗೇಣಿ ಶಾಸನ ತರಲಿಕ್ಕೆ ಇಷ್ಟ ಅಲ್ವ? ತನ್ನಿ. ಬೆಂಬಲ ಕೊಡೋವರು ಕೊಡ್ತಾರೆ. ಬೆಂಬಲ ಸಿಗಲಿಲ್ಲ ಅನ್ನಿ. ರಾಜೀನಾಮೆ ಕೊಟ್ಬರಾಯ್ತು. . . . ಏನೇನೋ ತಮಗೆ ಬುದ್ಧಿವಾದ ಹೇಳ್ಳೋ ಹಾಗೆ ಮಾಡ್ತಾದೀನಿ, ಕ್ಷಮಿಸಬೇಕು.'

'ವೀರಣ್ಣ – ಒಂದು ಮಾತು. ಅದು ಯಾಕೆ ಸೀತೆ ಹತ್ತಿರ ನೀವು ಸೈಟ್‌ಗೆ ಅಪ್ಲೈ ಮಾಡಿಸಿದ್ರಿ?'

'ಒಳ್ಳೆ ತಮಾಷೆಯಾಯ್ತು ನೀವು ಹೇಳೋದು, ಆಕೆಯೇನು ಈ ದೇಶದ ಪ್ರಜೆ ಅಲ್ವ?'

ವೀರಣ್ಣ ನಕ್ಕು ಕೃಷ್ಣಪ್ಪನ ಮುಖ ಗಂಭೀರವಾಗಿರುವುದನ್ನು ಕಂಡು ಅವನೂ ಗಂಭೀರವಾಗಿ ಹೇಳಿದ:

‘ಗೌಡರೆ ನೀವು ಎಷ್ಟೇ ದೊಡ್ಡವರಾಗಿರಿ ಹೆಂಗಸರಿಗೆ ಅದು ಗೊತ್ತಾಗೋದು ಇಂಥದೇನಾದ್ರೂ ಸಿಕ್ಕಾಗ. ಅವರನ್ನ ದೂರಿಯೇನು ಪ್ರಯೋಜನ ಹೇಳಿ? ಅವರಿಗಾಗಿ ಅದನ್ನವರು ಬಯಸ್ತಾರ? ಹೆಣ್ಣಿನ ಮೇಲೆ ಗೂಡುಕಟ್ಟೋ ಜವಾಬ್ದಾರಿ, ನಿಮಗೆ ವಿಶಾಲ ಆಕಾಶದಲ್ಲಿ ಹಾರಾಡೋ ಕೆಲಸ – ಇದು ಧರ್ಮ ಅಲ್ಲವ?’

‘ಏನೇ ಹೇಳಿ – ಇದು ಕೂಡ ಕರಪ್ಷನ್’

‘ಶಿವನೇ ನಿಮ್ಮ ಮಾತು ಚೆನ್ನಾಯ್ತು. ನಿಮ್ಮ ಹೆಂಡ್ತಿ ಕಷ್ಟಪಟ್ಟು ದುಡಿದ ಹಣದಲ್ಲೊಂದು ಸೈಟ್ ತಗೊಂಡರೆ ಕರಪ್ಷನ್ ಆದರೆ, ಸ್ಪೀಡ್‌ಮನಿ ಮಣ್ಣು ಮಶಿ ಅಂತ ಕಟ್ಕೊಂಡು ನಮ್ಮಂಥೋರು ಬಿಸಿನೆಸ್ ಮಾಡಬೇಕಲ್ಲ ಅದಕ್ಕೇನು ಅಂತೀರಿ ನೀವು. ಅವರವರಿಗೆ ಅವರವರ ಧರ್ಮ ಸರಿ ಅಲ್ಲವ?’

‘ಇಲ್ಲ ನೀವು ಮಾಡ್ತಿರೋದೂ ತಪ್ಪೂಂತ ನಾನು ಅನ್ನೋದು.’

‘ತಪ್ಪಾದರೆ ತಪ್ಪು ಬಿಡಿ. ಸರಿಹೋಗೋದು ಹೇಗೆ? ನಾನು ಸರಿಯಾದಾಗ್ಲ? ಅಥವಾ ದೇಶ ಸರಿಯಾದಾಗ್ಲ? ಈಗ ಪಿ. ಡಬ್ಲ್ಯೂ. ಡಿ. ಇದೆ – ಅದು ಸರಿಹೋಗ್ದೆ ನಾನು ಸರಿಹೋಗೋದು ಸಾಧ್ಯಾನ? ಹೇಳಿ ನೀವೆ. ಯಾರು ಇದನ್ನೆಲ್ಲ ಕೂಲಂಕುಶ ಸರಿ ಮಾಡೋವ್ರು? – ನಿಮ್ಮಂಥವರು. ಅದಕ್ಕೇ ನಾನು ಹೇಳಿದ್ದು – ನೀವು ನಾಯಕರಾಗಬೇಕು, ಮಂತ್ರಿಮಂಡಳ ರಚಿಸಬೇಕೂಂತ. ಥಿಯೇಟರ್ ಹತ್ರ ಕೆಲಸವಿದೆ. ಹೋಗಬೇಕು. ಬರ್ಲ ನಾನು?’

ವೀರಣ್ಣ ಹೊರಟು ಹೋದ. ತನ್ನನ್ನು ಹೊಗಳುವಾಗಲೂ, ಕೈಕಟ್ಟಿ ವಿನಯದಿಂದ ನಿಂತಾಗಲೂ ವೀರಣ್ಣ ತನ್ನನ್ನು ಸಂಪೂರ್ಣ ವಹಿಸಿಕೊಂಡವನಂತೆ ಕಾಣುತ್ತಿದ್ದ. ತನ್ನ ನಿರಾಕರಣೆಗೆ, ಅಸಹನೆಗೆ, ಕೋಪಕ್ಕೆ ಕೂಡ ಅವಕಾಶ ಕೊಟ್ಟು, ಆ ಮೂಲಕ ಉಬ್ಬಿಸಿ, ಅದನ್ನೇ ಹೊಗಳಿ ಕೊನೆಗೆ ಗೆಲ್ಲುವ ಸನ್ನಾಹ ಮಾಡಿದ್ದ. ಅವನ ಸ್ವಂತಕ್ಕಾಗಿ ಮಾತ್ರ ಇದನ್ನೆಲ್ಲ ಅವನು ಮಾಡುತ್ತಿದ್ದಾನೆಂದು ಹೇಳುವುದೂ ಕೃಷ್ಣಪ್ಪನಿಗೆ ಸಾಧ್ಯವಿರಲಿಲ್ಲ. ಈಗಿರುವ ಮುಖ್ಯಮಂತ್ರಿಯಿಂದಲೇ ಅವನು ಜಲಾಶಯ ಯೋಜನೆಯೊಂದರ ಕಾಂಟ್ರ್ಯಾಕ್ಟ್ ಪಡೆದಿದ್ದನಲ್ಲವೆ? ವೀರಣ್ಣನಲ್ಲದಿದ್ದರೆ ಇನ್ನೊಬ್ಬ ಪಡೆಯಬಹುದಾಗಿದ್ದ ಕಾಂಟ್ರ್ಯಾಕ್ಟ್‌ಅದು.

ಕೃಷ್ಣಪ್ಪನಿಗೆ ವೀರಣ್ಣನ ಆಳ ಅಗಲ ತಿಳಿಯಲಾರದೆ ತಬ್ಬಿಬ್ಬಾಗಿ ವೀಲ್‌ಚೇರಿನ ಮೇಲೆ ಕೂತಿದ್ದಾಗ ಜ್ಯೋತಿ ಬಂದಳು. ಸದ್ದಿಲ್ಲದೆ ಅವನ ಸುತ್ತ ಸುಳಿದಾಡುತ್ತ ಹಾಸಿಗೆಗೆ ಹೊಸ ಶೀಟ್ ಹೊದೆಸಿ, ತಾನು ತಂದ ಗುಲಾಬಿ ಹೂಗಳನ್ನು ಕುಂಡದಲ್ಲಿ ಸುಂದರವಾಗಿ ಜೋಡಿಸಿ ಕೃಷ್ಣಪ್ಪನನ್ನು ತುಂಬ ಕೌಶಲದಿಂದ ಎಬ್ಬಿಸಿ ಮಲಗಿಸಿದಳು. ದೇಹವನ್ನು ಮಸಾಜ್ ಮಾಡುತ್ತ ಗೆಲುವಾಗಿ ತಾನು ರಾತ್ರಿ ನೋಡಿದ ಸಿನೆಮಾದ ಕಥೆ ಹೇಳತೊಡಗಿದಳು. ಸಿನಿಮಾ ನಾಯಕರ ವಿರಹದ ಕಥೆಯನ್ನು ಹೇಳುವ ಕ್ರಮದಲ್ಲೇ, ತನ್ನ ಒಳಗನ್ನೂ ಅಲ್ಲಿ ಸೊರಗುತ್ತಿದ್ದ ತನ್ನ ಸುಖದ ಅಪೇಕ್ಷೆಯನ್ನೂ ಸೂಚಿಸಿದಳು. ಕೆಲಸ ಸಿಗುವ ತನಕ ತನ್ನ

ನಾಯಕನಿಗೆ ಅರಳದ ಮೊಗ್ಗಾಗಿ ಉಳಿದಿದ್ದನ್ನು ಹೇಗೆ ಸಮರ್ಥಿಸಿಕೊಳ್ಳುತ್ತಿದ್ದಾನೆಂದು ಚಕಿತನಾದ. ಬಾಯ್‌ಫ್ರೆಂಡಿಗೆ ಕೆಲಸ ಸಿಗುತ್ತಿದೆಯೆಂದು ಅವಳು ಇವತ್ತು ಖುಷಿಯಾಗಿದ್ದಳು. ಪ್ರಾಯಶಃ ಇವತ್ತು ರಾತ್ರಿ ಅವನಿಗೆ ಅರಳುತ್ತಾಳೆ. ಅವಳ ಸಂಭ್ರಮ ಅವಳ ಮೃದುವಾದ ಕೈಗಳಿಂದ ತನ್ನ ಜಡವಾದ ಭುಜ, ತೋಳು, ಪಕ್ಕೆ, ಸೊಂಟ, ತೊಡೆ, ಕಾಲು, ಬೆರಳುಗಳಿಗೆ ಲಯಬದ್ಧವಾಗಿ ಇಳಿಯುತ್ತಿತ್ತು. ತನ್ನ ಸುತ್ತಮುತ್ತಲಿನ ಆರೋಗ್ಯವನ್ನೆಲ್ಲ ತಾನು ಹೀರುತ್ತಿದ್ದೇನೆಂದು ಕೃಷ್ಣಪ್ಪನಿಗೆ ಅನ್ನಿಸಿತು.

ಕುಂಡದಲ್ಲಿ ಸೊಕ್ಕಿ ಉಳಿದವಕ್ಕಿಂತ ಮೇಲೆ ನಿಂತ ಅರಳುತ್ತಿದ್ದ ಗುಲಾಬಿ ಹೂವೊಂದು ಅವನ ಕಣ್ಣು ಸೆಳೆಯಿತು. ಒದ್ದೆಯಾದ್ದರಿಂದ ಹೊಳೆಯುವ ದಳಗಳ ಕಟುವಾದ ಕೆಂಪು: ದೃಷ್ಟಿಯನ್ನು ಒಳಕ್ಕೆಳೆದುಕೊಳ್ಳುವಂತೆ ಅಂಚಿನಲ್ಲಿ ಮುರಿಯುತ್ತ, ತಿರುವಿಕೊಳ್ಳುತ್ತ, ಸಣ್ಣದಾಗುತ್ತ, ಕೇಂದ್ರವನ್ನು ಬಚ್ಚಿಟ್ಟುಕೊಳ್ಳುವ ಈ ದಳಗಳ ಮೃದು ಮತ್ತು ಬಿಗಿ; ಆಹ್ವಾನ ಮತ್ತು ರಹಸ್ಯ; ಈ ಬಣ್ಣ ಈ ಬೆಡಗಿಗೂ ಒರಟಾದ ಎಲೆ, ಚೂಪು ಮುಳ್ಳುಗಳ ಹುರಿಯಾದ ಕಾಂಡ – ಹೀಗೇ ಏಕಾಗ್ರವಾಗಿ ಗುಲಾಬಿಯನ್ನು ನೋಡುತ್ತ ಜ್ಯೋತಿಯ ಇಂಪಾದ ಹರಟೆಗೆ ಕಿವಿಗಳನ್ನು ಒಡ್ಡಿದ. ತಣ್ಣಗೆ ಉರಿಯುವ ಜ್ವಾಲೆಯಂತಿತ್ತು ಗುಲಾಬಿ. ಏನೋ ಹೇಳುತ್ತ ಏನೋ ಬಚ್ಚಿಡುತ್ತ ಇರುವಂತೆ ಅದು ಇದ್ದುದರಿಂದ ಕೃಷ್ಣಪ್ಪನಿಗೆ ಅದನ್ನು ನೋಡುವುದು ಕಷ್ಟವಾಗತೊಡಗಿತು. ಜ್ಯೋತಿಯ ಮುಖವನ್ನು ನೋಡಿದ. ಆಯಾಸಪಡದೆ ಅವಳು ತನ್ನನ್ನು ಒತ್ತುತ್ತ ತೀಡುತ್ತ ತನ್ನ ಮಾತಿಗೆ ತಾನೇ ಹಸನ್ಮುಖಿಯಾಗಿರುವಂತೆ ಕಂಡಳು. ಅನಾಯಾಸೇನ ಮರಣಂ ಎಂದು ತಾನು ಆಗೀಗ ಬಯಸಿದ್ದನ್ನು ನೆನೆದ. ಇಲ್ಲ – ಈಗ ಜಡವಾಗಿದ್ದ ದೇಹವನ್ನು ಹುರಿದುಂಬಿಸಬೇಕೆನ್ನಿಸುತ್ತದೆ. ಮರ ಹತ್ತಬೇಕು, ಬಾವಿಯಲ್ಲಿಳಿದು ಕೆಸರು ತೋಡಬೇಕು, ಈಜಬೇಕು, ಗದ್ದೆಯಲ್ಲಿ ಸಸಿ ನೆಡಬೇಕು, ಹೂವಿನಂಥ ಪುಟ್ಟ ಕೋಳಿ ಮರಿಗಳನ್ನು ಅಂಗೈಮೇಲೆ ಇರಿಸಿಕೊಳ್ಳಬೇಕು – ಹೀಗೆ ಏನೇನೋ ಚಪಲಗಳು ಮೂಡುತ್ತವೆ. ವೀರಣ್ಣ ಹೇಳಿದ್ದನ್ನು ತಾನು ಕಿವಿಗೆ ಹಚ್ಚಿಕೊಳ್ಳದಂತೆ ಇದ್ದದ್ದು ಬರೀ ನಟನೆಯಲ್ಲವೆ? ಅಧಿಕಾರದಲ್ಲಿ ಈ ಜಡವಾದ ದೇಹ ಮತ್ತೆ ಚೈತನ್ಯದ ಬುಗ್ಗೆಯಾದೀತೆಂದು ಆಸೆಯಾಗುತ್ತದೆ. ತಾಯಿ ಅವಳ ಮಡಿಲಲ್ಲಿ ಹಲಸಿನ ಹಣ್ಣಿನ ಕಡುಬನ್ನು ಕದ್ದುತಂದು ಕೊಡುತ್ತಿದ್ದುದು ನೆನಪಾಗುತ್ತದೆ.

ನಾಗೇಶ ವಿಷಣ್ಣನಾಗಿ ತನ್ನೆದುರು ಸುಳಿದದ್ದನ್ನು ಕಂಡ 'ಅದೇನೋ ನಾಗೇಶ' ಎಂದ. ಜ್ಯೋತಿ ಸಂಜೆ ಬರ್ತೇನೆ ಎಂದು ಹೊರಟಳು. ನಾಗೇಶ ಉತ್ತರ ಕೊಡಲಿಲ್ಲ. ತನ್ನ ಕಣ್ಣು ತಪ್ಪಿಸಿಕೊಳ್ಳುವ ಅವನ ಹವಣಿಕೆಯಿಂದ ಕಿರಿಕಿರಿಯಾಗಿ ಮತ್ತೆ ಕರೆದ. ನಾಗೇಶ ದುಗುಡದಿಂದ ಕೃಷ್ಣಪ್ಪನಿಗೆ ಅವನು ಜೇಬಿನಲ್ಲಿ ಮಡಿಸಿಟ್ಟಿದ್ದ ಹತ್ತು ಪೈಸೆದ ಕಿಡಿ ಎಂಬ ಪತ್ರಿಕೆಯನ್ನು ಕೊಡುತ್ತ 'ನಾಯಿ ಸೂಳೇಮಕ್ಕಳು. ಏನೋ ಬರೆದಿದ್ದಾವೆ. ಮನಸ್ಸಿಗೆ ಹಚ್ಚಿಕೋಬೇಡಿ' ಎಂದ.

ಕೃಷ್ಣಪ್ಪ ಓದಿದ: ಇಂಥ ಆಪಾದನೆಯನ್ನು ಯಾರೂ ಈವರೆಗೆ ಅವನ ಮೇಲೆ ಹೊರಿಸಿದ್ದಿಲ್ಲ. 'ಮುಖ್ಯಮಂತ್ರಿಯಾಗಲು ಕೃಷ್ಣಪ್ಪ ಗೌಡರ ಸಂಚು' ಎಂಬ ಶಿರೋನಾಮೆಯಲ್ಲಿ ಆಪಾದನೆಗಳ ಪಟ್ಟಿಯಿತ್ತು. ಹೆಂಡತಿಯ ಹೆಸರಿನಲ್ಲಿ ಜಯಮಹಲ್ ಬಡಾವಣೆಯಲ್ಲಿ ಸೈಟ್ ಪಡೆದದ್ದು; ವೀರಣ್ಣನೆಂಬ ಕಂಟ್ರಾಕ್ಟರ್ಗೆ ಪ್ರಸ್ತುತ ಸರ್ಕಾರ ಕೋಟಿಗಟ್ಟಲೆ ಲಾಭವಿರುವ ಜಲಾಶಯದ ಕಾಮಗಾರಿಯನ್ನು ಟೆಂಡರ್ ತಿದ್ದಿ ಕೊಟ್ಟಿದ್ದರೂ ಈ ಬಗ್ಗೆ ಗೌಡರು ಯಾಕೆ ಸೊಲ್ಲೆತ್ತಿಲ್ಲ. ?; ಗತಿಸಿದ ಭಾರೀ ಜಮೀಂದಾರ ಗೋಪಾಲರೆಡ್ಡಿ, ದುಡ್ಡಿನ ಚೀಲದ ವೀರಣ್ಣ ಇಂಥವರೇ ಯಾಕೆ ಗೌಡರಿಗೆ ಆಪ್ತರು ?; ತನ್ನ ಹೆಸರಿನಲ್ಲಿ ಫಿಯಟ್ ಪಡೆದು ಅದನ್ನು ವೀರಣ್ಣ ವ್ಯಭಿಚಾರೀ ಪುತ್ರನ ನಿಶಾಚರ ವೃತ್ತಿಗಳಿಗೆ ಕೊಟ್ಟಿರುವುದು ನಿಜವೆ ?; ಗೌಡರ ಹೆಂಡತಿ ಬ್ಯಾಂಕೊಂದರಲ್ಲಿ ಗುಮಾಸ್ತೆಯಾಗಿದ್ದವರು ಮ್ಯಾನೇಜರ್ ಸ್ಥಾನಕ್ಕೇರುತ್ತಿರುವುದು ಬರೀ ಗುಸು ಗುಸು ಸುದ್ದಿಯೆ ?; ಆಳುವ

ಪಕ್ಷ ಒಡೆಯುತ್ತಿರುವಾಗ ಸದ್ಯದ ಮುಖ್ಯಮಂತ್ರಿಯ ಗುಂಪು ಕ್ರಾಂತಿಕಾರನೆಂದು ಪ್ರತೀತಿ ಪಡೆದ ಗೌಡರನ್ನು ನಾಯಕನನ್ನಾಗಿ ಆರಿಸಿ ತಮ್ಮ ಸರ್ಕಾರ ಉಳಿಸಿಕೊಳ್ಳಲು ನಡೆಯುತ್ತಿರುವ ನಾಟಕದ ಹಿನ್ನೆಲೆಯಲ್ಲಿ ವೀರಣ್ಣ ಎಂ.ಎಲ್.ಎ. ಗಳನ್ನು ಎಷ್ಟೆಷ್ಟು ಹಣಕೊಟ್ಟು ಕೊಳ್ಳುತ್ತಿದ್ದಾನೆ?; ಮುಖ್ಯಮಂತ್ರಿಗೆ ವಿರೋಧವಾದ ಎಡಪಂಥೀಯರ ಜೊತೆ ಸೇರಬೇಕೆನ್ನುವ ಗೌಡರ ಪಕ್ಷದ ಗುಂಪನ್ನೂ ಹೆಚ್ಚು ದುಡ್ಡು ಕೊಟ್ಟು, ವೀರಣ್ಣ ಕೊಳ್ಳುತ್ತಿರುವುದು ನಿಜವೇ?; ವಿಚಾರವಾದಿಯೆಂದು ಖ್ಯಾತರಾದ ಗೌಡರು ರಹಸ್ಯದಲ್ಲಿ ಮಹೇಶ್ವರಯ್ಯ ಎಂಬ ಶಾಕ್ತ ಸಂಪ್ರದಾಯದವನ ಮೂಲಕ ವಾಮಾಚಾರದ ಪೂಜೆಗಳನ್ನು ಮಾಡಿಸಿ ಮುಖ್ಯಮಂತ್ರಿತ್ವ ಗಿಟ್ಟಿಸಿಕೊಳ್ಳಲು ಅದನ್ನು ಕರಪ್ಟ್ ವ್ಯವಸ್ಥೆಯನ್ನು ಎತ್ತಿ ಹಿಡಿಯಲು ಬಳಸುವುದು – ಇವೆಲ್ಲ ಕ್ರಾಂತಿಕಾರನ ಲಕ್ಷಣಗಳೆ?; ಒಂದಾನೊಂದು ಕಾಲದಲ್ಲಿ ನಿಜವಾಗಿಯೂ ಗೇಣಿದಾರರಿಗಾಗಿ ಶ್ರಮಿಸಿದ ರೈತ ಕುಟುಂಬದಲ್ಲಿ ಹುಟ್ಟಿದವನೊಬ್ಬ ಹೀಗೆ ಭ್ರಷ್ಟಾಚಾರಿಗಳ ಕೈಗೊಂಬೆ ಆದದ್ದಾದರೂ ಹೇಗೆ? – ಲೇಖನ ಕೊನೆಯಲ್ಲಿ ತುಂಬ ವ್ಯಥೆಯಿಂದ ಕೊನೆಯಾಗಿತ್ತು. ಕೊನೆಯ ವಾಕ್ಯ ಮಾರ್ಮಿಕವಾಗಿ ಗೌಡರ ಅನಾರೋಗ್ಯವೇ ಹೇಗೆ ಜನ ಶತ್ರುಗಳಿಗೂ ಗೌಡರಿಗೂ ಜನರ ಭಾವನೆಯನ್ನು ದೋಚುವ ಸಾಧನವಾಗಿದೆ ಎಂಬುದನ್ನು ದಪ್ಪಕ್ಷರದಲ್ಲಿ ವಿವರಿಸಿತ್ತು.

ಕೃಷ್ಣಪ್ಪನ ಮುಖ ಲೇಖನವನ್ನು ಓದುತ್ತ ಕಾಂತಿಹೀನವಾದ್ದನ್ನು ಕಂಡು ನಾಗೇಶ ಅವನಿಗೆ ಹುರುಪು ತುಂಬಲು ಪ್ರಯತ್ನಿಸಿದ:

'ನಾಗರಾಜ್ ಇದನ್ನು ಬರೆಸಿದ್ದು ಗೌಡರೆ.'

'ನಾಗರಾಜ್ ನನ್ನ ವಿರೋಧಿಸ್ತಾನೆ ನಿಜ. ಆದರೆ ಹೆಸರು ಹಾಕದೇ ಬರೆಯುವ ವ್ಯಕ್ತಿಯಲ್ಲ'

ಕೃಷ್ಣಪ್ಪ ಗಂಭೀರವಾಗಿ ಹೇಳಿದ.

'ಅವನೇ ಬರೆದದ್ದು. ಬೆಳ್ಳಗಿರೋದೆಲ್ಲ ಹಾಲೂಂತ ನೀವು ತಿಳೀತೀರಿ. . . .'

'ಅವರನ್ನು ಬರಹೇಳು. ಹೋಗೋಕೆ ಮುಂಚೆ ಪ್ಯಾಡು ಪೆನ್ನು ಕೊಡು'

ನಾಗರಾಜ್ ತನ್ನ ಹರೆಯದ ದಿನಗಳನ್ನು ನೆನಪು ಮಾಡುವಂತಿದ್ದ – ಅವನ ಉಗ್ರವಾದ ನಿಷ್ಠುರವಾದ ನಿಲುವಿನಲ್ಲಿ, ಅವನ ಅಸಹನೆಯಲ್ಲಿ. ವ್ಯತ್ಯಾಸವೆಂದರೆ, ತಾನು ರಾಜಕೀಯಕ್ಕೆ ಇಷ್ಟವಿಲ್ಲದೇ ಬಂದಿದ್ದೆ, ಜೀವನ ಸಫಲವಾಗಲು ಬೇರು ದಿಕ್ಕು ಕಾಣದೆ. ನಾಗರಾಜ್‌ಗೆ ರಾಜಕೀಯವಲ್ಲದೆ ಬೇರೇನೂ ಕಾಣಿಸುವುದೇ ಇಲ್ಲ. ಕ್ರಾಂತಿಯಲ್ಲಿಲ್ಲದೇ ಜೀವನ ಸಫಲವಾಗುವ ಬೇರೆ ಮಾರ್ಗಗಳೇ ಇಲ್ಲವೆಂದು ತಿಳಿದಿದ್ದಾನೆ. ಒಂದರ ಮೇಲೆ ಒಂದು ಚಾರ್ಮಿನಾರ್ ಸೇದುತ್ತ ಎಲ್ಲರೂ ತನ್ನ ಮೇಲೆ ಉರಿದು ಬೀಳುವಂತೆ ಮಾತಾಡುತ್ತಾನೆ. ತಾನು ಅದೇ ಮಾತನ್ನು ಅದೇ ದಾಟಿ ತೀವ್ರಗತಿಗಳಲ್ಲಿ ಮಾತಾಡಿದಾಗ ಸಹಿಸಿಕೊಳ್ಳುವ ಸಹೋದ್ಯೋಗಿಗಳು ನಾಗರಾಜ್ ಬಾಯಿ ತೆರೆದದ್ದೆ ಅವನ ಮೇಲೆ ಬೀಳುತ್ತಾರೆ. ಅವನು ಒಬ್ಬ ಶ್ರೀಮಂತ ಕ್ರಿಮಿನಲ್ ವಕೀಲರ ಮಗ – ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಓದುತ್ತ ಮಾರ್ಕ್ಸಿಸ್ಟ್ ಆಗಿ, ಕಮ್ಯುನಿಸ್ಟ್‌ಬಣವನ್ನು ಸೇರಿದವ. ಸೋಷಲಿಸ್ಟ್‌ರೆಂದರೂ ಅವನಿಗೆ ಅಲರ್ಜಿ. ತಾನು ಸದ್ಯಕ್ಕೆ ಮಾತ್ರ ಇಲ್ಲಿದ್ದೇನೆ

ಎಂದು ಮುಚ್ಚುಮರೆ ಮಾಡದೆ ಹೇಳುತ್ತಿದ್ದ. ತುಮಕೂರಿನ ರೈತರ ಕ್ಷೇತ್ರದಿಂದ ಭಾರಿ ಬೆಂಬಲ ಪಡೆದು ಗೆದ್ದು ಬಂದಿದ್ದನೆಂದು ಉಳಿದವರು ಅವನನ್ನು ಸಹಿಸುತ್ತಾರೆ. ಕೃಷ್ಣಪ್ಪನ ನಾಯಕ ಸ್ಥಾನಕ್ಕೆ ಆತ ಪ್ರತಿಸ್ಪರ್ಧಿಯೆಂದು ಉಳಿದವರು ಯಾವಾಗಲೂ ಕೃಷ್ಣಪ್ಪನಿಗೆ ಚಾಡಿ ತರುತ್ತಾರೆ. ತನಗೆ ಯಾರೂ ಸಮವಲ್ಲವೆನ್ನುವಂತೆ ಕೃಷ್ಣಪ್ಪ ನಡೆದುಕೊಳ್ಳುವ ರೀತಿಯನ್ನು ನಾಗರಾಜ್ ಸಹಿಸುವುದಿಲ್ಲ. ಪಕ್ಷದ ಸಭೆಯಲ್ಲಿ ಅವನು ಕೃಷ್ಣಪ್ಪನನ್ನು ಫ್ಯೂಡಲ್ ಎಂದು ಜರೆದದ್ದಿದೆ. ಆಡಳಿತ ಜೊತೆ ಯಾವ ಒಪ್ಪಂದಕ್ಕೂ ತಯಾರಿಲ್ಲದ ಅವನಿಗೆ ಕೃಷ್ಣಪ್ಪ ಹೇಳುವುದುಂಟು: 'ಆಕಾಶ ಹಂಚಿಕೊಳ್ಳೋತನಕ ಭೂಮಿ ಹಂಚಿಕೊಂಡೇನು ಪ್ರಯೋಜನಾಂತ ಅಂದ ಹಾಗುತ್ತೆ - ನಿಮ್ಮ ವಾದದ ಕ್ರಮದಲ್ಲಿ.' ನಾಗರಾಜ್ ಕಟುವಾಗಿ ಹಂಗಿಸುತ್ತಾನೆ; 'ಮಾವೋ ಹೇಳೋದು ನಿಜ; ಎನಿಮಿಗಿಂತ ರಿವಿಷನಿಸ್ಟ್ ಹೆಚ್ಚು ಅಪಾಯಕಾರಿ.' ಈ ನಾಗರಾಜ್ ಕ್ರಮೇಣ ಮೆದುವಾಗಿ ಒಪ್ಪಂದದ ದಾರಿಹಿಡಿದು ತಪ್ಪುಗಳನ್ನು ಮಾಡಿಯಾನೆಂದು ಗುಪ್ತನಾಗಿ ಕೃಷ್ಣಪ್ಪ ಬಯಸಿದ್ದಿದೆ. ಆದರೆ ಸುಖ, ಸವಲತ್ತು, ದ್ರಾಕ್ಷಿಣ್ಯಗಳಿಂದ ಸಂಪೂರ್ಣ ವಿಮುಖನಾಗಿ ಈವರೆಗೆ ನಾಗರಾಜ್ ಬದುಕಿದ್ದ, ಒಂಟಿ ಪಿಶಾಚಿಯಂತೆ. ಕೆಂಪಗೆ ಕಾದ ಕಬ್ಬಿಣದ ಸಲಾಕೆಯಂತೆ. ಕೃಷ್ಣಪ್ಪನಿಗೆ ಅವನನ್ನು ಕಂಡು ಅಸೂಯೆಯಾಗುತ್ತಿತ್ತು; ಅವನ ಅಪಕ್ವತೆ ಕಂಡು ಗೊಂದಲವಾಗುತ್ತಿತ್ತು.

ಕೃಷ್ಣಪ್ಪ ಬರೆದದ್ದನ್ನು ಇನ್ನೊಮ್ಮೆ ಓದಿ, ಅದರ ಮೇಲೆ ಪ್ಯಾಡಿಟ್ಟು ನಾಗರಾಜ್‌ಗೆ ಕಾದ. ಇಸ್ತ್ರಿಯಿಲ್ಲದ ಜುಬ್ಬ ತೊಟ್ಟು ಪ್ಯಾಂಟ್ ಹಾಕಿದ ನಾಗರಾಜ್ ಕೆದರಿದ ತಲೆಯನ್ನು ತುಸು ತಗ್ಗಿಸಿ, ಕೆಂಪುಕಣ್ಣುಗಳಲ್ಲಿ ದುರುಗುಡುತ್ತ, ಒಳಗೆ ಬಂದು, ಖುರ್ಚಿ ಎಳೆದು ಕೂತ. ನಾಗೇಶನಿಗೆ ಬಾಗಿಲು ಹಾಕಿಕೊಂಡು ಹೋಗುವಂತೆ ಕೃಷ್ಣಪ್ಪ ಕಣ್ಸನ್ನೆ ಮಾಡಿದ.

'ನಿಮ್ಮ ಆರೋಗ್ಯ ಹೇಗಿದೆ?' ಎಂದು ಕೂಡ ನಾಗರಾಜ್ ಕೇಳಲಿಲ್ಲ. ನಿಜವಾಗಿಯೂ ಇವನು ತನ್ನ ಹರೆಯದ ವ್ಯಂಗ್ಯ ಚಿತ್ರವೇ. ಕೃಷ್ಣಪ್ಪ ತನ್ನ ಮೇಲೆ ಬಂದ ಲೇಖನವನ್ನು ನಾಗರಾಜ್‌ಗೆ ಕೊಟ್ಟ.

'ನೋಡಿದ್ದೇನೆ' ಎಂದ ನಾಗರಾಜ್

'ನೀವೇ ಇದನ್ನು ಬರೆಸಿದ್ದು ಅಂತ ಉಳಿದವರು ನನಗೆ ಹೇಳಿಯಾರು'

'ನೀವದನ್ನ ನಂಬದಿದ್ದರೆ ಸಾಕು'

ನಾಗರಾಜ್ ಬಹು ಸರಳವಾಗಿ ನೇರವಾಗಿ ಮಾತಾಡಿದ್ದ. ಅವತ್ತಿನ ರಾತ್ರೆಯ ಮೀಟಿಂಗಲ್ಲೂ ಸಹ ಕೊನೆಯ ತನಕ ಸುಮ್ಮನಿದ್ದು,

'ಪಾರ್ಲಿಮೆಂಟರಿ ರಾಜಕೀಯದ ಗತಿಯೇ ಇದು. ಯಾವ ಗುಂಪಿಗೆ ಸೇರಿ ನಾವು ಸರ್ಕಾರ ರಚಿಸಿದರೂ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಈ ಸ್ಟೇಟ್ ಆಳುವ ವರ್ಗಗಳ ಸಾಧನ. ಬೇರೆ ಥರ ಅದನ್ನು ಬಳಸೋದು ಪಾರ್ಲಿಮೆಂಟ್ ರಾಜಕೀಯದಲ್ಲಿ ಸಾಧ್ಯವಿಲ್ಲ' ಎಂದಿದ್ದ. ಅದರಿಂದ ರೇಗಿದ ಉಳಿದವರು.

‘ನೀವೇನು ಮಾಡುತ್ತಿದ್ದೀರಿ ಹಾಗಾದರೆ?’ ಎಂದು ಮೇಲೆ ಬಿದ್ದಿದ್ದರು.

‘ನಾನಾ? ನಮ್ಮ ಪಕ್ಷ ಸರ್ಕಾರ ರಚಿಸುವಾಗ ನಾನು ಅದರಿಂದ ಹೊರಗುಳಿತೇನೆ. ಪ್ರಾಯಶಃ ಅಸೆಂಬ್ಲಿ ಸದಸ್ಯತ್ವಕ್ಕೂ ರಾಜೀನಾಮೆ ಕೊಡ್ತೇನೆ. ಆ ಬಗ್ಗೆ ಇನ್ನೂ ನನ್ನ ಧೋರಣೆ ಸ್ಪಷ್ಟವಾಗಿಲ್ಲ’ ಎಂದಿದ್ದ.

‘ಪಾರ್ಲಿಮೆಂಟರಿ ರಾಜಕೀಯದ ಬಗ್ಗೆ ನಿಮ್ಮ ಧೋರಣೆ ಹಾಗಿದ್ದರೆ ಹೀಗೆ ಹೊಂಚು ಹಾಕ್ಕೊಂಡು ಇರೋದು ನೈತಿಕವಾಗಿ ಸರಿಯಲ್ಲ. ನಿಮ್ಮನ್ನೇ ಮೋಸ ಮಾಡ್ಕೋತಿದೀರಿ’ ಎಂದು ಕೃಷ್ಣಪ್ಪ ಆಗ ಕೆಣಕಿದ್ದ.

‘ನೀವು ಹೇಳ್ತಿರೋದ್ರಲ್ಲಿ ನಿಜವಿದೆ. ನನ್ನ ವರ್ಗದ ಭ್ರಾಂತಿಗಳಿಂದ ಇನ್ನೂ ನಾನು ಬಿಡುಗಡೆ ಪಡೆದಿಲ್ಲ’ ಎಂದು ನಾಗರಾಜ್ ಸರಳವಾಗಿ ಹೇಳಿದಾಗ ಉಳಿದವರು ನಕ್ಕಿದ್ದರು. ಆದರೆ ಕೃಷ್ಣಪ್ಪನನ್ನ ಒಳಗಿಂದ ಆ ಮಾತು ಮುಟ್ಟಿತ್ತು, ಮತ್ತೆ ಮತ್ತೆ ನೆನಪಾಗಿತ್ತು.

ಈಗಲೂ ಅದನ್ನು ನೆನೆದು ಕೃಷ್ಣಪ್ಪ ಉದ್ರೇಕಗೊಳ್ಳದೆ ಹೇಳಿದ:

‘ನಾಗರಾಜ್ ಈ ಲೇಖನ ಓದಿದ ಮೇಲೆ ನಿಮ್ಮನ್ನು ಕೇಳಬೇಕೂಂತ ಅನ್ನಿಸ್ತು. ನನ್ನ ಬಗ್ಗೆ ನಿಮಗೂ ಹೀಗನ್ನಿಸುತ್ತ? ನನಗೇ ಗೊಂದಲವಾದ್ರಿಂದ ಕೇಳ್ತಾ ಇದೀನಿ’

‘ವ್ಯಕ್ತಿಗಳ ಪ್ರಶ್ನೆ ಇಲ್ಲಿ ಮುಖ್ಯವಲ್ಲ. ಈ ವ್ಯವಸ್ಥೇಲಿ ಯಾರು ಎಷ್ಟು ಪ್ರಾಮಾಣಿಕರೂಂತ ಅನ್ನೋದು ರಿಲೇಟಿವ್ ಅಷ್ಟೆ. ನಿಮ್ಮನ್ನು ಈ ವ್ಯವಸ್ಥೆ ತನ್ನ ಬಲೇಲಿ ಸಿಕ್ಕಿಸ್ತ ಇದೇಂತ ನನಗೂ ಅನ್ನಿಸುತ್ತೆ. ನಿಮಗೊಂದು ಇಮೇಜ್ ಇದೆ. ಆ ಇಮೇಜ್ ಈ ವ್ಯವಸ್ಥೆಗೆ ಈಗ ಅಗತ್ಯವಾಗಿದೆ – ತನ್ನನ್ನು ಕಾಪಾಡಿಕೊಳ್ಳೋಕೆ.’

‘ಹಾಗಾದರೆ ಏನು ಮಾಡಬೇಕು ನಾನು ನಿಮ್ಮ ಪ್ರಕಾರ? ನಿಮ್ಮ ವಿಚಾರಾನ್ನ ನಾನು ಒಪ್ಪಲ್ಲ. ಆದರೆ ನಿಜವಾಗಿಯೂ ನಿಮ್ಮ ಅಡ್ವೈಸ್ ನನಗೆ ಬೇಕಾಗಿದೆ.’

‘ನಮ್ಮಪಕ್ಷದ ರಾಜಕೀಯದ ಮಾರ್ಗ ಈ ವರೆಗೆ ಸರಿಯಾಗಿ ಇದ್ದಿದ್ರೆ ನಿಮ್ಮನ್ನ ಸೀಕ್ ಮಾಡಬೇಕೂಂತ್ಲೇ ವೀರಣ್ಣನಂಥೋರಿಗೆ ಅನ್ನಿಸ್ತ ಇರಲಿಲ್ಲ – ಅಲ್ಲವೇ?’

ಕೃಷ್ಣಪ್ಪನಿಗೆ ಥಟ್ಟನೆ ಸಿಟ್ಟು ಬಂತು.

‘ನಾಗರಾಜ್, ವೀರಣ್ಣ ನನಗೆ ಸಹಾಯ ಮಾಡಿರೋದು ನಿಜ, ಆದರೆ ಅದಕ್ಕೆ ನಾನು ಕೈಯೊಡ್ಡಲಿಲ್ಲ. ನೀವು ಶ್ರೀಮಂತರ

ಮನೇಲಿ ಹುಟ್ಟಿದವು. ನನ್ನ ಹಾಗೇ ಹುಟ್ಟಿ ಬೆಳೆದಿದ್ರೆ ನೀವು ನನ್ನಷ್ಟು ಪ್ರಮಾಣಿಕವಾಗಿ ಉಳೀತಿದ್ರೂ ನೋಡ್ತಿದ್ದೆ.'

ನಾಗರಾಜ್ ಸಿಟ್ಟಾಗಲಿಲ್ಲ.

'ನೀವು ವ್ಯಕ್ತಿವಾದಿಯಾಗಿ ಮಾತಾಡ್ತೀರಿ. ನಿಮಗೆ ತಾತ್ವಿಕ ಕ್ಲಾರಿಟಿ ಇಲ್ಲ. ನಾನು ಆ ಪ್ರಶ್ನೇನ್ನ ಎತ್ತಲೇ ಇಲ್ಲ. ನಾನು ಪ್ರಾಮಾಣಿಕನಾಗಿದ್ರೆ ಇಲ್ಲಿ ಇರ್ತಿದ್ನ ಹೇಳಿ?'

'ದೇಶದ ಪ್ರಧಾನಿ ಡಿಕ್ಟೇಟರ್ ಆಗಲಿಕ್ಕೆ ನೋಡ್ತಿದಾರೆ, ಪ್ರಧಾನಿ ಗುಂಪಿನವರು ಇಲ್ಲಿ ಅಧಿಕಾರಕ್ಕೆ ಬಂದರೆ ಜನರಿಗೆ ಈಗಿರೋ ಸಿವಿಲ್‌ರೈಟ್‌ಗಳೂ ನಾಶವಾಗ್ತಾವೆ. ಈಗಿರೋ ಮುಖ್ಯಮಂತ್ರಿ ರಿಯಾಕ್ಷನರಿ ನಿಜ. ಆದರೆ ಅವನ ಬೆಂಬಲದಲ್ಲಿ ನಾವು ಮಿನಿಮಮ್ ಟೈಂ ಬೌಂಡ್ ಕಾರ್ಯಕ್ರಮ ಹಾಕ್ಕೊಂಡು ಸರ್ಕಾರ ರಚಿಸಿದ್ರೆ ಅಲ್ಪಸ್ವಲ್ಪವಾದರೂ ಸಾಧಿಸಬಹುದು ಅನ್ನೋದರಲ್ಲಿ ತಿರುಳೇ ಇಲ್ಲವೇನೂ ಹಾಗಾದ್ರೆ. . . .'

'ಇಲ್ಲ. ದೇಶದ ಸ್ಥಿತಿ ಇನ್ನಷ್ಟು ಹದಗೆಟ್ಟಾಗಲೇ ಪಾರ್ಲಿಮೆಂಟರಿ ಸಿಸ್ಟಮ್‌ಬಗ್ಗೆ ಇರೋ ಭ್ರಾಂತಿ ಜನರಲ್ಲಿ ನಾಶವಾಗುತ್ತೆ. ತೇಪೆ ಹಾಕೋ ಕೆಲಸ ನನಗಿಷ್ಟವಿಲ್ಲ.'

ಕೃಷ್ಣಪ್ಪ ಒಂದು ನಿಮಿಷ ಸುಮ್ಮನಿದ್ದು ಹೇಳಿದ:

'ನಿಮ್ಮ ವಿಚಾರ ನಾನು ಒಪ್ಪಲ್ಲ. ಇರೋ ಮನೆಗೆ ಬೆಂಕಿ ಇಕ್ಕಿ ಮೈಕಾಯಿಸಿಕೊಳ್ಳೋ ಅಪಕ್ವ ಧೋರಣೆ ನಿಮ್ಮದು. ಆದರೆ ವೈಯಕ್ತಿಕವಾಗಿ ನನಗೆ ಕೆಲವು ಸಮಸ್ಯೆಗಳಿವೆ – ಅವು ನನ್ನ ಪ್ರಾಮಾಣಿಕತೆಗೆ ಸಂಬಂಧಪಟ್ಟದ್ದು. ಅದಕ್ಕಾಗಿ ನಿಮಗೆ ಹೇಳಿ ಕಳಿಸಿದೆ. ನಾನು ಯಾರದೋ ಬಲೇಲಿ ಸಿಕ್ಕಿಹಾಕಿಕೋತಿದೀನಿ ಅಂತ ನಿಮಗೂ ಅನ್ನಿಸಿದ್ರೆ ಇಕೊಳ್ಳಿ ಈ ಕಾಗದದಲ್ಲಿ ಅಸೆಂಬ್ಲಿ ಸದಸ್ಯತ್ವಕ್ಕೇ ನನ್ನ ರಾಜೀನಾಮೆ ಬರ್ದಿದೀನಿ. ಇದನ್ನು ತಗೊಂಡು ಹೋಗಿ. ಒಂದು ಗಂಟೆ ನೀವೇ ಕೂಲಾಗಿ ವಿಚಾರ ಮಾಡಿ, ನಿಮಗೂ ಹಾಗೆನ್ನಿಸಿದರೆ ಈ ಕಾಗದಾನ್ನ ಸ್ಪೀಕರ್‌ಗೆ ಪೋಸ್ಟ್ ಮಾಡಿ'.

ಎಂದು ಕಾಗದ ಕೊಟ್ಟ. ನಾಗರಾಜ್ ಎದ್ದು ನಿಂತು ಯಾವ ಭಾವನೆಯನ್ನೂ ತೋರಿಸಿಕೊಳ್ಳದೇ ಹೇಳಿದ:

'ನೀವು ವ್ಯಕ್ತಿವಾದಿಯಾದ್ರಿಂದ ಪ್ರಾಮಾಣಿಕತೇಂತ ವಿಪರೀತ ಬಾದರ್ ಮಾಡ್ಕೋತೀರಿ. ಇದೊಂದು ಥರದ ಸಿಕ್ಲಿ ಇಂಡಲ್‌ಜನ್ಸ. . . . ಪ್ರಾಮಾಣಿಕತೆ ಪ್ರಶ್ನೆ ಬಂದರೆ. . . . ನೀವು ನನಗಿಂತ ದೊಡ್ಡವರು. . . . ಜನರಿಗೆ ನೀವೇ ನನಗಿಂತ ಹತ್ತಿರ. ಅದಕ್ಕೇ ನಿಮ್ಮ ವ್ಯಕ್ತಿತ್ವ ಮುಖ್ಯ ನನಗೆ. ಆದ್ದರಿಂದ ನೀವು ಶುದ್ಧವಾಗಿ ಉಳ್ದಿದೀರೋ ಇಲ್ಲವೊ ಅನ್ನೋ ಕಾರಣಕ್ಕಾಗಿ ರಾಜೀನಾಮೆ ಕೊಡೋದು ನನ್ನ ದೃಷ್ಟಿಯಲ್ಲಿ ಇರ್ರೆಲವಂಟ್. ಬೂರ್ಶ್ವಾ ಸಮಾಜದಲ್ಲಿ ಶುದ್ಧವಾಗಿರೋಕೆ ಎಲ್ಲಿ ಸಾಧ್ಯ? ಪಾರ್ಲಿಮೆಂಟರಿ ಹಾದಿ ಸರಿಯೋ ಅಲ್ವೋ ಅನ್ನುವ ವಿಚಾರದಲ್ಲಿ ನಮಗೀಗ ಕ್ಲಾರಿಟಿ ಬೇಕು.'

ನಾಗರಾಜ್ ಕೃಷ್ಣಪ್ಪ ಕೊಟ್ಟ ಕಾಗದವನ್ನು ಹಿಂದಕ್ಕೆ ಕೊಡುತ್ತ ಸಪ್ಪೆಯಾದ ಧಾಟಿಯಲ್ಲಿ ಮುಂದುವರಿಸಿದ:

'ನಿಮ್ಮ ಅನುಭವ ಅದಕ್ಕೇ ಮುಖ್ಯ. ನಾನಿನ್ನೂ ಹಸಿ ಮನುಷ್ಯ. ನೀವು ಈ ವಿಚಾರದಲ್ಲಿ ಒಂದು ನಿರ್ಧಾರಕ್ಕೆ ಬಂದಾಗ ನನಗೆ ಹೇಳಿಕಳಿಸಿ. ತಾತ್ಕಾಲಿಕವಾಗಿ ಫ್ಯಾಸಿಸ್ಟರನ್ನು ತಡೆಯೋಕೆ ಪಾರ್ಲಿಮೆಂಟರಿ ಮಾರ್ಗ ಅಗತ್ಯ ಅಂತ ನಿಜವಾಗಿ ನಿಮಗನ್ನಿಸುತ್ತ? ಯಾಕೆಂದ್ರೆ ನನ್ನ ಅಸಹನೆ ಕೂಡ ಅಡ್‌ವೆಂಚರಿಸ್ಟ್ ಇಂಡೆಲ್ಜನ್ಸ್‌ಇರಬಹುದು. ಆದ್ದರಿಂದ ಜನರೊಡನೆ ಒಡನಾಡಿದ ನಿಮ್ಮ ನಿರ್ದೇಶನ ಈಗ ಬೇಕು.'

ನಾಗರಾಜ್ ಮಾತಾಡುತ್ತ ಗೊಂದಲಕ್ಕೆ ಸಿಕ್ಕಿಹಾಕಿಕೊಂಡಂತೆ ಅನ್ನಿಸಿತು. ಹಾಗೇ ನಿಂತಿದ್ದು, ಹೋಗುತ್ತೇನೆಂದೂ ಹೇಳದೆ ಅವನು ಹೊರಟು ಹೋದ.

ನಾಗರಾಜ್‌ನ ಮಾತುಗಳು ಕೃಷ್ಣಪ್ಪನನ್ನು ತೀವ್ರವಾಗಿ ಬಾಧಿಸಿದುವು. ಸಾವು ಬದುಕಿನ ಹೊಸ್ತಿಲಲ್ಲಿರುವ ತಾನೀಗ ನಿಶ್ಚಯ ಮಾಡಬೇಕು; ತಾನು ದೇಶದ ಮುಖ್ಯಮಂತ್ರಿಯಾಗುವುದು ಫ್ಯಾಸಿಸ್ಟರ ಸಂಚನ್ನು ಮುರಿಯಲು ಅಗತ್ಯವೆ? ಅಂಥ ಬಯಕೆ ತನ್ನಲ್ಲಿ ಈಗ ಹುಟ್ಟಿದ್ದಕ್ಕೆ ಅದಕ್ಕೆ ಕಾರಣ ಸಾಯುತ್ತಿರುವ ತನಗೆ ಅಧಿಕಾರದ ಮೂಲಕ ಚೈತನ್ಯವನ್ನು ಪಡೆಯಬೇಕೆಂಬ ಇಚ್ಛೆಯೆ? ಅಥವಾ ವಾರಂಗಲ್ ಠಾಣೆಯಲ್ಲಿ ಕಂಡ ಅಧಿಕಾರದ ಕ್ರೂರ ಸ್ವರೂಪವನ್ನು ನಾಶಮಾಡಬೇಕೆಂಬ ಆಸೆಯೆ? ವೀರಣ್ಣನ ವರ್ಗ ಹಿತದ ಮೂಲಕವೂ ಫ್ಯಾಸಿಸ್ಟರನ್ನು ವಿರೋಧಿಸುವುದು ಸಾಧ್ಯವೆ? ಹೀಗೆ ತಾನು ಪ್ರಶ್ನೆ ಕೇಳುವಾಗ ತನ್ನ ವೈಯಕ್ತಿಕ ಹಿತಕ್ಕೆ ವೈಚಾರಿಕ ಕುಮ್ಮಕ್ಕು ಕೊಡುತ್ತಿದ್ದೇನೆಯೆ?

'ನಾಗರಾಜ್ – ನೀನು ಮೂರ್ಖ; ದೊಡ್ಡ ಮೂರ್ಖ; ನಿನಗೆ ಬದುಕಿನ ಸಂಕೀರ್ಣ ರೂಪವೇ ತಿಳಿಯದು; ಇವತ್ತು ರಾತ್ರೆ ಜ್ಯೋತಿ ಮತ್ತು ಅವಳ ಗೆಳೆಯ ತಮ್ಮ ದೇಹಗಳ ರಹಸ್ಯ ಸುಖಗಳನ್ನು ಅನುಭವಿಸಲಿ ಎಂದೇ ನಾನು ವೀರಣ್ಣನ 'ವರ್ಗಹಿತ'ಗಳನ್ನು ಅಲಕ್ಷ್ಯದಿಂದ ಕಂಡೇನು' ಎಂದೆಲ್ಲ ಕಿರುಚಿಕೊಳ್ಳಬೇಕೆನ್ನಿಸಿತು. 'ಉಣ್ಣುವುದು, ನಿದ್ದೆ ಮಾಡುವುದು, ಸಂಭೋಗದಲ್ಲಿ ಮೈಗಳನ್ನು ಬೆಸೆಯುವುದು, ದೇವಿಯೋ ದಿಂಡೆಯೋ ಯಾವುದೋ ನೆವದಲ್ಲಿ ಅವ್ಯಕ್ತಕ್ಕೆ ಲಗ್ಗೆ ಹಾಕುವುದು, ಈ ಕ್ಷಣಿಕವಾದ ಬದುಕಿನಲ್ಲಿ ಸೊಂಟದಲ್ಲಿರುವ ಅಯ್ಯ ಮೆತ್ತಗಾದಾಗ ಕುದುರೆಬಾಲ ಹಿಡಿದು ಅಲೆಯುತ್ತ ಉದ್ರೇಕಗೊಳ್ಳುವುದು – ಇವನ್ನೆಲ್ಲ ಬಿಟ್ಟು ಇನ್ನೇನು ಇದೆಯೋ ಮೂರ್ಖ?' – ಜ್ಯೋತಿ ತೀಡಿದ್ದ ಕಾಲನ್ನು ಎತ್ತಲು ಪ್ರಯತ್ನಿಸುತ್ತ ಕೃಷ್ಣಪ್ಪ ಉಸಿರುಕಟ್ಟಿದ.

ಈಗ ಐದೂವರೆ, ಆರು ಗಂಟೆಗೆ ವಿಮಾನದಿಂದ ಗೌರಿ ಇಳಿದಿರುತ್ತಾಳೆ. ನಾಗೇಶ ಅವಳು ಬಿಳಿಸೀರೆಯುಟ್ಟಿದ್ದ ಚಿತ್ರ ನೋಡಿದ್ದಾನೆ ಗುರುತಿಸುತ್ತಾನೆ. ಅವಳು ತನ್ನ ತೀವ್ರತೆ ತೋರಿಸಿಕೊಳ್ಳದಂತೆ 'ಕೃಷ್ಣಪ್ಪ ಗೌಡರು ಹೇಗಿದ್ದಾರೆ?' ಎಂದು ಸಭ್ಯ ನುಡಿಗಳಲ್ಲಿ ವಿಚಾರಿಸಿಕೊಳ್ಳುತ್ತಾಳೆ. ನಾಗೇಶನಿಗೆ ಗೊತ್ತಿದೆ; ವೀರಣ್ಣನ ಕಾರಲ್ಲಿ ಅವಳನ್ನು ತಡಮಾಡದೆ ಸೀದ ಇಲ್ಲಿಗೆ ಕರೆದುಕೊಂಡು ಬರಬೇಕೆಂದು. ಆಮೇಲೆ ಗೆಸ್ಟ್‌ಹೌಸಿಗೆ ಕರೆದುಕೊಂಡು ಹೋಗಬೇಕೆಂದು.ದಾರಿಯಲ್ಲಿ ತನ್ನ ಬಗ್ಗೆ ಎಲ್ಲಾ ನಾಗೇಶನೇ ಹೇಳುತ್ತಾನೆ; ಸ್ಟ್ರೋಕ್ ಬಡಿದದ್ದು: ಮುಖ್ಯಮಂತ್ರಿಯಾಗಬಹುದಾದ್ದು; ಆದರೆ ಅದಕ್ಕಾಗಿ ಆಸೆಪಡುವುದಿಲ್ಲ ಎಂಬುದು; ತತ್ತ್ವಕ್ಕಾಗಿ ಒಪ್ಪಿಕೊಳ್ಳಲೂಬಹುದು ಎಂದು. ನಿಲ್ದಾಣದಿಂದ ಇಲ್ಲಿ ಬರಲು ಅರ್ಧ ಗಂಟೆಯಾದರೂ ಬೇಕು.

ವಿಮಾನ ಲೇಟಾದರೆ?. . . . ಅಥವಾ ಅವಳೇ ಬಟ್ಟೆ ಬದಲಾಯಿಸಲು ಮೊದಲು ಗೆಸ್ಟ್‌ಹೌಸಿಗೆ ಹೋಗಬೇಕೆಂದರೆ.

ಹೊರಗೆ ಕಾರು ನಿಂತ ಶಬ್ದವಾಯಿತು. ಹಾಗಾದರೆ ವಿಮಾನವೇನಾದರೂ ಬೇಗ ಬಂದುಬಿಟ್ಟಿತೆ? ಒಳಗೆ ಯಾರೋ ಬರುತ್ತಿದ್ದಾರೆ. ಹೆಣ್ಣಿನ ಹೆಜ್ಜೆ ಸಪ್ಪುಳವಲ್ಲ.

'ನಮಸ್ಕಾರ'

ಕೃಷ್ಣಪ್ಪನಿಗೆ ಎದುರು ನಿಂತವರನ್ನು ಕಂಡು ನಿರಾಸೆಯಾಯಿತು. ವೀರಣ್ಣನ ಜೊತೆ ನರಸಿಂಹಭಟ್ಟ ಮತ್ತು ರಾಮೇಗೌಡರು ಬಂದಿದ್ದರು. ಮಗುವಿಗೆಂದು ಒಲೆಯ ಮೇಲಿದ್ದ ಹಾಲನ್ನು ತಿಪ್ಪೆಗೆ ಚೆಲ್ಲಿದ್ದ ನರಸಿಂಹಭಟ್ಟ – ಅವನ ಜೊತೆಗೆ ಮೊದಲನೇ ಚುನಾವಣೆಯಲ್ಲಿ ತನ್ನನ್ನು ಸೋಲಿಸಲು ಭೂಮಾಲೀಕರ ಪರವಾಗಿ ನಿಂತಿದ್ದ ರಾಮೇಗೌಡ.

ಮೂವರೂ ಕೂತು ವಟವಟ ಮಾತಾಡಿದರು. ನೀವು ದೊಡ್ಡ ನಾಯಕರು. ದೇಶಸೇವೆಗಾಗಿ ನಿಮ್ಮ ಆರೋಗ್ಯವನ್ನು ಭಗವಂತ ಕಾಯಬೇಕು – ಇತ್ಯಾದಿ. ಗೇಣಿಶಾಸನದ ಬಗ್ಗೆ ನನ್ನ ತಿಳುವಳಿಕೆ ಅಲ್ಪವಾಗಿತ್ತೆಂದೂ, ಬಲಾಚ ಪೃಥಿವೀ ಎನ್ನುವ ತತ್ತ್ವ. ಈಗ ಸಲ್ಲದೆಂದೂ, ಕೃಷ್ಣಪ್ಪಗೌಡರ ಹೋರಾಟದಿಂದ ಈಗ ತಾನು ಕೂಡ ಮಠದ ಸ್ವಲ್ಪ ತೋಟದ ಮಾಲೀಕನಾಗುವುದು ಸಾಧ್ಯವಾಯಿತೆಂದೂ; ಸ್ವಾಮಿಗಳಿಗೂ ತನಗೂ ಈಗ ಅಷ್ಟಕ್ಕಷ್ಟೇ ಎಂದೂ ನರಸಿಂಹಭಟ್ಟ ಹೇಳಿದ. ಮಕ್ಕಳು ತನ್ನಂತೆ ಪೂಜೆ ಪುನಸ್ಕಾರದಲ್ಲಿ ಬದುಕನ್ನು ಕಳೆಯೋದು ಶಕ್ಯವೇ? ಅವರನ್ನು ಓದಿಸಬೇಕಲ್ಲ – ಭಟ್ಟ ಶಿವಮೊಗ್ಗದಲ್ಲಿ ಮನೆ ಮಾಡಿದ್ದ. ಅವನಿಗೆ ಸಿಹಿಮೂತ್ರ ರೋಗ ಬೇರೆ. ದಿನಾ ಇಂಜಕ್ಷನ್ ಆಗಬೇಕು. ಮಠದ ಪಾರುಪತ್ಯಕ್ಕೆ ಅವನೇ ತನ್ನ ಅಕ್ಕನ ಗಂಡನನ್ನು ಗೊತ್ತುಮಾಡಿ ಪೇಟೆ ಸೇರಿದ್ದ. ಗುರುಗಳ ಸೇವೆ ಮಾಡಿದ್ದಕ್ಕೆಂದು ಅವನು ಸ್ವಂತ ಸಾಗುವಳಿಗೆ ಇಟ್ಟುಕೊಂಡ ಹತ್ತೇಹತ್ತು ಎಕರೆ ತೋಟವನ್ನೂ ಬಿಟ್ಟುಕೊಡೆಂದು ಸ್ವಾಮಿಗಳ ಕೇಳುವುದೆ? ತನ್ನ ಮಗನಿಗೇ ಆಶ್ರಮ ಕೊಡಬಹುದಿತ್ತು – ಲಕ್ಷಣಸಂಪನ್ನನಾದ ಹುಡುಗ – ಹೋಗಲಿ ಬೇಡ – ಅವರ ಅಕ್ಕನ ಮಗನಿಗೇ ಕೊಡಲಿ – ಆದರೆ ಅವರ ಸೇವೆ ಮಾಡಿದ್ದಕ್ಕೆ ತೋಟವೂ ಬೇಡವೆ? ಕೃಷ್ಣಪ್ಪಗೌಡರು ಹೋರಾಡಿದ ಫಲವಾದ ಗೇಣಿಶಾಸನವಿಲ್ಲದಿದ್ದಲ್ಲಿ ಖಂಡಿತ ನರಸಿಂಹಭಟ್ಟನಿಗೆ ತೋಟ ದಕ್ಕುತ್ತಿರಲಿಲ್ಲ. ರಾಮೇಗೌಡರಿಗೂ ಅಷ್ಟೆ – ಮಠದ ತೋಟ ಈ ಶಾಸನದಿಂದ ಸ್ವಂತದ್ದಾಯಿತು. ಯಾರ್ಯಾರೋ ಅವರ ಕಿವಿಯಲ್ಲಿ ಊದಿದ್ದರು: ಈ ಕೃಷ್ಣಪ್ಪಗೌಡರು ಗೆದ್ದರೆ ನಿಮಗೆಲ್ಲ ಕೈಯಲ್ಲಿ ಕರಟ ಕೊಟ್ಟು ತಿರುಪೆಯೆತ್ತಿಸುತ್ತಾರೆ ಅಂತ. ಈಗ ಎಲ್ಲರಿಗೂ ತಿಳಿದಿದೆ ಎನ್ನಿ.

'ಏನು ನೀವು ಬಂದ ಕೆಲಸ?'

ಕೃಷ್ಣಪ್ಪನಿಗೆ ಆಯಾಸವಾಗಿತ್ತು. ವೀರಣ್ಣ ವಿವರಿಸಿದ. ಕೃಷ್ಣಪ್ಪನ ಕ್ಷೇತ್ರದಲ್ಲಿ ರೈತರೆಲ್ಲ ಕೂಡಿ ದೊಡ್ಡದೊಂದು ಸನ್ಮಾನ ಏರ್ಪಡಿಸಿದ್ದಾರೆ. ಏಳು ದಿನಗಳೂ ರಾತ್ರೆ ಯಕ್ಷಗಾನ ನಡೆಯಲಿದೆ. ಹಗಲು ಭಾಷಣಗಳು – ರೈತರ ಸಮಸ್ಯೆ ಬಗ್ಗೆ. ಮೊದಲನೇ ದಿನ ಕೃಷ್ಣಪ್ಪಗೌಡರಿಗೆ ಒಂದು ಲಕ್ಷ ರೂಪಾಯಿಯನ್ನು ಅರ್ಪಿಸಲಾಗುತ್ತೆ. ಪ್ರತಿ ರೈತನಿಂದಲೂ ಒಂದೋ ಎರಡೋ ರೂಪಾಯಿ ಪಡೆದು ಒಟ್ಟಾದ ಹಣ ಇದು. ಮೊದಲನೇ ದಿನದ ಸಭೆಗೆ ಮುಖ್ಯಮಂತ್ರಿಯೇ ಪ್ರಧಾನ

ಭಾಷಣಕಾರರು. ಕೃಷ್ಣಪ್ಪಗೌಡರ ಜನಪ್ರಿಯತೆ ಎಂಥದೆಂದರೆ ಈ ಮುಖ್ಯಮಂತ್ರಿಯ ವೈರಿ ಚಂದ್ರಯ್ಯನೂ ಈ ಸಭೆಗೆ ಬರುವ ಆಶಯ ತೋರಿಸಿದ್ದಾರಂತೆ. . . . ಒಟ್ಟಿನಲ್ಲಿ ಇದು ದೇಶದ ಬಡ ರೈತರಿಗೆ ಒಂದು ದೊಡ್ಡ ಜಾತ್ರೆಯಾಗಲಿದೆ. ದೆಹಲಿಯಿಂದ ಕೃಷ್ಣಪ್ಪಗೌಡರ ಪಕ್ಷದ ನಾಯಕರೂ ಬರಲು ಒಪ್ಪಿದ್ದಾರೆ. ಗೌಡರಿಗೆ ಇದನ್ನೊಂದು ಸರ್‌ಪ್ರೈಸ್ ಆಗಿ ಮಾಡಬೇಕೆಂದು ಇಷ್ಟು ದಿನಗಳೂ ಅವರ ಅಭಿಮಾನಿಗಳು ತೆರೆಯಮರೆಯಲ್ಲಿ ಈ ಎಲ್ಲವನ್ನೂ ಸಿದ್ಧಪಡಿಸಿದ್ದಾರೆ.

ವೀರಣ್ಣನ ನಯವಾದ ಮಾತಿಗೆ ವಜ್ರದ ಒಂಟಿಗಳ ಭಟ್ಟನೂ, ಹೊಸದಾಗಿ ಹಲ್ಲುಗಳನ್ನು ಕಟ್ಟಿಸಿಕೊಂಡಿದ್ದ ರಾಮೇಗೌಡನೂ ತಲೆದೂಗುತ್ತ ತಮ್ಮ ಭಾವನೆಗಳನ್ನೂ ಯಥೋಚಿತವಾಗಿ ಸೇರಿಸಿದರು. ಮಾತಿನ ಮಧ್ಯೆ ಕೃಷ್ಣಪ್ಪ,

'ವೀರಣ್ಣ, ಗೌರಿ ದೇಶಪಾಂಡೆಯವರ ವಿಮಾನ ಬಂತೋ ಇಲ್ಲವೊ ವಿಚಾರಿಸ್ತೀರ?' ಎಂದ.

ವೀರಣ್ಣ ಎದ್ದು ನಿಂತ. ಹೊರಗಿಂದ ಕಾರಿನ ಶಬ್ದವಾಗಲು 'ಅವರೇ ಇರಬಹುದು, ಗೆಸ್ಟ್‌ಹೌಸಿಗೆ ಕಳಿಸಿಬಿಡಿ' ಎಂದು ಕೂತ.

'ಈಗ ನಾನು ಅವರ ಹತ್ರ ಮಾತಾಡಬೇಕು. ಆಮೇಲೆ ನೋಡುವ' ಎಂದು ಕೃಷ್ಣಪ್ಪ ಬಲಗೈ ಎತ್ತಿ ನಮಸ್ಕಾರ ಮಾಡಿದ. ಭಟ್ಟ, ಗೌಡ, ವೀರಣ್ಣ ಎದ್ದು ಕೈಮುಗಿದು ಹೊರಟರು.

***

ಕೃಷ್ಣಪ್ಪನಿಗೆ ತನ್ನ ಕಣ್ಣನ್ನು ನಂಬಲಾಗಲಿಲ್ಲ. ಗೌರಿ ಎದುರು ನಿಂತಿದ್ದಳು – ಬ್ಲೂ ಜೀನ್ಸಿನ ಮೇಲೆ ತೆಳುವಾದ ಲಖ್ನೋ ಜುಬ್ಬ ತೊಟ್ಟು ಅವಳ ಬೆನ್ನಿನ ಮೇಲೆ ಚೆಲ್ಲಿದ್ದ ಉದ್ದ ಕೂದಲನ್ನು ಒಂದು ಕರ್ಚಿಫಿನಿಂದ ಬಿಗಿದಿದ್ದಳು. ಅಲ್ಲಿ ಇಲ್ಲಿ ಬಿಳಿಯ ರೇಖೆಗಳು ಕೂದಲಲ್ಲಿ ಕಂಡವು. ಬಿಟ್ಟರೆ ಹಿಂದಿನ ಗೌರಿಯೇ ಇವಳು. ಅದೇ ಸಪುರವಾದ ಮೈಕಟ್ಟು. ಅದೇ ಹೊಳೆಯುವ ಕಣ್ಣುಗಳು. ತೀವ್ರತೆಯನ್ನು ಸಹಿಸಿಕೊಳ್ಳಲು ಗೌರಿ ನಗುತ್ತ ಹೇಳಿದಳು:

'ಈಗ ನೀವು ಆಫ್ರಿಕನ್ ಪ್ರಿನ್ಸ್‌ಹಾಗೆ ಕಾಣುತ್ತಿಲ್ಲ. ಗಡ್ಡದಿಂದಾಗಿ ಆಫ್ರಿಕನ್ ಗಾಡ್‌ನಂತೆ ಕಾಣುತ್ತಿದ್ದೀರಿ. ರೂಮಲ್ಲೆ ಇದ್ದೂ ಇದ್ದೂ ಸ್ವಲ್ಪ ಬೆಳ್ಳಗೆ ಬೇರೆ ಆಗಿದ್ದೀರಿ. . . .'

ಕೃಷ್ಣಪ್ಪ ಏನೂ ಮಾತಡಲಾರದೆ ವೀಲ್‌ಚೇರಿನ ಮೇಲೆ ಕೂತಿದ್ದ. ಅವನ ಕಣ್ಣುಗಳಲ್ಲಿ ನೀರಾಡುತ್ತ ಇತ್ತು. ಹಿಂದಿನ ಬಿಗಿ, ಗರ್ವಗಳು ತನ್ನಿಂದ ಮಾಯವಾಗಿರುವುದನ್ನು ಈ ತನ್ನ ಉದ್ವೇಗದಿಂದ ಗೌರಿ ಗಮನಿಸುವಳೆಂಬುದು ಕೃಷ್ಣಪ್ಪನನ್ನು ಬಾಧಿಸಲಿಲ್ಲ. ಅವಳು ಅಮೆರಿಕಕ್ಕೆ ಹೊರಟು ನಿಂತಾಗ 'ನೀನು ನನಗೆ ಬೇಕು. ಹೋಗಬೇಡ' ಎಂದು ಅವನು ಅನ್ನಬಹುದಿತ್ತು. ಅಂದಿರಲಿಲ್ಲ. ಆಗ ತಮಗೇನು ಬೇಕೆಂಬುದೇ ಅವನಿಗೆ ಸ್ಪಷ್ಟವಾಗದಷ್ಟು ಚೈತನ್ಯವಿತ್ತು. ಈಗ ಬಲಗೈಯನ್ನು ಮಾತ್ರ ಕೃಷ್ಣಪ್ಪ ಎತ್ತಬಲ್ಲ – ಎತ್ತಿದ. ಗೌರಿ ಅವನ ಬಲ ಪಕ್ಕದಲ್ಲಿ ನಿಂತು ಅವನ ತಲೆಯನ್ನು ತನ್ನ ಹೊಟ್ಟೆಗೆ

ಒತ್ತಿಕೊಂಡು ತಲೆಯ ಗುಂಗುರು ಕೂದಲಲ್ಲಿ ಬೆರಳಾಡಿಸಿದಳು. ಅವಳ ಹೊಟ್ಟೆ ಒದ್ದೆಯಾಯಿತು. ಕೃಷ್ಣಪ್ಪನ ಬಲಗೈ ಅವಳನ್ನು ಭದ್ರವಾಗಿ ಅಪ್ಪಿತ್ತು. 'ದೆಹಲಿಗೆ ಬಂದವಳೇ ಯಾಕೆ ಬರಲಿಲ್ಲ ?' ಎಂದ. 'ನಿಮಗೆ ನಾನು ಬರೋದು ಬೇಕೊ, ಬೇಡವೊ ಗೊತ್ತಿರಲಿಲ್ಲ' ಎಂದು ಗಂಭೀರವಾಗಿ ಹೇಳಿ ತನ್ನ ಮಾತಿನ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳಲು ಹಾಸ್ಯಮಾಡಿದಳು: 'ನಿಮ್ಮ ಜಂಬ ಇಳೀಲಿ ಅಂತ ಕಾದಿದ್ದೆ.'

***

ಇಬ್ಬರೂ ನಕ್ಕರು. ಗೌರಿ ಕುರ್ಚಿಯ ಮೇಲೆ ಕೂತು ರೂಮಿಯ ಸುತ್ತ ನೋಡಿದಳು. ಗುಲಾಬಿ ಹೂಗಳಲ್ಲಿ ಅವಳ ಕಣ್ಣುಗಳು ನಿಂತದ್ದು ಕಂಡು ಕೃಷ್ಣಪ್ಪ ಅವಳ ಮನೆಯ ಗುಲಾಬಿ ತೋಟವನ್ನು ನೆನೆಸಿಕೊಂಡ. ಗೌರಿ ಕೂಡ ಕೃಷ್ಣಪ್ಪ ದಿವಾನಖಾನೆಯಲ್ಲಿ ತೋಟದ ಗುಲಾಬಿಯನ್ನು ನೋಡುತ್ತ ಕೂತಿದ್ದ ದಿನವನ್ನೇ ಚಿಂತಿಸುತ್ತಿದ್ದಳು. ಅವನ ಬಾಯಿಯ ಮಾತನ್ನ ಅವಳು ಕಸಕೊಂಡಂತೆ ಹೇಳಿದಳು:

'ನಂಜಪ್ಪನೋರು ತೀರಿಹೋದರು. ಈಗ ಅಮ್ಮ ಡೆಲ್ಲೀಲಿ ನನ್ನ ಜೊತೆ ಇದಾರೆ.'

'ಕೆಲಸ ಇಷ್ಟವಾಗ್ತ ಇದೆಯ ?'

'ಇದೆ. ರಿಂಬೋ ಮೇಲೆ ನಾನು ಬಂದ ಒಂದು ಪುಸ್ತಕ ಅಚ್ಚಾಗ್ತ ಇದೆ.'

ಅದೇ ಹಿಂದಿನ ನಾಚಿಕೆ ಗಾಂಭೀರ್ಯ ಬೆರೆತ ಧಾಟಿಯಲ್ಲಿ ಗೌರಿ ಮಾತಾಡುತ್ತಿದ್ದಳು.

ಕೃಷ್ಣಪ್ಪನ ಕಣ್ಣುಗಳು ತನ್ನ ಮುಖವನ್ನು ಇಡಿಯಾಗಿ ಪಡೆಯುತ್ತಿರುವುದು ಕಂಡು ಗೌರಿ ಚಿಕ್ಕ ಹುಡುಗಿಯಂತೆ ಕೆಂಪಾದಳು. ಅವನ ಗಮನವನ್ನು ಬೇರೆ ಕಡೆ ಎಳೆಯಲು ಹೇಳಿದಳು:

'ಅಮೆರಿಕಾದಲ್ಲಿ ನಾನು ಒಬ್ಬ ಸೊಷಿಯಾಲಜಿಸ್ಟನ್ನು ಮದುವೆಯಾಗಿದ್ದೆ. ಮದುವೆ ಅಂದರೆ ಅವನ ಒಟ್ಟಿಗಿದ್ದೆ. ಸಭ್ಯ ಮನುಷ್ಯ – ಮಾರ್ಕ್ಸವಾದಿ – ಕ್ಯಾಂಪಸ್‌ನಲ್ಲಿ ಮಾರ್ಟಿನ್ ಲೂಥರ್‌ಕಿಂಗ್ ಪರ ಚಳವಳೀಲಿ ಭಾಗವಹಿಸಿದ್ದ – ನಾನೂ ಕೂಡ. ಈಗ ನನಗೂ ರಾಜಕೀಯಾಂದ್ರೆ ಆಸಕ್ತಿ ಗೊತ್ತ ? ನಮ್ಮದೊಂದು ಗುಂಪಿದೆ ಡೆಲ್ಲೀಲಿ. ನಮ್ಮ ಪ್ರಧಾನಿ ಡಿಕ್ಟೇಟರ್ ಆಗ್ತಾರೇಂತ ನಮಗೆ ಭಯ. ನೀವು ಏನಾದರೂ ಮಾಡಿ ಪ್ರಧಾನಿ ಕಡೇವರು ಅಧಿಕಾರಕ್ಕೆ ಬರ್ದಿದ್ದಂಗೆ ನೋಡಿಕೋಬೇಕು. ನಾಗೇಶ್ ಎಲ್ಲ ಹೇಳಿದರು. ಸಿಚುಯೇಶನ್ ತುಂಬ ಎಕ್ಸೈಟಿಂಗ್ ಆಗಿದೆ. . . . ಅದೇ ಎಡ್ಡಿ ವಿಷಯ ಹೇಳಕ್ಕೆ ಹೋಗಿ ಏನೇನೊ ಹೇಳಿಬಿಟ್ಟೆ. ನಾನು ಸಿಗರೇಟ್ ಸೇದಬಹುದ ?'

ಹಿಂದಿನ ಗೌರಿಯೇ, ಆಳವಾಗಿ ಅನ್ನಿಸಿದ್ದನ್ನು ಬಚ್ಚಿಟ್ಟುಕೊಳ್ಳಲು ಏನೇನೋ ಮಾತಾಡಿಬಿಡುವಳು. ಕೆಣಕಲೆಂದು ಕೆಲವೊಮ್ಮೆ

ವಿರುದ್ಧವಾದ್ದನ್ನು ಹೇಳುವಳು. ಗೌರಿ ಪ್ಯಾಕಿನಿಂದ ಸಿಗರೇಟು ತೆಗೆದು ಹಚ್ಚಿ,

‘ನೀವು ಈಗಲೂ ಸೇದುತ್ತೀರ?’ ಎಂದಳು.

‘ಬಿಟ್ಟಿದ್ದೇನೆ. ಈಗ ಕೊಟ್ಟರೆ ಒಂದು ಎಳೀತೀನಿ’ ಎಂದ. ಗೌರಿ ಸಿಗರೇಟು ಸೇದಿಯಾಳೆಂದು ಕೃಷ್ಣಪ್ಪ ಯಾವತ್ತೂ ಊಹಿಸಿರಲಿಲ್ಲ. ಗೌರಿ ತನಗೆ ಹಚ್ಚಿಕೊಂಡ ಸಿಗರೇಟನ್ನ ‘ಇಫ್‌ಯು ಡೊಂಟ್ ಮೈಂಡ್’ ಎಂದು ಕೃಷ್ಣಪ್ಪನ ತುಟಿಗಳಿಗೆ ಸಿಕ್ಕಿಸಿದಳು. ಬದಲಾದ ಗೌರಿಯನ್ನು ಒಪ್ಪಿಕೊಳ್ಳಲು ಕೃಷ್ಣಪ್ಪ ಪ್ರಯತ್ನಿಸುತ್ತಿದ್ದಂತೆ,

‘ಈಗಲೂ ನೀವು, ಫ್ಯೂಡಲ್ಲಾಗೇ ಉಳ್ದಿದೀರ? ಐ ಹೋಪ್‌ನಾಟ್. ನಾನು ಸಿಗರೇಟ್ ಸೇತ್ತೀನಿ ಅಂತ ಶಾಕಾಯ್ತ?’

ಎಂದು ತಲೆಯನ್ನು ಹಿಂದಕ್ಕೆ ತಳ್ಳಿ ಕೂದಲನ್ನು ಕೈಯಿಂದ ಎತ್ತಿ ಬೆನ್ನಿನ ಮೇಲೆ ಹಾಕಿ ನಕ್ಕಳು. ಈ ಭಂಗಿ ಕೂಡ ಗೌರಿಯಲ್ಲಿ ಹೊಸದು. ಇದು ಅಸಹಜ ಅಂತ ತನಗೆ ಅನ್ನಿಸಿತೆ, ಅದಕ್ಕೆ ತನ್ನ ಸ್ವಭಾವ ಕಾರಣವೆ? ಎಂದು ಕೃಷ್ಣಪ್ಪ ಯೋಚಿಸುತ್ತಿದ್ದಾಗ ಗೌರಿ ತುಂಟಾಗಿ ಅವನನ್ನು ನೋಡುತ್ತಿದ್ದಳು. ಇದ್ದಕ್ಕಿದ್ದಂತೆ ಗಂಭೀರವಾಗಿ ಹೇಳಿದಳು:

‘ಅಮೇರಿಕನ್ ಮೇಲ್ ಬಗ್ಗೆ ನನಗಿದ್ದ ಭ್ರಾಂತಿ ಬೇಗ ಹರೀತು. ನೀವು ಫ್ಯೂಡಲ್ ಎಂದೆ. ಅವರೂ ಕೂಡ ಹೆಂಗಸರ ಬಗ್ಗೆ ಫ್ಯೂಡಲ್ಲೆ. ಎಡ್ಡಿ ಮಾರ್ಕ್ಸಿಸ್ಟಅಲ್ಲವ? ಆದರೂ ಅವನಿಗೆ ಗೊತ್ತಾಗದೇನೇ ಅವನು ಫ್ಯೂಡಲ್ಲಾಗೇ ಉಳಿದಿದ್ದ. ಈಗಲೂ ಫ್ರೆಂಡ್ಸಆಗಿ ನಾವು ಉಳ್ದಿದೀವಿ ಅನ್ನಿ.’

ಕೃಷ್ಣಪ್ಪನ ಮುಖ ಕಂದಿದ್ದನ್ನು ಗೌರಿ ಗಮನಿಸಿದಳು. ‘ನಿನ್ನನ್ನು ಹಟ್‌ಮಾ‌ಡಿದನ’ ಎಂದು ಕೇಳಬೇಕೆನ್ನಿಸಿದ್ದನ್ನು ತಡೆದುಕೊಂಡಳು. ಅಮೇರಿಕಾದಲ್ಲಿ ತಾನು ಮದುವೆಯಾಗಿದ್ದು ಕೃಷ್ಣಪ್ಪನಿಗೆ ನೋವುಂಟು ಮಾಡಿದೆ ಎಂಬುದನ್ನು ಗಮನಿಸಿ ಅವಳಿಗೆ ಸಂತೋಷವಾಯಿತು. ಆದರೆ ಅದನ್ನು ತೋರಗೊಡದೆ ಗೌರಿ,

‘ನಿಮ್ಮ ಹೆಂಡತಿ ಮಗಳು ಎಲ್ಲಿ?’ ಎಂದಳು.

ಕೃಷ್ಣಪ್ಪ ಒಂದು ನಿಮಿಷ ಮಾತಾಡಲಿಲ್ಲ. ತಲೆತಗ್ಗಿಸಿ ನಿಧಾನವಾಗಿ ಹೇಳಿದ

‘ನಾನು ಯಾವತ್ತಾದರೂ ಸಾಯಬಹುದು ಗೌರಿ, ಯಾಕೆ ಸುಳ್ಳೆ ಸುಳ್ಳೆ ನಿಮ್ಮೆದುರು ನಟನೆ ಮಾಡಬೇಕು? ಹೆಂಡತೀಂತ ಒಬ್ಬಳು ಇದಾಳೆ. ಆದರೆ ಅವಳನ್ನು ನಾನು ಹೊಡೀತೀನಿ.’

ತನ್ನ ನೋವು ಗೌರಿಗೆ ತಿಳಿದಿರಬಹುದು – ಅವಳೂ ಮೂಕವಾದಳು.

‘ನಾಗೇಶಾ’ ಎಂದು ಕೃಷ್ಣಪ್ಪ ಕರೆದ. ನಾಗೇಶ ಸಂಭ್ರಮದಿಂದ ಒಳಗೆ ಬಂದು ಬಡಬಡಿಸಿದ,

‘ನಿಮ್ಮದೊಂದು ಜೀವನ ಚರಿತ್ರೇನ್ನ ಸನ್ಮಾನದ ಹೊತ್ತಿಗೆ ಪಬ್ಲಿಷ್ ಮಾಡ್ತಾರಂತೆ. ಈಗಲೇ ನಾನು ಅದನ್ನು ಬರೀಲಿಕ್ಕೆ ಶುರು ಮಾಡಿಬಿಟ್ಟಿದೀನಿ. ಬಿಹಾರ್‌ನಲ್ಲಿ ನಡೆದ ಆಲ್ ಇಂಡಿಯಾ ಕಿಸಾನ್ ಸಮ್ಮೇಳನಕ್ಕೆ ನೀವು ಪ್ರೆಸಿಡೆಂಟ್ ಆದರಲ್ಲ ಆಗ. . . .’

ಕೃಷ್ಣಪ್ಪ ನಕ್ಕು, ಅವನ ಮಾತು ತಡೆದು,

‘ಬರಿಯಯ್ಯಾ ಬರಿ, ಸೀತೇನ್ನ ಬರಹೇಳು. ಗೌರೀನ್ನೂ ಕರ್ಕೊಂಡು ಬಾ’ ಎಂದು, ಗೌರಿಯ ಆಶ್ಚರ್ಯ ಗಮನಿಸಿ ಹೇಳಿದ:

‘ನನ್ನ ಮಗಳಿಗೆ ನಿಮ್ಮ ಹೆಸರಿಟ್ಟಿದ್ದೇನೆ.’

ನಾಗೇಶ ಸ್ವಲ್ಪ ಹೊತ್ತಾದ ಮೇಲೆ ಗೌರಿಯನ್ನು ಕರೆದುಕೊಂಡು ಬಂದು ಹೇಳಿದ: ‘ಸೀತಮ್ಮನಿಗೆ ತಲೆನೋವಂತೆ – ಮಲಗಿದಾರೆ. ಗೌಡರೇ, ನೀವು ಮಲ್ನಾಡಿನ ಒಂದು ಹಳ್ಳೀಲಿ ಹುಟ್ಟಿ, ಆಲ್ ಇಂಡಿಯಾ ರೈತರ ನಾಯಕರಾದರಲ್ಲ – ಅದರ ಮೇಲೆ ಒತ್ತು ಬೀಳಬೇಕು ನಿಮ್ಮ ಜೀವನ ಚರಿತ್ರೇಲಿ ಅನ್ನಿಸತ್ತೆ’ ನಾಗೇಶನ ಉತ್ಸಾಹದ ಧಾಟಿಯಿಂದ ಕೃಷ್ಣಪ್ಪನಿಗೆ ಮುಜುಗರವಾಗಿತ್ತು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಗೌರಿ ಮಗುವನ್ನು ಕೈಗಳಿಂದ ಹಿಡಿದು ಮುಖವನ್ನು ಸವರಿ –

‘ನಿಮ್ಮದೇ ಕಣ್ಣುಗಳು’ ಎಂದಳು.

ತಾಯಿಯ ದುಗುಡದಿಂದ ಮಗು ಮತ್ತೆ ಮೂಕವಾದದ್ದನ್ನು ಕೃಷ್ಣಪ್ಪ ಗಮನಿಸಿದ. ಯಾರಿಂದಲೂ ಸಾಮಾನ್ಯವಾಗಿ ಮುಟ್ಟಿಸಿಕೊಳ್ಳಲು ಇಚ್ಛೆಪಡದ ಮಗು ಇವತ್ತು ಪರಕೀಯಳೊಬ್ಬಳು – ಅದೂ ಪ್ಯಾಂಟ್ ತೊಟ್ಟವಳು – ತಬ್ಬಿಕೊಂಡಾಗಲೂ ಸುಮ್ಮನಿತ್ತು.

‘ಸ್ವೀಟ್ ಚೈಲ್ಡ್’ ಎಂದು ಗೌರಿ ಮತ್ತೊಂದು ಸಿಗರೇಟ್ ಹತ್ತಿಸಿದಳು. ತೋರಿಸಿಕೊಳ್ಳದಿದ್ದರೂ ಗೌರಿ ಉದ್ವಿಗ್ನಳಾದ್ದನ್ನು ಕೃಷ್ಣಪ್ಪ ಗಮನಿಸಿ,

‘ನೀವೀಗ ಗೆಸ್ಟ್‌ಹೌಸಿಗೆ ಹೋಗಿ ನಾಳೆ ಬನ್ನಿ. ನಿಮಗೆ ರೆಸ್ಟ್‌ಬೇಕು’ ಎಂದ. ಒಳಗಿನಿಂದ ಅವನ ಹೆಂಡತಿ ಬಿಕ್ಕಿ ಬಿಕ್ಕಿ ಪ್ರಾಯಶಃ ಅಳುತ್ತಿರಬಹುದೆಂದು ಅವನು ಊಹಿಸಿದ. ತನಗೆ ಮಾತ್ರ ಕೇಳಿಸುವಂತಿದ್ದ ಈ ಅಳು ಗೌರಿಗೂ ಕೇಳಿಸುತ್ತಿರಬಹುದೆ? ನಾಗೇಶನಿಗೆ? ಆದರೆ ಬಿಹಾರದಲ್ಲಿ ರೈತರು ತನ್ನನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೋದದ್ದನ್ನೇ ಪ್ರಾಯಶಃ ಕಲ್ಪಿಸಿಕೊಳ್ಳುತ್ತಿದ್ದ ನಾಗೇಶನ ಉತ್ಸಾಹದಿಂದ ಬಿರಿಯುತ್ತಿದ್ದ ಮುಖ ನೋಡಿ ಕೃಷ್ಣಪ್ಪನಿಗೆ ಎಲ್ಲ ಅಸಬಂಧ್ಧವೆನ್ನಿಸಿತು.

'ನಿಮಗೂ ಕೂಡ' ಎಂದು ಗೌರಿ ಎದ್ದು ನಿಂತು 'ಬೈ' ಎಂದು ನಾಗೇಶನ ಜೊತೆ ಹೋದಳು. ಮಗುವನ್ನು ತಡವುತ್ತ ಕೃಷ್ಣಪ್ಪ ಸುಮ್ಮನೇ ಕೂತ. ಅವನಿಗೆ ಅರಿವಾಗದಂತೆಯೇ ಜಡವಾಗಿದ್ದ ಅವನ ಎಡಗೈ ಬೆರಳುಗಳು ಎಡಗಾಲು ಚಲಿಸಲು ಹವಣಿಸುತ್ತ ತಮ್ಮ ವ್ಯಾಯಾಮದಲ್ಲಿ ತೊಡಗಿದ್ದವು. ಹೆಂಡತಿ ಅಳುವುದು ಕೂಡ ಜೋರಾಗಿಯೇ ಕೇಳುಸುತ್ತಿತ್ತು. ಕೃಷ್ಣಪ್ಪನಿಗೆ ಸಾಯಬೇಕೆಂಬ ಆಸೆ ಮತ್ತೆ ಮೊಳೆಯಿತು.

ಮಾರನೇ ಬೆಳಿಗ್ಗೆ ಉರಿಯುವ ದೊಂದಿಯಂತೆ ಕಾಣುವ ಕೆಂಪು ಗುಲಾಬಿಗಳ ಬಂಚೊಂದನ್ನು ಕೈಯಲ್ಲಿ ಹಿಡಿದು ಬಿಳಿ ಸೀರೆ ಬಿಳಿ ಕುಪ್ಪಸ ತೊಟ್ಟು ಸಂಭ್ರಮದಲ್ಲಿ ಜ್ಯೋತಿ ಕೋಣೆಯೊಳಗೆ ಬಂದಳು. ನಿನ್ನೆಯಿಂದ ಅವಳ ಬಾಯ್‌ಫ್ರೆಂಡ್ ಕೆಲಸ ಪ್ರಾರಂಭಿಸಿದ್ದಾನೆ. ಕೃಷ್ಣಪ್ಪ ಮಾತಾಡುವ ಮುಂಚೆಯೇ ಅವಳು –

'ಅವರು ಹೊರಗೆ ಇದ್ದಾರೆ – ಥ್ಯಾಂಕ್ ಮಾಡಿ ಹೋಗೋಣಾಂತ ಆಟೋರಿಕ್ಷಾ ನಿಲ್ಲಿಸಿಕೊಂಡಿದ್ದಾರೆ.'

ಎಂದು ಕೃಷ್ಣಪ್ಪನ ಒಪ್ಪಿಗೆ ಕಂಡು ಹೊರಗೆ ಓಡಿದಳು. ಸುಂದರವಾದ ಮೀಸೆಯ ಆಟಗಾರನ ಮೈಕಟ್ಟಿನ ತನ್ನ ಗೆಳೆಯನನ್ನು ಒಳಗೆ ಕರೆತಂದು, 'ಎಡ್ವಿನ್' ಎಂದಳು. ಕೃಷ್ಣಪ್ಪ ಅಸೂಯೆ ಖುಷಿಗಳಿಂದ ಅವನಿಗೆ ಬಲಗೈಯನ್ನು ಒಡ್ಡಿ 'ಕಂಗ್ರಾಚುಲೇಶನ್ಸ' ಎಂದ. ಎಡ್ವಿನ್ ಬಲವಾಗಿ ಅವನ ಕೈಕುಲಕಿ ತನ್ನ ಕೃತಜ್ಞತೆ ಹೇಳಿ ಕೆಲಸಕ್ಕೆ ಹೊರಟುಹೋದ. ಹೂವುಗಳನ್ನು ದಾನಿಯಲ್ಲಿ ಮಗ್ನಳಾಗಿ ಜೋಡಿಸುತ್ತ ನಿಂತ ಜ್ಯೋತಿಯ ಓಡಾಟದಲ್ಲಿದ್ದ ಹಿತವಾದ ಆಯಾಸ ಗಮನಿಸಿ ಕೃಷ್ಣಪ್ಪ ಮೃದುವಾಗಿ ನಗುತ್ತ,

'ನಿನ್ನೆ ಕೆಲಸ ಸಿಕ್ಕಿದ್ದನ್ನ ಸೆಲೆಬ್ರೇಟ್ ಮಾಡಿದಿರ?' ಎಂದ.

ಹೌದೆಂದು ತನ್ನ ಭಂಗಿಯಲ್ಲಿ ಮಾತ್ರ ಸೂಚಿಸಿ ಹೂಜೋಡಿಸುತ್ತಿದ್ದ ಜ್ಯೋತಿ ಕೃಷ್ಣಪ್ಪನ ಮೌನವಾದ ನಗುವನ್ನು ಊಹಿಸುತ್ತ ಕೆಂಪಾದಳು. ಹುಸಿಕೋಪದಲ್ಲಿ ತಿರುಗಿ, ಕೃಷ್ಣಪ್ಪನನ್ನು ನೋಡಿ, ಪುಟ್ಟ ಹೆಜ್ಜೆಗಳಲ್ಲಿ ಅವನು ಮಲಗಿದ್ದಲ್ಲಿ ಧಾವಿಸಿ,

'ಡೋಂಟ್ ಬಿ ನಾಟಿ' ಎಂದು ಅವನ ಕೆನ್ನೆಯನ್ನು ಚಿವುಟಿ, ತಾನೇನು ಮಾಡಿಬಿಟ್ಟೆನೆಂದು ಹೆದರಿದಂತೆ ಕಣ್ಣರಳಿಸಿ ನಾಲಿಗೆ ಕಚ್ಚಿಕೊಂಡಳು.

'ಪ್ಯಾನ್‌ರೆಡಿಯಾ?' ಎಂದಳು, ತನ್ನ ಕಸುಬಿನ ನಿರ್ಭಾವ ಧಾಟಿಯಲ್ಲಿ, ಜ್ಯೋತಿಯ ಕುಶಲವಾದ ಕೈ ಅವನನ್ನು ಶುಚಿಮಾಡುವಾಗ ಅದರ ಧೃಡತೆ, ಮಾರ್ದವ, ಕಸುಬುಗಾರಿಕೆಗಳಿಂದ ಕೃಷ್ಣಪ್ಪ ಚಕಿತನಾಗಿ ಮಗುವಿನಂತೆ ತನ್ನನ್ನು ಒಪ್ಪಿಸಿಕೊಳ್ಳುತ್ತಿದ್ದ. ತಾನು ಹೇಸುತ್ತಿದ್ದ ವಿಸರ್ಜನೆಯ ಕ್ರಿಯೆಗಳನ್ನು ಜ್ಯೋತಿ ಬಹುಸಾಮಾನ್ಯವೆಂಬಂತೆ ನಿರ್ವಹಿಸಿ ಬಿಡುತ್ತಿದ್ದಳು. ತನ್ನ ಮೈಯನ್ನು ಬಿಸಿಯಾದ ಟವಲ್‌ನಿಂದ ಉಜ್ಜಿದ ಮೇಲೆ ಪೌಡರನ್ನು ಇಡೀ ಮೈಗೆ ಬಳಿದು ಇಸ್ತ್ರಿಯಾದ ಬಟ್ಟೆ ತೊಡಿಸಿ, ತಲೆ ಬಾಚಿ, ಕುರ್ಚಿಯ ಮೇಲೆ ಕೂರಿಸಿ, ಹಾಸಿಗೆಯನ್ನು ಬಿಳಿಯಾದ ಶೀಟ್‌ಗಳಿಂದ ಸಿದ್ಧಪಡಿಸಿ ಅವನನ್ನು ಹೊರಗೆ ತಳ್ಳಿಕೊಂಡು ಹೋಗುವವಳು. ಇಷ್ಟೆಲ್ಲ ಕೊಳೆ ಕಲ್ಮಷ ಕ್ಷುಲ್ಲಕ ವಿವರಗಳಲ್ಲಿ ಅವಳು ತೊಡಗಿದ್ದರೂ ಸದಾ ಶುಭ್ರೆಯಾಗಿ ಕಾಣುವವಳು. ಇವತ್ತು ಅವಳು ಕೃಷ್ಣಪ್ಪನಿಗೆ ಪ್ರಸೆಂಟಾಗಿ ತಂದಿದ್ದ ಕೆಂಡಸಂಪಿಗೆಯ ವಾಸನೆಯ ಕೊಲೋನನ್ನು

ಇವನ ಕಂಕುಳ ಸಂದಿ ಕತ್ತು ಎದೆಗಳಿಗೆ ಬಳಿದಳು. ಅದರ ಜ್ವಾಲೆಯಂಥ ವಾಸನೆ ತನ್ನನ್ನು ಆಪ್ತವಾಗಿ ನೆಕ್ಕುತ್ತಿರುವ ಸುಖದಲ್ಲಿ ಅವನು ಕಣ್ಣುಗಳನ್ನು ಮುಚ್ಚಿಕೂತ.

'ಇದರ ವಾಸನೇಂದ ನಿಮಗೆ ತಲೆನೋವು ಬಂದೀತು ?' ಎಂದು ಅವಳು ಅನುಮಾನಿಸಿದಾಗ,

'ಇಲ್ಲ ನನಗೊಬ್ಬರು ಜೋಯಿಸ್ರು ಅಂತ ಮೇಸ್ತ್ರೀದ್ದಾರೆ ಊರಲ್ಲಿ. ಅವರ ಮನೆ ಹಿತ್ಲಲ್ಲಿ ಒಂದು ಕೆಂಡಸಂಪಿಗೆ ಮರ ಇತ್ತು. ಅದನ್ನು ಬೆಳಗಿನ ಝಾವ ಕೋತಿ ಹಾಗೆ ಹತ್ತಿ ಬುಟ್ಟಿ ತುಂಬ ಹೂಕೊಯ್ದು ಜೋಯಿಸರ ದೇವರ ಪೂಜೆಗೆ ಕೊಡ್ತಿದ್ದೆ' ಎಂದ. ಕಣ್ಣು ಮುಚ್ಚಿ ಕೂತಾಗ ಅವನಿಗೆ ನೆನಪಾಗುತ್ತಿದ್ದುದನ್ನು ಜ್ಯೋತಿಗೆ ಅರ್ಥವಾಗದೆಂದು ಹೇಳಲಿಲ್ಲ. ಏಕಾದಶಿ ದಿವಸ ಜೋಯಿಸರಾಗಲೀ, ರುಕ್ಮಿಣಿಯಮ್ಮನಾಗಲಿ ಊಟ ಮಾಡುತ್ತಿರಲಿಲ್ಲ. ಅವತ್ತು ಅವರ ಬತ್ತಿದ ಮುಖ ಕಂಡು ಕೃಷ್ಣಪ್ಪನಿಗೆ ಮೋಜೆನ್ನಿಸುವುದು. ರುಕ್ಮಿಣಿಯಮ್ಮ ಅವತ್ತು ತನ್ನ ಹತ್ತಿರ ಮಾತು ಕೂಡ ಆಡರು. ಆದರೆ ಮಾರನೇ ದಿನ ಸೂರ್ಯೋದಯಕ್ಕೆ ಮುಂಚೆಯೇ ಜೋಯಿಸರ ಮನೆಯಿಂದ ಜಾಗಟೆ ಶಂಖಗಳ ಶಬ್ದ ಕೇಳಿಬಂದದ್ದೇ ಕೃಷ್ಣಪ್ಪ ಓಡಿಹೋಗಿ ಅವರ ಹಿತ್ತಲಲ್ಲಿ ನಿಲ್ಲುವನು, ಬಿಸಿಬಿಸಿ ದೋಸೆಯ ವಾಸನೆ ಹೀರುತ್ತ, ಕಾದ ಹೆಂಚಿನ ಮೇಲೆ ದೋಸೆಯ ಹಿಟ್ಟು ಚುಂಯ್ ಎಂಬ ಸದ್ದು ಮಾಡುವುದು. ಎಲ್ಲ ಸದ್ದುಗಳು ಸ್ತಬ್ಧವಾದಾಗ ದೇವರಿಗೆ ಈ ದೋಸೆಗಳನ್ನು ನೈವೇದ್ಯಕ್ಕಿಡುತ್ತಿದ್ದಾರೆಂದು ಅರ್ಥ. ಸ್ವಲ್ಪ ಹೊತ್ತಾದ ಮೇಲೆ ಹಿತ್ತಲಿನ ಚಾವಡಿಯಲ್ಲಿ ಎಲೆಹಾಕಿ ರುಕ್ಮಿಣಿಯಮ್ಮ ನಸುನಗುತ್ತ ಚಿಮ್ಮಿಕೊಂಡು ಓಡಿ ಬರುವ ಕೃಷ್ಣಪ್ಪನಿಗೆ ಕಾಯುವರು. ಬಿಸಿಯಾದ ದೋಸೆ ಬಡಿಸಿ ತೆಂಗಿನಕಾಯಿ ಚಟ್ನಿಯನ್ನು ಇಕ್ಕುವರು. ತಮ್ಮ ಮನೆಯಿಂದಲೇ ಜೋಯಿಸರಿಗೆ ಪ್ರತಿತಿಂಗಳೂ ಕೊಡುವ ಕಾಯಿಯಿಂದ ಮಾಡಿದ ಖಾರವಾದ ಚಟ್ನಿ. ಕೃಷ್ಣಪ್ಪ ಹೊಟ್ಟೆತುಂಬ ದೋಸೆಯನ್ನು ತಿಂದು, ಎಲೆಯನ್ನು ಬಿಸಾಕಿ, ತಿಂದ ಜಾಗವನ್ನು ಸಗಣಿಯಿಂದ ಸಾರಿಸಿ, ದೊಡ್ಡವ್ವ ಧಾರೆಯಾಗೆರೆಯುವ ನೀರಿನಿಂದ ಚಾವಡಿ ಕೆಳಗೆ ನಿಂತು ಕೈತೊಳೆದು, ಮನೆಗೆ ಓಡಲಿದ್ದಾಗ ಜುಟ್ಟಿನಲ್ಲಿ ತುಳಸಿಯನ್ನು ಮುಡಿದು ಜೋಯಿಸರು ಒದ್ದೆ ಪಾಣಿಪಂಚೆಯನ್ನು ಮೈಮೇಲೆ ಹೊದ್ದು ಚಳಿಯಲ್ಲಿ ನಡುಗುತ್ತ ಹೊರಗೆ ಬಂದು, ಪೂರ್ವದಿಕ್ಕಿಗೆ ತಿರುಗಿ ಕಣ್ಣುಮುಚ್ಚಿ ನಿಂತು, ಹದಿನೆಂಟರ ಮಗ್ಗಿ ಹೇಳೋ ಕಿಟ್ಟಿ ಎನ್ನುವರು. ಹೇಳುತ್ತ ಹೇಳುತ್ತ ಮೆಲ್ಲಗೆ ಕೃಷ್ಣಪ್ಪ ಪರಾರಿಯಾಗಿ ಬಿಡುವನು – ೧೯ರ ಮಗ್ಗಿ ಹೇಳಬೇಕಾದೀತೆಂದು.

ಜ್ಯೋತಿ ಬಿಸಿಲಲ್ಲಿ ವೀಲ್ ಚೇರನ್ನು ನಿಲ್ಲಿಸಿದಾಗ ಘಮಘಮಿಸುವ ಮೈಯನ್ನು ಸೂರ್ಯನ ಕಿರಣಗಳು ಪ್ರವೇಶಿಸಿ ತುಂಬ ಸುಖವಾಗುವುದು. ಈ ಮಧ್ಯೆ ನಾಗರಾಜ್ ಹೇಳಿದ್ದು ನೆನಪಾಗುವುದು. ಇದು ವೈಯಕ್ತಿಯ ನೈತಿಕ ಪ್ರಶ್ನೆ ಮಾತ್ರವಲ್ಲ. ಆದರೆ ತನ್ನ ಮನಸ್ಸು ಅಳ್ಳಕವಾಗಿ ಭೂತದಲ್ಲಿ ಚಲಿಸುತ್ತ ಸುಖಪಡಲು ಹವಣಿಸುತ್ತಿದೆ. ತನ್ನನ್ನು ಸುತ್ತಿಕೊಳ್ಳುತ್ತಿರುವ ಬಲೆಗಳಿಂದ ಹೊರಬರಲಾರೆ ಎನ್ನಿಸುತ್ತದೆ. ಸನ್ಮಾನದ ಸಿದ್ಧತೆ ನಡೆಯುತ್ತಿದೆ – ಗೌಡ, ಭಟ್ಟ, ವೀರಣ್ಣರ ಮಸಲತ್ತಲ್ಲಿ, ಈ ಮಸಲತ್ತನ್ನೂ ಐತಿಹಾಸಿಕ ಅಗತ್ಯವೆಂದು ಕಾಣಬಹುದಲ್ಲ ? ಸಮುದಾಯದ ಹಿತವೇ ನನ್ನ ಹಿತವೆನ್ನುತ್ತಲೇ ನನ್ನ ಹಿತ ಸಾಧಿಸಿಕೊಂಡಾಗ ನಾಗರಾಜ್ ಏನನ್ನುತ್ತಾನೆ? ಅದು ಅಪ್ರಸ್ತುತ ಪ್ರಶ್ನೆ ಎನ್ನುತ್ತಾನೆ. ಅಥವಾ ನೀವು ಪ್ರತಿನಿಧಿಸುವ ವರ್ಗದ ಹಿತ ಇಷ್ಟು ಮಾತ್ರ ಸಮಾಜವನ್ನು ಮುಂದಕ್ಕೆ ಒಯ್ಯುತ್ತದೆ – ಹೆಚ್ಚಲ್ಲ ಎನ್ನುತ್ತಾನೆ. ನಿನ್ನ ಹಿತ ಸಾಧನೆಗೆ ನೀನಿದನ್ನು ಮಾಡುವುದು ಕೂಡ ಆಶ್ಚರ್ಯವಲ್ಲವೆನ್ನುತ್ತಾನೆ. ಶುದ್ಧ – ಅಶುದ್ಧದ ಮಾತು ಅಸಂಬಂಧ್ಧವೆನ್ನುತ್ತಾನೆ. ಈ ಗೇಣಿಶಾಸನದಲ್ಲಿ ಭಟ್ಟಗೌಡ ಲಾಭ ಪಡೆದಿದ್ದಾರೆ. ಭೂಮಿಹೀನ ಕೂಲಿಗಾರನ ಪರವಾದ ವ್ಯವಸ್ಥೆ ತರುವುದು ಪಾರ್ಲಿಮೆಂಟರಿ ದಾರಿಯಲ್ಲಿ ಸಾಧ್ಯವಿಲ್ಲ. ಅದಕ್ಕೆ

ನೀನು ಬದ್ಧನಾದಾಗ ಈ ಭಟ್ಟ ಗೌಡರುಗಳೇ ವಿರೋಧಿಗಳಾಗುತ್ತಾರೆ. – ಮೊದಲು ಗೇಣಿದಾರರ ಪರ ನಿಂತಾಗ ಅವರು ವಿರೋಧಿಗಳಾಗಿದ್ದಂತೆ. ದೊಡ್ಡ ಫ್ಯೂಡಲ್ ಭೂಮಾಲೀಕರನ್ನು ನಾಶಮಾಡಿದ ಮೇಲೆ, ಈ ಕ್ಯಾಪಿಟಲಿಸ್ಟ್, ಭೂಮಾಲೀಕರು ನಿನ್ನ ರಾಜಕೀಯದ ಫಲವಾಗಿಯೇ ತಲೆಯೆತ್ತಿ ನಿನ್ನ ಬೆಂಬಲಕ್ಕೆ ನಿಂತಿದ್ದಾರೆ. ಚಕ್ರ ಇನ್ನೂ ಸುತ್ತಬೇಕಾದರೆ ನಿಜವಾಗಿ ಭೂಮಿಯಲ್ಲಿ ದುಡಿಯೋನ ಪರವಾಗಿ ನೀನು ನಿಲ್ಲಬೇಕು. . . . ಸದ್ಯದ ಕ್ರೈಸಿಸ್‌ನಲ್ಲಿ ನಿಯೋಕಲೋನಿಯಲ್ ಶಕ್ತಿಗಳು ದೇಶದಲ್ಲಿ ಸೃಷ್ಟಿಸುತ್ತಿರುವ ಫ್ಯಾಸಿಸಮ್ಮನ್ನುವಿರೋಧಿಸುವುದು ಈ ಕ್ಯಾಪಿಟಲಿಸ್ಟ್ ಹಿಡುವಳಿದಾರರ ವರ್ಗಹಿತಕ್ಕೆ ಅಗತ್ಯವಿರಬಹುದು. ಹಾಗಿದ್ದಲ್ಲಿ ಅವರನ್ನೂ ಬಳಸಬೇಕು. . . . ನಾಗರಾಜ್ ಹೀಗೆಲ್ಲ ಯೋಚನೆ ಮಾಡಬಹುದಾದ ಸಂಭವವೂ ಇದೆ. . . . ಕೃಷ್ಣಪ್ಪನಿಗೆ ತಲೆ ಚಿಟ್ಟೆನ್ನಿಸುತ್ತದೆ. ಜ್ಯೋತಿ ತನ್ನ ಮದುವೆಯ ಬಗ್ಗೆ ಮಾತಾಡುತ್ತಿದ್ದಾಳೆ. ಮದುವೆಗೆ ಯಾವ್ಯಾವ ವಸ್ತ್ರ ಕೊಳ್ಳಬೇಕು. ತಾಳಿ ಹೇಗಿರಬೇಕು ಇತ್ಯಾದಿ. ಕೃಷ್ಣಪ್ಪ ಅವಳ ಮಾತಲ್ಲಿ ತಲ್ಲೀನನಾಗಿ ಕಾಲು ಕೈಗಳನ್ನು ಉಜ್ಜಿಸಿಕೊಳ್ಳುತ್ತಾ ಕೂರುತ್ತಾನೆ.

***

ಸದ್ಯ ಸೀತೆ ಬ್ಯಾಂಕಿಗೆ ಹೋದ ಮೇಲೆ ಗೌರಿ ದೇಶಪಾಂಡೆ ಬಂದಳಲ್ಲ; ಸೀರೆಯುಟ್ಟು, ತಲೆಯ ಕೂದಲನ್ನು ಒಂದು ಸಾದಾ ಗಂಟಿನಲ್ಲಿ ಬಿಗಿದು, ಬಗಲಲ್ಲಿ ಒಂದು ಬ್ಯಾಗ್ ಸಿಕ್ಕಿಸಿಕೊಂಡು ಬಂದಿದ್ದಳು. ನಾಗೇಶ ತಂದು ಕೊಟ್ಟ ಕುರ್ಚಿಯಲ್ಲಿ ಕೂತು ಜ್ಯೋತಿಯನ್ನು'ಹಲೋ' ಎಂದು ಪರಿಚಯ ಮಾಡಿಕೊಂಡಳು. ಕೃಷ್ಣಪ್ಪ ಮಾತಾಡದೆ ಗೌರಿಯನ್ನೇ ಕಣ್ತುಂಬ ನೋಡುತ್ತ ಕೂತ. ನಿನ್ನೆ ರಾತ್ರಿ ಕೆಲವು ಬಿಳಿಯ ಕೂದಲುಗಳು ಮಾತ್ರ ಕಂಡಿದ್ದುವು. ಆದರೆ ಇವತ್ತು ಮುಖದಲ್ಲಿ ವಯಸ್ಸಿನ ಚಿಹ್ನೆಗಳು ಕಂಡವು. ಅದೇ ಹಿಂದಿನ ಕಾಂತಿಯಿದ್ದ ಕಣ್ಣುಗಳ ಸುತ್ತ ಚರ್ಮದಲ್ಲಿ ಸೂಕ್ಷ್ಮ ನಿರಿಗೆಗಳಿವೆ. ತೆಳ್ಳಗೆ ದೃಢವಾಗಿ ಇದ್ದಾಳೆ. ಆದರೆ ಜ್ಯೋತಿಗೆ ಹೋಲಿಸಿದರೆ ಇವಳು ಪ್ರೌಢೆ. ತನಗೆ ಐವತ್ತಾದ್ದರಿಂದ ಗೌರಿಗೆ ನಲವತ್ತರ ಹತ್ತಿರವಿರಬಹುದು. ಅವಳ ಲಕ್ಷ್ಯ ಚುರುಕಾಗಿ ಗೆಲುವಾಗಿ ಸುತ್ತಲೂ ಹರಿಯುತ್ತಿದ್ದರೂ ನಿದ್ದೆಯಿಲ್ಲದ ರಾತ್ರೆಗಳು. ಒಂಟಿತನದ ಭಯಗಳು ಅವಳ ಕಣ್ಣುಗಳನ್ನು ಖಂಡಿತ ಕಾಡಿವೆ. ದಾಂಪತ್ಯವನ್ನು ಹರಿಯುವಾಗ ಅವಳ ಬಾಯಿ ಆಡಬಾರದ್ದನ್ನು ಆಡಿರಬೇಕು. ಮನಸ್ಸು ಕಟುವಾಗಿ ಯೋಚಿಸಿರಬೇಕು. ತನ್ನ ವೃತ್ತಿಯಲ್ಲಿ ಕೌಶಲ ಪಡೆಯಲೆಂದು ಅವಳು ಶ್ರಮಿಸಿದ್ದ ಹಗಲು ರಾತ್ರೆಗಳನ್ನು ಹಿಂದಿನ ಅವಳ ಹಾವ ಭಾವಗಳಲ್ಲಿದ್ದ ಹುಡುಗಾಟಿಕೆ ಸವೆದಿದೆ.

ಗೌರಿ ಸಿಗರೇಟ್ ಹತ್ತಿಸಿ ಕೃಷ್ಣಪ್ಪನ ತುಟಿಯಲ್ಲಿಟ್ಟು ತಾನೊಂದು ಹತ್ತಿಸಿಕೊಂಡು ಜ್ಯೋತಿಯ ಕ್ಷಮೆ ಕೇಳಿ'ಅವಳು ಸೇದಲಿಕ್ಕೆ ನಿಮ್ಮ ಅನುಮತು ಇದೆ ತಾನೆ? ಎಂದಳು. 'ಇಲ್ಲ – ಆದರೆ ಇದೊಂದು ಪರವಾಗಿಲ್ಲ' ಎಂದು ಜ್ಯೋತಿ ಕೃಷ್ಣಪ್ಪನ ಅಂಗಾಲನ್ನು ತನ್ನ ಎರಡು ಕೈಗಳಲ್ಲೂ ಹಿಡಿದು ತಿಕ್ಕುತ್ತ ಕೂತಳು ಇನ್ನೊಬ್ಬ ಹೆಂಗಸಿನ ಪ್ರವೇಶದಿಂದ ಅವಳು ಮುಜುಗರಗೊಂಡಂತಿತ್ತು.

'ಬಾತ್‌ನಲ್ಲಿ ಅವರನ್ನು ಕೂರಿಸಿದರೆ ಒಳ್ಳೆಯದಲ್ಲ?' ಎಂದು ಗೌರಿ ಕೇಳಿದಳು.

'ನೀರಿನ ಥೆರಪಿ ಒಳ್ಳೇದೆ. ಆದರೆ ಇಲ್ಲಿ ಬಾತ್ ಇಲ್ಲವಲ್ಲ.'

ಜ್ಯೋತಿ ಹೇಳಿದಳು.

‘ವೈಟ ಏ ಮಿನಿಟ್. ನಾನಿಳಕೊಂಡ ಗೆಸ್ಟ್‌ಹೌಸ್‌ನಲ್ಲಿ ಬಾತಿದೆ. ನಾನು ಈ ಥೆರಪಿ ಟ್ರೈನಿಂಗ್ ತಗೊಂಡಿದೀನಿ ಫಿಲಡೆಲ್ಫಿಯಾದಲ್ಲಿ. ನಾನು ನೀವೂ ಈ ಕೆಲಸ ಹಂಚಿಕೋಬಹುದು ಅಲ್ಲವ?’

ಗೌರಿಯ ಪ್ರಶ್ನೆಗೆ ಉತ್ತರ ಕೊಡುವುದು ತನಗೆ ಸೇರಿದ್ದಲ್ಲವೆನ್ನುವಂತೆ ಜ್ಯೋತಿ ಸುಮ್ಮನಾದಳು. ಗೌರಿ ತನ್ನ ಯೋಚನೆಯನ್ನು ಕಾರ್ಯಗತ ಮಾಡಲು ಹೊರಗೆ ಹಾಲಿನಲ್ಲಿ ಕೂತ ವೀರಣ್ಣನನ್ನು ಕಂಡು ಮಾತಾಡಿದಳು. ಗೆಸ್ಟ್‌ಹೌಸಲ್ಲಿ ಕೃಷ್ಣಪ್ಪನಿಗೆ ರೆಸ್ಟೂ ಸಿಗುತ್ತದೆ. ಬೆಳಿಗ್ಗೆ ಜ್ಯೋತಿಯನ್ನು ಅಲ್ಲಿಗೆ ಕಾರಲ್ಲಿ ಕರಕೊಂಡು ಬಂದರೆ ಆಯಿತು. ಬೆಳಿಗ್ಗೆ ಅವಳು ನೋಡಿಕೊಂಡರೆ ಉಳಿದದ್ದನ್ನು ತಾನೇ ನೋಡಿಕೊಳ್ಳುವೆ. ಕೃಷ್ಣಪ್ಪನ ಆರೋಗ್ಯ ಸರಿಹೋಗುವ ಬಗ್ಗೆ ತುಂಬ ಕಾಳಜಿಯಿದ್ದ ವೀರಣ್ಣ ಇದನ್ನು ಒಪ್ಪಿಕೊಂಡ ಸೀತೆಯಿಂದ ಕೃಷ್ಣಪ್ಪ ದೂರವಿರವುದು ಅಗತ್ಯವೆಂದು ಎಲ್ಲರಿಗೂ ಗೊತ್ತಿತ್ತು. ಮಾರನೇ ದಿನ ಕೃಷ್ಣಪ್ಪನನ್ನು ಸಾಗಿಸುವುದೆಂದು ತೀರ್ಮಾನವಾಯಿತು.

ಕೃಷ್ಣಪ್ಪನ ತಾಯಿ ಶಾರದಮ್ಮನನ್ನು ಹಳ್ಳಿಯಿಂದ ಮಧ್ಯಾಹ್ನ ಒಬ್ಬ ಹುಡುಗ ಕರೆದುಕೊಂಡು ಬಂದ. ಸಿಗರೇಟು ಸೇದುವ ಗೌರಿಯನ್ನು ಕಂಡು ಆಕೆ ದಿಗ್ಭ್ರಮೆಗೊಂಡು ಮಗನ ಎದುರು ಹೋಗಿ ಕೂತರು. ಎಪ್ಪತ್ತು ವರ್ಷದ ಹೆಗ್ಗಡತಿಯ ಹಾಗೆ ಸೀರೆ ಉಟ್ಟ ತನ್ನ ಮುದಿತಾಯನ್ನು ನೋಡಿ:

‘ಯಾಕಿಷ್ಟು ದಿನ ಬರಕ್ಕೆ? ಒಬ್ಬಳೇ ಅಲ್ಲೇನ್ಮಾಡ್ತಿ? ಇಲ್ಲೇ ಬಂದಿರ್ಬಾರ್ದ?’ ಎಂದು ರೇಗಿದ ಧ್ವನಿಯಲ್ಲಿ ಕೇಳಿದ.

ಮುದುಕಿ ನಗುತ್ತ,

‘ನನ್ಯಾಕೆ ನಿಂಗೆ ಬೇಸಿ ಹಾಕ್ಬೇಕೋ? ಕೈ ಹಿಡಿದ ಹೆಂಡತಿ ಇಲ್ವ?’ ಎಂದು ಮೂದಲಿಸಿ ಇವತ್ತು ಸಂಜೆಗೆ ಮಗನಿಗೆ ಇಷ್ಟವಾದ ತೊಂಡೆಕಾಯಿ ಪಲ್ಯ ಸಾರುಗಳನ್ನು ಮಾಡಲೆಂದು ಅಡಿಗೆ ಮನೆಗೆ ಹೋದಳು.

‘ಅವ್ವಾ ಅವ್ವಾ’ ಎಂದು ಕೃಷ್ಣಪ್ಪ ತಾಯಿಯನ್ನು ಕೂಗಿದ. ಅವಳು ಅಡಿಗೆ ಮನೆಯಲ್ಲಿ ಏನಿದೆ ಏನಿಲ್ಲ ಪರೀಕ್ಷಿಸಿ ತಾನು ಊರಿಂದ ತಂದಿದ್ದ ಗೋಣಿಚೀಲದ ಬ್ಯಾಗಿನಿಂದ ನಿಂಬೆಹಣ್ಣು, ಕಂಚಿಕಾಯಿ, ಚಕೋತ, ಪತ್ರಡೆಗೆ ಕೆಸುವಿನೆಲೆ, ತೊಂಡೆಕಾಯಿಗಳನ್ನು ಹೊರಗೆ ತೆಗೆದು ಮೊರದಲ್ಲಿ ಜೋಡಿಸುತ್ತಿದ್ದಳು. ‘ಬಂದೇ ಕಣೋ ಕೂಗಿಕೋಬೇಡ’ ಎಂದು ಊರಿಂದ ತಂದಿದ್ದ ಮಾವಿನಮಿಡಿ ಉಪ್ಪಿನಕಾಯಿಯನ್ನು ಹಿಡಿದುಕೊಂಡು ರೂಮಿಗೆ ಬಂದು,

‘ಪಾರಿವಾಳದ ರಕ್ತದಲ್ಲಿ ಉಜ್ಜಬೇಕು ಕಣೋ ವಾಸಿಯಾಗುತ್ತೆ. ಸಾಯಂಕಾಲ ಯಾವುದೋ ಪಕ್ಷಿ ನೆತ್ತಿಮ್ಯಾಲೆ ಹಾರಿದರೆ ಹಿಂಗಾಗುತ್ತೆ ಅಂತ ಜೋಯಿಸ್ರು ಹೇಳ್ದ್ರು. ಅವ್ರೂ ಪಾರಿವಾಳದ ರಕ್ತದಲ್ಲಿ ಉಜ್ಜಿಸಬೇಕು ಅಂದ್ರು. ಅಂದಂಗೆ ದೊಡ್ಡವ್ವ

ಪುಣ್ಯಾತಗಿತ್ತಿ ಕಣ್ಣು ಮುಚ್ಚಿಬಿಟ್ರು ಕಣೊ. ಒಂದು ದಿನ ಹಾಸಿಗೆ ಹಿಡೀಲಿಲ್ಲ ಅವ್ರು. ಊಟ ಮುಗಿಸಿ ಹತ್ತಿ ಬುಟ್ಟಿ ತಗೊಂಡು, ಚಿಟ್ಟೆಮೇಲೆ ಕೂತು, ದೇವ್ರಿಗೆ ಬತ್ತಿ ಹೊಸೀತ ಇದ್ದಾಗ, ಹಾಗೇ ಮಲಗಿ ಕಣ್ಣುಮುಚ್ಚಿಬಿಟ್ರು. ಈಗ ಜೋಯಿಸ್ರು ಒಬ್ರೇ ಪಾಪ – ಸಾಯೋ ಮುಂಚೆ ಹೆಂಡತಿ ಹಾಕಿಟ್ಟ ಉಪ್ಪಿನ ಕಾಯಲ್ಲಿ ಇಕಾ ನಿನಗಿಷ್ಟಾಂತ ಒಂದು ಜಾಡಿ ಕಳ್ಸಿದಾರೆ.'

ಶಾರದಮ್ಮ ಕಣ್ಣೊರಸಿಕೊಂಡಳು. ಕೃಷ್ಣಪ್ಪನಿಗೆ ಬಿಕ್ಕಿ ಅಳುವಂತಾಯ್ತು. ಈಚೆಗೆ ದೇಹ ಕ್ಷೀಣವಾಗಿ ಭಾವನೆಗಳ ಮೇಲೆ ಹತೋಟಿ ಕಮ್ಮಿಯಾಗಿದೆ; ಕಷ್ಟಪಟ್ಟು ತಡೆದುಕೊಂಡ. ಅವ್ವನೂ ಹಾಗೇ ಯಾರೂ ಇಲ್ಲದಾಗ ಕಣ್ಣುಮುಚ್ಚಿಬಿಟ್ಟಾರೆಂಬ ಭಯವಾಗಿ,

'ನೀನಿನ್ನು ಇಲ್ಲಿಂದ ಹೋಗೋ ಹಾಗೇ ಇಲ್ಲ. ಇಲ್ಲೆ ಇರ್ಬೇಕು' ಎಂದ. ಶಾರದಮ್ಮ ಹುಸಿಮುನಿಸಿಂದ:

'ಏನಿದೆ ಇಲ್ಲಿ ಅಂತ ನಾನಿರ್ಲೊ? ಈ ಮನೆ ಸುತ್ತ ಮುತ್ತ ಒಂದೇ ಒಂದು ಹಿಡಿ ಮಣ್ಣು ಸಿಗಲ್ಲ. ಎಲ್ದು ದಿನಕ್ಕಿಂತ ಹೆಚ್ಚು ನಾನಿಲ್ಲಿ ಇರಲ್ಲಪ್ಪ. ನಿನ್ನ ಗದ್ದೆಯಿದೆಯಲ್ಲ – ಅದನ್ನ ನಾನು ಉಳಿಸಿಕೊಂಡಿರಬಾರ್ದ? ಯಾರಿಗಾರೂ ಉಳಕ್ಕೆ ಕೊಟ್ರೆ ಅವನು ನಾಳೆ ಅದು ನಂದೇ ಅಂತಾನೆ. ಅದೆಂಥದೋ ಕಾನೂನನ್ನು ನೀನೇ ಮಾಡ್ಸಿದಿಯಂತಲ್ಲ – ಅನುಭವಿಸಬೇಕಾಗುತ್ತೆ.'

'ಒಂದು ಹಿಡಿ ಮಣ್ಣು ಇಲ್ಲಿ ಸಿಗಲ್ಲ' ಎಂಬ ತಾಯಿಯ ಮಾತು ಕೃಷ್ಣಪ್ಪನನ್ನು ಚುಚ್ಚಿತು. ಗಾಂಧೀ ಬಜಾರಿನ ಮನೆಯಲ್ಲಿ ಇಲ್ಲಿಗಿಂತ ಹೆಚ್ಚು ಲವಲವಿಕೆಯಿತ್ತು; ತಾಯಿ ಅದನ್ನು ಹೆಚ್ಚು ಇಷ್ಟಪಡುತ್ತಿದ್ದಳು.

ತಾಯಿ ಮಗ ಕೂತು ಅದುಇದು ನೆನೆಸಿಕೊಂಡು ಆರಾಮಾಗಿ ಹಳ್ಳಿ ವಿಷಯ ಮಾತಾಡೋದು ಕೇಳಿ ಗೌರಿಗೆ ತುಂಬ ಸುಖವಾಯಿತು. ತಾಯಿಗೆ ಅಡಿಗೆ ಮನೆಯಲ್ಲಿ ಪಾತ್ರೆ ತೊಳೆಯದೆ ಬಿದ್ದಿದ್ದು ಮಾತಿನ ಮಧ್ಯೆ ನೆನಪಾಗಿ ಕಿರಿಕಿರಿಯಾದ್ದು ಗಮನಿಸಿ ಗೌರಿ ತಾನೇ ಎದ್ದು ಹೋಗಿ ಅಡಿಗೆ ಮನೆಯನ್ನು ಓರಣಮಾಡಿದಳು. 'ಅದೆಂಥಾ ಹೆಂಗಸೋ ಬೀಡಿ ಸೇದತ್ತೆ' ಎಂದಳು ಶಾರದಮ್ಮ. 'ನೀನು ಹೊಗೆಸೊಪ್ಪುತಿನ್ನಲ್ವ?' ಎಂದು ಕೃಷ್ಣಪ್ಪ ನಕ್ಕ. 'ಸರಿ ಒಳ್ಳೇವ್ನ ಹಾಗೆ ಕಾಣತಾಳೆ ಅನ್ನು' ಎಂದು ಮತ್ತೆ ಊರ ವಿಷಯಕ್ಕೆ ಮರಳಿದಳು. ಯಾವ ಹುಡುಗಿ ಮೈನೆರೀತು? ದನಗಳಿಗೆ ಯಾವ ಕಾಯಿಲೆ ಬಂತು? ಈ ಸಾರಿ ಕೊಳೆರೋಗ ಹೇಗಿತ್ತು? ಯಾರಿಗೆ ಮಗುವಾಯ್ತು? ಯಾವ ಮದುವೇಲಿ ಬೀಗರಿಗೆ ಹಣಾಹಣೆಯಾಯ್ತು – ಇತ್ಯಾದಿ. . . . ಇತ್ಯಾದಿ. . . . ಮಾತಿನ ಮಧ್ಯೆ ಇದ್ದಕ್ಕಿದ್ದಂತೆ ನಿಟ್ಟುಸಿರಿಟ್ಟು ಹೇಳಿದಳು:

'ಪಾಪ ಜೋಯಿಸ್ರು ಒಂದೊಂದಿನ ಅಡಿಗೇನೇ ಮಾಡ್ಕಳಲ್ಲ ಕಣೊ – ನಾನೇ ಹೋಗಿ ಅವರ ದನಾನ್ನ ಕರೆದುಕೊಡ್ತೀನಿ. ಅದನ್ನು ಕಾಯ್ಸಿಕೊಂಡು ಕುಡಿದು ಬಿಡುತ್ತಾರೆ – ಅಷ್ಟೆ'

'ಮಾವನ ಮನೇಲೆಲ್ಲ ಹೇಗಿದಾರೆ. . .'

'ಅಯ್ಯೋ ಅದೊಂದೊ ದೊಡ್ಡ ಕಥೆ. . . .' ಎಂದು ತಾಯಿ ದೊಡ್ಡ ಪುರಾಣವನ್ನೇ ಬಿಚ್ಚುತ್ತ ಕೂತಳು.

ಸಾಯಂಕಾಲ ಸೀತ ಕೆಲಸಮುಗಿಸಿ ಬಂದಾಗ ಮಗಳು ಅಜ್ಜಿಯ ತೊಡೆಯ ಮೇಲೆ ಕೂತಿರುವುದನ್ನು ನೋಡಿ ಗೆಲುವಾದಳು. ಆದರೆ ರೂಮಲ್ಲಿ ಕೂತ ಗೌರಿಯನ್ನು ಕಂಡು ಸಿಡಿಸಿಡಿಯಾಗಿ ಅಡಿಗೆ ಮನೆಗೆ ನೇರ ಹೋಗಿಬಿಟ್ಟಳು. ಕೃಷ್ಣಪ್ಪನಿಗೆ ಗೌರಿ ಅಂದಳು: 'ಪಾಪ ಆಕೇದು ತಪ್ಪಿಲ್ಲ. ಎಲ್ಲರೂ ಸೇರಿ ಆಕೆಗೆ ಇನ್‌ಸೆಕ್ಯೂರ್ ಅನ್ನಿಸೋ ಹಾಗೆ ಮಾಡಿದೀರಿ.' ಕೃಷ್ಣಪ್ಪ ಒಪ್ಪಿಕೊಂಡ. ತನ್ನ ಮುಜುಗರಾನ್ನ ಹೀಗೆ ವ್ಯಾಖ್ಯಾನ ಮಾಡಿ ಕಡಿಮೆ ಮಾಡಿದ್ದಕ್ಕೆ ಗೌರಿಗೆ ಕೃತಜ್ಞನಾದ. ಗೌರಿ ತಾನೇ ಎದ್ದು ಸೀತೆಯನ್ನು ಮಾತಾಡಿಸುವೆನಂದು ಅಡಿಗೆ ಮನೆಗೆ ಹೋದಳು.

ಸಲಾಂ ಗೌಡರಿಗೆ ಸಲಾಂ. ಹೇಗಿದೆ ನಮ್ಮ ನಾಯಕರ ಆರೋಗ್ಯ?'

ಅವನ ಪಕ್ಷದ ಅಬ್ದುಲ್ ರೆಹಮಾನ್ ಟೋಪಿಯನ್ನು ತೆಗೆದು ನಾಟಕೀಯವಾಗಿ ಬಾಗಿ ಕುರ್ಚಿಯನ್ನೆಳೆದು ಹತ್ತಿರ ಕೂತ. ಹಳೇ ಕಾಲದ ಮೈಸೂರಿನ ಶ್ರೀಮಂತ ಕುಟುಂಬಕ್ಕೆ ಸೇರಿದ ಸಭ್ಯ ಮನುಷ್ಯ. ಉದ್ದನೆಯ ಕೋಟು ಧರಿಸಿ, ಗೆಲುವಾಗಿ, ವಿನಯದಿಂದ, ದೈನ್ಯದ ಸೋಂಕಿಲ್ಲದ ಧ್ವನಿಯಲ್ಲಿ ಮಾತಾಡುವ ರೆಹಮಾನ್ ಕೃಷ್ಣಪ್ಪನಿಗೆ ಪ್ರಿಯವಾದ ವ್ಯಕ್ತಿ. ಆಸ್ತಿಯೆಲ್ಲ ವೈಭವದ ಜೀವನದಲ್ಲಿ ಕರಗಿ ಈಗ ರೆಹಮಾನ್ ಬೀಡಿಕಟ್ಟುವ ಕೆಲಸಗಾರರ ಯೂನಿಯನ್ನಿನ ಪ್ರೆಸಿಡೆಂಟ್. ಮನೆಗೆ ಬಂದವರಿಗೆ ಖಾಲಿ ಟೀ ಹಂಚುವುದರಲ್ಲೂ ಅವನ ಔದರ್ಯವನ್ನು ಈಗಲೂ ಉಳಿಸಿಕೊಂಡವ. ನೋಡಲು ಬೆಳ್ಳಗಿದ್ದ ರೆಹಮಾನ್ ಅರ್ಧ ಹಾಸ್ಯದಲ್ಲಿ ಅರ್ಧ ಜಂಬದಲ್ಲಿ ತನ್ನ ಪೂರ್ವಿಕರು ಅಪ್ಪಟ ಪರ್ಶಿಯನ್ನರೆಂದು ಕೊಚ್ಚಿಕೊಳ್ಳುವುದನ್ನು ಕೇಳಿಸಿಕೊಳ್ಳಲು ಕೃಷ್ಣಪ್ಪನಿಗೆ ತುಂಬ ಖುಷಿ.

ಕೃಷ್ಣಪ್ಪ ಮತ್ತು ರೆಹಮಾನರ ಸ್ನೇಹ ದಟ್ಟವಾದ್ದಕ್ಕೊಂದು ಹಿನ್ನೆಲೆಯಿದೆ. ಮೂರು ವರ್ಷಗಳ ಹಿಂದೆ ಚಿಕ್ಕಮಗಳೂರಿನಲ್ಲಿ ಒಂದು ಗಲಭೆಯಾಯಿತು. ಮುಸ್ಲಿಮರು ಗಣಪತಿಯ ಮೆರವಣಿಗೆ ತಮ್ಮ ಮಸೀದಿಯ ಎದುರು ಪ್ರಾರ್ಥನೆಯ ಸಮಯದಲ್ಲಿ ಗದ್ದಲ ಮಾಡಿಕೊಂಡು ಬುರುವುದನ್ನು ಕಲ್ಲೆಸೆದು ಪ್ರತಿಭಟಿಸಿದರು. ಇದಕ್ಕೆ ಪ್ರತೀಕಾರವಾಗಿ ಮುಸ್ಲಿಮರು ಗುಡಿಸಲುಗಳಿಗೆ ಬೆಂಕಿ ಹಚ್ಚಲಾಯಿತು. ಮಸೀದಿಯಲ್ಲಿ ಮದ್ದು ಗುಂಡುಗಳನ್ನು ಬಚ್ಚಿಟ್ಟಿದ್ದಾರೆಂದು ಗಲಭೆ ಬೇರೆ ಬೇರೆ ಕಡೆಗಳಲ್ಲೂ ನಡೆಯಿತು. ಎಷ್ಟೋ ಜನರು ಇದರಿಂದ ಸತ್ತರು. ಪೇಟೆಯ ದಾರಿಯಲ್ಲೇ ಮುಸ್ಲಿಂ ದಂಪತಿಗಳು ತಮ್ಮ ನಾಲ್ಕು ಮಕ್ಕಳ ಜೊತೆಗೆ ಬರುತ್ತಿದ್ದ ಕಾರೊಂದನ್ನು ನಡು ಹಗಲಲ್ಲಿ ನಿಲ್ಲಿಸಿ, ಕಾರಿನ ಮೇಲೆ ಪೆಟ್ರೋಲ್ ಸುರಿದು, ಅವರನ್ನು ನಡು ಬೀದಿಯಲ್ಲೇ ಸುಡಲಾಯಿತು. ಖೊರಾನಿನ ಪ್ರತಿಗಳನ್ನು ಚೌಕದಲ್ಲಿ ಬೆಂಕಿಗೆ ಎಸೆಯಲಾಯಿತು.

ಈ ಸಮಯದಲ್ಲಿ ಎಲ್ಲ ರಾಜಕಾರಣಿಗಳು ಶಾಂತಿ ಶಿಸ್ತು ಬಾಂಧವ್ಯಗಳ ಬಗ್ಗೆ ಭೋಳೆ ಮಾತುಗಳನ್ನು ಮಾತ್ರ ಆಡುತ್ತಿದ್ದಾಗ ಕೃಷ್ಣಪ್ಪ ಚಿಕ್ಕಮಗಳೂರಿಗೆ ಹೋಗಿ ಬಂದು ಹೇಳಿಕೆಯನ್ನಿತ್ತು ಮುಸ್ಲಿಂ ಜನಾಂಗದ ಮೇಲೆ ದೌರ್ಜನ್ಯವೆಸಗಿದ ಹಿಂದೂಗಳನ್ನು ಸ್ಪಷ್ಟ ಮಾತುಗಳಲ್ಲಿ ಖಂಡಿಸಿದ. ಈ ಹೇಳಿಕೆ ಎಲ್ಲರನ್ನೂ ಅವಕ್ಕಾಗಿಸಿತು. ಕೃಷ್ಣಪ್ಪನನ್ನು ಕೊಲ್ಲುವ ಬೆದರಿಕೆ ಪತ್ರಗಳು ಎಲ್ಲೆಡೆಯಿಂದ ಬರತೊಡಗಿದುವು. ಮುಸ್ಲಿಮರು ಹೇಗೋ ಆಳುವ ಪಕ್ಕಕ್ಕೇ ಓಟು ಕೊಡುವಾಗ ನಾವು ಈ ರೀತಿ ಹೇಳಿಕೆ ಕೊಟ್ಟು ಹಿಂದೂಗಳ ಓಟನ್ನು ಕಳೆದುಕೊಳ್ಳುವುದು ಮೂರ್ಖತನವಲ್ಲವೆ ಎಂದು ಪಕ್ಷದ ಜನರೂ ಕೃಷ್ಣಪ್ಪನನ್ನು ಟೀಕಿಸಿದರು. ಅನೇಕ ಒಪ್ಪಂದಗಳನ್ನು ಮಾಡಿಕೊಂಡು ಮೆದುವಾಗಲು ತೊಡಗಿದ್ದ ಕೃಷ್ಣಪ್ಪ ಈ ಘಟನೆಯಿಂದ ಮತ್ತೆ ಹುರಿಯಾದ.

ಮೊದಲಿನ ನಿಷ್ಠುರ ನಿಲುವನ್ನು ಪಡೆದ. ಜನರಿಗೆ ಅಪ್ರಿಯವಾಗುವ ಧೈರ್ಯವಿಲ್ಲದವರು ರಾಜಕೀಯ ನಾಯಕನಾಗಲಾರನೆಂಬುದನ್ನು ದೇಶದಲ್ಲಿ ಸ್ಥಾಪಿಸಿದ.

ಇತ್ತ ಮಡಿವಂತ ಮುಸ್ಲಿಮರಿಂದ ಹಿಂದೂಗಳ ಚಮಚಾ ಎಂದೂ ಕುಡಿಯುತ್ತಾನೆಂದೂ ಬೈಸಿಕೊಳ್ಳುವ, ಅತ್ತ ಹಿಂದೂಗಳಿಂದ ಅನುಮಾನಕ್ಕೆ ಒಳಗಾದ ರಹಮಾನ್ ಕೃಷ್ಣಪ್ಪನನ್ನು ಸೋದರನಂತೆ ಭಾವಿಸತೊಡಗಿದ್ದ – ಈ ಘಟನೆಯಾದ ಮೇಲೆ

ಇವತ್ತು ಕೃಷ್ಣಪ್ಪನನ್ನು ನೋಡಲು ಬಂದ ರಹಮಾನ್ ತನ್ನ ಟೋಪಿಯನ್ನು ತೊಡೆಯ ಮೇಲಿಟ್ಟುಕೊಂಡು ಯಾವ ಹಾವ ಭಾವವಿಲ್ಲದೆ ಮೃದುವಾದ ಮಾತುಗಳಲ್ಲಿ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದ. ಅವನ ಪ್ರಕಾರ ಮುಖ್ಯವಾಗಿ ದೇಶದ ಮುಸ್ಲಿಮರು ಪ್ರಧಾನಿಗಳ ಕಡೆ ಇರುವುದರಿಂದ ಇಲ್ಲಿಯೂ ಮುಖ್ಯಮಂತ್ರಿಗೆ ವಿರೋಧವಾದ ಬಣದಲ್ಲಿದ್ದಾರೆ. ಇನ್ನು ಕೆಲವು ದಿನಗಳಲ್ಲಿ ದೇಶಾದ್ಯಂತ ಆಳುವ ಪಕ್ಷ ಒಡೆದುಕೊಳ್ಳಲಿದೆ. ಆಗ ಪ್ರಧಾನಿ ಪರವಾಗಿ ಹೆಚ್ಚು ಜನರಿರುತ್ತಾರೆ ಅಸೆಂಬ್ಲಿಯಲ್ಲಿ. ಈಗಿನ ಮುಖ್ಯಮಂತ್ರಿ ನಮ್ಮ ಪಕ್ಷದ ಬೆಂಬಲವಿಲ್ಲದೆ ಆಳಲಾರ. ನಮ್ಮ ಪಕ್ಷ ಬೆಂಬಲ ಕೊಟ್ಟರೂ ಐದೇ ಐದು ಜನ ಪ್ರಧಾನಿ ಗುಂಪಿಗಿಂತ ಹೆಚ್ಚಿರುತ್ತೇವೆ. ಆದ್ದರಿಂದ ಶಾಸಕರನ್ನು ಉಳಿಸಿಕೊಳ್ಳಲು ತುಂಬ ಹಣ ಕೊಡಬೇಕಾಗುತ್ತದೆ.

'ಹಾಗಾದರೆ ನಾವೇನು ಮಾಡೋದು ಸರಿ ರಹಮಾನ್?'

ರಹಮಾನ್ ಕಣ್ಣು ಮಿಟುಕಿಸಿದ: 'ನಿಮ್ಮನ್ನು ಚೀಫ್ ಮಾಡಲು ವೀರಣ್ಣ ಹಣ ಚೆಲ್ಲುತ್ತಿದ್ದಾನೆ – ಹಡಬೆ ಹಣ – ಚೆಲ್ಲಲಿ ಬಿಡಿ. ನೀವು ಕಣ್ಣು ಮುಚ್ಚಿಕೊಂಡಿರಿ' ಎಂದ. ಆಮೇಲೆ ಗಂಭೀರವಾಗಿ ಇಂಗ್ಲಿಷಲ್ಲಿ ಮಾತಾಡಿದ: ದೇಶದ ಪ್ರಶ್ನೆ ಮುಖ್ಯ; ಪ್ರಧಾನಿ ಸರ್ವಾಧಿಕಾರದ ಹಾದೀಲಿದಾರೆ – ಆದ್ದರಿಂದ. ಆ ಗುಂಪೂ ನಮ್ಮ ಬೆಂಬಲ ಕೇಳ್ತಿದೆ. ನಮ್ಮದು ಸಣ್ಣ ಪಕ್ಷವಾದರೂ ಗೌಡರಿಗೆ ಆಲ್ ಇಂಡಿಯಾ ಇಮೇಜಿದೆ ಅಂತ ಅವ್ರಿಗೆ ಗೊತ್ತು. ಅವರು ಸೋಷಲಿಸಂ ಮಾತಾಡ್ತಾರಾದ್ದರಿಂದ ನಮ್ಮ ಪಕ್ಷದಲ್ಲಿ ಕೆಲವರ ಒಲವು ಅಲ್ಲಿದೆ. ಆದರೆ ಈಗಿನ ಮುಖ್ಯಮಂತ್ರೀನ್ನ ಬೆಂಬಲಿಸಿದರೆ, ಅವನು ಹೆಚ್ಚು ವೀಕಾಗಿರೋದರಿಂದ ಗೌಡರ ನಾಯಕತ್ವದ ಮಂತ್ರಿಮಂಡಳಕ್ಕೆ ಅವನು ಬೆಂಬಲಿಸೋ ಹಾಗೆ ಮಾಡೋದು ಸಾಧ್ಯ. ಅವನೂ ಮುಂದಿನ ಚುನಾವಣೆ ತನಕ ಇದಕ್ಕೆ ಒಪ್ಪುತ್ತಾನೆ. ಖದೀಮ – ಗುಟ್ಟಾಗಿ ಪ್ರಧಾನಿ ಪಕ್ಷದಲ್ಲಿ ತಾನಿರೋದಕ್ಕೆ ಅವನೂ ಪ್ರಯತ್ನಿಸುತ್ತ ಇದಾನೆ. ಆದರೆ ಅವರ ರೈವಲ್‌ಗೆ ಇದಿಷ್ಟವಿಲ್ಲ. ನಮ್ಮ ಮುಂದಿರೋ ಪ್ರಶ್ನೆ: ಐದು ಜನರನ್ನು ಈ ಕಡೆಗೆ ಉಳಿಸಿಕೊಂಡಿರೋದು ಹೇಗೆ ಅಂತ. ಈ ಹಿನ್ನೆಲೇಲಿ ಗೌಡರ ಸನ್ಮಾನ ಮುಖ್ಯವಾದ್ದು. ಮುಖ್ಯಮಂತ್ರಿ ಆವತ್ತು ಮಾತಾಡ್ತಾನೆ. ಆಮೇಲಿಂದ ಅಸೆಂಬ್ಲಿ ಸೇರುತ್ತೆ. ಅವತ್ತು ಎಲ್ಲ ನಿರ್ಣಯ ಆಗಬೇಕು. ಗೌಡರು ಏನೂ ರಗಳೆ ಹೆಚ್ಚಿಕೊಳ್ದೆ ವಿಶ್ರಾಂತಿ ತಗೋಬೇಕು. ಗೌಡರ ನಾಯಕತ್ವದಲ್ಲಿ ಸರ್ಕಾರ ರಚಿಸ್ತೀವಿ ಅಂದರೆ ಪ್ರಧಾನಿ ಪಕ್ಷ ಸೇರಿದ ಕೆಲವು ಯುವಕ ಶಾಸಕರು – ಸುಮಾರು ಹತ್ತುಜನ – ಈ ಕಡೆ ಬರೋ ಚಾನ್ಸಿದೆ. ಅದಕ್ಕೇ ಈ ಖದೀಮ ಮುಖ್ಯಮಂತ್ರಿ ನಮ್ಮ ಪಕ್ಷ ಸರ್ಕಾರ ರಚಿಸಿದ್ರೆ ಬೆಂಬಲಕೊಡ್ತೀನಿಂತ ಗವರ್ನರ್‌ಗೆ ಹೋಗಿ ಹೇಳಲಿಕ್ಕೆ ತಯಾರಿದ್ದರಿಂತೆ ಕಾಣ್ತದೆ. ಈಗಾಗ್ಲೇ ಸಹಿ ಸಂಗ್ರಹಣೆ ಶುರುವಾಗಿದೆ. ಎಲ್ಲರೂ ಆಳೋ ಪಕ್ಷ ಒಡಕೊಳ್ಳೋಕೆ ಕಾದಿದ್ದಾರೆ. . . ಇತ್ಯಾದಿ.

‘ಒಟ್ಟಿನಲ್ಲಿ ಇದೆಲ್ಲ ಹೇಸಿಗೆ ಅಂತ ನನಗನ್ನಿಸತ್ತೆ ರಹಮಾನ್.’

‘ಹೇಸಿಗೆ ಪಟ್ಟುಕೊಂಡರೆ ಆಗ್ತದಾ ಗೌಡರೆ’ ಇಂಗ್ಲಿಷಲ್ಲಿ ಮಾತಾಡುತ್ತಿದ್ದ ರಹಮಾನ್ ಕನ್ನಡದಲ್ಲಿ ಹೇಳಿದ. ತಾನು ಹೇಳಿದ್ದು ತಮಾಷೆಗಾಗಿ ಕಾಣಿಸಬೇಕೆಂದಾಗಲೆಲ್ಲ ರಹಮಾನ್ ಇಂಗ್ಲಿಂಷಿಂದ ಕನ್ನಡಕ್ಕೆ ಬದಲಾಯಿಸುತ್ತಿದ್ದ.

‘ಇಂಥ ಪರಿಸ್ಥಿತೀಲಿ ಏನು ಸಾಧಿಸಕ್ಕೆ ಸಾಧ್ಯಾ ಅಂತ ನನಗೆ ಅನುಮಾನ’

‘ಮುಂದಿನ ಚುನಾವಣೆ ಹೊತ್ತಿಗೆ ಪ್ರಧಾನಿ ಕಡೇವ್ರು ಆಳ್ತಾ ಇರಕೂಡದು – ಅಷ್ಟೇ ನಮ್ಮ ಗುರಿ. ಇದ್ರೆ ಅವರ ಅಧಿಕಾರ ನೂರು ವರ್ಷ ಇಲ್ಲಿ ಭದ್ರವಾಗಿರ್ತದೆ. ಅದೇ ನೀವೀಗ ನಾಯಕರಾದರೆ ಪ್ರಧಾನಿ ಪಕ್ಷ ಬಲವಾಗಲ್ಲ. ಗೌಡರೆ ನಾನು ಹೇಳ್ತೀನಿ. ಮೊದಲು ನೀವು ಅಧಿಕಾರಕ್ಕೆ ಬಂದದ್ದೇ ಲ್ಯಾಂಡ್ ಸೀಲಿಂಗನ್ನು ಕೆಳಗಿಳಿಸಿ. ಎರಡನೇದು: ಭೂಹೀನರಿಗೆ ಮಿನಿಮಮ್ ವೇಜ್ ಫಿಕ್ಸ್ ಮಾಡಿ. ಆಗ ಪ್ರಧಾನಿ ಕಡೇ ಹೋಗಿರೋ ಹುಚ್ಚರಲ್ಲಿ ಬಾಳ ಜನ ನಿಮ್ಮಡೇಗೇ ಬರ್ತಾರೆ. ಅದು ಈ ನಮ್ಮ ಖದೀಮನಿಗೂ ಗೊತ್ತು. ನಮ್ಮನ್ನು ಉಪಯೋಗಿಸಿಕೊಂಡು ತಾನೇ ಚೀಪ್‌ಆಗಿ ಇರಕ್ಕ ನೋಡ್ತಿದಾನೆ. ನಮ್ಮ ವೀರಣ್ಣನೋರು ಅದಕ್ಕೆಲ್ಲ ನೋಡ್ಕೊತಾರೆ. ನೀವು ಸದ್ಯ ಕಣ್ಣುಮುಚ್ಚಿಕೊಂಡು ಆರೋಗ್ಯ ಸುಧಾರಿಸಿಕೊಳ್ಳಿ. ಉಳಿದದ್ದು ನಮ್ಗೆ ಬಿಡಿ. ಈಗ ಅಧಿಕಾರನ್ನ ಹಿಡಿಯೋದು ಮುಖ್ಯ. ನಾಗರಾಜನನ್ನು ನಾನು ಒಪ್ಸಿದೀನಿ. ನೀವು ದೊಡ್ಡೋರಾಗೇ ಉಳಿದಿರಬೇಕೂಂತ ನಮಗೆಲ್ಲ ಇಷ್ಟ.’

‘ಸರಿ ರಹಮಾನ್. ಮಂತ್ರಿಮಂಡಲದಲ್ಲಿ ಮುವ್ವತ್ತೊ ಮುವ್ವತ್ತೈದೊ ಹೆಗ್ಗಣಗಳನ್ನು ಸೇರಿಸ್ಕೊಳ್ಳಬೇಕಾಗ್ತದಲ್ಲ.’

‘ಕಾದಿರಿ ಗೌಡರೆ. ಪಕ್ಷ ಒಡೀಲಿ. ನಮ್ಮ ಖದೀಮನ ಕಡೇವ್ರು ಕಾಲು ಹಿಡ್ಕೊಂಡು ಹೇಳ್ದಾಗೆ ಕೇಳೋ ಹಂಗೆ ಮಾಡ್ತೀವಲ್ಲ. ಅವನ ರೈವಲ್ ಮುಖ್ಯಮಂತ್ರಿ ಆಗ್ದಿದ್ರೆ ಸಾಕು ಅವನಿಗೆ. ಈಗ ನಾನು ಹೋಗ್ಲಾ ಗೌಡರೆ?’

ರಹಮಾನ್ ಪ್ರೀತಿಯಿಂದ ಕೃಷ್ಣಪ್ಪನ ಕೈಹಿಡಿದು ಒತ್ತಿ ಹೊರಟುಹೋದ.

***

ಮಹೇಶ್ವರಯ್ಯನ ಮುಖ ಶಾಂತವಾಗಿತ್ತು. ಆದರೆ ನಾಗೇಶ ಆವೇಶದಲ್ಲಿದ್ದ. ತಾನೇ ಹೇಳುವುದೊ, ಮಹೇಶ್ವರಯ್ಯನೇ ಹೇಳಬೇಕೊ ತಿಳಿಯದೆ ಅವನು ಬಿರಿಯುತ್ತ ನಿಂತ. ಮಹೇಶ್ವರಯ್ಯ ಅಡಿಗೆ ಮನೆಯಿಂದ ಸೀತಮ್ಮನನ್ನು ಕರೆದರು. ‘ಏನು’ ಎಂದು ಬಿಗುವಾಗಿ ಬಂದ ಸೀತಮ್ಮನ ಕೈಯಲ್ಲಿ ಹತ್ತು ಸಾವಿರ ರೂಪಾಯಿಗಳ ಡ್ರಾಫ್ಟನ್ನು ಕೊಟ್ಟು, ‘ಮನೆ ಕಟ್ಟಿಸೋಕೆ’ ಎಂದರು.

ನಿಂತಿದ್ದ ಸೀತ ಕುರ್ಚಿ ಮೇಲೆ ಕುಸಿದಳು. ಅವಳಿಗೆ ಏನೆಂದು ಅರ್ಥವಾಗಲಿಲ್ಲ.

‘ಕುದುರೇಂದ ಐವತ್ತು ಸಾವಿರ ಸಿಕ್ತು. ಅಷ್ಟು ಹಣಾನ್ನ ಈ ಇಳಿವಯಸ್ಸಲ್ಲಿ ಹೇಗೆ ಖರ್ಚು ಮಾಡಲಿ? ನಾನು ಬೆಂಗಳೂರಿಗೆ ಬಂದಾಗ ಉಳ್ಕೊಳ್ಳಿಕ್ಕೊಂದು ಮನೆ ಬೇಕಲ್ಲ ನಾಗೇಶ ಹೇಳ್ದ – ನಿಮ್ಮದೊಂದು ಸೈಟಿದೆಯಂತೆ’ ಎಂದು ಕೃಷ್ಣಪ್ಪನ ಕಡೆ ತಿರುಗಿ,

‘ವೀರಣ್ಣೋರು ದುಡ್ಡು ಹಿಂದೆ ಕೊಟ್ರೆ ತಗಳ್ಳಿಕ್ಕಿಲ್ಲ ಅಂತ ನಾಗೇಶ ಹೇಳ್ದ. ಇಕೊ ಅವರ ಹಾಸ್ಟೆಲ್ಲಿಗೆ ಫಂಡ್ ಅಂತ ಹದಿನೈದು ಸಾವಿರ ಬರ್ದಿದೀನಿ’ ಎಂದು ಇನ್ನೊಂದು ಡ್ರಾಫ್ಟ್‌ನ್ನು ಮೇಜಿನ ಮೇಲಿಟ್ಟರು.

‘ನಾಗೇಶ ಒಂದು ಸಿಗರೇಟು ಎಳೀತೀನಿ ಕೊಡೊ’

ನಾಗೇಶ ಅವರಿಗೆ ತನ್ನ ವಿಲ್ಸ್ ಸಿಗರೇಟನ್ನು ಕೊಟ್ಟ. ಮಹೇಶ್ವರಯ್ಯ ಸಿಗರೇಟ್‌ಹತ್ತಿಸಿ ಎಲ್ಲಿ ಗೌರಿ? ಬಂದಿದಾರಂತಲ್ಲ?’ ಎಂದು ಹಿಂದೆ ತಿರುಗಿ ಗೌರಿಯನ್ನು ಗಮನಿಸಿ ನಮಸ್ಕಾರ ಎಂದರು. ಅವರ ಕಣ್ಣುಗಳು ಗೌರಿಯನ್ನು ಕಂಡು ಹೊಳೆದವು.

ನಾಗೇಶ ತಡೆದುಕೊಳ್ಳಲಾರದೆ ಹೇಳಿದ:

‘ನೋಡಿ ಗೌಡರೆ ನಾನು ಎಷ್ಟು ಬೇಡಾಂದ್ರೂ ಕೇಳದೆ ನನಗೆ ಎರಡುವರೆ ಸಾವಿರ ಕೊಟ್ರು. ನಿಮ್ಮ ನರ್ಸ್‌ಗೆ ಮದುವೆ ಪ್ರೆಸೆಂಟೂಂತ ಎರಡೂವರೆ ಸಾವಿರದ ಡ್ರಾಫ್ಟನ್ನು ಕೊಟ್ಟಿದ್ದಾರೆ. ಹತ್ತು ಸಾವಿರ ಸಾಲ ಇತ್ತಂತೆ – ಚೆಕ್ಕಲ್ಲಿ ಕಳಿಸಿದ್ದು. ಅವರ ಖರ್ಚಿಗೆ ಬರೇ ಹತ್ತು ಸಾವಿರ ಇಟ್ಕೊಂಡಿದಾರೆ. . . .’

ಅಡಿಗೆ ಮನೆಯಿಂದ ಬರುತ್ತಿದ್ದ ಕೃಷ್ಣಪ್ಪನ ತಾಯನ್ನು ಕಂಡು ಮಹೇಶ್ವರಯ್ಯ ಎದ್ದು ನಿಂತರು.

‘ಚೆನ್ನಾಗಿದೀರ?’ ಎಂದು ಶಾರದಮ್ಮ ನೆಲದ ಮೇಲೆ ಕೂತಳು. ರುಕ್ಮಿಣಿಯಮ್ಮ ಸತ್ತ ಕ್ರಮವನ್ನು ಹೇಳಿದರು.

‘ಇನ್ನು ಕುದುರೆ ಸಹವಾಸ ಬಿಟ್ಟೆ ಕಣೊ. ಧಾರವಾಡದ ಹತ್ರ ಒಂದು ಗುಡಿಸಲು ಸ್ವಲ್ಪ ತೋಟ ಇದೆ. ಹೋಗಿ ಅಲ್ಲಿ ಇರ್ತೆನೆ.’

ಜ್ಯೋತಿಯ ಡ್ರಾಫ್ಟನ್ನು ಕೃಷ್ಣಪ್ಪನ ಎದುರಿಗಿದ್ದ ಮೇಜಿನ ಮೇಲೆ ಇಟ್ಟರು. ಅವರಿಗೆ ತುಂಬ ಸುಸ್ತಾಗಿದ್ದಂತೆ ಕಂಡಿತು. ಅವರಿಗೆ ತಮ್ಮ ಔದರ್ಯಾದ ಹೊಗಳಿಕೆಯನ್ನು ಕೇಳಿಸಿಕೊಳ್ಳುವುದು ಇಷ್ಟವಿಲ್ಲವೆಂದು ಕೃಷ್ಣಪ್ಪನಿಗೆ ಗೊತ್ತು.

‘ಕೃಷ್ಣಪ್ಪ, ಅದೇನೊ ಸನ್ಮಾನವಂತಲ್ಲ ನಿನಗೆ ನಿನ್ನ ಊರಲ್ಲಿ, ಅವತ್ತಿನ ಹಿಂದಿನ ದಿನವೇ ನಿಮ್ಮೂರಲ್ಲಿ ನಾನು ಹಾಜರ್ – ಆಯಿತ?’

ಮಹೇಶ್ವರಯ್ಯ ಎದ್ದು ನಿಂತು, 'ನಾಗೇಶಾ ಹೋಗೋಣೋ ಬಾರೊ' ಎಂದು ಉಳಿದವರು ಮಾತಾಡುವ ಮುಂಚೆಯೇ ನಾಗೇಶನ ಜೊತೆ ಹೋಗಿಯೇಬಿಟ್ಟರು.

ಸೀತೆ ಥಟ್ಟನೆ ಎದ್ದಳು. ಸರಸರನೆ ಹೋಗಿ ಬಾಗಿಲಲ್ಲಿ ನಿಂತು ಮಹೇಶ್ವರಯ್ಯನನ್ನು ಕರೆದಳು. ಕಣ್ಣೊರಸಿಕೊಳ್ಳುತ್ತ,

'ನನಗೆ ದುಡ್ಡು ಮುಖ್ಯವಲ್ಲ. ನನ್ನ ತಾಳಿ ಗಟ್ಟಿಯಾಗಿದ್ದರೆ ಸಾಕು. ಈ ಹಣ ಬೇಡ ತಗೊಳ್ಳಿ' ಎಂದಳು. ಅವಳ ಧ್ವನಿಯ ಪ್ರಮಾಣಿಕತೆ ಗಮನಿಸಿ ಮಹೇಶ್ವರಯ್ಯ –

'ನಿನ್ನ ಗಂಡ ತುಂಬ ದೊಡ್ಡೋನಮ್ಮ. ಅವನನ್ನ ಬೆಳೀಲಿಕ್ಕೆ ನೀನು ಬಿಡಬೇಕು. ನನ್ನ ಹಣ ಅವನ ಹಣ ಬೇರೆಯಲ್ಲ, ಇಟ್ಟುಕೊ' ಎಂದರು.

'ದೊಡ್ಡ ಮನುಷ್ಯನ ಹೆಂಡತಿಯಾಗಿರೋ ಕಷ್ಟ ನಿಮಗೇನು ಗೊತ್ತು? ಎಲ್ರೂ ನನ್ನ ಎಷ್ಟು ಕೀಳಾಗಿ ನೋಡ್ತಾರಂತ ನನಗೆ ಗೊತ್ತಿಲ್ವ?'

ಸೀತ ಬಿಕ್ಕಿ ಬಿಕ್ಕಿ ಅಳಲು ಶುರುಮಾಡಿದ್ದನ್ನು ನೋಡಿ ಮಹೇಶ್ವರಯ್ಯ ಬಾಗಿಲಿಗೆ ಬಂದು,

'ನಿನ್ನ ಕಷ್ಟ ನನಗೆ ಗೊತ್ತಾಗತ್ತಮ್ಮ. ಅವನಿಗೂ ಗೊತ್ತಾಗುತ್ತೆ. ಗೊತ್ತಾಗಕ್ಕೆ ಸ್ವಲ್ಪ ಅವಕಾಶ ಕೊಡು ಅಷ್ಟೆ' ಎಂದರು.

ನಾಗೇಶ ತಂದ ಆಟೋರಿಕ್ಷಾದಲ್ಲಿ ಧಾರವಾಡದ ಬಸ್‌ಹಿಡಿಯಲು ಹೊರಟು ಹೋದರು.

***

ಸೀತೆ ಬಾಗಿಲಲ್ಲೆ ನಿಂತು ಮಹೇಶ್ವರಯ್ಯ ಹೋದ ದಿಕ್ಕನ್ನು ದಿಟ್ಟಿಸುತ್ತಿದ್ದಾಗ ಗೌರಿ ಇಂಗ್ಲಿಷಲ್ಲಿ ಕೃಷ್ಣಪ್ಪನಿಗೆ ಹೇಳಿದಳು:

'ಮಹೇಶ್ವರಯ್ಯ ಮಾಡಿರೋದು ಅನ್‌ಫೇರ್. ನಿಮ್ಮ ಹೆಂಡಿತೀನ್ನ ತನ್ನ ಜನರಾಸಿಟೀಂದ ಅವರು ಕ್ರಶ್ ಮಾಡಿದ್ದಾರೆ.

ಒಂದು ಕ್ಷಣ ಕೃಷ್ಣಪ್ಪನಿಗೆ ಏನನ್ನುವುದೋ ತಿಳಿಯದೆ ಸುಮ್ಮನೇ ಕೂತ. ಆಮೇಲೆ ಹೇಳಿದ:

'ಇದನ್ನು ದಕ್ಕಿಸಿಕೊಳ್ಳಲಾರದೆ ನರಳಬಹುದು ಅವಳು. ಅಥವಾ ನರಳ್ತಾಳಾ ಅಂತ್ಲೂ ನನಗೆ ಅನುಮಾನ. ಬಾಣಂತನ ಮಾಡಲಿಕ್ಕೆ ಬಂದ ತಾಯಿಗೆ ಸೀರೆ ಕೊಡಿಸು ಅಂದ್ರೆ ಅದನ್ನೂ ಮಾಡಲಾರದೆ ಹೋದ್ಲು ಅವಳು. ತುಂಬಾ ವುಮನ್ –

ಹಣದಲ್ಲೂ ಸ್ಪಿರಿಟ್‌ನಲ್ಲೂ.'

ಎಷ್ಟು ಸುಲಭವಾಗಿ ಹೆಂಡತಿಯನ್ನು ಇನ್ನೊಬ್ಬಳ ಎದುರು ನಿಂದಿಸಿದೆನೆಂದು ಕೃಷ್ಣಪ್ಪನಿಗಾದ ಆಶ್ಚರ್ಯಕ್ಕಿಂತ ಹೆಚ್ಚು ಗೌರಿಗೇ ಆಗಿ ಅವಳಿಗೆ ಸಿಟ್ಟು ಬಂದಂತೆ ಕಂಡಿತು;

'ನೀವಿಷ್ಟು ನಿಕೃಷ್ಟವಾಗಿ ಕಾಣೋ ಹೆಂಗಸಿನ ಜೊತೆ ಯಾಕಿದೀರಿ ? ನಿಮ್ಮ ಗರ್ವಾನ್ನ ಬೆಳೆಸಿಕೊಳ್ಳೋಕೇಂತ್ಲೆ ನೀವು ನಿಮಗಿಂತ ಕೀಳಾದ ಹೆಣ್ಣನ್ನು ಹುಡುಕಿ ಮದುವೆ ಮಾಡಿಕೊಂಡಂತಿದೆ.'

ಕೃಷ್ಣಪ್ಪನಿಗೆ ಗೌರಿಯ ಮಾತಿನಿಂದ ಶಾಕ್ ಆಯಿತು. ಬಾಯಿಕಟ್ಟಿ ಅವನು ಕೂತಿದ್ದಾಗ ಸೀತೆ ಯಾರನ್ನೂ ಮುಖವೆತ್ತಿ ನೋಡಲಾರದೆ ಸೀದ ಅಡಿಗೆ ಮನೆಗೆ ಹೋದಳು. ಊಟ ಬಿಡಿಸಲು ಕೃಷ್ಣಪ್ಪನ ತಾಯಿಗೆ ನೆರವಾದಳು. ಇನ್ನೂ ಮಗು ಎದ್ದಿರುವುದನ್ನು ನೋಡಿ ಅವಳನ್ನು ಮಲಗಿಸಲೆಂದು ಗೌರಿ ಎದ್ದು ನಿಂತಳು.

***

ಸಿಟಿಯಿಂದ ಸುಮಾರು ಹತ್ತು ಮೈಲಿಗಳಾಚೆ ವೀರಣ್ಣನ ಫಾರಂನಲ್ಲಿ ಈ ಗೆಸ್ಟ್‌ಹೌಸ್‌ಇತ್ತು. ಗೆಸ್ಟ್‌ಹೌಸಿನ ಹಿಂದೆ ಇದ್ದ ಬಂಡೆಗಳನ್ನು ಹಾಗೇ ಇಟ್ಟುಕೊಂಡು ಸುಂದರವಾದ ಲ್ಯಾಂಡ್‌ಸ್ಕೇಪ್ ತೋಟವಿತ್ತು. ಮುಂದೆ ಹೋದರೆ ತೆಂಗು ನಿಂಬೆ ಕಿತ್ತಳೆ ಸಪೋಟ ದಾಳಿಂಬೆ ಪೇರಳೆ ಪನ್ನೀರಳೆ ನೇರಳೆ ಹಲಸು ಮಾವು ಇತ್ಯಾದಿ ಎಲ್ಲ ಜಾತಿಯ ಹಣ್ಣಿನ ಮರಗಳಿದ್ದವು. ಗೆಸ್ಟ್‌ಹೌಸಿನ ಎದುರು ದ್ರಾಕ್ಷಿಯ ತೋಟವಿತ್ತು. ಹೆಂಚುಹೊದಿಸಿದ ಅತ್ಯಾಧುನಿಕವಾದ ಸಜ್ಜಾದ ಈ ಮನೆಯ ಎರಡು ಪಕ್ಕಗಳಲ್ಲೂ ಬಣ್ಣ ಬಣ್ಣಗಳ ಸಪುರವಾದ ಚೀನೀ ಬಿದಿರಿನ ಹಿಂಡಲುಗಳಿದ್ದವು. ಹಣ್ಣಿನ ತೋಟದ ಪಕ್ಕದಲ್ಲಿ ಈಜುವ ಕೊಳವಿತ್ತು. ಕುದುರೆ ಸವಾರಿಯ ಹುಚ್ಚಿದ್ದವರಿಗೆಂದು ವೀರಣ್ಣ ಚೆಂದವಾದ ಆಯಕಟ್ಟಿನ ಮೈಯ ಬಿಳಿಯ ಕುದುರೆಯೊಂದನ್ನು ಸಾಕಿದ್ದ. ಮನೆಯ ಎದುರಿಗೇ ಕಾಣುವಂತೆ ಸುತ್ತ ಬೇಲಿ ಬಿಗಿದ ಹುಲ್ಲಿನಲ್ಲಿ ಎರಡು ಜಿಂಕೆಗಳು ಮೇಯುತ್ತಿದ್ದವು. ಈ ಬೇಲಿಯಾಚೆ ಎರಡು ದೊಡ್ಡ ಗೂಡುಗಳಲ್ಲಿ ಒಂದು ಹಿಂಡು ನವಿಲುಗಳು ಇದ್ದವು. ಹೀಗೆ ಹಳ್ಳಿ ಮತ್ತು ಪಟ್ಟಣಗಳ ಸೊಬಗನ್ನೂ ಸೌಕರ್ಯಗಳನ್ನೂ ಒಟ್ಟಿಗೇ ಒದಗಿಸಿದ್ದ ಈ ಗೆಸ್ಟ್‌ಹೌಸಿಗೆ ಕೃಷ್ಣಪ್ಪ ಬರುತ್ತಿರುವುದು ಇದು ಮೊದಲನೇ ಸಲವಲ್ಲವಾದರೂ ಈ ಬಾರಿ ಬಂದಾಗ ಗೆಸ್ಟ್‌ಹೌಸಿನ ನಿರ್ಮಲವಾದ ಗಾಳಿಯಿಂದ ಉತ್ತೇಜಿತನಾದ.

ಕೃಷ್ಣಪ್ಪನ ಜೊತೆ ಅವನ ತಾಯಿ, ನಾಗೇಶ, ಗೌರಿ ದೇಶಪಾಂಡೆ ಮಾತ್ರ ಬಂದಿದ್ದರು. ಬ್ಯಾಂಕಿಗೆ ರಜವಿದ್ದ ದಿನಗಳಲ್ಲಿ ಮಾತ್ರ ಸೀತೆಗೆ ಅಲ್ಲಿ ಬರಲು ಸಾಧ್ಯವಾದ್ದರಿಂದ ತುಮಕೂರಲ್ಲಿ ಇದ್ದ ಅವಳ ವಿಧವೆ ತಾಯಿಯನ್ನು ಅವಳ ಜೊತೆಗಿರಲು ಕರೆಸುವ ಏರ್ಪಾಟಾಗಿತ್ತು. ಕೃಷ್ಣಪ್ಪನ ಮನಃಶಾಂತಿಗೆ ಇದು ಅಗತ್ಯವೆಂದು ಎಲ್ಲರಿಗೂ ಗೊತ್ತಿತ್ತು. ಮಗಳನ್ನು ದಿನಬಿಟ್ಟು ದಿನವಾದರೂ ಸ್ಕೂಲ್ ಮುಗಿದ ಮೇಲೆ ಕರೆದುಕೊಂಡು ಬರುವೆನೆಂದು ವೀರಣ್ಣ ಹೇಳಿದ್ದ.

ಏಕಾಂತ ಬಯಸಿ ಕೃಷ್ಣಪ್ಪ ಇಲ್ಲಿಗೆ ಬಂದಿದ್ದರೂ ನಿತ್ಯ ತನ್ನನ್ನು ನೋಡಲು ಬರುತ್ತಿದ್ದ ಜನರಿಲ್ಲದೆ ಅವನಿಗೆ

ಬೇಸರವಾಗುತ್ತಿತ್ತು. ಪ್ರಾಯಶಃ ಸಾಯುತ್ತಿರುವಾಗಲೂ ಗುಂಪು ಗುಂಪು ಜನ ನೋಡಲು ಬರುತ್ತಿದ್ದರಿಂದ ತಾನಿನ್ನು ಮುಖ್ಯವ್ಯಕ್ತಿಯಾಗಿ ಉಳಿದಿದ್ದೇನೆಂದು ಸಿಗುತ್ತಿದ್ದ ಸಮಾಧಾನಕ್ಕೆ ಇಲ್ಲಿ ಅವಕಾಶ ಕಡಿಮೆಯಾಗಿತ್ತು. ಕುಗ್ಗುತ್ತಿರುವ ತನ್ನ ಆರೋಗ್ಯ ಮತ್ತು ಸಾಮರ್ಥ್ಯಗಳ ಈ ಇಳಿಗಾಲದಲ್ಲಿ ವೀರಣ್ಣನ ಮೂಲಕ ತನಗೆ ಒದಗುತ್ತಿದ್ದ ಮರ್ಯಾದೆ, ಮೆಹರ್ಬಾನಿ, ಉಪಚಾರ, ಸೌಕರ್ಯಗಳು ತನ್ನಲ್ಲಿನ್ನೂ ಬದುಕುವ ಆಸೆಯನ್ನು ಉಳಿಸಿವೆಯೆಂಬುದು ಅರಿವಾಗುತ್ತ ಕೃಷ್ಣಪ್ಪ ವಿಷಾದಕ್ಕೊಳಗಾದ. ಇಂಥ ಸೌಕರ್ಯಗಳನ್ನೂ ಜನಬೆಂಬಲವನ್ನೂ ತನಗೆ ಒದಗಿಸುತ್ತಿದ್ದ ಭ್ರಷ್ಟಾಚಾರದ ವ್ಯವಸ್ಥೆಗೂ ತನ್ನ ಜೀವಂತಿಕೆಗೂ ಎಷ್ಟು ದಟ್ಟವಾದ ಸಂಬಂಧವಿದೆಯೆಂದು ಚಕಿತನಾದ. ಮುಖ್ಯಮಂತ್ರಿ ಪದವಿ ತನಗೆ ಬೇಡವೆನ್ನುತ್ತಲೇ, ಹೀಗೆ ಅನ್ನುವುದರಿಂದಲೂ ಅದನ್ನು ಪ್ರಾಯಶಃ ಗಟ್ಟಿಮಾಡಿಕೊಳ್ಳುತ್ತಲೇ, ತನ್ನನ್ನು ಆ ಸ್ಥಾನಕ್ಕೆ ತರಲು ಉಳಿದವರೆಲ್ಲ ಮಾಡುತ್ತಿದ್ದ ಸಂಚಿನಲ್ಲಿ ತನ್ನ ಪ್ರಾಮುಖ್ಯತೆಯನ್ನು ಅನುಭವಿಸುತ್ತ ಹೇಗೆ ತನ್ನ ಪ್ರಾಣಶಕ್ತಿ ಚುರುಕಾಗಲು ಹವಣಿಸುತ್ತಿದೆ! ನಾಗರಾಜ್ ಅವನು ಬರೆದುಕೊಟ್ಟ ಅಸೆಂಬ್ಲಿ ಸದಸ್ಯತ್ವದ ರಾಜೀನಾಮೆ ಪತ್ರ ಅವನ ಜೇಬಿನಲ್ಲೇ ಇತ್ತು. ಮಹೇಶ್ವರಯ್ಯನ ಭವಿಷ್ಯ ನುಡಿಯೂ ಸದಾ ನೆನಪಿಗೆ ಬರುತ್ತಿತ್ತು. ಈ ವ್ಯವಸ್ಥೆಯನ್ನೇ ಬಳಸಿಕೊಂಡು ತಾನು ಮುಖ್ಯಮಂತ್ರಿಯಾಗಬೇಕೆಂಬ ಆಸೆ ನಿಜವಾದ್ದೊ ? ಅಥವಾ ಇವನ್ನೆಲ್ಲ ತ್ಯಾಗಮಾಡಿ ಭ್ರಷ್ಟಾಚಾರದ ಸೆಲೆಗಳಿಂದ ದೂರವಿದ್ದು, ಜನಹಿತವನ್ನೂ ತನ್ನ ಒಳಗಿನ ಹಿತವನ್ನೂ ಸಾವಿನ ಎದುರಿನಲ್ಲಿ ಮತ್ತೊಮ್ಮೆ ಸಾಧಿಸಬೇಕೆಂಬ ಇನ್ನೊಂದು ಸೆಳೆತ ನಿಜವಾದ್ದೊ ? ಹಿಂದೊಮ್ಮೆ ಬೈರಾಗಿ ಉತ್ತರ ಕೊಡಬೇಕಾಗುವಂತೆ ತನ್ನ ಪ್ರಶ್ನೆಯನ್ನು ಅವನಲ್ಲಿ ಕೇಳಲಾರದೆ ಸೋತಿದ್ದು ನೆನಪಾಗುತ್ತದೆ. ಮತ್ತೆ ಈಗ ಅಂಥದ್ದೇ ಸಂದಿಗ್ಧದಲ್ಲಿ ತಾನಿದ್ದೇನೆ.

ಪ್ರಾಯಶಃ ಪ್ರಶ್ನೆಯೇ ಇಲ್ಲ. ಧರ್ಮಸಂಕಟಗಳು ನಿಜವಲ್ಲ. ಹಾಗೆ ಮಾಡಲೋ ಹೀಗೆ ಮಾಡಲೋ ಎಂದು ಕೇಳಿಕೊಳ್ಳುವಾಗ ನಮ್ಮ ಆಳವಾದ ಆಸೆ ಎರಡು ದಿಕ್ಕುಗಳಲ್ಲೂ ಸಮಾನಶಕ್ತಿಯಲ್ಲಿ ತೊಯ್ಯುತ್ತಿರುತ್ತವೆಯೋ ಎಂಬುದೇ ಅನುಮಾನ. ನಮ್ಮ ಪ್ರಾಣಶಕ್ತಿಯನ್ನು ಎರಡರಲ್ಲಿ ಒಂದು ದಿಕ್ಕು ಹೆಚ್ಚು ಸೆಳೆಯುತ್ತಿದ್ದರೆ ಆಗ ಧರ್ಮ ಸಂಕಟ ನಿಜವಲ್ಲ. ಅದು ಲಾಲಸೆ. ತೀಟೆ. ನಮಗೆ ನಾವೇ ಚೆನ್ನಾಗಿ ಕಾಣಿಸಿಕೊಳ್ಳಬೇಕೆಂಬ ವ್ಯಾಮೋಹ.

ವೀರಣ್ಣ ಒದಗಿಸುತ್ತಿದ್ದ ಈ ಆವರಣ ನನಗೆ ತುಂಬ ಅಪ್ರಿಯವಾಗಿದ್ದಲ್ಲಿ ಅದಕ್ಕೆ ತಾನು ಒಳಗಾಗುತ್ತಲೇ ಇರಲಿಲ್ಲವೆಂದು ನಿಟ್ಟುಸಿರು ಬಿಡುತ್ತಾನೆ. ಆದರೂ ಬಾಧೆಯಾಗುತ್ತದೆ. ನಾಗರಾಜ್ ತನ್ನ ರಾಜೀನಾಮೆಯನ್ನು ಪೋಸ್ಟ್‌ಮಾಡುವುದಿಲ್ಲ ಎಂಬ ಭರವಸೆಯಿಂದ ಅದನ್ನು ತಾನು ಬರೆದಿದ್ದಲ್ಲ – ಅವನ ತೀರ್ಮಾನಕ್ಕೆ ಬಿಟ್ಟದ್ದು ಬರಿ ನಾಟಕವಲ್ಲ ಎಂದು ಕೃಷ್ಣಪ್ಪನಿಗೆ ತನ್ನ ವಿಚಾರಸರಣಿಯಲ್ಲಿ ಮತ್ತೆ ಗೊಂದಲವುಂಟಾಗುತ್ತದೆ.

ವೀರಣ್ಣನಿಗೆ ಫೋನ್ ಮಾಡಿ ಕರೆಸುವಂತೆ ನಾಗೇಶನಿಗೆ ಹೇಳಿ ಕೃಷ್ಣಪ್ಪ ಮಾವಿನ ಮರದ ನೆರಳಲ್ಲಿ ಕೂತು ಬಿದಿರು ಹಿಂಡಿಲಿನಲ್ಲಿ ಗಾಳಿ ಹೊಕ್ಕು ಹೊರಡುವ ಮೃದುವಾದ ನಾದದಲ್ಲಿ ಮಗ್ನನಾಗುತ್ತಾನೆ.

***

ಕೃಷ್ಣಪ್ಪನ ತಾಯಿಗೆ ಮಾತ್ರ ಈ ಫಾರಂಗೆ ಬಂದು ಗೌಜೋ ಗೌಜು. ಸಂಭ್ರಮದಿಂದ ಸೀರೆಯ ಸೆರಗನ್ನು ಗೊಬ್ಬೆ ಕಟ್ಟಿಕೊಂಡು

ಅವಳು ಓಡಾಡುವುದನ್ನು ಕಂಡು ಇಂಥ ಒಂದು ಜಾಗಕ್ಕೆ ತಾನು ಒಡೆಯನಾಗಿದ್ದರೆ ಈ ತಾಯಿ ತೃಪ್ತಳಾಗುತ್ತಿದ್ದಳು ಎನ್ನಿಸಿ ಕೃಷ್ಣಪ್ಪನಿಗೆ ನಗುಬಂತು. ಆಕೆಯೇ ಹೋಗಿ ದೊಡ್ಡ ಕೊಳಗದಲ್ಲಿ ಹಸುವನ್ನು ಕರೆದು, ಹಕ್ಕಿ ಹಾರಾಡಿಯೋ ಬೇರೆವರ ಕಣ್ಣು ಬಿದ್ದೋ ದೃಷ್ಟಿಯಾಗದಿರಲೆಂದು ಕೊಳಗವನ್ನು ಸೀರೆಯ ನಿರಿಗೆಯಲ್ಲಿ ಮುಚ್ಚಿಕೊಂಡು ಕೃಷ್ಣಪ್ಪನ ಎದುರು ನಿಂತು ಒಳ ಸಂಚು ಮಾಡುವ ಧಾಟಿಯಲ್ಲಿ,

'ಇದೆಂಥದೋ ಮಾರಾಯ' ಎಂದಳು.

ಕೃಷ್ಣಪ್ಪ ಪ್ರಶ್ನಾರ್ಥಕವಾಗಿ ನೋಡಿದ.

'ಇನ್ನೂ ಎರಡು ಮೂರು ಕೊಳಗದಷ್ಟಾದರೂ ಅದರ ಕೆಚ್ಚಲಲ್ಲಿ ಉಳಿದಿದೆ – ಮಾರಾಯ. ಕೈಬತ್ತಿ ಬಂತೂಂತ ಜವಾನ ಕರೆಸ್ತ ಇದಾನೆ.'

ನೊರೆಗೆರೆಯುವ ಬೆಚ್ಚಗಿದ್ದ ಹಾಲನ್ನು ಕೃಷ್ಣಪ್ಪನಿಗೆ ಒಂದು ಕ್ಷಣ ತೋರಿಸಿ ಮತ್ತೆ ಮುಚ್ಚಿದರು.

'ಕಾಯ್ಸಿ ಕೊಡ್ತೇನೆ ಕುಡಿ. ನಮ್ಮನೇ ಆಕಳ ಕಾವೇರಿ ಇತ್ತಲ್ಲ ಅದರ ಕೆಚ್ಚಲಿಗೇ ಬಾಯಿ ಹಾಕಿ ನೀನು ಕುಡಿತಿದ್ದದ್ದು ನೆನಪಿದೆಯೇ? ಸಾಧು ಹಸ. ಒಂದ್ಸಲ ಒದ್ದದ್ದಿಲ್ಲ. ಅದರ ಬುಡದ್ದೇ ಹಸಾನ ಈಗಲೂ ನಾನು ಕರೆಯೋದು. ಅಬ್ಬಬ್ಬಾಂದರೆ ಒಂದುಸೇರು ಕರೀತಿದೆ. ಅದರಲ್ಲರ್ಧಾನ್ನ ಜೋಯಿಸ್ರಿಗೆ ಕೊಡ್ತೀನಿ – ದೇವರ ತಲೆಮೇಲೆ ಬ್ರಾಮಣ ಸುರೀಲಿ ಅಂತ. . . .'

ಪ್ಯಾಂಟ್‌ತೊಟ್ಟು ಜುಬ್ಬಹಾಕಿ ಸ್ನಾನ ಮಾಡಿ ಹೊರಬಂದ ಗೌರಿ ತಲೆಯ ಕೂದಲನ್ನು ಒಣಗಿಸಿಕೊಳ್ಳುತ್ತ ದೂರದಲ್ಲಿ ಕೂತಿದ್ದುದು ತಾಯಿಗೆ ಕಾಣಿಸುತ್ತದೆ. ಗೌರಿ ಸಿಗರೇಟ್ ಹಚ್ಚಿದ್ದು ಕಂಡು ತಾಯಿ ಮುಖ ಸಿಂಡರಿಸುತ್ತಾಳೆ. ಕೃಷ್ಣಪ್ಪ ಮುಗುಳು ನಗುತ್ತ,

'ಹೊಗೆಸೊಪ್ಪು?' ಎಂದು ಅಣಕ ಮಾಡುತ್ತಾನೆ.

'ತಂದದ್ದು ಮುಗೀತ ಬಂತು. ನಾಗೇಶನಿಗೆ ಹೇಳಿ ತರ್ಸು' ಎಂದು ಗೆಲುವಾಗಿ ಗೌರಿಯನ್ನು ಕರೀತಾರೆ.

'ಕಡುಬು ಮಾಡಿದೀನಿ. ತಿಂಡಿಗೆ ಬನ್ನಿ'

ಹಿಂದಿನ ರಾತ್ರೆ ಸದಾಶಿವನಗರದ ಮನೆಯಲ್ಲಿ ತಿರುವಿಟ್ಟ ಹಿಟ್ಟಿನಲ್ಲಿ ಸೊಸೆಗಷ್ಟು ಇಟ್ಟು, ಉಳಿದದ್ದನ್ನು ಮರೆಯದೆ ಬೆಳಗಿನ ಝಾವ ಕಾರಲ್ಲಿ ತಂದು, ಬಾಳೆ ಕೊಟ್ಟೆಯಲ್ಲಿ ಬೇಯಿಸಿ, ತೆಂಗಿನ ಚಟ್ನಿ ಮಾಡಿ ಮಗನಿಗೂ ಗೌರಿಗೂ ನಾಗೇಶನಿಗೂ ಬಡಿಸುತ್ತಾರೆ. ಮಗನಿಗೆ ಇಷ್ಟವೆಂದು ತಂದಿದ್ದ – ರುಕ್ಮಿಣಿಯಮ್ಮ ಸಾಯುವ ಮುಂಚೆ ಹಾಕಿದ – ಮಾವಿನ ಮಿಡಿ

ಉಪ್ಪಿನಕಾಯನ್ನೂ ರಸವನ್ನೂ ಎಲೆಗೆ ಬಡಿಸುತ್ತ,

'ಯಾವ ಮರದ್ದು ನೆನಪಾಗತ್ತ ಹೇಳು ?'

ಎಂದು ಮಗನನ್ನು ಕೇಳುತ್ತಾರೆ. ಕೃಷ್ಣಪ್ಪ ತನಗೆ ಗೊತ್ತಿದ್ದ ಮರಗಳನ್ನೆಲ್ಲಾ ನೆನಪು ಮಾಡಿಕೊಳ್ಳುತ್ತಾನೆ. ಹುಲಿಯೂರಿನ ಹೊಳೆಯಬದಿ ಒಂದು ಮರವಿದೆ; ಜೋಯಿಸರ ಮನೆಯ ಮೇಲಿನ ಗುಡ್ಡದಲ್ಲಿ ಇನ್ನೊಂದಿದೆ; ದನಕಾಯುವಾಗ ಗುಡ್ಡದ ಕೆಳಗೆ ಬೇಲಿ ಬಿಗಿಯಾಗಿಲ್ಲದೆ ತನಗೆ ಆತಂಕವನ್ನುಂಟುಮಾಡುತ್ತಿದ್ದ ಕೊರಕಲಲ್ಲಿ ಮತ್ತೊಂದಿದೆ. ಮೂರೂ ಮಿಡಿ ಉಪ್ಪಿನಕಾಯಿಗೆ ಪ್ರಶಸ್ತವಾದ ಮರಗಳು. ಮೂರರ ತೊಟ್ಟು ಮುರಿದರೂ ಸೊನೆ ಚಿಮ್ಮುತ್ತದೆ. ವರ್ಷಗಳಾದರೂ ಅವುಗಳ ಉಪ್ಪಿನಕಾಯಿ ಕೆಡುವುದಿಲ್ಲ. ಒತ್ತಿದರೆ ಮೆತ್ತಗೆ ಪಿಚಕ್ಕೆನ್ನದೆ ಕಚ್ಚಿದರೆ ಕಟಮ್ಮೆನ್ನುತ್ತದೆ. ಮೂರರ ರುಚಿಯೂ ಬೇರೆ – ಘಾಟಿನಲ್ಲಿ, ವಾಸನೆಯಲ್ಲಿ, ಉಪ್ಪು ಕಾರಗಳಲ್ಲಿ ಅವು ಹದವಾಗಿ ಮುರುಟಿಕೊಳ್ಳುವ ಸೊಗಸಿನಲ್ಲಿ. ಎರಡು ಸಾರಿ ಕಚ್ಚಿ ನೆನಪು ಮಾಡಿಕೊಳ್ಳಲು ಯತ್ನಿಸುತ್ತಿದ್ದ ತನ್ನನ್ನು ಕುಕ್ಕರು ಕಾಲಲ್ಲಿ ಕೂತು, ಕುತೂಹಲದಿಂದ ತುಂಟತನದಿಂದ ಉಪ್ಪಿನ ಕಾಯಂತೆಯೇ ಸುಕ್ಕಾದ ಮುಖದಿಂದ ನೋಡುತ್ತಿದ್ದ ತಾಯಿಗೆ ಕೃಷ್ಣಪ್ಪ ಅನುಮಾನಿಸುತ್ತಾ ಹೇಳಿದ:

'ಹೊಳೇ ಬುಡದ್ದಲ್ಲವ ?'

ಸಂತೋಷದಿಂದ ತಾಯಿಯ ಮುಖ ಬಿರಿಯಿತು.

ಮಧ್ಯಾಹ್ನ ವೀರಣ್ಣ ಬಂದು'ಏನು ಬರಹೇಳಿದರಂತಲ್ಲ ?' ಎಂದ.

ನಿಂತಿದ್ದ ವೀರಣ್ಣನಿಗೆ ಕೂರಿ ಅಂದ ಕೃಷ್ಣಪ್ಪ. ಸಿಗರೇಟನ್ನು ತುಟಿಗೆ ಸಿಕ್ಕಿಸಿ ಅದನ್ನು ಹಚ್ಚುವಂತೆ ಕೇಳಿದ. ಅವನ ಮನಸ್ಸು ಉದ್ವಿಗ್ನವಾಗಿರುವುದನ್ನು ಗಮನಿಸಿ ವೀರಣ್ಣ ಸಮಾಧಾನದಿಂದ ಕಾದ.

'ವೀರಣ್ಣೋರೆ ನಿಮ್ಮನ್ನು ಒಂದು ಮಾತು ಕೇಳಬೇಕು. ದಯಾಮಾಡಿ ತಪ್ಪು ತಿಳಿಯಬಾರದು.'

'ಕೇಳಿ ಗೌಡರೆ'

'ನನ್ನನ್ನು ಮುಖ್ಯಮಂತ್ರಿ ಮಾಡಲಿಕ್ಕೆ ನಿಮಗಾಗ್ತ ಇರೋ ಖರ್ಚೆಷ್ಟು ?'

'ಗೌಡರೆ ನೀವು ತುಂಬ ನಿಷ್ಠಾವಂತರೂಂತ ನನಗೆ ಗೊತ್ತು. ಆದರೆ ನೀವು ಚಾಣಾಕ್ಷರೂಂತ್ಲೂ ತಿಳ್ದಿದೀನಿ. ರಾಜಕೀಯಕ್ಕೆ ಇಳಿದಮೇಲೆ ಇವೆಲ್ಲ ಇದ್ದೇ ಇದೆ.'

'ಗೊತ್ತು ನನಗೆ. ಆದರೆ ಅದು ರಾಜಕೀಯ ಅಲ್ಲ.'

'ಅದೂ ಗೊತ್ತು ನನಗೆ ಗೌಡರೆ. ಆದರೆ ದೇಶದ ಸ್ಥಿತಿ ಸಂದಿಗ್ಧವಾಗಿದೆ. ಸರ್ವಾಧಿಕಾರಾನ್ನ ತಡೆಯೋಕೆ ಬೇರೆ ಮಾರ್ಗ್ಇಲ್ಲ. ನಿಮ್ಮ ರಾಜಕೀಯವನ್ನ ಈ ಅಪಾಯ ಕಳೆದ ಮೇಲೆ ಮಾಡುವಿರಂತೆ'.

'ನಿಮ್ಮ ಸ್ವಾರ್ಥ ಇದರಲ್ಲಿ ಇಲ್ಲಾಂತ ನಾನು ತಿಳಕೊಳ್ಳಲ?'

ವೀರಣ್ಣ ನೊಂದಂತೆ ಕಂಡಿತು.

'ಗೌಡರೆ ನಿಮ್ಮಲ್ಲೊಂದು ನಾನು ನೋಡಿದೀನಿ. ನಿಮಗೆ ಸಂಶಯದ ಪ್ರಕೃತಿ. ಹತ್ತಿರದವರನ್ನು ಬೆಳೆಯೋಕೆ ಬಿಡದೇ ಇರೋ ಆಲದಮರದಂತೆ ನೀವು ಅಂತಲೂ ಒಂದು ದೂರು ಕೇಳಿದ್ದೀನಿ. ಆದರೆ ಹತ್ತಿರದವರೆಗೆ ನಿಮ್ಮ ಯೋಗ್ಯತೆ ಇಲ್ಲಾಂತ್ಲೂ ನನಗೆ ಗೊತ್ತು.'

'ನನ್ನ ಪ್ರಶ್ನೆಗೆ ನೀವು ಉತ್ತರ ಕೊಡಲಿಲ್ಲ.'

'ನಾನೊಬ್ಬ ವ್ಯಾಪಾರಿ ಗೌಡರೆ. ನನ್ನ ವೃತ್ತಿಧರ್ಮಾನ್ನ ಬಿಡು ಅಂತೀರ?'

'ಆದರೆ ಅದಕ್ಕೆ ಸಹಾಯ ಮಾಡೋದಕ್ಕೆ ನನ್ನನ್ನು ಜನ ಚುನಾಯಿಸಿಲ್ಲ.'

'ಅಯ್ಯೋ ಶಿವನೆ. ನಿಮ್ಮ ಮಾತು ಅರ್ಥ ಆಗ್ತಿಲ್ಲ ನನಗೆ. ನಾನೊಬ್ಬ ಮನುಷ್ಯ ಅಲ್ಲವ? ನನಗೂ ಅಭಿಮಾನ ಇಲ್ಲವ? ನಿಮ್ಮನ್ನು ಆ ಸೀಟಿನ ಮೇಲೆ ಒಂದು ವರ್ಷನಾದರೂ ನೋಡಬೇಕೂಂತ ನನಗೆ ಆಸೆ. ನನಗೇನೂ ಮಾಡಬೇಡಿ ನೀವು. ಆಣೆಯಿಟ್ಟು ಹೇಳ್ತೇನೆ; ಯಾವುದಕ್ಕೂ ನಿಮ್ಮ ಹತ್ರ ನಾನು ಬರಲ್ಲ. ಈಗಿರೋ ಖದೀಮ ನಾನು ಹೇಳಿದ್ದನ್ನು ನನಗೆ ಮಾಡಿ ಕೊಡ್ತಾ ಇಲ್ವಾ?'

ತನ್ನ ಮಾತಿನಿಂದ ವೀರಣ್ಣ ಅತ್ಯಂತ ನೊಂದು ಹೊರಟುಹೋಗುತ್ತಾನೆಂದು ತಿಳಿದದ್ದು ಸುಳ್ಳಾಗಿತ್ತು. ಸರಸವಾದ ಧಾಟಿ ಬಿಡದೆ ವೀರಣ್ಣ ಮಾತಾಡಿದ್ದ. ಕೃಷ್ಣಪ್ಪನೂ ನುರಿತ ರಾಜಕಾರಣಿಯಾದ್ದರಿಂದ ವೀರಣ್ಣನೆಷ್ಟು ಗಟ್ಟಿಯೆಂದು ತಿಳಿಯುವ ಆಸೆಯಿಂದ ಕೇಳಿದ:

'ನಾನು ಚೀಫ್ ಆಗಿರೋ ತನಕ ನಿಮಗೆ ಕಂಟ್ರಾಕ್ಟ್‌ಸಿಗಲ್ಲ.'

'ಬೇಡ' ವೀರಣ್ಣ ಸರಳವಾಗಿ ಹೇಳಿದ: 'ನೀವು ಮಾಡೋರಲ್ಲಾಂತ್ಲೂ ನನಗೆ ಗೊತ್ತಿಲ್ವ? ನಾನು ಸಾಕಷ್ಟು ದುಡ್ಡು

ಮಾಡಿದೀನಿ ಗೌಡರೆ. ಈಗ ನಿಮ್ಮಂಥ ಒಬ್ಬ ದೊಡ್ಡ ಮನುಷ್ಯನ್ನ ಆ ಸ್ಥಾನದಲ್ಲಿ ಕೂರಿಸೋದರಲ್ಲೇ ನನಗೊಂದು ಸುಖವಿದೆ. ನೀವು ಇದನ್ನ ಅರ್ಥಮಾಡಿಕೊಳ್ಳದೆ ಸಣ್ಣತನ ಮಾಡಿದರೆ ನನಗೆ ದುಃಖವಾಗುತ್ತೆ.'

'ನೋಡಿ ನನ್ನ ಆರೋಗ್ಯ ಸರಿಯಿಲ್ಲ. ಈ ಖಾಹಿಲೇನ್ನೂ ನಾನು ಉಳಿದವರ ಸಹಾನುಭೂತಿ ಗಳಿಸೋಕೆ ಉಪಯೋಗಿಸ್ತೀದೇನೊ ಅಂತ ಒಂದೊಂದು ಸಲ ಅನುಮಾನವಾಗುತ್ತೆ.'

'ಬಿಡಿ ಗೌಡರೆ. ನಾನು ಹೇಳೋದಿಷ್ಟು: ನೀವು ನಮ್ಮ ಖದೀಮನ ಜೊತೆ ಅಧಿಕಾರ ಹಂಚಿಕೋಬೇಕಾಗತ್ತೆ. ಆದ್ದರಿಂದ ನಿಮ್ಮ ಮನಸ್ಸಿನಲ್ಲಿರೋದನ್ನೆಲ್ಲ ಈಗ ಮಾಡ್ಲಿಕ್ಕೆ ಆಗಲ್ಲ. ಆದರೆ ಒಂದೆರಡು ಮಾಡಬಹುದು. ನೀವು ನುರಿತ ರಾಜಕಾರಣಿ. ಕೂತು ಮಾತಾಡಿ ಕೈಲಾದ್ದನ್ನು ಮಾಡಿ ಮುಂದಿನ ಚುನಾವಣೆ ಹೊತ್ತಿಗೆ ಇನ್ನಷ್ಟು ಬಲವಾಗಿ.'

'ನನ್ನನ್ನು ಮುಂದಿಟ್ಟುಕೊಂಡರೆ ಆ ಕಡೇಂದ ಹತ್ತು ಜನ ಈ ಕಡೆ ಬಂದಾರು ಅನ್ನೋದು ನಿಜವ?'

'ಹಾಗಿಲ್ದೆ ಇದ್ದರೆ ನಮ್ಮ ಖದೀಮನೆ ನಿಮ್ಮನ್ನ ಸೂಚಿಸ್ತಾನ? ಈಗಲೂ ಅವ ಪ್ರಧಾನಿ ಜೊತೆ ಸೇರಿಕೊಳ್ಳೋಕೆ ಒಳಗಿಂದೊಳಗೆ ಪ್ರಯತ್ನಿಸ್ತ ಇದಾನೆ.'

ಕೃಷ್ಣಪ್ಪ ಸಿಗರೇಟನ್ನು ಆರಿಸಿದ, ವೀರಣ್ಣ ಎದ್ದುನಿಂತು ಹೇಳಿದ:

'ನಂಬಿಕೆ ಬಂತು ತಾನೆ? ಇನ್ನು ನಾನು ಹೋಗ್ತೀನಿ. ಏನಾರೂ ಬೇಕಾದ್ರೆ ಹೇಳಿ ಕಳಿಸಿ.'

ಈ ಸಂಭಾಷಣೆಯ ನಂತರ ಕೃಷ್ಣಪ್ಪ ಆ ಬಗ್ಗೆ ಯಾರ ಹತ್ತಿರವೂ ಮಾತಾಡಲಿಲ್ಲ. ಸಾಮಾನ್ಯವಾಗಿ ಹುರುಪಿನಲ್ಲಿರುತ್ತಿದ್ದ. ಮಾರನೇ ಬೆಳಿಗ್ಗೆ ಜ್ಯೋತಿ ಬಂದು ಗೌರಿಯ ಸಹಾಯದಿಂದ ತನ್ನನ್ನು ಬಿಸಿನೀರು ತುಂಬಿದ ತೊಟ್ಟಿಯಲ್ಲಿಳಿಸಿದಳು. ಕಾಚವನ್ನೂ ಬನೀನನ್ನೂ ಗೌರಿ ಇದ್ದುದರಿಂದ ಬಿಚ್ಚದೆ ಅವನು ತೊಟ್ಟಿಯಲ್ಲಿಳಿದ. ನೀರಿನಲ್ಲಿ ಎಡಗೈ ಎಡಗಾಲನ್ನು ಹೆಚ್ಚು ಶ್ರಮವಿಲ್ಲದೆ ಆಡಿಸಬಹುದೆಂದು ಕಂಡು ಕೃಷ್ಣಪ್ಪನಿಗೆ ಖುಷಿಯಾಯಿತು. ನೀರಿನ ಥೆರಪಿಯಲ್ಲಿ ನುರಿತಿದ್ದ ಗೌರಿ ಜ್ಯೋತಿಯನ್ನು ಕಳಿಸಿದಳು. ಇದಾದ ಮೇಲೆ ಕೃಷ್ಣಪ್ಪನ ಬೆಳಗಿನ ವಿಸರ್ಜನೆಗಳಿಗೆ ಸಹಾಯ ಮಾಡಲು ಮಾತ್ರ ಜ್ಯೋತಿ ಬರುತ್ತಿದ್ದಳು.

ತನ್ನ ಎದುರಿನಲ್ಲಿ ಕಾಚ ಬನೀನುಗಳನ್ನು ಬಿಚ್ಚಲು ಮುಜುಗರ ಪಡುವ ಕೃಷ್ಣಪ್ಪನನ್ನು ನೋಡಿ ಗೌರಿ ನಕ್ಕಳು. ಕೃಷ್ಣಪ್ಪ ನಾಚಿದ. ಮಾರನೇ ದಿನ ಬನೀನನ್ನು ಬಿಚ್ಚಲು ಸಮ್ಮತಿಸಿದ.

ಗೌರಿಯ ಕೈ ತನ್ನ ಕೈಕಾಲುಗಳ ಮೇಲೆ ಓಡಾಡುವಾಗ ಅದು ಕೇವಲ ಚಿಕಿತ್ಸಕ ಸ್ಪರ್ಶವೆನ್ನಿಸಲಿಲ್ಲ. ಆ ಸ್ಪರ್ಶವನ್ನು ಅವಳು ಕೂಡ ಬಯಸಿದಂತೆ ಕಂಡು ಕೃಷ್ಣಪ್ಪನಿಗೆ ರೋಮಾಂಚನವಾಯಿತು. ಮೈಬಿಸಿಯಾಯಿತು. ಖಾಯಿಲೆ ಬಿದ್ದ ಮೇಲೆ ಪ್ರಥಮ ಬಾರಿಗೆ ಈ ಅನುಭವವಾಗಿ ಅವನು ಗಲಿಬಿಲಿಗೊಳಗಾದ.

ಕೃಷ್ಣಪ್ಪನನ್ನು ನೀರಿನ ತೊಟ್ಟಿಯಿಂದ ಮೇಲಕ್ಕೇಳಿಸಿಕೊಂಡು ವೀಲ್‌ಚೇರಿನ ಮೇಲೆ ಕೂರಿಸಿ ಗೌರಿ ತೋಟದಲ್ಲಿ ತಳ್ಳಿಕೊಂಡು ಹೋಗುವಳು. ತಾನು ಪ್ಯಾಂಟ್ ತೊಟ್ಟಾಗ ಕೃಷ್ಣಪ್ಪ ಹೆಚ್ಚು ಆರಾಮವಾಗಿರುವುದನ್ನು ಅವಳು ಗಮನಿಸಿ, ಪ್ಯಾಂಟ್ ಜುಬ್ಬಗಳನ್ನು ಹಾಕಿಕೊಂಡು ಕೂದಲನ್ನು ಕರ್ಚೀಪಿನಿಂದ ಬಿಗಿದಿರುತ್ತಿದ್ದಳು. ತೋಟದಲ್ಲಿ ಕೃಷ್ಣಪ್ಪನನ್ನು ಕೂರಿಸಿ, ಅವನಿಗೆ ಕೂತಲ್ಲೇ ವ್ಯಾಯಾಮ ಮಾಡಲು ಸಹಾಯ ಮಾಡುತ್ತ, ಅವಳು ತನಗೆ ಪ್ರಿಯವಾದ ಕಾದಂಬರಿಗಳನ್ನು ಅವನಿಗೆ ಓದುವಳು. ಕೃಷ್ಣಪ್ಪ ತಾನು ದನಕಾಯುತ್ತಿದ್ದಾಗಿನ ದಿನಗಳನ್ನು ಅವಳಿಗೆ ಚಿತ್ರವತ್ತಾಗಿ ಹೇಳುವನು. ಅಶ್ವತ್ಥದ ಮರದ ಬುಡದಲ್ಲಿ ಕೂತಾಗ ಎದುರಿನ ಪೇರಳೆ ಮರಕ್ಕೆ ಅತಿಥಿಗಳಾಗಿ ಬರುತ್ತಿದ್ದ ಹಕ್ಕಿಗಳನ್ನೆಲ್ಲ ವರ್ಣಿಸುವನು. ಬೆಳಗಿನ ಕೆಲಸ ಮುಗಿಸಿದ್ದರೆ ತಾಯಿಯೂ ಅಲ್ಲಿ ಬಂದು ಕೂತಿರುವಳು. ಒಮ್ಮೆ ಗೌರಿ ಏನೋ ಕೆಲಸಕ್ಕೆ ಎದ್ದು ಹೋದಾಗ ಅವಳು,

‘ನೀನು ಇವಳನ್ನೇ ಯಾಕೆ ಮದುವೆಯಾಗಲಿಲ್ಲ?’

ಎಂದಳು. ಈ ಪ್ರಶ್ನೆಯಿಂದ ಕೃಷ್ಣಪ್ಪ ತಬ್ಬಿಬ್ಬಾದ. ತಾಯಿ ಬಿಡಲಿಲ್ಲ. ಮುಗ್ಧವಾಗಿ ಅಂದಳು:

‘ನಮ್ಮ ಕುಟುಂಬದಲ್ಲಿ ಎಷ್ಟೋ ಜನ ಎರಡು ಹೆಂಡಿರನ್ನ ಮಾಡಿಕೊಂಡಿದ್ದಿಲ್ಲವ? ಅದಕ್ಕೇನಂತೆ?’

‘ಅಮ್ಮ ಹಾಗೆಲ್ಲ ಗೌರಿ ಹತ್ತ ಮಾತಾಡಿಬಿಡಬೇಡ’

ಕೃಷ್ಣಪ್ಪ ರೇಗಿ ಹೇಳಿದ.

‘ನಾನ್ಯಾಕೆ ಮಾತಾಡ್ಲೋ, ನೀನು ಬೆಳೆದು ದೊಡ್ಡವನಾಗಿಲ್ವ? ಸುಮ್ಮನೇ ಕೊರಗೋಕಿಂತ ಆಸೆಯಿದ್ದರೆ ಮಾಡಿಕೊ ಅಂದೆ ಅಷ್ಟೆ.’

ತಾಯಿಯ ಸರಳವಾದ ಮಾತು ಅವನನ್ನು ಮುಟ್ಟಿತು. ಆದರೆ ಗೌರಿಗೆ ತನ್ನನ್ನು ಬಿಟ್ಟು ಬೇರೆ ಬದುಕಿದೆ ಎಂದು ಗೊತ್ತಿದ್ದರಿಂದ ಆ ದಿಕ್ಕಿನಲ್ಲಿ ತನ್ನ ಯೋಚನೆಯನ್ನವನು ಹರಿಯಬಿಡಲಿಲ್ಲ.

ಬೆರಳುಗಳು ಈಗ ರಬ್ಬರ್‌ಚೆಂಡನ್ನು ಒತ್ತಬಲ್ಲವು. ಕಾಲನ್ನು ಎತ್ತುವುದು ಕೂಡ ಕ್ರಮೇಣ ಸಾಧ್ಯವಾಗುತ್ತಿದೆ. ಇನ್ನೊಂದು ತಿಂಗಳಲ್ಲೇ ಕ್ರಚ್‌ಗಳ ಮೇಲೆ ನಡೆಯುವುದು ಸಾಧ್ಯವಾಗುತ್ತದೆಂದು ಗೌರಿ ಹೇಳುತ್ತಿದ್ದಳು. ಆದರೆ ಅವಳಿಗಿರುವ ರಜೆ ಒಂದು ತಿಂಗಳು ಮಾತ್ರ. ಆಮೇಲೆ ಹೋಗುವಳೆಂದು ಕೃಷ್ಣಪ್ಪನಿಗಾಗುತ್ತಿದ್ದ ಭಯ ಗಮನಿಸಿ ಗೌರಿ ತಾನು ಹೋಗುವ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ.

ಹಗಲು ಸುಂದರವಾಗಿ ಹಿತವಾಗಿ ಇರುವುದು. ರಾತ್ರೆ ನಕ್ಷತ್ರಗಳು ಖಚಿತವಾಗಿ ಮೂಡಿ ಆಕಾಶ ಸ್ಪಷ್ಟವಾದ ನೀಲಿಯಲ್ಲಿ

ಶೋಭಿಸುವುದು. ಒಮ್ಮೊಮ್ಮೆ ಗೌರಿ ಮತ್ತು ಕೃಷ್ಣ ಗಾಢವಾಗಿ ಮಾತಾಡುವಾಗ ನವಿಲುಗಳು ಗರಿಗಳನ್ನು ಕೊಡೆಯಂತೆ ಬಿಚ್ಚಿ ನಿಗರಿಸಿಕೊಂಡು ಗಣಬಂದವರಂತೆ ತತ್ತರ ಅದುರಿಸುತ್ತ ಕುಣಿಯುವುವು. ತಾಯಿ ಬರೀ ಹಸು ಹಾಲು ಹಣ್ಣುಗಳ ಬಗ್ಗೆ ಮಾತಾಡುವಳು. ಕಡುಬು ಮಾಡಲು ಹಲಸಿನ ಹಣ್ಣಿಲ್ಲವೆಂದು ದಿನಕ್ಕೊಂದು ಬಾರಿಯಾದರೂ ಕೊರಗಿ, ಮಗನ ಬಾಯಲ್ಲಿ ನೀರೂರುವಂತೆ ಮಾಡುವಳು. ನಾಗೇಶ ಸೀರಿಯಸ್ಸಾಗಿ ಮೇಜಿನ ಎದುರು ಕೂತು ಕೃಷ್ಣಪ್ಪನ ಜೀವನ ಚರಿತ್ರೆಯನ್ನು ಬಣ್ಣಕಟ್ಟಿ ಬರೆಯುತ್ತ ಬರೆದದ್ದನ್ನು ಓದುತ್ತ ಕೃಷ್ಣಪ್ಪನಿಗೆ ನಾಚಿಕೆಯಾಗುವಂತೆ ಮಾಡುವನು.

ಕೃಷ್ಣಪ್ಪ ಅನೇಕ ಬಾರಿ ಒಂದೆರಡು ವಾಕ್ಯಗಳಲ್ಲಿ ತಾನು ಗೌರಿಗೆ ಹೇಳಬೇಕೆಂದಿರುವುದನ್ನು ರಿಹರ್ಸ್ಮಾಡಿಕೊಳ್ಳುವನು. 'ಗೌರಿ ನಾನು ನಿನ್ನ ಪ್ರೀತಿಸ್ತ ಇದ್ದೆ. ಆದರೆ ವಾರಂಗಲ್ ಠಾಣೆಯಲ್ಲಿ ನರಕದ ಅನುಭವವಾಗಿದ್ದರಿಂದ ನಿನ್ನ ಕೇಳಲಾರದೆ ಹೋದೆ.' ಹೀಗೆ ಹೇಳಿದರೆ ಏನನ್ನೂ ಹೇಳಿದಂತಾಗುವುದಿಲ್ಲವೆಂದು ಸುಮ್ಮನಾಗಿ ಬಿಡುವನು. ಗೌರಿ ಮಧ್ಯವಯಸ್ಸಿನ ಪ್ರೌಢೆಯಾಗಿದ್ದರೂ ಮತ್ತೆ ತನ್ನ ದಳಗಳನ್ನೆಲ್ಲ ಮಡಿಸಿಕೊಂಡು ಮಗ್ಗಿನಂತೆ ಅವನಿಗೆ ಕಾಣುವಳು. ಕ್ರಮೇಣ ಇಬ್ಬರೂ ತಮ್ಮ ಹಿಂದಿನ ದಿನಗಳ ಬಗ್ಗೆ ಮಾತಾಡುವುದನ್ನು ಬಿಟ್ಟರು. ಒಂದು ದಿನ ಬೆಳಿಗ್ಗೆ ಬಿದಿರು ಹಿಂಡಲಿನ ಕೆಳಗೆ ಮಾತಾಡದೆ ಕೃಷ್ಣಪ್ಪ ಕೂತಿದ್ದ. ಗೌರಿಯೂ ಏನೋ ಓದುತ್ತ ಕೂತಿದ್ದಳು. ತಾಯಿ ಅಡುಗೆ ಮನೆಯಲ್ಲಿ ಪತ್ರಡೆ ಮಾಡುತ್ತಿದ್ದಳು. ಕೃಷ್ಣಪ್ಪ ಇದ್ದಕ್ಕಿದ್ದಂತೆ ಹಾಡಲು ಶುರು ಮಾಡಿದ, ಗೌರಿ ವಿಸ್ಮಯದಿಂದ ಕಣ್ಣು ಮುಚ್ಚಿ ಹಾಡುವ ಕೃಷ್ಣಪ್ಪನನ್ನು ನೋಡುತ್ತ ಕೂತಳು. ಅಲ್ಲಲ್ಲಿ ಬೆಳ್ಳಗಾದ ಕ್ರಾಪು ಗಡ್ಡಗಳು ಅವನ ಮುಖದಲ್ಲಿ ಶಾಂತವಾದ ಕಳೆ ಕಂಡು ಅವಳಿಗೆ ಸಂತೋಷವಾಯಿತು. ಕೂತಲ್ಲಿಂದಲೇ ಬೆಳೆದಿದ್ದ ಹಸಿರಾದ ಗರಿಕೆಗಳನ್ನೂ ಪುಟಾಣಿ ಹೂಗಳನ್ನೂ ಆಯ್ದಳು. ಕೃಷ್ಣಪ್ಪ ನಿಲ್ಲಿಸಿದ ಮೇಲೆ ತಾನೂ ಮೆದುವಾಗಿ ಹಾಡತೊಡಗಿದಳು – ಅವನಿಗೆ ಪ್ರಿಯವಾದ ಕಬೀರ್ ಹಾಡುಗಳನ್ನ.

ಒಂದು ದಿನ ಕೃಷ್ಣಪ್ಪನ ವೀಲ್ ಚೇರನ್ನು ಸ್ವಿಮಿಂಗ್ ಪೂಲ್ ಹತ್ತಿರ ನಿಲ್ಲಿಸಿ ತನ್ನ ಬಟ್ಟೆಯನ್ನು ಬಿಚ್ಚಿ ಬಿಕನಿಯಲ್ಲಿ ನಿಂತಳು. ಅವಳು ಸಹಜವಾಗಿ ಹೀಗೆ ಬಟ್ಟೆ ಬಿಚ್ಚಿದಾಗ ಅವನಿಗೆ ಗೊಂದಲವಾಯಿತು. ಅವಳು ಎತ್ತರದಲ್ಲಿ ನಿಂತು, ಕೈಗಳನ್ನು ಚಾಚಿ, ತನ್ನ ಸಪುರವಾದ ದೇಹವನ್ನು ಹೆದೆಯೇರಿಸಿದ ಬಾಣದಂತೆ ಕ್ಷಣ ನಿಲ್ಲಿಸಿ ನೀರಿಗೆ ಚಿಮ್ಮಿದಳು. ನೀರಿನಲ್ಲಿ ಮಾಯವಾಗಿ ಮತ್ತೆ ಕಪ್ಪು ಕೂದಲು, ಬೆನ್ನು, ಸಣ್ಣ ಸೊಂಟ, ತೋರವಾದ ನಿಂತಬ, ಪುಟ್ಟ ಪಾದಗಳಾಗಿ ನೀರಲ್ಲಿ ಕ್ರಮೇಣ ಕಾಣಿಸಿಕೊಂಡು ಚಲಿಸಿದಳು. ಕೃಷ್ಣಪ್ಪನ ಇಡೀ ದೇಹ ಅವಳ ದೇಹದ ಚಲನೆಯನ್ನು ಕಲ್ಪನೆಯಲ್ಲಿ ಅನುಕರಿಸಿತು. ಬಾಲ್ಯದಲ್ಲಿ ತುಂಬ ಕುಶಲ ಈಜುಗಾರನಾಗಿದ್ದ ಕೃಷ್ಣಪ್ಪ ಮಾರುಗೈಯಲ್ಲಿ ತಾನು ಮಾರುಗೈಯಾಗಿ, ಅವಳ ಬಡಿಯುವ ತಳ್ಳುವ ಕಾಲುಗಳಲ್ಲಿ ತನ್ನ ಕಾಲುಗಳಾಗಿ ಅವಳ ಚಲನೆಯಲ್ಲಿ ತನ್ಮಯನಾದ. ತನ್ನರ್ಧ ದೇಹ ಜಡವಾಗಿದೆ ಎಂಬುದೆ ಒಂದು ಕ್ಷಣ ಅವನಿಗೆ ಮರೆತುಹೋಗಿತ್ತು. ಗೌರಿ ನೀರಿನಿಂದೆದ್ದು ಅವನೆಡೆ ಬಂದಳು. ಅವಳ ನುಣುಪಾದ ಬಿಗಿಯಾದ ಚರ್ಮದ ಮೇಲೆ ನೀರಿನ ಬಿಂದುಗಳು ಮಿನುಗುತ್ತಿದ್ದವು. ಅವಳ ಕೂದಲಿಂದ ನೀರು ಜೊಟ್ಟುತ್ತಿತ್ತು. ಅವಳ ಮೈಮೇಲಿನ ತಂಪು ತನ್ನದೇ ಎನ್ನಿಸಿ ಅವನು ನಡುಗಿದ. ಅವಳ ಚೈತನ್ಯ ಪೂರ್ಣವಾದ ದೇಹ ತನ್ನ ಜಡವಾದ ದೇಹಕ್ಕೆ ಹೇಸೀತೆಂದು ಭಯವಾಯಿತು. ಅಸೂಯೆಯಿಂದ ಅವನು ಕಣ್ಣು ಮುಚ್ಚಿದ. ಗೌರಿಯ ಒದ್ದೆಯಾದ ಕೈಗಳು ತನ್ನ ಕೆನ್ನೆಕತ್ತುಗಳನ್ನು ಸವರುತ್ತಿದ್ದುದನ್ನು ಅರಿತು ಕೃಷ್ಣಪ್ಪ ಚಕಿತನಾಗಿ ಕಣ್ಣುಬಿಟ್ಟ. 'ನಿನಗೆ ಬಾತ್‌ನಲ್ಲಿ ಮತ್ತೆ ಕೂರಬೇಕೆನ್ನಿಸುತ್ತ?' ಎಂದಳು. ಅವಳು ಏಕವಚನದಲ್ಲಿ ಆಡಿದ ಮಾತಿನಿಂದ ಅವರಿಗೆ ರೋಮಾಂಚನವಾಯಿತು. ಗೌರಿ ವೀಲ್ ಚೇರನ್ನು ಬಿಕನಿಯಲ್ಲೇ ತಳ್ಳಿಕೊಂಡು ಹೋಗಿ, ಅವನ ರೂಮಿನ ಬಾಗಿಲು ಹಾಕಿಕೊಂಡು, ವಿಶಾಲವಾದ ತೊಟ್ಟಿಯಲ್ಲಿ ಬಿಸಿನೀರು ತುಂಬಿಸಿ ಕೃಷ್ಣಪ್ಪನ ಬಟ್ಟೆಯನ್ನು ಬಿಚ್ಚಿದಳು.

ಅವನಿಗಿಷ್ಟು ದಿನವೂ ಅಪರಿಚಿತವಾಗಿದ್ದ ಗಾಢವಾದ ಸ್ವರದಲ್ಲಿ, 'ಎಲ್ಲವನ್ನೂ ಬಿಚ್ತೀನಿ' ಎಂದು ಅವನ ಕಾಚವನ್ನೂ ಬಿಚ್ಚಲು ಹೋದಳು. ಕೃಷ್ಣಪ್ಪ ಹೆದರಿದವನಂತೆ ಬೇಡವೆನ್ನಲು ಹೋಗಿ ನಿಸ್ಸಹಾಯಕನಾಗಿ ಸುಮ್ಮನಿದ್ದ. ತನ್ನ ರೋಗಗ್ರಸ್ಥವಾದ ದೇಹದ ಬೆತ್ತಲೆಯಿಂದ ಅವಳು ಹೇಸದಿದ್ದಾಗ ಅವನಲ್ಲಿ ಕೃತಜ್ಞಭಾವ ಮೂಡಿತು. ಅವಳ ಕಣ್ಣುಗಳು ಏನನ್ನೋ ನೋಡದೆ ಆವೇಶದಲ್ಲಿದ್ದಂತೆ ಅನ್ನಿಸಿತು. ಅವಳ ದೇಹ ಕೌಶಲದಲ್ಲಿ ತನ್ನ ದೇಹಕ್ಕೆ ಆತು, ಅದನ್ನೆತ್ತಿ ನೀರಿನಲ್ಲಿಳಿಸಿತು. ನಂತರ ಅವಳೂ ಅದೇ ತೊಟ್ಟಿಯಲ್ಲಿಳಿದು ತನ್ನ ಬಟ್ಟೆಯನ್ನು ಬಿಚ್ಚಿ ಎಸೆದಳು. ನೀರಿನಲ್ಲಿ ಹಗುರವಾದ ತನ್ನ ದೇಹವನ್ನು ಹಗುರಾದ ಅವಳ ದೇಹ ಅಪ್ಪಿತು. ಕೃಷ್ಣಪ್ಪನ ಕಣ್ಣುಗಳಲ್ಲಿ ನೀರು ಉಕ್ಕಿ ಅವನ ದೃಷ್ಟಿ ಮಸುಕಾಯಿತು.

ತುಂಬ ಹೊತ್ತು ಕೃಷ್ಣಪ್ಪನನ್ನು ತಬ್ಬಿಕೊಂಡಿದ್ದ ಗೌರಿ ಎದ್ದು ಮೃದುವಾದ ಬಿಳಿಯ ಟವಲ್ಲುಗಳನ್ನು ತೊಟ್ಟಿಯ ಕೆಳಗೆ ಹಾಸಿದಳು. ನಂತರ ಕೃಷ್ಣಪ್ಪನನ್ನು ಎಬ್ಬಿಸಿ ಅದರ ಮೇಲೆ ಮಲಗಿಸಿ ಅವನನ್ನು ತಬ್ಬಿ ತಾನೂ ಮಲಗಿದಳು. ಅವಳ ತುಟಿ ಮೊಲೆ ತೊಡೆಗಳನ್ನು ಅವನಿಗೆ ಬೆಸೆಯುತ್ತ ಒತ್ತಿದಳು.

'ನನಗೀಗ ಆಗುತ್ತಿಲ್ಲ ಗೌರಿ' ಎಂದ, ಆಳವಾದ ಅವನದಲ್ಲವೆನ್ನಿಸುವ ಸ್ವರದಲ್ಲಿ; ಹತಾಶೆಯಲ್ಲಿ.

ಗೌರಿ ಗಾಢವಾದ ಮೌನದ ಮಡುವಾಗಿದ್ದಳು. ಮೊಳೆಯುವ ಬೀಜವನ್ನು ತನ್ನ ಬೆಚ್ಚನೆಯ ಸಹನೆಯ ಕತ್ತಲಲ್ಲಿ ಮುಚ್ಚಿಟ್ಟುಕೊಳ್ಳುವ ಮಣ್ಣಿನಂತಿದ್ದಳು. ಅವಳ ಬೆರಳುಗಳು ಕೃಷ್ಣಪ್ಪನ ಇಡೀ ದೇಹದ ಮೇಲೆ ಆಡಿದುವು. ಚಿಲುಮೆಗಳನ್ನು ತಟ್ಟಿ ಮುಟ್ಟಿ ಎಬ್ಬಿಸುವಂತೆ ಸಂದಿ ಮೂಲೆಗಳಲ್ಲಿ ಹುಡುಕಿದವು. ಅವಳ ಕಣ್ಣುಗಳು ಏಕಾಗ್ರ ತಪಸ್ಸಿನಲ್ಲಿ ಎಂಬಂತೆ ಮುಚ್ಚಿದ್ದುವು. ಬೆಚ್ಚಗೆ ಜಿನುಗುತ್ತಿದ್ದ ಅವಳ ಯೋನಿ ಅವನ ಹೊಟ್ಟೆ, ತೊಡೆ, ಪಕ್ಕೆ ರಟ್ಟೆ, ಕೆನ್ನೆಗಳನ್ನು ಮೃದುವಾಗಿ ಒತ್ತುವಂತೆ ಹಗುರಾಗಿ ಮೈಮೇಲೆ ಹರಿದಾಡಿದಳು. ಅವಳ ತುಟಿಗಳು ಅವನ ಮೈಯನ್ನೆಲ್ಲ ಹಿತವಾಗಿ ಕಚ್ಚುತ್ತ ಮೇಲಿನಿಂದ ಕೆಳಗಿಳಿದವು. ತನಗೆ ಕಣ್ಣುಗಳಿವೆ, ಕಿವಿಯಿದೆ, ಕತ್ತಿದೆ, ಹೊಟ್ಟೆಯಿಂದ, ಲಿಂಗವಿದೆ ಎಂದು ಅನ್ನಿಸುವಂತೆ ಅವನನ್ನು ಮೊಳೆಯಿಸುತ್ತ ಅವಳ ಉಸಿರು ಅವನ ಇಡೀ ಮೈಯ ಮೇಲೆ ಕಚಕುಳಿಯ ಸಂದುಗಳಲ್ಲಿ ಆಡಿತು. ಮೈಯೆಲ್ಲ ಬಿಸಿಯಾಗಿ ಚಿಗುರುತ್ತ ಪುಟಿಯುತ್ತ ಹೋದಂತೆ ಅವನು ಉದ್ರೇಕಗೊಂಡಾಗ ಅಂಗಾತ್ತನೆ ಕೈಚೆಲ್ಲಿ ಮಲಗಿದ ಅವನನ್ನು ಅವಳು ಮೇಲಿನಿಂದ ಪ್ರವೇಶಿಸಿದಳು, ಅವಳ ನಿಧಾನವಾದ ಚಲನೆ ಆಲಾಪದಂತಿತ್ತು. ಕೃಷ್ಣಪ್ಪನ ಕಣ್ಣುಗಳಲ್ಲಿ ನೀರೊಡೆದು ಹರಿಯಿತು, 'ಅಮ್ಮ' ಎಂದ. ಗೌರಿ ಹಗುರಾಗಿ ಅವನ ಮೇಲೆ ತನ್ನ ಮೈಯನಿಟ್ಟು ಮಲಗಿದಳು. ಕೃಷ್ಣಪ್ಪ ಗಾಢವಾಗಿ ನಿದ್ದೆ ಹೋದ. ಮತ್ತೆ ಎಚ್ಚರಾದಾಗ ಅದೇನು ಕನಸೋ ಎಂದು ಸೋಜಿಗಪಡುತ್ತ ತಾನು ಟವಲ್ ಮೇಲೆ ಮಲಗಿರುವುದನ್ನೂ ಗೌರಿ ತನ್ನ ಪಕ್ಕದಲ್ಲಿ ಬೆತ್ತಲೆಯಾಗಿ ಸಿಗರೇಟು ಸೇದುತ್ತ ಕೂತಿರುವುದನ್ನೂ ಗಮನಿಸಿದ. ಅವಳ ಮುಖ ನೋಡಿದ: ಅವಳು ಕರುಣೆಯಲ್ಲಿ ಮಾಡಿದ ಚಿಕಿತ್ಸೆಯೆ? ಅನುಮಾನವಾಯಿತು.

ತಾಯಿ ಅವನ ರೂಮಿನ ಪಕ್ಕದ ರೂಮಲ್ಲಿ ಮಲಗುತ್ತಿದ್ದಳು. ಸಾಯಂಕಾಲ ಗೌರಿ ಮತ್ತು ಕೃಷ್ಣಪ್ಪ ಜಿಂಕೆಗಳಿಗೆ ಕೈಯಿಂದ ಹುಲ್ಲು ತಿನ್ನಿಸುತ್ತಿದ್ದಾಗ ಅವಳು ಬಂದು ತಾನು ಗೌರಿಯ ರೂಮಲ್ಲಿ ಮಲಗುತ್ತೇನೆಂದೂ ಗೌರಿ ತನ್ನ ರೂಮಿಗೆ ಬದಲಾಯಿಸಿಕೊಳ್ಳಬೇಕೆಂದೂ ಹೇಳಿದಳು. ಉತ್ತರಕ್ಕೆ ಕಾಯದೆ ಹೋಗಿಬಿಟ್ಟಳು. ಕೃಷ್ಣಪ್ಪ ನಸುನಗುತ್ತ ಗೌರಿಯನ್ನು ನೋಡಿದ.

ರಾತ್ರೆ ಕೃಷ್ಣಪ್ಪನ ಪಕ್ಕದಲ್ಲಿ ಗೌರಿ ಮಲಗಿದಳು. ಅವಳ ದೇಹದ ಕಾವಿನಲ್ಲಿ ಕೃಷ್ಣಪ್ಪ ಗಾಢವಾಗಿ ನಿದ್ದೆ ಮಾಡಿದ. ಬೆಳಿಗ್ಗೆ ಬಂದ ಜ್ಯೋತಿ ಕೃಷ್ಣಪ್ಪನಲ್ಲಾದ ಮಾರ್ಪಾಟನ್ನು ಗಮನಿಸಿದಂತೆ ಕಂಡಿತು.

ಎಲ್ಲರೂ ನಿರೀಕ್ಷಿಸುತ್ತಿದ್ದಂತೆ ದೇಶಾದ್ಯಂತ ಆಳುವ ಪಕ್ಷ ಒಡೆದುಕೊಂಡಿತು. ರಹಮಾನ್ ಮತ್ತು ನಾಗರಾಜ್ ಕೃಷ್ಣಪ್ಪನನ್ನು ನೋಡಲು ಬಂದರು. ನಾಗರಾಜ್ ಚಿಂತಾಕ್ರಾಂತನಾಗಿದ್ದ. ನಾವು ಪ್ರಧಾನಿಯ ಸರ್ವಾಧಿಕಾರದ ವಿರುದ್ಧ ಸದ್ಯದಲ್ಲಿ ದೇಶದ ಮುಖ್ಯಮಂತ್ರಿಗೆ ಪರಿಮಿತವಾದ ಬೆಂಬಲ ಕೊಡುವುದು ಸರಿಯೆಂದ. ಒಡೆದುಕೊಂಡ ಪಕ್ಷ ತಮ್ಮ ನಾಯಕತ್ವದಲ್ಲೇ ಮಂತ್ರಿಮಂಡಳ ಪುನರ್‌ರಚಿತವಾಗಬೇಕೆಂದು ರಾಜ್ಯಪಾಲರನ್ನು ಕೇಳಿಕೊಂಡಿತ್ತು, ರಹಮಾನ್ ಅತ್ಯಂತ ಸಂದಿಗ್ಧವಾದ ಲೆಖ್ಖಾಚಾರವನ್ನು ಒಂದು ಗಂಟೆ ಮಾಡಿ ಈ ಕಡೆ ಐದು ಜನ ಹೆಚ್ಚಿರುತ್ತಾರೆಂದು ತೋರಿಸಿದ. ಈಗಾಗಲೇ ಮುಖ್ಯಮಂತ್ರಿ ಕಡೆಯಿಂದ ಹಲವರು ತಮ್ಮ ಜೊತೆ ಸೇರಿದ್ದಾರೆಂದು ಪ್ರಧಾನಿ ಕಡೆಯ ಚಂದ್ರಯ್ಯ ಹೇಳಿಕೆ ಕೊಟ್ಟಿದ್ದ. ಪತ್ರಿಕೆಗಳಲ್ಲಿ ಒಂದು ಪೇಜಲ್ಲಿ ಹೇಳಿಕೆ, ಇನ್ನೊಂದು ಪೇಜಲ್ಲಿ ನಿರಾಕರಣೆಗಳು ಅಚ್ಚಾಗಿ ಗೊಂದಲ ಹುಟ್ಟಿಸುವಂತಿತ್ತು.

ನಾಗರಾಜ್ ಒಂದು ಹೇಳಿಕೆಯನ್ನು ಕೃಷ್ಣಪ್ಪನ ಸಹಿಗೆ ಸಿದ್ಧಪಡಿಸಿ ತಂದಿದ್ದ. ವಾಕರಿಸುತ್ತಲೇ ಅದನ್ನು ಓದಿದ. ತಮ್ಮ ಪಕ್ಷ ಸದ್ಯದ ಮಂತ್ರಿಮಂಡಳವನ್ನು ಬೆಂಬಲಿಸುತ್ತದೆಂದು ಅದು ಹೇಳಿತ್ತು. ಕೃಷ್ಣಪ್ಪ ಅದಕ್ಕೆ ಸಹಿ ಹಾಕಿದ. ರಹಮಾನ್ ಹೇಳಿದ:

‘ಮುಖ್ಯಮಂತ್ರಿ ಪಕ್ಷದಿಂದ ಇನ್ನೂ ಐದು ಜನ ಆ ಕಡೆ ಸೇರಬಹುದು. ನಮ್ಮಡೇಗೆ ಅವರಿಂದ ಜನಾನ್ನ ಪಡಕೊಳ್ಳೋಕೆ ನಿಮ್ಮನ್ನ ಸಿ. ಎಮ್. ಮಾಡಬೇಕಾಗತ್ತೆ. ಕಾಯಾಣ’.

‘ಡಿಸ್‌ಗಸ್ಟಿಂಗ್’

ನಾಗರಾಜ್ ಹೇಳಿ ಚಾರ್ಮಿನಾರ್ ಹತ್ತಿಸಿದ:

‘ಈಗಲೇ ದೇಶದಲ್ಲಿ ಅನಾರ್ಕಿಯಿದೆ. ರಾಯಚೂರಲ್ಲಿ ಕಾಲರಾದಿಂದ ಜನ ಸಾಯ್ತಿದ್ದಾರೆ ಅಂತ ಸುದ್ದಿ. ಪ್ರತಿ ನಿತ್ಯ ದರೋಡೆ, ಹೆಂಗಸರ ಮಾನಭಂಗದ ಸುದ್ದಿಗಳಿರುತ್ತವೆ. ನಾವಿನ್ನೂ ಮಂತ್ರಿಮಂಡಳ ರಚಿಸೋ ನಾಟಕ ಆಡಿಕೊಂಡು ಕೂತಿದೀವಿ.’

ರಹಮಾನ್‌ಗೆ ಈಗ ರಾಜಕೀಯ ಚರ್ಚೆಯಲ್ಲಿ ಆಸಕ್ತಿಯಿರಲಿಲ್ಲ. ಕೃಷ್ಣಪ್ಪನ ಮಂತ್ರಿಮಂಡಳದಲ್ಲಿ ಟ್ರಾನ್ಸ್‌ಪೋರ್ಟ್‌ಮಂತ್ರಿಯಾಗುವುದನ್ನು ಅವನು ಆಗಲೇ ಕಲ್ಪಿಸಿಕೊಂಡಿರುವವನಂತೆ ಕಂಡ.

ಕೃಷ್ಣಪ್ಪನ ಹೇಳಿಕೆ ಬಂದ ಮಾರನೇ ದಿನ ಕಿಡಿಪತ್ರಿಕೆಯಲ್ಲಿ ಕೃಷ್ಣಪ್ಪ ಸಂಪೂರ್ಣ ಭ್ರಷ್ಟಾಚಾರದ ತೊತ್ತಾಗಿರುವುದರ ಇನ್ನೊಂದು ಕಥೆಯಿತ್ತು. ವೀರಣ್ಣನ ಫಾರಂನಲ್ಲಿ ಅವನು ಭೋಗದಲ್ಲಿ ಮುಳುಗಿರುವುದಾಗಿಯೂ, ದೇಶದಲ್ಲಿ ಬೆಂಕಿ ಹತ್ತಿ ಉರಿಯುತ್ತಿರುವಾಗ ಅವನ ಕಾಮತೃಪ್ತಿಗೆ ದೆಹಲಿಯ ಬೆಲೆವೆಣ್ಣೊಬ್ಬಳನ್ನು ವೀರಣ್ಣ ಒದಗಿಸಿರುವುದಾಗಿಯೂ ಅಚ್ಚಾಗಿತ್ತು.

ತನ್ನ ದೇಹದ ಶುಶ್ರೂಷೆಗಾಗಿ ಹಿಂದೊಮ್ಮೆ ಕ್ರಾಂತಿಕಾರನಾಗಿದ್ದವ ಎಲ್ಲ ಮೌಲ್ಯಗಳನ್ನೂ ಕೈಬಿಟ್ಟಿರುವುದನ್ನು ಛೀಮಾರಿ ಮಾಡಲಾಗಿತ್ತು. ರಿಜಿಸ್ಟರ್ಡ್‌ಅಂಚೆಯಲ್ಲಿ ತನ್ನ ಕೈ ಸೇರಿದ ಈ ಪತ್ರಿಕೆಯನ್ನು ಗೌರಿಗೆ ಕಾಣಿಸಗೊಡದಂತೆ ಸುಡಲು ನಾಗೇಶನಿಗೆ ಕೃಷ್ಣಪ್ಪ ಹೇಳಿದ.

ಗೌರಿಯ ಬೆತ್ತಲೆ ದೇಹವನ್ನು ತಬ್ಬಿಕೊಂಡು ಕೃಷ್ಣಪ್ಪ ತನ್ನ ಗೊಂದಲಗಳನ್ನು ಮರೆಯಲು ಪ್ರಯತ್ನಿಸಿದ. ಎಷ್ಟೇ ಪ್ರಯತ್ನಿಸಿದರೂ ತಾನು ಹಿಂದಕ್ಕೆ ಹೋಗಲಾರೆ ಎನ್ನಿಸಿತು. ಹಾಗೇ ಈ ಸದ್ಯದ ರಾಜಕೀಯದಲ್ಲೂ ಮುಳುಗಲಾರೆ. ಪ್ರತಿನಿತ್ಯ ಅಚ್ಚಾಗುತ್ತಿದ್ದ ಪಕ್ಷಾಂತರದ ಹೇಳಿಕೆ. ಮಾರನೇ ದಿನ ಅದರ ನಿರಾಕರಣೆಗಳನ್ನು ಓದಿ ಹೇಸಿಕೆಯಾಗುತ್ತಿತ್ತು. ವೀರಣ್ಣ ಇದರಲ್ಲೇ ತನ್ಮಯನಾಗಿದ್ದರಿಂದ ಫಾರಂಗೆ ಬರುತ್ತಿರಲಿಲ್ಲ. ಕೃಷ್ಣಪ್ಪನ ಪಕ್ಷದವರು ಮಾತ್ರ ಪದೇ ಪದೇ ಬರುತ್ತಿದ್ದರು. ನಾಗರಾಜನನ್ನು ಬಿಟ್ಟು ಉಳಿದವರು ಹಿಂದಿಗಿಂತ ಹೆಚ್ಚಾಗಿ ಕೃಷ್ಣಪ್ಪನಿಗೆ ತಾರೀಫು ಮಾಡಲು ಶುರುಮಾಡಿದ್ದರು. ಇನ್ನು ಮುಂದೆ ತನಗೆ ಒಬ್ಬನೇ ಒಬ್ಬ ನಿಜವಾದ ಸ್ನೇಹಿತನಿರಲು ಸಾಧ್ಯವಿಲ್ಲೆಂದ ಕೃಷ್ಣಪ್ಪನಿಗೆ ಮನದಟ್ಟಾಯಿತು. ಇನ್ನು ನನ್ನ ಖಾಸಗಿ ಜೀವನ ಕೊನೆಗೊಂಡಂತೆ ಎಂದು ನಿಟ್ಟುಸಿರಿಟ್ಟು ಗೌರಿಯ ಕೈಗಳಿಗೆ ತನ್ನ ದೇಹವನ್ನೊಡ್ಡಿ ಮಲಗುತ್ತಿದ್ದ. ಗೌರಿ ಮಾತ್ರ ಈ ದಿವಸಗಳಲ್ಲಿ ಹೆಚ್ಚು ಹೆಚ್ಚು ಪ್ರಸನ್ನಳಾಗುತ್ತ ಹೋಗುತ್ತಿರುವಂತೆ ಕಂಡಿತು. ಅವಳು ಮೌನವಾಗಿ ಫಾರಂನಲ್ಲಿ ಎಲ್ಲೇ ಸುಳಿದಾಡುತ್ತಿರಲಿ ಕೃಷ್ಣಪ್ಪನ ಮನಸ್ಸು ಅವಳಲ್ಲಿ ತಂಗಿರುತ್ತಿತ್ತು. ಅವಳ ಮನಸ್ಸಿನ ಗಾಢವಾದ ಪದರುಗಳ ಕೇಂದ್ರದಲ್ಲೇ ತನ್ನನ್ನು ಶುಭ್ರವಾಗಿ ಅವಳು ಕಾದಿಟ್ಟು ಕಾಪಾಡುತ್ತಾಳೆ ಎಂಬ ನಂಬಿಕೆ ಅವನಲ್ಲಿ ಗಟ್ಟಿಯಾಗತೊಡಗಿತು. ತನ್ನ ಪ್ರಾಣದ ಚಿಂತಾಮಣಿಯನ್ನು ಕಾಪಾಡಬಲ್ಲ ಅವಳು ಮತ್ತೆ ದೆಹಲಿಗೆ ಹೋಗಲೇಬೇಕು. ಅವಳ ಜೀವನ ನಡೆಸಲೇಬೇಕು. ತನಗೆ ಅವಳು ಬೇಕಿರುವಷ್ಟು ಅವಳಿಗೆ ತಾನು ಬೇಕಿರಲಿಲ್ಲ. ಏನಿದ್ದರೂ ತನ್ನ ದೇಹ ಬಿರುಕುಬಿಟ್ಟ ಮಡಿಕೆಯಂತೆಯೇ ಎಂಬ ಭಾವನೆಗಳೂ ಕಿಕ್ಕಿರಿದು ಕೃಷ್ಣಪ್ಪ ಸಂಕಟಕ್ಕೊಳಗಾಗುವನು. ಈ ಹೊಲಸು ರಾಜಕೀಯದಿಂದ ನಿವೃತ್ತನಾಗಿಬಿಟ್ಟು, ಬರೆದಿಟ್ಟುಕೊಂಡ ರಾಜೀನಾಮೆ ಕಳಿಸಿ ಹಳ್ಳಿಗೆ ಹೋಗಿಬಿಡುತ್ತೇನೆ ಎಂದುಕೊಳ್ಳುವನು. ಕಾಲ ನಿರಂತರವೆನ್ನಿಸುವ ಮಧ್ಯಾಹ್ನದ ಹೊತ್ತು ಅಶ್ವತ್ಥಮರದ ಬುಡದಲ್ಲಿ ಕೂತು, ಹೊಳೆಯ ಶಬ್ದದ ಹಿನ್ನೆಲೆಯಲ್ಲಿ ದನಗಳ ಕೊರಳಿನ ಗಂಟೆ ಕೇಳಿಸಿಕೊಳ್ಳುತ್ತ ಎದುರಿನ ಪೇರಳೆ ಮರಕ್ಕೆ ಹಕ್ಕಿಗಳು ಬಂದು ತಂಗುವುದನ್ನು ನಿರೀಕ್ಷಿಸುತ್ತಿರುವ ಆಸೆ ಮೊಳೆಯುವುದು. ಉದ್ದನೆಯ ಬಾಲದ ಬಂಗಾರದ ಬಣ್ಣದ ರೆಕ್ಕೆಯ ಅಪರೂಪದ ಪಕ್ಷಿಯೊಂದನ್ನು, ಹೀಗೇ ಕಾಯುತ್ತಿರುವಾಗ ಯಾವತ್ತೋ ಕೆಲವು ಸಾರಿ ಕಂಡಂತೆ ಮತ್ತೆ ಕಾಣಬೇಕೆನ್ನಿಸುವುದು. ಆಗಿ ಹೋದದ್ದು ಮರುಳುವುದಿಲ್ಲವೆಂಬ ತಿಳುವಳಿಕೆ ಜೊತೆ ಈ ಆಸೆ ಹೊಯ್ದಾಡುವುದು.

ಹೀಗಿರುವಾಗ ಒಂದು ದಿನ ಹೈಸ್ಕೂಲ್‌ದಿನಗಳಲ್ಲಿ ಅವನ ಪ್ರಾಣದ ಗೆಳೆಯನಾಗಿದ್ದ ಹನುಮನಾಯ್ಕ ಬಂದೇ ಬಿಡುವುದೇ? ಮಗಳು ಹರಟುವುದನ್ನು ಕೇಳಿಸಿಕೊಳ್ಳುತ್ತ ಕೂತ ಕೃಷ್ಣಪ್ಪ ಒಳಬಂದ ಹನುಮನಾಯ್ಕನಿಗೆ –

'ಯಾಕೆ ಬರ್ಲಿಲ್ವೊ ಸುವರ್ ಇಷ್ಟು ದಿನ?'

ಎಂದು ಹುಸಿಕೋಪದಿಂದ ಗದರಿಸಿದ. ಹನುಮನಾಯ್ಕ ತಾನು ಊರಿಂದ ತಂದಿದ್ದ ಬೆತ್ತವನ್ನು ಎರಡು ಕೈಯಲ್ಲೂ ಕೃಷ್ಣಪ್ಪನ ಎದುರು ಒಡ್ಡಿ ಬೆನ್ನು ಬಾಗಿ ನಿಂತು ನಾಟಕೀಯವಾಗಿ ಹೇಳಿದ:

‘ಒಪ್ಪಿಸಿಕೋ ಬೇಕು ಈ ಬೆತ್ತಾನ್ನ. ಈ ನಿಮ್ಮ ಭಂಟ ಖುದ್ದು ಕಡಿದು ತಂದು ಕೆತ್ತಿ ಸಿದ್ಧಪಡಿಸಿದ್ದನ್ನ’ ಎಂದು ಬಾಗಿದ ತನ್ನ ಬೆನ್ನನ್ನು ಎತ್ತಿ ಬೆತ್ತವನ್ನೂರಿ ವಕ್ರವಾಗಿ ನಿಂತ.

‘ಇನ್ನು ಮುಂದೆ ನಮ್ಮ ನಾಯಕ ಹೀಗೆ ನಡೀಲಾರ ಪಾಪ’

ಎಂದು ಠೀವಿಯಿಂದ ನಡೆದು ತೋರಿಸಿ,

‘ಹೀಗೆ ನಡೀಬೇಕಾಗಿ ಬಂದಿದೆ. . . .’

ಎಂದು ಕೋಲೂರಿಕೊಂಡು ಕುಂಟುತ್ತ ನಡೆದ.

ರೂಮೊಳಗೆ ಪ್ಯಾಂಟ್ ತೊಟ್ಟ ಗೌರಿ ಬಂದದ್ದು ಕಂಡು ನಾಲಗೆ ಕಚ್ಚಿಕೊಂಡು ಗಂಭೀರನಾದ. ಅದನ್ನು ಕಂಡು ಕೃಷ್ಣಪ್ಪ ನಕ್ಕ ಬಗೆಯಲ್ಲಿ ಹಿಂದೆಂದೂ ಗೌರಿ ಹಾಗೆ ಅವನು ನಕ್ಕಿದ್ದನ್ನು ಕಂಡಿರಲಿಲ್ಲ. ಕೃಷ್ಣಪ್ಪನ ತಾಯಿ ಹನುಮನಾಯ್ಕನ ಧ್ವನಿ ಕೇಳಿ ಬಂದು,

‘ಎಲ್ಲಿ ಹಡೇ ಅಲಕೊಂಡಿದ್ಯೋ ಹನುಮ? ನೀ ಬರ್ತಿದೀಯ ಅಂತ ಗೊತ್ತಿದ್ರೆ ವಾಟೆಹುಳಿ ತರ್ಲಿಕ್ಕೆ ಹೇಳ್ತಿದ್ದೆ. ಊರಾಗೆಲ್ಲ ಹೇಗಿದಾರೋ? ಯಾವ ಗಂಡಿಗೆ ಯಾವ ಹೆಣ್ಣನ್ನು ಗಂಟುಹಾಕಕ್ಕೆ ಓಡಾಡ್ತಿತ್ತು ಹನುಮನಾಯ್ಕನ ಸವಾರಿ? ಎಂದಳು. ಚೀಲದಿಂದ ಹೊಗೆಸೊಪ್ಪು ಎಲೆಯಡಿಕೆಯನ್ನು ತೆಗೆದು ಅವನಿಗೆ ಕೊಟ್ಟು ತಾನೂ ಎಲೆಗೆ ಸುಣ್ಣ ಹಚ್ಚುತ್ತ ಕೂತಳು.

ಈಜುವಾಗ ಮುಳುಗುತ್ತಿದ್ದ ತನ್ನನ್ನು ಬದುಕಿಸಿದ್ದ ಹನುಮನಾಯ್ಕನನ್ನು ಕಂಡು ಕೃಷ್ಣಪ್ಪನಿಗೆ ಖುಷಿಯಾಯಿತು. ಯಾವಾಗಲಾದರೊಮ್ಮೆ ತನ್ನನ್ನು ಬಂದು ನೋಡುವ ಈ ಹನುಮನಾಯ್ಕ ತನ್ನನ್ನು ಮತ್ತೆ ಹುಡುಗನನ್ನಾಗಿ ಮಾಡಿಬಿಡುವ ಗೆಣೆಯ. ಅಲೆಮಾರಿ ಜೀವ. ಅವನಿಗೆ ತಾಯಿ ತಂದೆ ಅಣ್ಣ ತಂಗಿ ಯಾರೂ ಇಲ್ಲ. ಓದುವುದು ಬಿಟ್ಟು ಭಾಗವತರಾಟದಲ್ಲಿ ಕೋಡಂಗಿ ಪಾರ್ಟ್ಮಾಡಲು ಸೇರಿ ಓಡಾಡಿಕೊಂಡಿದ್ದ ಭಂಡ. ಅವನಿಗೆ ನಿನ್ನೆಯಿಲ್ಲ, ನಾಳೆಯಿಲ್ಲ. ಬೀಡುಬಿಟ್ಟಲ್ಲೇ ಈ ಅಸಾಮಿಗೆ ಪಟ್ಟಣ. ಯಾರ ಮನೆ ಅಂತಿಲ್ಲ – ಸೀದಾ ಹೋಗಿ’ಗೌಡರೆ ಬಂದು ಬಿಟ್ಟೆ’ ಎಂದು, ಅಲ್ಲಿ ನಿಲ್ಲದೆ ಅಡಿಗೆ ಮನೆಗೆ ಹೋಗುವವನು. ಹೆಂಗಸರ ಜೊತೆ ಹಡೆಹಡೆಯಾಗಿ ಹರಟಿ ನಗಿಸುವವನು. ಊರಲ್ಲೆಲ್ಲ ಸುತ್ತುವವನಾದ್ದರಿಂದ ಬೆಳೆದ ಹುಡುಗಿಯರಿಗೆ ಯಾವ ಬೆಳೆದ ಹುಡುಗನನ್ನು ಗಂಟುಹಾಕಬಹುದೆಂಬ ಹೆಂಗಸರ ಒಳಸಂಚಲ್ಲಿ ಭಾಗವಹಿಸುವವನು. ಮನೆಯವರೇ ಖುದ್ದಾಗಿ ವಧೂವರರ ಅನ್ವೇಷಣೆ ಮಾಡುವ ಮುಂಚೆ ಅವರ ಇಂಗಿತವನ್ನು ತಿಳಿದು ಅಲ್ಲಿಂದಿಲ್ಲಿಗೆ ಓಡಾಡಿ ಮುಟ್ಟಿಸುವವನು. ಅಡಿಗೆ ಮನೆಯಿಂದ ಆಮೇಲೆ ಬಚ್ಚಲ ಒಲೆಗೋ ಅಡಿಕೆ ಬೇಯಿಸುವ ಒಲೆಗೋ ಹೋಗುವವನು. ಅಲ್ಲಿ ಬೆಕ್ಕು ನಾಯಿಗಳ ಹಾಗೆ ಕೂಗಿಯೋ, ಉಬ್ಬು ಹತ್ತುವ ಲಾರಿಯಾಗಿಯೋ ಮಕ್ಕಳನ್ನು ನಗಿಸುವವನು. ಒಮ್ಮೆ ತನ್ನಂತೆ ಇನ್ನೊಬ್ಬ ಹಡೆ ಸಿಕ್ಕಾಗ, ಹೂಸಿಗೆ ಒಂದು ತೆಂಗಿನಕಾಯಿಯೆಂದು ಪಣ ಕಟ್ಟಿ ನೂರು ತೆಂಗಿನಕಾಯಿಗಳನ್ನು ಏಕಪ್ರಕಾರ ಕೂತು ಎದ್ದು

ಹೂಸು ಬಿಟ್ಟು ಸಂಪಾದಿಸಿದ್ದಿದೆ. ಈ ಶಬ್ದದ ಮೂಲ ಅವನ ಪುಷ್ಠವಲ್ಲ ಬಾಯಿಯೆಂದು ಆಮೇಲೆ ಕಾಯಿಕಳಕೊಂಡವನಿಗೆ ತಿಳಿದದ್ದು.

ಸಂಜೆ ಅವನಿಗಷ್ಟು ಕಳ್ಳೋ ಸಾರಾಯಿಯೋ ಸಿಕ್ಕರೆ ಸಾಕು – ತೃಪ್ತನಾಗಿ ಬಿಡುವ. ಊರಲ್ಲಿ ಯಾರ್ಯಾರು ಹೇಗೆ ಮಾತಾಡುತ್ತಾರೆಂದು ಊಟ ಮುಗಿಸಿ ಕೂತವರಿಗೆ ನಟನೆ ಮಾಡಿ ತೋರಿಸುವ. ಅವನು ಬಂದನೆಂದರೆ ಹೆಂಗಸರಿಗೆ ಮಕ್ಕಳಿಗೆ ಹಬ್ಬ. ಹುಟ್ಟು, ಸಾವು, ಮದುವೆಗಳಂಥ ವಿಶೇಷ ಎಲ್ಲಿ ನಡೆದರೂ ಅಲ್ಲೆಲ್ಲ ಹನುಮನಾಯ್ಕ ಹಾಜರು.

‘ಇವನೇ ಹನುಮನಾಯ್ಕ. ಅವನು ಮಾಡೋ ಪಾರ್ಟೂ ಅದೆ, ಹೆಸರೂ ಅದೇ’ ಎಂದು ಕೃಷ್ಣಪ್ಪ ಗೌರಿ ದೇಶಪಾಂಡೆಗೆ ಅವನನ್ನು ಪರಿಚಯಿಸಿದ. ಸುತ್ತಲಿದ್ದವರು ಆತ್ಮೀಯರೆಂದು ಗೊತ್ತಾದ ಮೇಲೆ ಹನುಮನಾಯ್ಕ ತನ್ನ ಬಾಲಬಿಚ್ಚಿದ.

ನರಸಿಂಹಭಟ್ಟ ಸರ್ಜ್‌ಕೋಟು ತೊಟ್ಟು, ಕೃಷ್ಣಪ್ಪನ ಸನ್ಮಾನಕ್ಕೆಂದು ಹೊಟ್ಟೆ ಹೊತ್ತು ಓಡಾಡುತ್ತ ಮಾತನ್ನಾಡುವ ವೈಖರಿಯನ್ನು ತೋರಿಸಿದ. ಅವನಿಗೆ ಸಗಣಿ ನೀರಿನ ಪ್ರಾಕ್ಷಾಳಣೆಯಾದಾಗ ಅವನ ಮುಖ ಹೇಗಾಗಿದ್ದಿರಬಹುದೆಂಬುದನ್ನು ನಟಿಸಿದ. ತದ್ವತ್ ಉಬ್ಬುಹಲ್ಲಿನ ಮುಖ ಮಾಡುತ್ತ ಅವನು ಭಟ್ಟನೇ ಆಗಿ ಈಗ ಕೃಷ್ಣಪ್ಪನನ್ನು ಹೊಗಳಲು ಶುರುಮಾಡಿದ. ಕೃಷ್ಣಪ್ಪ ಆ ಮುಖವನ್ನು ನೋಡಲಾರದೆ ಹೊಟ್ಟೆ ಹಿಡಿದುಕೊಂಡು ನಕ್ಕ.

ಹನುಮನಾಯ್ಕ ಪಾರ್ಟು ಬದಲಾಯಿಸಿ, ಗೌರಿಯ ಕಡೆ ತಿರುಗಿ ಕೃಷ್ಣಪ್ಪನ ಗಂಭೀರವಾದ ಮುಖ ಮಾಡಿ ಅವನ ಹಾಗೇ ಮುಖವನ್ನುಜ್ಜಿ ಯೋಚಿಸುತ್ತ ನಿಂತ. ನಾಗೇಶನೂ ಗೌರಿಯೂ ನಗಲು ಶುರುಮಾಡಿದರು. ಈಜುವಾಗ ಮುಳುಗುತ್ತಿದ್ದ ಕೃಷ್ಣಪ್ಪ ಕೈ ಎತ್ತಿದಂತೆ ಕೈಯೆತ್ತಿ, ಗಂಭೀರವಾಗಿ,

‘ಮಾರಾಯ ನಾನು ಮುಳುಗ್ತಿದೀನಿ. ನೀನು ಹೋಗಯ್ಯ’ ಎಂದು ಮುಳುಗುವಾಗ ನೀರು ಕುಡಿಯುವ ಶಬ್ದ ಮಾಡಿದ. ಮಗು ಅರಳುಗಣ್ಣಾಗಿರುವುದನ್ನು ಕಂಡು ಬೆಕ್ಕುಗಳು ಜಗಳವಾಡಿ ತೋರಿಸಿದ.

ತಾಯಿ ಊಟಕ್ಕೆ ಸಿದ್ಧವಾಗಿದೆ ಎಂದು ಹೇಳಲು ಬಂದವರು –

‘ಎಂಥದೋ ಅದು – ಮೀಸೆ ಹಣ್ಣಾದರೂ ನಿನ್ನ ಮಂಗಾಟ ಬಿಟ್ಟಿಲ್ವಲ್ಲೋ?’ ಎಂದು ಬೈದು ಎಲ್ಲರನ್ನೂ ಊಟಕ್ಕೆ ಕೂರಿಸಿದರು. ಕೃಷ್ಣಪ್ಪನನ್ನು ವೀಲ್‌ಚೇರಿನ ಮೇಲೆ ಕೂರಿಸಿ ಗೌರಿ ತಳ್ಳುವಾಗ‘ಪಲ್ಲಕ್ಕಿ ಸೇವೆ’ ಎಂದು ಹನುಮನಾಯ್ಕ ಚೇರನ್ನು ಹಳ್ಳಿಯ ಪೆದ್ದನಂತೆ ನಟಿಸುತ್ತ ಪರೀಕ್ಷಿಸಿದ.

‘ಅತೀ ಮಾಡ್ಬೇಡ’ ಎಂದು ತಾಯಿ ನಗುತ್ತ ಅವನಿಗೆ ಊಟ ಬಿಡಿಸಿ ಊರ ಕಡೆ ವರ್ತಮಾನ ಕೇಳಿದಳು. ಹನುಮನಾಯ್ಕ ಗೆಳೆಯನ ಸನ್ಮಾನ ವಾರ್ತೆಯಿಂದ ಬಡಬಗ್ಗರೆಲ್ಲ ಎಷ್ಟು ಖುಷಿಯಾಗಿದ್ದಾರೆಂದೂ, ತಾನು ಕೃಷ್ಣ ಸಂಧಾನದ ಆಟದಲ್ಲಿ ಯಾವ ಪಾರ್ಟು ಮಾಡಲಿರುವೆ – ಇತ್ಯಾದಿ ವಿವರಿಸಿದ. ನಾಜೂಕಾಗಿ ಗೌರಿ ಅನ್ನವನ್ನು ಬೆರಳ ತುದಿಯಲ್ಲಿ ಕಲಿಸಿ

ಬಾಯಿಗೆತ್ತುವುದನ್ನು ಹನುಮನಾಯ್ಕ ಅನುಕರಿಸುತ್ತಿರುವುದನ್ನು ಮೊದಲು ಗಮನಿಸಿದವನು ನಾಗೇಶ. ನಂತರ ಗೌರಿಯೂ ಅದನ್ನು ಕಂಡು ನಗತೊಡಗಿದಳು.

***

ಹನುಮನಾಯ್ಕನ ಪ್ರವೇಶದಿಂದಾಗಿ ಸಂತೋಷ ಬಹಳ ಕಾಲ ಉಳಿಯಲಿಲ್ಲ. ಮಾರನೇ ದಿನದ ಪೇಪರುಗಳಲ್ಲಿ ಭಯಂಕರವಾದೊಂದು ಸಾವಿನ ಸುದ್ದಿ ಬಂದು, ದೇಶದ ರಾಜಕೀಯದಲ್ಲಿ ಹಠಾತ್ತಾಗಿ ಹಲವು ಬದಲಾವಣೆಗಳಿಗೂ ಕೃಷ್ಣಪ್ಪನ ಧರ್ಮಸಂಕಟಕ್ಕೂ ಕಾರಣವಾಯಿತು.

ಈ ಸುದ್ದಿಯನ್ನು ಓದುವುದಕ್ಕೆ ಮುಂಚೆ ಕೃಷ್ಣಪ್ಪ ಬೆಳಗಿನ ಬಿಸಿಲು ಕಾಯಿಸಿಕೊಳ್ಳುತ್ತ ಬಿದಿರು ಹಿಂಡಲಿನ ಬುಡದಲ್ಲಿ ಕೂತಿದ್ದ. ತನ್ನ ಕೆಲಸಕ್ಕೆಂದು ರಜೆ ಹಾಕಿದ್ದ ಜ್ಯೋತಿ ಆರಾಮಾಗಿ ಕೂತು ಗೌರಿಯ ಬಳಿ ತನ್ನ ಮದುವೆಯ ಬಗ್ಗೆ ಮಾತಾಡುತ್ತಿದ್ದಳು. ಹನುಮನಾಯ್ಕ ಮಗುವಿಗೆಂದು ಒಂದು ಬುಗುರಿ ಕೆತ್ತುತ್ತ, ನಲವತ್ತೆರಡರ ಚಳುವಳಿಯಲ್ಲಿ ನಡೆದದ್ದೊಂದು ಘಟನೆಯನ್ನು ನೆನಪುಮಾಡುತ್ತಿದ್ದ. ಹಿಟ್ಲರ್ ಮೀಸೆಯ ಹೆಡ್‌ಮಾಸ್ಟರ್ ಒಬ್ಬರು ಹುಡುಗರೆಲ್ಲ ಸ್ಕೂಲಿನ ಬಾಗಿಲೆದುರು ಮಲಗಿದ್ದಾಗ ವಿದ್ಯಾರ್ಥಿನಿಯಾಗಿದ್ದ ತನ್ನ ಮಗಳ ಕೈಹಿಡಿದು ತುಳಿದುಕೊಂಡೇ ಒಳಗೆ ಹೋಗುತ್ತಿದ್ದುದನ್ನು ನಟಿಸಿ ತೋರಿಸಿದ. ಆಗ ಹನುಮನಾಯ್ಕ ಅವಳ ಲಂಗವನ್ನು ಎತ್ತಿ ಕಂಡದ್ದನ್ನು ಕಣ್ಣರಳಿಸಿ ತೋರಿಸಿ ಕೃಷ್ಣಪ್ಪನನ್ನು ನಗಿಸುತ್ತಿದ್ದಾಗ ನಾಗೇಶ ಪೇಪರ್ ತಂದುಕೊಟ್ಟ.

ಚಂದ್ರಯ್ಯನ ಹೇಳಿಕೆ ಪ್ರಕಾರ ತುಂಬ ಸುಂದರಳಾಗಿದ್ದ ಹುಡುಗಿಯೊಬ್ಬಳು ಬ್ಯಾಂಕಿನಲ್ಲಿ ಸಂಜೆ ಕೆಲಸ ಮುಗಿಸಿ ಸಿನಿಮಾ ನೋಡಿ ಹಿಂದಕ್ಕೆ ಬರುತ್ತಿದ್ದಳು. ಆಗ ಪೋಲೀಸ್ ವ್ಯಾನೊಂದು ಅವಳ ಬಳಿ ಬಂದು ನಿಂತಿತು. ಇನ್‌ಸ್ಪೆಕ್ಟರ್ ಇಳಿದು ಒಂಟಿಯಾಗಿ ಬರುತ್ತಿದ್ದ ಹುಡುಗಿಯನ್ನು ಸಂಶಯದಿಂದ ಪ್ರಶ್ನೆ ಮಾಡಿ ವ್ಯಾನಿನಲ್ಲಿ ಕೂರಿಸಿಕೊಂಡು ಠಾಣೆಯಲ್ಲಿ ಅವಳನ್ನು ಕೂಡಿಹಾಕಿದ್ದಾಗ ಇಬ್ಬರು ತರುಣರು ಅವಳ ರಕ್ಷಣೆಗೆ ಬಂದವರಂತೆ ಬಂದು, ಮುಚ್ಚಳಿಕೆ ಬರೆದುಕೊಟ್ಟು, ಕೃತಜ್ಞಳಾದ ಹುಡುಗಿಯನ್ನು ಕಾರಲ್ಲಿ ಕರೆದುಕೊಂಡು ಹೋದರು. ಅಳುತ್ತಿದ್ದ ಹುಡುಗಿಯನ್ನು ಸಂತೈಸುತ್ತ ಒಂದು ಹೋಟೆಲಿಗೆ ಒಯ್ದರು. ಅವಳು ಇದರಿಂದ ಭಯಪಡುತ್ತ ಮನೆಗೆ ಕರೆದುಕೊಂಡು ಹೋಗುವಂತೆ ಬೇಡಿಕೊಂಡಳು. ಈ ಯುವಕರು ತಾವು ಯಾರೆಂಬುದನ್ನು ಹುಡುಗಿಗೆ ಹೇಳಿ ತಮ್ಮ ಉದ್ದೇಶವನ್ನು ತಿಳಿಸಿ ಒಪ್ಪಿಕೊಳ್ಳುವಂತೆ ಹುಡುಗಿಯನ್ನು ಬಲಾತ್ಕರಿಸಿದರು. ಅವಳ ತಂದೆ ನಿವೃತ್ತ ಉಪಾಧ್ಯಾಯನಾಗಿದ್ದ. ಅವರು ತೋರಿಸಿದ ಆಮಿಷಗಳಿಗೆ ಬಡವಳಾದರೂ ಅವಳು ಜಗ್ಗದಿದ್ದಾಗ ಈ ಯುವಕರು ರೂಮಿನ ಬಾಗಿಲು ಹಾಕಿಕೊಂಡು ಅವಳನ್ನು ಬಲಾತ್ಕಾರವಾಗಿ ಸಂಭೋಗಿಸಿದರು. ಅನಂತರ ಅವಳನ್ನು ಕಾರಲ್ಲಿ ಕೂರಿಸಿಕೊಂಡು ಅವಳ ಮನೆಯ ಬೀದಿ ಮೂಲೆಯಲ್ಲಿ ಇಳಿಸಿ ಹೋಗಿ ಬಿಟ್ಟರು. ರಾತ್ರೆ ಬಹಳ ಹೊತ್ತಾದ ಮೇಲೆ ಮನೆ ಸೇರಿದ ಹುಡುಗಿಯನ್ನು ಯಾಕಿಷ್ಟು ಹೊತ್ತು ಅಂತ ತಾಯಿತಂದೆ ಎಷ್ಟು ಬೈದು ಕೇಳಿದರೂ ಅವಳು ಬಾಯಿ ಬಿಡಲಿಲ್ಲ. ಆದರೆ ಬೆಳಗಾಗಿ ನೋಡುವಾಗ ಅವಳು ಫಾಲಿಡಾಲ್ ಕುಡಿದು ಸತ್ತಿದ್ದಳು. ಸಾಯುವ ಮುಂಚೆ ಅವಳೊಂದು ಚೀಟಿ ಬರೆದಿಟ್ಟಿದ್ದಳು. ಚೀಟಿಯಲ್ಲಿ ತನಗಾದುದನ್ನೆಲ್ಲ ಸೂಕ್ಷ್ಮವಾಗಿ ಹೇಳಿ ತನ್ನಿಂದ ಅವಳ ತಂಗಿಯರ ಮದುವೆಯಾಗಲಾರದೆಂದು ತಾನು ಪ್ರಾಣ ಕಳಕೊಳ್ಳುತ್ತಿರುವುದಾಗಿ ಹೇಳಿದ್ದಳು.

ಇಷ್ಟು; ವರದಿಯ ಸಾರಾಂಶ. ಆದರೆ ಈ ಚೀಟಿಯೇ ಅನೇಕ ಪ್ರಶ್ನೆಗಳನ್ನು ಎತ್ತಿತ್ತು. ಹುಡುಗಿಯ ತಂದೆ ಚೀಟಿಯನ್ನು ಪೋಲೀಸರು ವಶಪಡಿಸಿಕೊಂಡರೆಂದು ಹೇಳಿದರೆ, ಪೋಲೀಸರು ಅಂಥ ಚೀಟಿಯೇ ಇರಲಿಲ್ಲೆಂದೂ, ಅವಳು ಠಾಣೆಯಲ್ಲಿದ್ದುದೂ ಇಬ್ಬರು ಯುವಕರು ಅವಳನ್ನು ಬಿಡಿಸಿಕೊಂಡು ಹೋದದ್ದೂ ತಮಗೆ ತಿಳಿಯದೆಂದೂ ಹೇಳಿದ್ದರು. ಪ್ರಧಾನಿ ಪರ ನಾಯಕನಾದ ಚಂದ್ರಯ್ಯ ಹುಡುಗಿಯ ತಂದೆಯಿಂದ ತನಗೆ ತಿಳಿದ ಪ್ರಕಾರ ಈ ಇಬ್ಬರು ಯುವಕರಲ್ಲಿ ಒಬ್ಬ ಮುಖ್ಯಮಂತ್ರಿಯ ಮಗನೆಂದೂ ಇನ್ನೊಬ್ಬ ವೀರಣ್ಣನ ಮಗನೆಂದೂ, ಹಾಗೆಂದು ಆತ್ಮಹತ್ಯೆ ಮಾಡಿಕೊಂಡ ಲಲಿತ ಬರೆದಿಟ್ಟಿದ್ದಳೆಂದೂ, ಆದರೆ ಈ ಚೀಟಿಯನ್ನೇ ಮುಖ್ಯಮಂತ್ರಿ ಎಗರಿಸಿದ್ದಾನೆಂದೂ ಹೇಳಿಕೆ ಕೊಟ್ಟಿದ್ದ. ಆ ಇಬ್ಬರು ಯುವಕರು ಉಪಯೋಗಿಸಿದ್ದ ಬೂದುಬಣ್ಣದ ಫಿಯಟ್ ಕಾರು ಕೃಷ್ಣಪ್ಪಗೌಡರ ಹೆಸರಲ್ಲಿ ರಿಜಿಸ್ಟರ್ ಆದದ್ದೆಂದೂ ಚಂದ್ರಯ್ಯ ಹೇಳಿದ್ದ.

‘ನಾಗೇಶ, ರಹಮಾನ್ ಮತ್ತು ನಾಗರಾಜ್‌ನ ಕರೆದುಕೊಂಡು ಬಾ.’

ಕೃಷ್ಣಪ್ಪನ ಗಂಟಲು ಒಣಗಿತ್ತು. ಗೌರಿ ಆತಂಕದಿಂದ ಅವನ ಬಳಿ ಬಂದು ಕಾರಣ ಕೇಳಲು ಕೃಷ್ಣಪ್ಪ ಅವಳಿಗೆ ಪೇಪರನ್ನು ಕೊಟ್ಟ. ಅವಳು ಓದಿ ಮುಗಿಸಿದ ಮೇಲೆ ಹೇಳಿದ:

‘ಇದನ್ನು ಓದೋ ತನಕ ನನಗೆ ಮುಖ್ಯಮಂತ್ರಿಯಾಗೋ ಆಸೆ ಇತ್ತು. ಕುಗ್ಗುತ್ತಾ ಇದ್ದ ನನ್ನ ಬದುಕೋ ಆಸೆಗೆ ಅದರಿಂದ ಕುಮ್ಮಕ್ಕು ಸಿಕ್ಕತ್ತು. ಈಗ ನನಗೆ ಏನೂ ಬೇಡ ಅನ್ನಿಸುತ್ತೆ.’

‘ಚಂದ್ರಯ್ಯ ಹೇಳ್ತಿರೋದು ಸುಳ್ಳು ಇರಬಹುದಲ್ಲ’

ತಾನು ಮುಖ್ಯಮಂತ್ರಿಯಾಗುವುದರಲ್ಲಿ ಅಷ್ಟೇನೂ ಉತ್ಸಾಹವನ್ನು ತೋರಿಸದಿದ್ದ ಗೌರಿ ಈಗ ತನ್ನ ಸಮಾಧಾನಕ್ಕೆ ಹೀಗೆ ಮಾತಾಡಿದ್ದಳು.

ಕೃಷ್ಣಪ್ಪ ಯಾವ ಸಮಾಧಾನವೂ ತನಗೀಗ ಬೇಡವೆಂಬಂತೆ ತಲೆಯಾಡಿಸಿದ; ಅಸಹಾಯಕ ಆರ್ತತೆಯಲ್ಲಿ ಅವತ್ತು ತಾನು ವಾರಂಗಲ್ ಠಾಣೆಯಲ್ಲಿ ಬಾಗಿಲನ್ನು ಒದ್ದು ಒದ್ದು ಸುಸ್ತಾಗಿದ್ದು ನೆನಪಾಗಿತ್ತು.

ಗೌರಿ ಕೈಯಲ್ಲಿದ್ದ ಹುಲ್ಲುಗರಿಕೆ ಕಚ್ಚುತ್ತ ನಿಂತಿದ್ದಳು. ಹನುಮನಾಯ್ಕ ಬದಲಾದ ವಾತಾವರಣದಲ್ಲಿ ತಬ್ಬಿಬ್ಬಾಗಿ ನಿಂತಿದ್ದ – ಕೆತ್ತುತ್ತಿದ್ದ ಬುಗುರಿಯನ್ನು ಹಾಗೇ ಪೆದ್ದಾಗಿ ಹಿಡಿದುಕೊಂಡು.

***

ರಹಮಾನ್ ಮತ್ತು ನಾಗರಾಜ್ ಬಂದರು. ರಹಮಾನ್ ಮಾತ್ರ ಮಾತಾಡಿದ. ನಾಗರಾಜ್ ಸಿಗರೇಟ್ ಎಳೆಯುತ್ತ

ಹಣೆಯನ್ನು ಒತ್ತಿಕೊಂಡು ಕೂತ. ರಹಮಾನ್ ಮುಖ್ಯಮಂತ್ರಿಯನ್ನೂ ವೀರಣ್ಣನನ್ನೂ ಹೋಗಿ ನೋಡಿದ್ದ. ಇಬ್ಬರೂ ತಮ್ಮ ಮಕ್ಕಳು ಮುಗ್ಧರು ಅಂತ ಹೇಳಿದ್ದರು. ರಹಮಾನ್‌ಗೆ ಆದರೂ ಅನುಮಾನವಿದೆ. ಆದರೆ ಅವರು ಮಾಡಿದರೋ ಇಲ್ಲವೋ ಅನ್ನೋದು ಸದ್ಯದ ಪರಿಸ್ಥಿತೀಲಿ ಇರ್ರೆಲವೆಂಟ್. ಯಾವ ರಾಜಕೀಯಕ್ಕೆ ಚಂದ್ರಯ್ಯ ಅದನ್ನ ಬಳಸ್ತ ಇದ್ದಾನೆ ಅನ್ನೋದು ಮುಖ್ಯ. ರಾಜ್ಯಪಾಲರು ಈ ಸರ್ಕಾರಾನ್ನ ವಜಾಮಾಡುವಂತೆ ಒತ್ತಾಯಮಾಡಲಿಕ್ಕೆ ದೇಶಾದ್ಯಂತ ಗಲಭೆ ಆಗೋ ಹಾಗೆ ಪ್ರಚೋದಿಸ್ತ ಇದಾನೆ. ಪ್ರಧಾನಿ ಕೈಗೊಂಬೆಯಾದ ರಾಜ್ಯಪಾಲರಿಗೂ ಸರ್ಕಾರಾನ್ನ ವಜಾಮಾಡಿ, ಅಸೆಂಬ್ಲೀನ ಸಸ್ಪೆಂಡ್ ಮಾಡಿ, ಶಾಸಕರು ಆ ಕಡೆ ಪಕ್ಷಾಂತರವಾಗೋಕೆ ಅಗತ್ಯವಾದ ಸನ್ನಿವೇಶ ಕಲ್ಪಿಸಲಿಕ್ಕೆ ಇದು ಒಳ್ಳೇ ಚಾನ್ಸು. ಈಗಾಗ್ಲೇ ಐದು ಜನ ಸುವರ್‌ಗಳು ಇದನ್ನೇ ನೆವಮಾಡಿಕೊಂಡು ಚಂದ್ರಯ್ಯನ ಕಡೆ ಸೇರೋ ಹೇಳಿಕೆ ಕೊಡ್ತಿದಾರೇಂತ ಸುದ್ದಿ. ಮುಖ್ಯಮಂತ್ರಿನೂ ಹೇಗಾರೂ ತಾನೇ ಉಳೀಬೇಕೂಂತ ಹವಣಿಸಿದ್ದ. ಖದೀಮನಿಗೆ ಅದು ಕಷ್ಟಾಂತ ಈಗ ಗೊತ್ತಾಗ್ತ ಇದೆ. ಕೃಷ್ಣಪ್ಪ ಗೌಡರನ್ನ ಮುಖ್ಯಮಂತ್ರಿ ಮಾಡಬೇಕೂಂತ ದೇಶಾದ್ಯಂತ ಯುವಕರು ಮೆರವಣಿಗೆ ಮಾಡೋ ಹಾಗೆ ರಹಮಾನ್ ವ್ಯವಸ್ಥೆ ಮಾಡಿದಾನೆ. ವೀರಣ್ಣನೂ ಓಡಾಡ್ತಿದಾನೆ. ಅವನೀಗ ಬೆಂಗಳೂರಲ್ಲಿ ಇಲ್ಲ. ಚಂದ್ರಯ್ಯನ ಕಡೆ ಆರು ಜನ ಮುಸ್ಲಿಂರಿದ್ದಾರೆ. ಅವರಲ್ಲಿ ಮುಖ್ಯನಿಗೆ ಟ್ರಾನ್ಸ್‌ಫೋರ್ಟ್‌ಮಂತ್ರಿ ಆಗ್ಬೇಕಾಗಿದೆ. ನಂಗದು ಬೇಡ' ಅಂದಿದಾನೆ. ಗೌಡರು ಅಂದ್ರೆ ಅವನಿಗೂ ಗೌರವ. ಅವನ ಕಡೆ ಇರೋ ಐದು ಜನರನ್ನ ಅವ ಕರ್ಕೊಂಡು ಬಂದ್ರೆ ನಾವೇ ಮೆಜಾರಿಟಿ ಆಗ್ತೀವಿ. ನಾಳೆ ಒಳಗೆ ನಮ್ಮ ಖದೀಮ ರಾಜೀನಾಮೆ ಕೊಟ್ಟು ನಿಮ್ಮ ಹೆಸರು ಸೂಚಿಸಬೇಕೂಂತ ಒತ್ತಾಯ ಮಾಡ್ತಿದೀವಿ – ಇತ್ಯಾದಿ.

ನಾಗರಾಜ್ ಹೇಳಿದ: 'ಕಾಲೇಜಿನ ಹುಡುಗರೆಲ್ಲ ಸ್ಟ್ರೈಕ್ ಶುರುಮಾಡಿದಾರೆ. ಈ ಮುಖ್ಯಮಂತ್ರೀನ್ನ ವಜಾ ಮಾಡ್ಬೇಕೂಂತ. ಲಾ ಅಂಡ್ ಆರ್ಡರ್ ಸಿಚುಯೇಶನ್ ಇನ್ನಷ್ಟು ಬಿಗಡಾಯಿಸೋ ಹಾಗೆ ಕಾಣುತ್ತೆ. ಪೋಲೀಸ್ ಠಾಣೆಗಳ ಮೇಲೆ ಹುಡುಗರು ಕಲ್ಲುಗಳನ್ನು ಎಸೀತಿದಾರೆ. ಫೈರಿಂಗ್ ಆದ್ರೂ ಆಯ್ತು.'

ಕೃಷ್ಣಪ್ಪ ನಾಗರಾಜನನ್ನು ಕೇಳಿದ:

'ವೀರಣ್ಣನ ಮಗನೂ ಮುಖ್ಯಮಂತ್ರಿ ಮಗನೂ ಪೋಲೀಸ್ ಸಹಾಯ ಪಡೆದು ಇಂಥ ಕೆಲಸ ಮಾಡಿದ್ದು ನಿಜವಾಗಿದ್ರೆ. . . .'

'ಅದು ಇರ್ರೆಲವೆಂಟ್ ಗೌಡರೆ. ಮಾಡಿದಾರೇಂತ್ಲೇ ಇಟ್ಟುಕೊಳ್ಳಿ. ಚಂದ್ರಯ್ಯನ ಮಗನೂ ಅದನ್ನು ಮಾಡಬಹುದು. ಅಧಿಕಾರದಲ್ಲಿ ಇರೋವ್ರನ್ನ ರಕ್ಷಿಸಲಿಕ್ಕೆ ಇರೋದಲ್ವ ಈ ಪೋಲೀಸರು ? ಇದರಲ್ಲಿ ಏನು ಆಶ್ಚರ್ಯಪಡೋದು ಇದೆ ?'

ಕೃಷ್ಣಪ್ಪನಿಗೆ ಕೋಪ ಬಂತು:

'ನೀವು ಸಿನಿಕ್ ಥರ ಮಾತಾಡ್ತಿದೀರಿ ನಾಗರಾಜ್. ನಾವು ಮುಟ್ಟಿದ್ದೆಲ್ಲ ರಾಜಕೀಯವಾಗಬೇಕ ? ಡಿಸ್‌ಗಸ್ಟಿಂಗ್.

'ನೋ. ನಾನು ಅಬ್ಜೆಕ್ಟಿವ್ ರಿಯಾಲಿಟಿ ಹೇಳ್ತಿದೀನಿ. ಪೋಲೀಸರು ಇರೋದು ವ್ಯವಸ್ತೇನ್ನ ಕಾಯಲಿಕ್ಕೆ. ರೇಸ್, ದರೋಡೆ, ಕಾಳಸಂತೆಗಳು ಈ ವ್ಯವಸ್ಥೆಯ ನ್ಯಾಚುರಲಿ ಅಂಶಗಳು.'

‘ಹಾಗಾದರೆ ನಾವು ಯಾಕೆ ಅಧಿಕಾರಕ್ಕೆ ಬರಬೇಕು ?’

‘ನನಗೂ ಅದರಲ್ಲಿ ಅನುಮಾನವಿದೆ ಅಂತ ಹಿಂದೇನೇ ಹೇಳಿದ್ನಲ್ಲ ? ಆದರೆ ವ್ಯವಸ್ಥೆ ಸಂಪೂರ್ಣ ಫ್ಯಾಸಿಸ್ಟಆಗ್ದಿದ್ದಂಗೆ ತಡಿಯೋಕೆ ಸಾಧ್ಯಾನಾ ಅಂತ ನನಗೂ ಭ್ರಮೆಯಿದೆ. ಅದಕ್ಕೇ ನಿಮ್ಮನ್ನ ಸಪೋರ್ಟ್ಮಾಡ್ತಿದೀನಿ.’

‘ಈಗಿರೋ ಪೋಲೀಸ್ ಅಟ್ರಾಸಿಟಿಗಳನ್ನು ಕಡಿಮೆ ಮಾಡಕ್ಕೆ ಸಾಧ್ಯಾಂತ್ಲಾದ್ರೂ ನೀವು ತಿಳ್ದಿದೀರ ?’

‘ಅಲ್ಪಸ್ವಲ್ಪ ಆಗಬಹುದು. ಆದರೆ ಅದರ ಕ್ಲಾಸ್ಕ್ಯಾರಕ್ಟರನ್ನೇ ಬದಲು ಮಾಡ್ಲಿಕ್ಕೆ ನಿಮಗೆ ಸಾಧ್ಯವಾಗಲ್ಲ.’

ಕೃಷ್ಣಪ್ಪನಿಗೆ ಕಿರಿಕಿರಿಯಾಯಿತು;

ರಹಮಾನ್ ಬೋರಾಗಿ ಪೇಪರನ್ನು ಓದುತ್ತ ಕೂತ. ನಾಗರಾಜ್ ಉತ್ಸಾಹದಿಂದ ಇನ್ನೊಂದು ಸಿಗರೇಟ್ ಹಚ್ಚಿದ:

‘ವರ್ಗಗಳು ಸಂಪೂರ್ಣ ನಾಶವಾಗೋ ತನಕ ಸ್ಟೇಟ್ ಇರುತ್ತೆ. ಸ್ಟೇಟಿಗೆ ಪೋಲೀಸ್ ಬೇಕಾಗಿರುತ್ತೆ. . . .’

‘ಅಂದರೆ ಈಗ ಆ ಹುಡುಗಿ ಕೊಲೆಯಾಯ್ತಲ್ಲ – ಅದರಿಂದ ದುಃಖಪಡೋದು, ಅದನ್ನ ವಿರೋಧಿಸೋದು. . . . .’

ಕೃಷ್ಣಪ್ಪ ವಾಕ್ಯವನ್ನು ಕೊನೆ ಮಾಡಲಾರದಷ್ಟು ಭಾವವಶನಾದ್ದನ್ನು ಕಂಡು ನಾಗರಾಜ್ ಮೃದುವಾಗಿ ಹೇಳಿದ:

‘ಎಸ್ ಮಾಡಬೇಕು. ಆದರೆ ಪಾರ್ಲಿಮೆಂಟರಿ ರಾಜಕೀಯದ ರಿಯಾಲಿಟಿ ಏನೂಂದ್ರೆ ಹಾಗೆ ಮಾಡೋಂದ್ರಿಂದ ಈಗ ಚಂದ್ರಯ್ಯನ ಕೈನ ಬಲಪಡಿಸಿದ ಹಾಗಾಗುತ್ತೆ ಅಷ್ಟೆ. ವ್ಯವಸ್ಥೆ ಕೊಲ್ಲೋ ಕೆಲಸಾನೂ ಮಾಡತ್ತೆ. ಅದರ ವಿರುದ್ಧ ಪ್ರತಿಭಟನೆಯನ್ನೂ ಬಳಸಿಕೊಳ್ಳುತ್ತೆ.’ ನಾಗರಾಜ್ ಭಾವವಶನಾಗಿ ಮುಂದುವರಿಸಿದ:

‘ಇವೆಲ್ಲ ನಿಜವಿದ್ರೂ ನೀವು ದಲಿತರ ಪರವಾಗಿ ಫೀಲ್ ಮಾಡ್ತೀರಲ್ಲ. ಈಗ್ಲೇ ಏನಾದರೂ ಮಾಡಬಹುದು ಅಂತ ತಿಳ್ಕೊಂಡಿದೀರಲ್ಲ ಅದಕ್ಕೇ ನಾನು ನಿಮ್ಮ ಜೊತೆ ಇರೋದು. . . .’

‘ನನಗೆ ಪ್ರೇಮ ಮುಖ್ಯ. ಅದನ್ನ ಕಳಕೊಂಡು ಎಂಥ ಕ್ರಾಂತಿ ಮಾಡೋಕೆ ಸಾಧ್ಯ ? ಮಾಡಿಯೇನು ಪ್ರಯೋಜನ ?

ತನ್ನ ಬಾಯಿಂದ ಹಠಾತ್ತನೆ ಹೊರಟ ಈ ಮಾತುಗಳಿಂದ ಕೃಷ್ಣಪ್ಪನೇ ಚಕಿತನಾದ. ಆಡಿಬಿಟ್ಟ ಮಾತುಗಳು ಲೋಕಾಭಿರಾಮವಾಗಿ ಕಂಡುಬಿಟ್ಟೀತೆಂಬ ಆತಂಕದಲ್ಲಿ ಅವನ ದೇಹ ಮನಸ್ಸು ಕಂಪಿಸುತ್ತಿತ್ತು. ಅವನ ಉದ್ವೇಗ

ನಾಗರಾಜನಿಗೂ ತಟ್ಟಿರಬೇಕು; ಅವನು ಗಂಭೀರವಾಗಿ ಮೌನವಾಗಿದ್ದ.

***

ಅವತ್ತು ಕೃಷ್ಣಪ್ಪ ತನ್ನ ಇಡೀ ದೇಹಕ್ಕೆ ಪಾರ್ಶ್ವವಾಯು ಬಡಿದವನಂತೆ ನಿಶ್ಚಲವಾಗಿ ಕೂತಿದ್ದು ನೋಡಿ ಗೌರಿಗೆ ಆತಂಕವಾಯಿತು. ಅವನನ್ನು ಕುರ್ಚಿಯಿಂದ ಇಳಿಸಿ ನೆಲದ ಮೇಲೆ ಕೂರಿಸಿ ಅವನು ಈ ದಿನಗಳಲ್ಲಿ ನಿತ್ಯ ತೆವಳುತ್ತಿದ್ದಂತೆ ತವಳಲು ಹೇಳಿದಳು. ಈ ವ್ಯಾಯಾಮದಿಂದ ಅವನ ದೇಹ ಚುರುಕಾಗುವುದೆಂದು ಅವಳಿಗೆ ಗೊತ್ತು. ಕೃಷ್ಣಪ್ಪ ಹಾಲಿನ ಸುತ್ತ ಮಗುವಿನಂತೆ ತೆವಳಿದ. ಎಡಗೈಯಲ್ಲಿ ಹನುಮನಾಯ್ಕ ತಂದು ಕೊಟ್ಟ ಕೋಲನ್ನು ಹಿಡಿದು ಬಾಲನ್ನು ತಳ್ಳುತ್ತ ತಾನೇ ಒಂದು ಆಟವನ್ನು ಸೃಷ್ಟಿಸಿಕೊಂಡ. ಗೌರಿಯೂ ಏನನ್ನೋ ಗಂಭೀರವಾಗಿ ಯೋಚಿಸುತ್ತಿರುವಂತೆ ಕಂಡಿತು. ಏನೆಂದು ಒತ್ತಾಯ ಮಾಡಿದಾಗ ಹೇಳಿದಳು:

‘ನಿಮ್ಮ ಹೆಂಡತಿ ಹತ್ರ ಮಾತಾಡಬೇಕು ಅನ್ನಿಸತ್ತೆ.’

‘ಏನು ಮಾತಾಡ್ತಿ?’

‘ಆಕೆಗೆ ನಾವು ಮೋಸ ಮಾಡ್ತಿದೀವಿ ಅಂತ ನಿಮಗೆ ಅನ್ನಿಸಲ್ವ?’

‘ಅನ್ನಿಸಿದ್ದಿದೆ. ಆದರೆ ಅದು ಅಷ್ಟು ಆಳವಾದ ಫೀಲಿಂಗ್ ಅಲ್ಲ.’

ಗೌರಿ ಚಿಂತಿಸುತ್ತ ನಿಂತಳು:

‘ನನಗೆ ನೀನು ಬೇಕು. ಆದರೆ ನನ್ನ ಕೆಲಸವಿರೋದು ಡೆಲ್ಲೀಲಿ. ನನಗೆ ತುಂಬಾ ಕನ್‌ಫ್ಯೂಸ್‌ಆಗ್ತಿದೆ.’

‘ಗೌರಿ ನೀನು ಕೊಟ್ಟಷ್ಟನ್ನು ಪಡೆಯೋದಕ್ಕಿಂತ ಹೆಚ್ಚು ನಾನು ಕೇಳಲಾರೆ. ನಾನು ಯಾವಗಲಾದ್ರೂ ಸಾಯಬಹುದಾದ ಮನುಷ್ಯ.’

‘ಸೀತೆಗೆ ನಿನ್ನ ಅಗತ್ಯ ಇದೆಯಲ್ಲ?’

‘ಇದೆ. ನನ್ನ ಸೇವೆನೂ ಅವಳು ಮಾಡಿದಾಳೆ. ಅವಳ ದೃಷ್ಟಿಯಿಂದ ಚೆನ್ನಾಗೇ ಮಾಡಿದಾಳೆ.’

‘ಆದರೆ ಒಬ್ಬರನ್ನೊಬ್ಬರು ನೀವು ಡಿಸ್ಟ್ರಾಯ್ ಮಾಡಿಕೋತಿದೀರಿ ಅನ್ನಿಸತ್ತೆ.’

ತಾನು ಯೋಚಿಸುತ್ತಿದ್ದುದೇ ಗೌರಿ ಬಾಯಿಂದ ಬಂದಿತ್ತು.

‘ಹೌದು, ಆದರೆ ನಾನೇ ಅವಳನ್ನ ಹೆಚ್ಚು ಡಿಸ್ಟ್ರಾಯ್ ಮಾಡ್ತಿದೀನಿ ಅನ್ನಿಸತ್ತೆ.’

ಗೌರಿಯ ಸಾನ್ನಿಧ್ಯದಿಂದ ಈ ಮಾತನ್ನಾಡುವುದು ತನಗೆ ಸಾಧ್ಯವಾಯಿತೆಂದು ಕೃಷ್ಣಪ್ಪನಿಗೆ ಅನ್ನಿಸಿ ಮೃದುವಾಗುತ್ತ ಅವಳ ಮುಖ ನೋಡಿದ. ಸ್ವಂತದ ಬಗ್ಗೆ ಅವಳು ಯೋಚಿಸುತ್ತಿರುವಂತೆ ಕಾಣಲಿಲ್ಲ. ನಿಷ್ಠುರವಾಗಿ ಸತ್ಯ ತಿಳಿಯಬಯಸುವವಳಂತೆ ಕೇಳಿದಳು:

‘ಹಾಗಾದರೆ ಏನು ಮಾಡೋದು ಸರಿ ?’

‘ನೋಡು ಗೌರಿ, ಈಗ ನಾನು ಮಗು ಹಾಗೆ ತೆವಳೋದನ್ನ ಕಲೀತಿದೀನಿ. ಆಮೇಲೆ ಈ ದೊಣ್ಣೆ ಹಿಡಕೊಂಡು ಕುಂಟಿ ನಡೆಯೋದನ್ನ ಕಲೀತೀನಿ. ಮತ್ತೆಲ್ಲ ಮೊದ್ಲಿಂದ ಶುರುವಾಗಬೇಕು. ಮಹೇಶ್ವರಯ್ಯ ನನ್ನನ್ನು ಎಬ್ಬಿಸಿಕೊಂಡು ಕರಕೊಂಡು ಹೋದ್ರಲ್ಲ – ಆ ಮರದ ಕೆಳಗೆ ಮತ್ತೆ ಕೂರ್ತೀನಿ.’

ಗೌರಿ ವಿಷಾದದಿಂದ ನಕ್ಕಳು;
‘ನೀನು ಸ್ವತಂತ್ರ ಅಂತ ತಿಳಿದಿದೀಯ ? ಇವತ್ತಿನ ರಾಜಕೀಯಕ್ಕೆ ನೀನೊಂದು ಸಾಧನವಾಗಿಬಿಟ್ಟಿದೀಯ ಅಷ್ಟೆ’ ಗೌರಿ ಅವನ ಎಡಗಾಲನ್ನು ಒತ್ತುತ್ತ ಅಂದಳು –
ಆದರೆ ಸೀತೆಯನ್ನು ಹೋಗಿ ನೋಡಿ ಮಾತಾಡುವುದರ ಬಗ್ಗೆಯೇ ಗೌರಿ ಯೋಚಿಸುತ್ತಿರಬಹುದೆಂದು ಕೃಷ್ಣಪ್ಪ ಹೇಳಿದ:

‘ಹಿಂಸೆ ಮಾಡದೆ ಏನನ್ನೂ ನಾವು ಪಡೆಯುವುದಿಲ್ಲ ಗೌರಿ’

‘ನಿಜ’

ಗೌರಿ ವಿಷಾದದಿಂದ ಮುಂದುರಿಸಿದಳು:

‘ರಜ ಮುಗಿದ ಮೇಲೆ ನಾನು ಹೋಗಲ ? ನೀನು ಬೇಕೂಂದಾಗ ಬರ್ತಾ ಇರ್ತೀನಿ. . .’

ತನ್ನ ಅಗತ್ಯವೇನೆಂದು ತಿಳಿದವಳಂತೆ ಮಾತಾಡಿದ್ದಳು. ತನ್ನನ್ನು ಸ್ಪಷ್ಟಪಡಿಸೆಂಬ ಅವಳ ಮಾತಿನಲ್ಲಿದ್ದ ಯಾಚನೆಯನ್ನು ಕೃಷ್ಣಪ್ಪ ಗಮನಿಸಿದ.

‘ನಾವು ಇಡಿಯಾಗಿ ಉಳಿಯೋದೇ ಇಲ್ಲಾಂತ ಅನ್ನಿಸತ್ತೆ ಗೌರಿ’ ಕೃಷ್ಣಪ್ಪ ಬಹಳ ಕಷ್ಟಪಡುತ್ತ ತನ್ನ ಸದ್ಯದ ಪಾಡನ್ನು ಹೇಳಿಕೊಳ್ಳಲು ನೋಡಿದ. ತನ್ನ ಹೃದಯವನ್ನು ಸೂಚಿಸುವಂತೆ ಎದೆಯನ್ನು ಮುಟ್ಟಿ ಹೇಳಿದ: ‘ಇಲ್ಲೂ ನನಗೆ ಇಂಟೆಗ್ರಿಟಿ ಸಾಧ್ಯಾ ಆಗ್ತಾ ಇಲ್ಲ.’ ಕೈಯನ್ನು ಹೊರಚಾಚಿ ರಾಜಕೀಯ ಪ್ರಪಂಚವನ್ನು ಸೂಚಿಸಲು ಯತ್ನಿಸುತ್ತ ಹೇಳಿದ: ‘ಅಲ್ಲೂ ನನಗೆ ಇಂಟೆಗ್ರಿಟಿ ಸಾಧ್ಯಾ ಆಗ್ತಾ ಇಲ್ಲ.’ ಹೀಗೆ ಹೇಳಿದ ಮೇಲೆ ಹಗುರವಾಗಿ ನಿಟ್ಟುಸಿರಿಟ್ಟು – ‘ಈ ಕೋಲನ್ನು ಆತುಕೊಂಡು ನಿಲ್ಲೋದು ಸಾಧ್ಯವ ಅಂತ ಪ್ರಯತ್ನಿಸೋದಷ್ಟೆ ಸದ್ಯ ನಾ ಮಾಡಬಹುದಾದ್ದು.’

ತಾನು ಆಡಿದ್ದೆಲ್ಲವನ್ನೂ ನಿಜಮಾಡುವಂತೆ ಗೌರಿ ಮೊಣಕಾಲು ಮಡಿಸಿ ಅದರ ಮೇಲೆ ಮುಖವಿಟ್ಟು ಕುಳಿತಿದ್ದಳು. ಕೃಷ್ಣಪ್ಪ ಕೋಲನ್ನು ತೊಡೆಯ ಮೇಲಿಟ್ಟು ಊರಿದ ಬಲಗೈ ಮೇಲೆ ದೇಹದ ಭಾರ ಹಾಕಿ ಹೇಳಿದ:

‘ಇನ್ನೂ ಎರಡು ಆಸೆಗಳು ನನಗಿವೆ. ಅಶ್ವತ್ಥದ ಮರದ ಬುಡದಲ್ಲಿ ಕೂತು ಕಾಲದ ನಿರಂತರತೇನ್ನ ಅನುಭವಿಸಬೇಕು ಅನ್ನಿಸತ್ತೆ. ಅಪರೂಪಕ್ಕೆ ಕಾಣಿಸಿಕೊಳ್ಳುತ್ತಿದ್ದ ಆ ಪಕ್ಷೀನ್ನ ಆಗ ಕಂಡು ಪಡ್ತ ಇದ್ದ ಆಶ್ಚರ್ಯವನ್ನು ಮತ್ತೆ ಪಡಬೇಕೂಂತ ಆಸೆಯಾಗುತ್ತೆ. ದನ ಕಾಯ್ತಾ ಇದ್ದವನು ಆ ಹಕ್ಕೀನ್ನ ಹಿಡಿಬೇಕೂಂತ ಓಡ್ತಿದ್ದೆ. ಅದು ಕಾಡಲ್ಲಿ ಚೂರು ಚೂರು ಕಾಣಿಸಿಕೋತ ಕಾಣಿಸಿಕೋತ ಮರದಿಂದ ಮರಕ್ಕೆ ಕುಪ್ಪಳಿಸ್ತ ಇತ್ತು. ನಾನು ಅದನ್ನ ಬೆನ್ನಟ್ಟಿ ಹೋಗ್ತಾ ಇದ್ದಾಗ ಎಲ್ಲೋ ಮಾಯವಾಗಿ ಬಿಡ್ತಿತ್ತು. ಈಗ ಬೆನ್ನಟ್ಟಬೇಕೂಂತ ಅನ್ನಿಸಲ್ಲ – ಸಾಧ್ಯನೂ ಇಲ್ಲ. ಆದರೆ ಕಾದು ಕೂತಿರಬೇಕು ಅಂತ ಅನ್ನಿಸುತ್ತೆ. ಆ ಆಸೇನ್ನ ನಿನಗೆ ಮತ್ತು ಮಹೇಶ್ವರಯ್ಯನಿಗೆ ಮಾತ್ರ ಹೇಳಲಿಕ್ಕೆ ನನಗೆ ಸಾಧ್ಯ. ಇನ್ನೊಂದು ಆಸೆ ಇದೆ; ಅದು ಇದು ಬೇರೆ ಬೇರೆ ಅಂತ ನನಗೆ ಅನ್ನಿಸಲ್ಲ. ಅದರೆ ಅದನ್ನ ನಿನಗೂ ನಿಜಾಂತ ಅನ್ನಿಸೋ ಹಾಗೆ ನಾನು ಹೇಗೆ ಹೇಳಲಿ – ಗೊತ್ತಾಗಲ್ಲ. ಈ ದೇಶದಲ್ಲಿ ನಾವೆಲ್ಲ ದಡ ಹತ್ತಿರೋ ಜನ. ಈ ಜನದ ಸವಲತ್ತುಗಳನ್ನು ಹೆಚ್ಚಿಸೋ ರಾಜಕೀಯ ಈ ತನಕ ಮಾಡಿದ್ದಾಯ್ತು. ಅದರಿಂದ ನಮ್ಮನ್ನು ಸದಾ ಆವರಿಸೋ ಕ್ಷುದ್ರತೇಂದ ಬಿಡುಗಡೆ ಸಾಧ್ಯ ಇಲ್ಲ ಅನ್ನೋದು ನನಗೀಗ ಗೊತ್ತಾಗ್ತಿದೆ. ಅಣ್ಣಾಜಿ ಹತ್ರ ನಾನು ತುಂಬ ಈ ವಿಷಯ ಚರ್ಚಿಸ್ತ ಇದ್ದೆ. ನಮ್ಮ ದೈನಿಕಗಳೇ ಹೇಗೆ ಪ್ರಭೆ ಪಡೆಯೋದು ಸಾಧ್ಯ ಅಂತ? ಯಾವತ್ತೂ ಚರಿತ್ರೇಲಿ ದಡ ಹತ್ತದೇನೇ ಇದಾರಲ್ಲ ಅವರಿಗೆ ಸಿಟ್ಟು ಬರೋ ಹಾಗೆ ಮಾಡಕ್ಕೆ ಸಾಧ್ಯವಾದರೆ ಆ ಸಿಟ್ಟು ಸಮಾಜದ ಕ್ಷುದ್ರತೇನ ಸುಟ್ಟೀತು ಅಲ್ವ? ಆ ಆಸೆ ಇನ್ನೂ ಉಳ್ಕಂಡಿದೆ.’

ಈ ಮಾತುಗಳು ತನ್ನಿಂದ ಅಪ್ರಯತ್ನವಾಗಿ ಹುಟ್ಟಿ ಹೊರಬರುತ್ತಿರುವ ಬಗ್ಗೆ ಅವನಿಗೆ ಆಶ್ಚರ್ಯವಾಗಿತ್ತು. ತನಗಿದ್ದ ನಂಬುವ ಆಸೆ, ಇದು ಸಾಧ್ಯವೋ ಎಂಬ ಆತಂಕ ಎರಡನ್ನೂ ಗೌರಿಯಲ್ಲಿ ಕಂಡು ಕೃಷ್ಣಪ್ಪನಿಗೆ ಇನ್ನು ಹೆಚ್ಚು ಮಾತಿನ ಅಗತ್ಯವಿಲ್ಲವೆನ್ನಿಸಿತು.

ತನ್ನ ಜೇಬಲ್ಲಿ ಇಟ್ಟುಕೊಂಡಿದ್ದ ರಾಜೀನಾಮೆಯನ್ನು ಅವಳಿಗೆ ಕೊಟ್ಟು, ‘ಇದನ್ನು ಪೋಸ್ಟ್ ಮಾಡಿ ಬಾ. ಹಾಗೇ ರಹಮಾನ್‌ಗೆ ಫೋನ್‌ಮಾಡಿ ಪಕ್ಷದ ಅಸೆಂಬ್ಲಿ ಸದಸ್ಯರನ್ನು ಕೂಡಲೇ ಕರೆಸು’ ಎಂದ.

ನಾಗೇಶನನ್ನು ಕರೆದು ಅರ್ಜೆಂಟಾಗಿ ಮಾತಾಡುವುದಿದೆ ಎಂದು ಹೇಳಿ ಬ್ಯಾಂಕಿನಿಂದ ಸೀತೆಯನ್ನು ಕರೆದುಕೊಂಡು ಬರುವಂತೆ ಹೇಳಿದ.

ಕೋಲಿನಿಂದ ಚೆಂಡನ್ನು ನೂಕುತ ತೆವಳಿದ. (ಮುಗಿಯಿತು)

---